# ಅಧ್ಯಯನ – 12 Study XII

# ಪಾಪ ನಿವೃತ್ತಿಯ ಪ್ರಸ್ತಾಪ – ಮನುಷ್ಯ

## THE SUBJECT OF THE ATONEMENT - MAN

**ಮಾನವನೆಂದರೇನು? – "ಸಂಪ್ರದಾಯ" ಬದ್ಧವಾದ ಉತ್ತರ – ವೈಜ್ಞಾನಿಕವಾದ ಉತ್ತರ – ಸತ್ಯವೇದದ ಉತ್ತರ – ಮಾನವ ದೇಹ – ಮನುಷ್ಯ ಆತ್ಮ – ಮಾನವ ಆತ್ಮ – ತಪ್ಪು ಭಾಷಾಂತರದಿಂದ ಉಂಟಾಗಿರುವ ಗೊಂದಲ – ಆತ್ಮಗಳ ವಿಸ್ತಾರ – ಮರಣ ಮತ್ತು ಪುನರುತ್ಥಾನಗಳ ನಡುವಿನ ಕಾಲದಲ್ಲಿ ಎಲ್ಲಾ ಆತ್ಮಗಳು ಹೋಗಲಿರುವ "ಶಿಯೋಲ್", 'ಹೇಡ್ಸ್" ಎಂದರೆ ಯಾವುದು? – ಬೇರೆ ಬೇರೆಯಾಗಿ ಪರಿಗಣಿಸಬಹುದಾದ ದೇವರ ವಾಕ್ಯದ ಹೇಳಿಕೆಗಳು . . . . . .**

**"ಮನುಷ್ಯನು ಎಷ್ಟು ಮಾತ್ರದವನು, ಅವನನ್ನು ನೀನು ಯಾಕೆ ನೆನಸಬೇಕು? ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು? ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಪ್ರಭಾವವನ್ನೂ, ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟೆ. ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿದಿ; ನೀನು ಎಲ್ಲಾ ಕುರಿದನಗಳನ್ನು ಮಾತ್ರವೇ ಅಲ್ಲದೆ ಕಾಡುಮೃಗಗಳು, ಆಕಾಶಪಕ್ಷಿಗಳು, ಸಮುದ್ರದ ಮೀನುಗಳು, ಅದರಲ್ಲಿ ಸಂಚರಿಸುವ ಸಕಲವಿಧವಾದ ಜೀವಜಂತುಗಳು ಇವೆಲ್ಲವನ್ನೂ ಅವನಿಗೆ ಅಧೀನಮಾಡಿದ್ದೀಯಲ್ಲವೇ" – ಕೀರ್ತನೆ 8:5–8.**

ವಿಶ್ವದ ಸೃಷ್ಟಿಕರ್ತನಾದಾತನು ಮಾನವರ ಕಲ್ಯಾಣದ ಆತನ ಪುನಃ ಸಂಧಾನದ ಬಗ್ಗೆ ಇಷ್ಟೊಂದು ಆಸಕ್ತಿವಹಿಸಿ ಅದಕ್ಕೆ ಬೇಕಾದ ಎಲ್ಲವುಗಳನ್ನೂ – ತನ್ನ ಮಗನನ್ನು ಬಲಿಯಾಗಿ ಅರ್ಪಿಸುವ ಮಟ್ಟಿಗೆ ಔದಾರ್ಯ ಪೂರ್ವಕವಾಗಿ ಒದಗಿಸಿರುವುದನ್ನು ನೋಡುವಾಗ ಮಾನವನು ಅಷ್ಟೊಂದು ಶ್ರೇಷ್ಟನೋ? ಎನಿಸದಿರದು. ದೇವರ ಸೃಷ್ಟಿಗಳಲ್ಲಿ ಇದುವರೆಗೂ ಮನುಷ್ಯನು ಅತ್ಯಂತ ಶ್ರೇಷ್ಟನಾದವನಾದರೂ ಆತನ ನಿರ್ಣಾಯಕ ಶಕ್ತಿಯು ಮಿತಿಯುಳ್ಳದ್ದಾಗಿದೆ, ನಮ್ಮ ತಿಳುವಳಿಕೆಯುನ್ನು ಹದ್ದುಬಸ್ತಿನಲ್ಲಿಡಲಾಗಿದೆ. ಮತ್ತು ಈ ವಿಷಯದಲ್ಲಿ ನಾವು ನಮ್ಮ ಪ್ರೀತಿಯುಳ್ಳ ಸೃಷ್ಟಿಕರ್ತನು ತನ್ನ ವಾಕ್ಯಗಳಲ್ಲಿ ನಮಗೆ ತಿಳಿಯಪಡಿಸಿದವುಗಳ ಮೇಲೆ ಸಂಪೂರ್ಣವಾಗಿ ಆತುಕೊಂಡಿದ್ದೇವೆ. "ಮಾನವಕುಲದ ಅತ್ಯಂತ ಉನ್ನತವಾದ ಅಧ್ಯಯನವೆಂದರೆ ಮಾನವನು ತಾನೇ" ಎಂಬ ಜಾಣ್ನುಡಿಯು ಒಂದು ಗಾದೆಮಾತಿನಂತೆ ಆಗಿರುವಾಗಲೂ "ಮಾನವನೆಂದರೇನು?" ಎಂಬ ಪ್ರಶ್ನೆಯು ಉಳಿದ ಪ್ರಶ್ನೆಗಳಿಗಿಂತ ಬಹಳ ಗೊಂದಲಮಯವಾಗಿರುವುದು ಬಹಳ ಆಶ್ಚರ್ಯ ವೆನಿಸುತ್ತದೆ. ಈ ಪ್ರಸ್ತಾಪದ ಬಗ್ಗೆ ಎರಡು ಸಾಮಾನ್ಯ ದೃಷ್ಟಿಕೋನಗಳಿವೆ. ಆದರೆ ಇವೆರಡರಲ್ಲಿ ಯಾವುದೂ ಸರಿಯಾದುದಲ್ಲ ಮತ್ತು ದೇವರ ವಾಕ್ಯನುಸಾರವಾದುದಲ್ಲ ಎಂಬುದನ್ನು ನಾವು ಎತ್ತಿ ಹಿಡಿಯುತ್ತೇವೆ. ಇವೆರಡರಲ್ಲಿಯೂ ಕೆಲಮಟ್ಟಿನ ಸತ್ಯತೆಗಳಿದ್ದಿರ ಬಹುದಾದಾಗ್ಯೂ ಎರಡು ಸಹಾ ತೀವ್ರವಾದ ತಪ್ಪು ದೋಷಗಳಿಂದ ಕೂಡಿದೆ ಮತ್ತು ದಾರಿ ತಪ್ಪಿಸುವವುಗಳಾಗಿವೆ. ಇವುಗಳಿಂದ ಪೂರ್ಣವಾಗಿ ತಪ್ಪು ದಾರಿಗೆ ಎಳೆಯಲ್ಪಡದವರೂ ಸಹಾ ಈ ತಪ್ಪುದೋಷಗಳಿಂದ ಪ್ರಭಾವಿತರಾಗಿ ಕೆಲವೊಂದು ಸತ್ಯ ಸಂಗತಿಗಳನ್ನು ಸಹಾ ಕಳಕೊಳ್ಳುವವರಾಗಿಬಿಡುತ್ತಾರೆ ಮತ್ತು ಅನೇಕ ತಪ್ಪು ಭ್ರಮೆಗಳು ಸತ್ಯವೆಂಬಂತೆ ತೋರಿಬರುತ್ತದೆ. ಈ ಕಾರಣದಿಂದ ನಮ್ಮ ಪ್ರಸ್ತಾಪವು ಸತ್ಯವನ್ನು ತಿಳಿಯಬಯಸುವವರಿಗೆ ಮತ್ತು ಅವರ ಹೃದಯ ಮತ್ತು ಜೀವನದ ಮೇಲೆ ಅವುಗಳ ಪ್ರಭಾವದಿಂದ ಪೂರ್ಣ ಲಾಭ ಪಡಕೊಳ್ಳುವವರಿಗೆ ಬಹು ಮುಖ್ಯವಾಗಿದೆ. ನಾವೀಗ ಚರ್ಚಿಸುತ್ತಿರುವ **'ಪಾಪ ನಿವೃತ್ತಿ'** ಎಂಬ ಪ್ರಕರಣ ಈ ಸಂಬಂಧದಲ್ಲಿ ವಿಶೇಷರೀತಿಯ ಮಹತ್ವ ಪಡೆದಿದೆ. ಮಾನವನು ಏನು ಎಂಬ ಬಗ್ಗೆ ಸ್ಪಷ್ಟವಾದ ಕಲ್ಪನೆ ಇಲ್ಲದವರು ಮಾನವರ ಪಾಪನಿವೃತ್ತಿಯ ಸಂಬಂಧ ಇರುವ ಸತ್ಯವೇದ ಬೋಧನೆಗಳನ್ನು – ಅವುಗಳ ಕಾರ್ಯವೈಖರಿ ಮತ್ತು ಫಲಿತಾಂಶಗಳ ಬಗ್ಗೆ ಗ್ರಹಿಸಿಕೊಳ್ಳುವುದು ಅಸಾಧ್ಯವಲ್ಲವಾದರೂ ಅದಕ್ಕಾಗಿ ಕಷ್ಟಪಡಬೇಕಾಗುತ್ತದೆ.

ನಾವಿಲ್ಲಿ 'ಮಾನವನೆಂದರೇನು?' ಎಂಬ ಈ ಪ್ರಶ್ನೆಯ ಬಗ್ಗೆ ಸಾಮಾನ್ಯವಾದ ಹಾಗೂ ಸಂಪ್ರದಾಯ ಬದ್ಧವೆಂದು ಹೇಳಲಾಗುವ ದೃಷ್ಟಿಕೋನವನ್ನು ಪರಿಗಣಿಸು ವವರಾಗಿದ್ದೇವೆ. ನಂತರದಲ್ಲಿ ಕಟ್ಟುನಿಟ್ಟಾದ ವೈಜ್ಞಾನಿಕ ದೃಷ್ಟಿಕೋನ, ಅಂತ್ಯದಲ್ಲಿ ಇವೆರಡಕ್ಕಿಂತಲೂ ವಿಭಿನ್ನವೆಂದೂ, ಬಹಳ ಸಮಂಜಸವಾದುದು ಎಂದೂ ನಾವು ತಿಳಿದಿರುವ (The Bible View) ಸತ್ಯವೇದ ದೃಷ್ಟಿಕೋನ. ಇದು ಇವೆರಡರ ಸಾಮರಸ್ಯಕ್ಕೆ ಏಕೈಕ ನೆಲೆಯಾಗಿದೆ.

### ಮಾನವರ ಸಂಪ್ರದಾಯಬದ್ಧವಾದ ದೃಷ್ಟಿಕೋನ

### Orthodoxy's View of Man

**'ಮಾನವನೆಂದರೇನು?'** ಎಂಬ ಪ್ರಶ್ನೆಗೆ ಸಂಪ್ರದಾಯಬದ್ಧವಾದ ದೈವಜ್ಞಾನ ದೃಷ್ಟಿಕೋನದಿಂದ (ಈ ಬಗ್ಗೆ ನಮ್ಮ ವಿವಾದವಿದೆ) ಉತ್ತರಿಸುವುದಾದರೆ, ಈ

ರೀತಿ ಹೇಳಬಹುದು; ಮಾನವನು ದೇಹ, ಚೈತನ್ಯ ಮತ್ತು ಆತ್ಮಗಳೆಂಬ ವಿವಿಧ ಭಾಗಗಳುಳ್ಳ ವ್ಯಕ್ತಿಯಾಗಿದ್ದಾನೆ; ದೇಹವೆಂಬುದು ಉಳಿದ ಪ್ರಾಣಿಗಳಂತೆ ಜನ್ಮ ತಾಳುತ್ತದೆ. ಆದರೆ ಮಾನವನ ಜನ್ಮದ ಸಮಯದಲ್ಲಿ ದೇವರು ಮಧ್ಯೆ ಪ್ರವೇಶಿಸುತ್ತಾನೆ ಮತ್ತು ತನಿಖೆ ಮಾಡಲಾಗದ ಯಾವುದೋ ಒಂದು ರೀತಿಯಲ್ಲಿ ಆತನ ದೇಹದಲ್ಲಿ ಚೈತನ್ಯ ಮತ್ತು ಆತ್ಮನನ್ನು ಇರಿಸುತ್ತಾನೆ. ಇವುಗಳು ದೇವರ ದೇಹದ ಭಾಗಗಳಾಗಿರುವುದರಿಂದ ನಾಶಪಡಿಸಲಸಾಧ್ಯ ಹಾಗೂ ಅವುಗಳು ಎಂದಿಗೂ ಸಾಯುವುದಿಲ್ಲ. ಚೈತನ್ಯ ಮತ್ತು ಆತ್ಮವೆಂಬ ಈ ಎರಡು ಭಾಗಗಳನ್ನು ಬೇರ್ಪಡಿಸುವುದಾಗಲೀ, ಅವುಗಳ ವ್ಯತ್ಯಾಸ ತಿಳಿಯುವುದಾಗಲೀ ಸಂಪ್ರದಾಯತೆಗೆ ಎಂದಿಗೂ ಸಾಧ್ಯವಿಲ್ಲ. ಈ ಕಾರಣಗಳಿಂದ ಅನುಕೂಲಕ್ಕೆ ತಕ್ಕಂತೆ ಈ ಪದಗಳನ್ನು ಪರಸ್ಪರ ಬದಲಾಯಿಸಿಕೊಂಡು ಉಪಯೋಗಿಸುತ್ತದೆ. ಈ ಎರಡೂ ಶಬ್ದಗಳನ್ನು (ಚೈತನ್ಯ ಮತ್ತು ಆತ್ಮ) ನಿಜವಾದ ಮನುಷ್ಯನೆಂದೂ, ಮಾಂಸದೇಹವನ್ನು ನಿಜವಾದ ಮನುಷ್ಯನ ಹೊರಗಣ ಹೊದಿಕೆಯೆಂದೂ ಅದರಲ್ಲಿ ಆತನು ತನ್ನ ಇಹಲೋಕದ ಜೀವಿತ ಕಾಲದಲ್ಲಿ ಒಂದು ಮನೆಯಲ್ಲಿಯೋ ಎಂಬಂತೆ ವಾಸಮಾಡುತ್ತಾನೆಂದೂ ಅರ್ಥಮಾಡಿಕೊಳ್ಳಲಾಗುತ್ತದೆ. ಮರಣದ ಸಮಯದಲ್ಲಿ ನಿಜವಾದ ಮನುಷ್ಯನು ಮಾಂಸ ಶರೀರವೆಂಬ ಈ ಪಂಜರದಿಂದ ಬಿಡುಗಡೆ ಹೊಂದಿಕೊಳ್ಳುತ್ತಾನೆ ಮತ್ತು ಇನ್ನೂ ಹಿತಕರವಾದ ಪರಿಸ್ಥಿತಿಯೊಂದನ್ನು ತಲಪುತ್ತಾನೆ ಎಂಬ ಸಂಪ್ರದಾಯತೆ.

ಮತ್ತೊಂದು ಮಾತಿನಲ್ಲಿ, ಸಂಪ್ರದಾಯತೆಯು 'ನಿಜವಾದ ಮನುಷ್ಯನು' ಈ ಲೋಕದವನಲ್ಲ ಆದರೆ ಚೈತನ್ಯವು ಅದರ ಮಾಂಸ ದೇಹದಲ್ಲಿನ ಅನುಭವದ ಹೊರತಾಗಿ ಪೂರ್ಣವಾಗಿ ಈ ಲೋಕಕ್ಕೆ ಹೊಂದಿಕೊಂಡಿರುವುದಿಲ್ಲ. ಮರಣದಲ್ಲಿ ಅದು ಆ ದೇಹದಿಂದ ಬಿಡುಗಡೆ ಹೊಂದಿಕೊಳ್ಳುವಾಗ ಒಂದು ಮಹಾ ಆಶೀರ್ವಾದದ ಅನುಭವವಾಗುತ್ತದೆ ಎಂದು ಊಹಿಸಲಾಗಿದೆ ಮಾನವನು ಮಾಂಸದೇಹಧಾರಿ ಯಾಗಿದ್ದಾಗ ಅದರಲ್ಲೇ ಮುಂದುವರೆಯುವ ಅಂದರೆ ತನ್ನ ಆಯುಷ್ಕಾಲವನ್ನು ವೃದ್ಧಿಪಡಿಸಿಕೊಳ್ಳುವ ಅನೇಕ ಪ್ರಯತ್ನಗಳನ್ನು ಔಷಧಿಗಳ ಮೂಲಕ, ಯಾತ್ರೆಗಳ ಮತ್ತು ಪ್ರತಿಯೊಂದು ಆರೋಗ್ಯಕರ ಸಾಧನೆಗಳ, ಅನ್ವೇಷಣೆಗಳ ಮೂಲಕ ಮಾಡಿದ್ದಾಗ್ಯೂ ಅವುಗಳು ಸಿದ್ಧಾಂತವಾಗಿ, ಮನುಷ್ಯನ ಉಪಯೋಗ ಮತ್ತು ಸಂತೋಷಕ್ಕೆ ದೋಷಯುತವಾಗಿ ಮಾರ್ಪಡಿಸುತ್ತದೆ ಎಂದು ಸಾಧಿಸಲಾಗುತ್ತದೆ. ಮರಣವೆಂಬ ಬಿಡುಗಡೆಯು ವಿಕಾಸ ಪ್ರಕ್ರಿಯೆಯ ಮತ್ತೊಂದು ಹಂತವಾಗಿದೆ ಎಂದು ಸದಭಿಪ್ರಾಯಪಡಲಾಗಿದೆ. ಹಲವರ ಮನಸ್ಸಿನಲ್ಲಿ ಐಹಿಕತೆಯಿಂದ ಪರಲೋಕದ ಪರಿಸ್ಥಿತಿಗೆ, ಪ್ರಾಣಿಯ ಅವ್ಯಸ್ಥೆಯಿಂದ ಆತ್ಮಿಕ ಪರಿಸ್ಥಿತಿಗೆ ಉಂಟಾಗುವ ಅಂಥಾಃ ಭವಿಷ್ಯದಲ್ಲಿನ ವಿಕಸನವನ್ನು ಒಂದು ಸಮಂಜಸವಾದ ಯೋಜನೆಯಾಗಿಯೂ, ಮಾನವನು ಮಾನವನಾಗಿ ಸೃಷ್ಟಿಸಲ್ಪಡಲಿಲ್ಲ, ಆತನು ಇತಿಹಾಸ ಪೂರ್ವ ಸಮಯದ ಪ್ರೊಟಾಪ್ಲಾಸಂನಿಂದ ಮೈಕ್ರೋಬ್‌ವರೆಗೂ, ಅಲ್ಲಿಂದ ಮುಂದೆ ಅನೇಕ ಹಂತಗಳು ದಾಟಿ ಮಂಗನಾಗುವವರೆಗೂ ಮತ್ತು ಮಂಗನಿಂದ ಮಾನವನಾಗುವವರೆಗೂ ಒಂದು ಸುಧೀರ್ಘ ಕಾಲದ ವಿಕಸನೆಗೊಳಗಾದನು ಎಂಬ ವೈಜ್ಞಾನಿಕ ತರ್ಕದ ಪರಿಣಾಮವೆಂದೂ ಗಣನೆಗೆ ತರಲಾಗುತ್ತದೆ. ಇನ್ನೂ ಮುಂದುವರೆಯುತ್ತಾ ಮಾನವತ್ವವು ಅದರ ಪ್ರಾರಂಭದ ಕಾಲದಲ್ಲಿ ಇಂದಿನ ಮಾನವತ್ವಕ್ಕಿಂತ ಕೀಳು ಸ್ಥಿತಿಯಲ್ಲಿತ್ತು ಎಂದು ಸಹಾ ಹೇಳಲಾಗುತ್ತದೆ. ವಿಕಸನವು ಮಾನವನನ್ನು ಉತ್ತಮ ಸ್ಥಿತಿಗೆ ತರುತ್ತಿದ್ದು ಮುಂದಿನ ಹೆಜ್ಜೆಯು ದೇವದೂತರುಗಳಂತೆ ಅಥವಾ ದೇವರುಗಳು ಅಥವಾ ಪಿಶಾಚಿಗಳಂತಹ ಆತ್ಮಿಕ ಸ್ಥಿತಿಗೆ ರೂಪಾಂತರಗೊಳ್ಳುವುದು ಎಂದು ಹೇಳಲಾಗುತ್ತಿದೆ.

ಹತ್ತೊಂಬತ್ತನೆಯ ಶತಮಾನದ ಧೋರಣೆಗೆ ಇವುಗಳೆಲ್ಲವೂ ಬಹಳಷ್ಟು ಹೊಗಳಿಕೆ ಮಾಡುವವುಗಳಾಗಿವೆ. ಒಂದೆಡೆಯಲ್ಲಿ ಇದು ಬಹು ಕೀಳು ಜ್ಞಾನದ ವಂಶಾವಳಿಯನ್ನು ಒಪ್ಪಿಕೊಳ್ಳುತ್ತದೆ, ಇಂದು ಅದು ತಾನು ಅತ್ಯುನ್ನತವಾದ ಪ್ರಾಪ್ತಿಯನ್ನೂ ಮಾತ್ರವಲ್ಲದೆ ಭವಿಷ್ಯದಲ್ಲಿನ ಏಳಿಗೆಯನ್ನು ಸಂಪಾದಿಸಿಕೊಂಡಿರುವುದಾಗಿ ಹೇಳಿಕೊಳ್ಳುತ್ತದೆ. ಈ ದೃಷ್ಟಿಕೋನವು ನಾಗರೀಕ ಪ್ರದೇಶದ ಜನರಿಗೆ ಮಾತ್ರವೇ ಮಿತಿಯಾಗಿರುವುದಿಲ್ಲ; ಸಾಮಾನ್ಯವಾಗಿ ಎಲ್ಲಾ ಅನ್ಯಜನರೂ, ಅನಾಗರೀಕರೂ ಸಹಾ ಅವರು ಒಂದುವೇಳೆ ವಾಡಿಕೆಯಾಗಿ ಇದುವರೆಗೆ ಆತನ ಮೂಲವನ್ನು ಪತ್ತೆಮಾಡದೇ ಹೋದಾಗ್ಯೂ, ಬಹುಮಟ್ಟಿಗೆ ಮಾನವನ ಬಗ್ಗೆ ಅದೇ ವಿಧವಾದ ಆಲೋಚನೆಯನ್ನು ಹೊಂದಿದ್ದಾರೆ. ಈ ದೃಷ್ಟಿಕೋನವು ಅನ್ಯಜನರ ಎಲ್ಲಾ ತತ್ವಜ್ಞಾನದ ಬೆಂಬಲ ಪಡೆದಿದೆ ಮತ್ತು ಗಣನೀಯವಾಗಿ ಇದು ಇಂದಿನ ವೈಜ್ಞಾನಿಕ ವಿಚಾರವಂತರ ಬೆಂಬಲವನ್ನೂ ಹೊಂದಿದೆ. ಇವರುಗಳು ಈ ವಿಷಯದ ಬಗ್ಗೆ ಬೇರೆಯದೇ ಆದ ಅರ್ಥವಿವರಣೆಯನ್ನು ನೀಡುವವರಾದಾಗ್ಯೂ, ವಿಕಸನದ ಹಾದಿಯಲ್ಲಿ ಭವಿಷ್ಯ ಜೀವನದ ನಿರೀಕ್ಷೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಇಷ್ಟಪಡುತ್ತಾರೆ ಮತ್ತು ತಮ್ಮ ಪ್ರತಿಷ್ಠೆಯ ತೃಪ್ತಿಯನ್ನು ಅನುಭವಿಸುತ್ತಾರೆ. ಆದರೆ, ಇದು ಮಾನವನಲ್ಲಿನ ಜೀವಕಣದ ಬಗ್ಗೆ ಅವರ ಸ್ವಂತ ವೈಜ್ಞಾನಿಕ ಲೆಖ್ಖಾಚಾರಗಳಿಗೆ ಸರಿಹೊಂದುವುದಿಲ್ಲ.

## ವಿಜ್ಞಾನವು ಕಂಡುಕೊಂಡಂತೆ ಮಾನವ
## Man as seen by Science

'ಮಾನವನೆಂದರೇನು? ಎಂಬ ಪ್ರಶ್ನೆಗೆ ವೈಜ್ಞಾನಿಕ ಉತ್ತರವು ಸರಳ ಭಾಷೆಯಲ್ಲಿ ಹೀಗಿದ್ದಿರಬಹುದು:

ಮಾನವನು ಅಭಿವೃದ್ಧಿಹೊಂದಿ ಬೆಳೆದು ಬಂದಿರುವನೆಂದು ತಿಳಿದಿರುವ ಒಂದು ಶ್ರೇಷ್ಠವಾದ ಪ್ರಾಣಿ. ಇತರ ಪ್ರಾಣಿಗಳಿಗಿಂತ ವಿಭಿನ್ನವಾದ ದೇಹವೊಂದನ್ನು ಆತನು ಹೊಂದಿದ್ದಾನೆ. ಈ ದೆಸೆಯಲ್ಲಿ ಇದು ಉನ್ನತವಾದ ಮತ್ತು ಶ್ರೇಷ್ಠವಾದ ಅಭಿವೃದ್ಧಿಯಾಗಿದೆ. ಆತನ ಮಿದುಳಿನ ರಚನೆಯು ಕೀಳು ಪ್ರಾಣಿಗಳ ಮಿದುಳಿನ ರಚನೆಗೆ ಅನುರೂಪದಾಗ್ಯೂ ಅದು ಬಹಳಷ್ಟು ಉತ್ತಮ ಅಭಿವೃದ್ಧಿ ಹೊಂದಿದೆ ಮತ್ತು ಹೆಚ್ಚಿನ ಮಟ್ಟಿಗೆ ಸಂಸ್ಕರಿಸಿದ ಮಟ್ಟದಲ್ಲಿದೆ ಮತ್ತು ಅದರಲ್ಲಿ ಅನೇಕ ವಿಶಾಲವಾದ ಸಾಮರ್ಥ್ಯಗಳು ಸೇರಿಸಲ್ಪಟ್ಟಿದ್ದು ಮಾನವನು ಕೆಳಮಟ್ಟದ ಪ್ರಾಣಿಗಳ ಒಡೆಯನಾಗುವಂತೆ ರಚಿಸಲ್ಪಟ್ಟಿದೆ. ಮಾನವನ ಉಸಿರು ಅಥವಾ ಜೀವನ ಚೈತನ್ಯವು ಉಳಿದ ಪ್ರಾಣಿಗಳಂತೆಯೇ ಇದೆ. ಪಶುಗಳು ತಮ್ಮ ಜೀವ ಮತ್ತು ದೇಹವನ್ನು ತಮ್ಮ ಪೂರ್ವಜರಿಂದ ಪಡಕೊಂಡಿರುವ ರೀತಿಯಲ್ಲಿಯೇ ಮಾನವರ ಶರೀರ ರಚನೆ ಮತ್ತು ಜೀವಕಣವು ಆತನ ಪೂರ್ವಜರ ಮೂಲಕ ಬಂದುದಾಗಿದೆ.

ವಿಜ್ಞಾನವು ಮಾನವನನ್ನು ಒಂದು ಆತ್ಮ ಅಥವಾ ಚೇತನ ಎಂಬುದಾಗಿ ಮಾನ್ಯಮಾಡುತ್ತದೆ; ಆದರೆ ಭವಿಷ್ಯದ ಮಟ್ಟಿಗೆ, ಮಾನವನ ನಿತ್ಯತೆಯ ಬಗ್ಗೆ ವಿಜ್ಞಾನದಲ್ಲಿ ನೀಡಬಹುದಾದ ಯಾವುದೇ ಸಲಹೆಗಳಿರುವುದಿಲ್ಲ, ಯಾವುದೇ ರೀತಿಯ ಊಹೆಗೆ ಅಥವಾ ಯಾವುದೇ ಸಮಂಜಸವಾದ ಸಿದ್ಧಾಂತಕ್ಕೆ ಬರಲು ಅದರಿಂದ ಸಾಧ್ಯವಾಗುತ್ತಿಲ್ಲ. ಹೀಗಿದ್ದಾಗ್ಯೂ, ಈ ಹಿಂದೆ ತಾನು ಪತ್ತೆಹಚ್ಚಿದೆ ಎಂದು ನಂಬಲಾದ ವಿಕಸನ ಸಿದ್ಧಾಂತದ ಹಾದಿಯಲ್ಲಿ ವಿಜ್ಞಾನವು ಮಾನವನ ಭವಿಷ್ಯದ ಬಗ್ಗೆ ಯಾವುದೇ ನಿರೀಕ್ಷೆಯನ್ನು ಊಹೆ ಮಾಡಲಾಗುತ್ತಿಲ್ಲ. ವಿಜ್ಞಾನವು ಈಗಾಗಲೇ ದೇವರಿಂದ ನೆರವೇರಿಸಲ್ಪಟ್ಟ, ಪ್ರಾಕೃತಿಕ ಧರ್ಮವಾದ ವಿಕಸನವೆಂದು ತಾನು ಹೇಳಿಕೊಳ್ಳುವುದರ ಹಂತಗಳ ಬಗ್ಗೆ (ಯಾವುದೇ ವೈಯುಕ್ತಿಕ ದೇವರಿಲ್ಲದೆ) ಹೆಮ್ಮೆ ಪಡುತ್ತದೆ. ಇದು ಮಾನವ ಜಾತಿಯನ್ನು ಇಂದಿಗಿಂತ ಇನ್ನೂ ಹೆಚ್ಚಿನ ರೀತಿಯಲ್ಲಿ ದೇವರಂತೆ ಪ್ರಭುವಿನ ಸ್ಥಿತಿಗೆ ತರುವುದಾಗಿದೆ.

## ಸತ್ಯವೇದದ ದೃಷ್ಟಿಕೋನದಲ್ಲಿ ಮಾನವನು
## Man From the Bible Standpoint

ಸತ್ಯವೇದದ ದೃಷ್ಟಿಕೋನವು ಮೇಲೆ ಹೇಳಿರುವ ಕೆಲವು ಸಂಗತಿಗಳ ಬಗ್ಗೆ ಸ್ವಲ್ಪಮಟ್ಟಿಗೆ ಒಪ್ಪಿಕೊಳ್ಳುವುದಾದರೂ, ಇವೆರಡರ ಕೆಲವೊಂದು ಮುಖ್ಯವಾದ ಸಂಗತಿಗಳನ್ನು ಖಂಡಿಸುವುದಾಗಿದೆ. ಸತ್ಯವೇದವು ಎಂದೂ ಊಹನೆಮಾಡುವುದಿಲ್ಲ, ಆದರೆ ದೇವರ ಸ್ವರ ಅಥವಾ ಪ್ರಕಟನೆ ಎಂಬಂತೆ ಉಚಿತವಾದ ರೀತಿಯಲ್ಲಿ ಅದು ಅಧಿಕಾರಯುಕ್ತವಾಗಿ, ಹೆಚ್ಚಿನ ಒತ್ತುಕೊಟ್ಟು ಮಾತನಾಡುವುದಾಗಿದ್ದು ಮಾನವನ ಪ್ರಾರಂಭದ, ಇಂದಿನ ಮತ್ತು ಮುಂದಿನ ಸಂಗತಿಗಳ ಬಗ್ಗೆ ಪ್ರಕಟಿಸುವುದಾಗಿದೆ. ಸತ್ಯವೇದದ ದೃಷ್ಟಿಕೋನ ಮಾತ್ರವೇ ಸ್ಥಿರವಾದುದು. ಆದುದರಿಂದ ಇದು ಈ ವಿಷಯದ ಬಗ್ಗೆ ನಿಜವಾದ ವೈಜ್ಞಾನಿಕ ಹಾಗೂ ಸಾಂಪ್ರದಾಯಿಕವಾದ ದೃಷ್ಟಿಕೋನವಾಗಿದೆ. ಆದರೆ, ಸತ್ಯವೇದದ ಪ್ರಸ್ತುತಿಯು ಮಾನವ ಧೋರಣೆಯೊಂದಿಗೆ ಕುಟಿಲತೆ ಮಾಡುವುದಿಲ್ಲ. ಅದು ಮಾನವನನ್ನು ತನ್ನ ಸ್ವಂತ ವಿಕಾಸಕನನ್ನಾಗಿ ಮಾಡುವುದಿಲ್ಲ, ಅಥವಾ ಪ್ರಕೃತಿಯ ದೇವರನ್ನಾಗಿ ಒಪ್ಪಿಸಿಕೊಡುವುದಿಲ್ಲ. ಅದು ದೇವರೇ ಅಲ್ಲ. ಮಾನವನ ಬಗ್ಗೆ ಸತ್ಯವೇದ ದೃಷ್ಟಿಕೋನವು ದೇವರಿಗೆ ದೇವಸ್ವರೂಪದಲ್ಲಿ ಉಂಟುಮಾಡಿದ ತನ್ನ ಮೂಲ ಸೃಷ್ಟಿಯ (ಆದಾಮನ) ಬಗ್ಗೆ ಮಹಿಮೆಯನ್ನು ನೀಡುತ್ತದೆ ಮತ್ತು ಅದೇ ಸಮಯದಲ್ಲಿ ಮಾನವನು ಆ ದೇವಸ್ವರೂಪವನ್ನು ಕಾಪಾಡಿಕೊಳ್ಳಲು ವಿಫಲವಾದ ಬಗ್ಗೆ, ಪಾಪದಲ್ಲಿ ಬಿದ್ದದಕ್ಕಾಗಿ, ಮತ್ತು ಪಾಪದ ಎಲ್ಲಾ ದುಷ್ಪರಿಣಾಮಗಳಿಗಾಗಿ ಅಂದರೆ ಮರಣ ಪರ್ಯಂತವಾದ ಮಾನಸಿಕ, ದೈಹಿಕ, ಮತ್ತು ನೈತಿಕ ಕುಂದು ಗೊಳಿಸುವಿಕೆಗಳಿಗಾಗಿ ಆತನನ್ನು ದೂಷಿಸುತ್ತದೆ. ಸತ್ಯವೇದದ ದೃಷ್ಟಿಕೋನವು ದೇವರು ನಮಗೆ ಆತನ ಕರುಣೆಯನ್ನು ಮತ್ತು ಮಾನವನ ಪತನದ ಸ್ಥಿತಿಯಲ್ಲಿಯೂ ಮಾನವರ ಕಡೆಗೆ ಔದಾರ್ಯತೆಯನ್ನು ಪ್ರಕಟಿಸುವಂತೆ ಆತನಿಗೆ ವಿಮೋಚನೆಯನ್ನು, ಆತನ ಮೂಲ ಪರಿಸ್ಥಿತಿಯ ಪುನಃಸ್ಥಾಪನೆಯನ್ನು ಯುಗಾಂತರ ಕಾಲದಲ್ಲಿ ವಿಮೋಚಕನ ಮೂಲಕ ಒದಗಿಸಿ ಕೊಟ್ಟಿರುವುದಕ್ಕಾಗಿ ದೇವರಿಗೆ ಘನ, ಮಾನ ಮಹಿಮೆಗಳನ್ನು ಸಲ್ಲಿಸುತ್ತದೆ.

ಮಾನವನ ಸ್ವಭಾವವನ್ನು ಧ್ಯಾನಿಸುವಾಗ, ವಿಶಿಷ್ಟವಾಗಿ ಈ ವಿಷಯದಲ್ಲಿ ದೇವರ ವಾಕ್ಯದ ದೃಷ್ಟಿಕೋನವನ್ನು ಪಡಕೊಳ್ಳುವಾಗ, ಕ್ರೈಸ್ತ ಜನರ ಮನದಲ್ಲಿ ಫಲಭರಿತವಾದ ಗೊಂದಲದ ಮೂಲವೊಂದು ಕಂಡುಬರುತ್ತದೆ. ಅದೇನೆಂದರೆ, ಸಾಮಾನ್ಯವಾದ ಮಾನವ ಜಾತಿಯ ಹಾಗೂ ದೇವರು ಪ್ರಸ್ತುತ ಸಮಯದಲ್ಲಿನ ಜನರಿಂದ ಆಯ್ದುಕೊಳ್ಳಲಿರುವ ತನ್ನ ಚಿಕ್ಕ ಹಿಂಡಾದ ಸಭೆಯ ನಡುವಣ ವ್ಯತ್ಯಾಸವನ್ನು ಕಂಡುಕೊಳ್ಳುವಲ್ಲಿ ವಿಫಲತೆ. ದೇವರು ತನ್ನ ಚಿಕ್ಕ ಹಿಂಡನ್ನು ನೂತನ ಹಾಗೂ ಸಮೃದ್ಧಿ ಭರಿತವಾದ ಮಾನವ ಹಾಗೂ ಆತ್ಮಿಕ ಸ್ಥಿತಿಗಾಗಿ ಸಿದ್ಧಪಡಿಸುತ್ತಾ ಇದ್ದಾನೆ. ಸತ್ಯವಚನವನ್ನು "ಸರಿಯಾದ ರೀತಿಯಲ್ಲಿ ವಿಭಜಿಸುವಲ್ಲಿ" ವಿಫಲರಾಗಿ ಅವರು ಸತ್ಯವೇದದ, ವಿಶೇಷವಾಗಿ ಹೊಸ ಒಡಂಬಡಿಕೆಯ ಹೇಳಿಕೆಗಳನ್ನು ಮತ್ತು ವಾಗ್ದಾನಗಳನ್ನು ಎಲ್ಲಾ ಜನರಿಗೂ ಅನ್ವಯಿಸುವವರಾಗಿದ್ದಾರೆ. ಅವುಗಳು ಕೇವಲ ಸಭೆಯ ವರ್ಗದವರಿಗೆ ಮಾತ್ರವೇ ಸಂಬೋಧಿಸಲ್ಪಟ್ಟಿವೆ ಎಲ್ಲಾ ಮಾನವರ ಪುನಃಸ್ಥಾಪನೆಯ ಭರವಸೆಯ ಬಗ್ಗೆ

ಇರಬಹುದಾದ ಯಾವುದೇ ಸಂಬಂಧವು ಅವರಿಗಿರುವುದಿಲ್ಲ. ಈ "ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳು" ಯಾವ ಅನುಪಾತದಲ್ಲಿ ಈ ಲೋಕದವರಿಗೆ ಅಸತ್ಯವಾಗಿವೆಯೋ ಅದೇ ಅನುಪಾತದಲ್ಲಿ ಅವುಗಳು ಸಭೆಗೆ ಸತ್ಯವಾಗಿವೆ. ಉದಾಹರಣೆಗಾಗಿ, **"ಕ್ರಿಸ್ತನು ನಿಮ್ಮಲ್ಲಿದ್ದರೆ ದೇಹವು ಪಾಪದ ದೆಸೆಯಿಂದ ಸತ್ತದ್ದಾಗಿದ್ದರೂ ಆತ್ಮವು ನೀತಿಯ ದೆಸೆಯಿಂದ ಜೀವ ಸ್ವರೂಪವಾಗಿದೆ"** (ರೋಮಾ. 8:10) ಎಂಬ ಅಪೋಸ್ತಲನ ಮಾತುಗಳು ಸಭೆಗೆ ಮಾತ್ರವೇ ಅನ್ವಯಿಸುವುದಾಗಿದೆ. ಈ ರೀತಿಯಲ್ಲಿ ಸುವಾರ್ತಾ ಯುಗದಲ್ಲಿನ ವಿಶೇಷವಾದ ಮತ್ತು ವಿಶಿಷ್ಟವಾದ ಸಭೆಯ ಕರೆಯ ಪರಿಸ್ಥಿತಿಯು ಎಲ್ಲಾ ಮಾನವ ಜಾತಿಗೆ ಅನ್ವಯುವಾಗುವ ರೀತಿಯಲ್ಲಿ ಅರ್ಥವಿವರಣೆ ಮಾಡಲಾಗಿದೆ. ಇಲ್ಲಿರುವ 'ಸತ್ತ' ಮತ್ತು 'ಜೀವವುಳ್ಳ' ಎಂಬ ಪದಗಳು ಸಂಬಂಧಿತ ಅರ್ಥದಲ್ಲಿ ಉಪಯೋಗಿಸಲಾಗಿದೆ. ನಂಬಿಕೆಯ ಮೂಲಕ, ದೇವರ ಕೃಪೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟವರು ಮರಣದ ಶಿಕ್ಷೆಯಿಂದ ವಿಮುಕ್ತರಾಗಿದ್ದಾರೆಂದು ಎಣಿಸಲಾಗಿದೆ. ಇದರ ಉದ್ದೇಶ ಅವರುಗಳು ತಮ್ಮ ಪ್ರಸ್ತುತ ದೇಹವನ್ನು ಜೀವವುಳ್ಳ ಬಲಿಯನ್ನಾಗಿ ಅರ್ಪಿಸಬಹುದಾಗಿದೆ ಮತ್ತು ಈ ಲೋಕದ ಹಕ್ಕು ಮತ್ತು ಹಿತಾಸಕ್ತಿಗಳ ಬಗ್ಗೆ ತಮ್ಮ ದೇಹವನ್ನು ಸತ್ತದೆಂದು ಎಣಿಸಿಕೊಳ್ಳಬಹುದಾಗಿದೆ. ಮತ್ತು ತಮ್ಮನ್ನು ಸಹಾ ಇನ್ನುಮುಂದೆ ಮಾಂಸದೇಹಧಾರಿಗಳಲ್ಲ ಅಥವಾ ಮಾನವ ವ್ಯಕ್ತಿಗಳಲ್ಲ ಆದರೆ ತಾವು 'ನೂತನ ಸೃಷ್ಟಿಗಳು', ನೂತನ ಸ್ವಭಾವವನ್ನು ಹೊಂದಿಕೊಳ್ಳುವುದಕ್ಕಾಗಿ ದೇವರ ವಾಗ್ದಾನದ ಮೂಲಕ 'ಪಡಕೊಂಡವರು' ಎಂದು ಪರಿಗಣಿಸಿಕೊಳ್ಳಬಹುದಾಗಿದೆ. ಈ ರೀತಿಯಲ್ಲಿ ಅವರು ನೀತಿವಂತರೆಂದು ನಿರ್ಣಯಿಸಲ್ಪಟ್ಟವರೂ ಮತ್ತು ಪವಿತ್ರಗೊಂಡ ವಿಶ್ವಾಸಿಗಳೂ ಅಂದರೆ ಸಭೆ ಆಗಿದ್ದಾರೆ. ಅವರು ಕ್ರಿಸ್ತನಲ್ಲಿರುವ ವಿಶ್ವಾಸದ ಕಾರ್ಯಾಚರಣೆಯ ಮೂಲಕ ಮತ್ತು ಆತನಿಗೆ ವಿಧೇಯರಾಗುವ ಮೂಲಕ ದೇವರ ದೃಷ್ಟಿಯಲ್ಲಿ ತಮ್ಮನ್ನು ನೂತನ ಜೀವಾತ್ಮನನ್ನು ಹೊಂದಿದವರು ಎಂದು ಗ್ರಹಿಸಿಕೊಳ್ಳಬಹುದಾಗಿದೆ. ಆದರೆ 'ಸಾವು' ಮತ್ತು 'ಜೀವ' ಎಂಬ ಮೇಲಿನ ಪದಗಳನ್ನು ಈ ಲೋಕದವರಿಗೆ ಉಪಯೋಗಿಸಿದಲ್ಲಿ ಅದು ಸಂಪೂರ್ಣವಾಗಿ ಅನುಚಿತವೆನಿಸುತ್ತದೆ. ಯಾಕೆಂದರೆ ಲೋಕದವರಿಗೆ ಮಾನವ ಸ್ವಭಾವದ ಹೊರತಾಗಿ ಬೇರೆ ಯಾವುದೇ ಸ್ವಭಾವವಿರುವುದಿಲ್ಲ; ಈ ಲೋಕದ ಯಾವುದೇ ಅರ್ಥದಲ್ಲಿ ಅವರು ಮತ್ತೆ ಜನಿಸಲ್ಪಡುವವರಲ್ಲ.

ಪ್ರತಿಷ್ಠಿತರಾದ ದೇವಜನರಿಗೆ ಅನ್ವಯಿಸುವುದನ್ನು, ತಪ್ಪಾಗಿ ಈ ಲೋಕಕ್ಕೆ ಅನ್ವಯಿಸಲಾಗುತ್ತಿರುವ ಮತ್ತೊಂದು ದೇವರ ವಾಕ್ಯವೆಂದರೆ, **"ಬಲಾಧಿಕ್ಯವು ದೇವರದೇ ಹೊರತು ನಮ್ಮೊಳಗಿಂದ ಬಂದದ್ದಲ್ಲವೆಂದು ತೋರುವುದಕ್ಕಾಗಿ ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು"** (2 ಕೊರಿಂಥ 4:7) ಎಂಬುದು. ಇಲ್ಲಿ ಸಭೆಯು ಮಾತ್ರವೇ ನೂತನ ಮನಸ್ಸು, ನೂತನ ಸ್ವಭಾವಗಳೆಂಬ ನಿಕ್ಷೇಪವನ್ನು ಹೊಂದಿರುವುದಾಗಿ ಉಲ್ಲೇಖಿಸಲಾಗಿದೆ. ಅವರಲ್ಲಿ ಈ ನಿಕ್ಷೇಪವು ಅಥವಾ ನೂತನ ಸ್ವಭಾವವು ಸತ್ತದ್ದೆಂದು ಎಣಿಸಲ್ಪಡುವ ಅವರ ಪ್ರಾಕೃತಿಕ ದೇಹದಲ್ಲಿ ಉಂಟು. ಅದನ್ನು ಇಲ್ಲಿ ಮಣ್ಣಿನ ಘಟ ಎಂದು ಕರೆಯಲಾಗಿದೆ. ಈ ಉದಾಹರಣೆಯು ಅದನ್ನು ಅನ್ವಯಿಸಬೇಕಾದ ವರ್ಗದವರಿಗೆ ಅಂದರೆ ಸಭೆಯವರಿಗೆ ಸರಿಯಾಗಿದೇ ಇದೆ. ಆದರೆ ಅದನ್ನು ಇಡೀ ಮಾನವ ಜಾತಿಗೆ ಅನ್ವಯಿಸುವುದಾದರೆ ಪ್ರತಿಯೊಬ್ಬ ಮಾನವನೂ ಪರಲೋಕದ ನಿಕ್ಷೇಪವನ್ನು ಅಥವಾ ನೂತನ ಸ್ವಭಾವವನ್ನು ಹೊಂದಿದ್ದಾನೆಂದು ಮತ್ತು ಈ ರೀತಿಯಲ್ಲಿ ಪ್ರತಿಯೊಂದು ಮಾನವ ದೇಹವೂ ಮಣ್ಣಿನ ಘಟವಾಗಿದೆ ಅಥವಾ ಅಂಥಾಃ ನೂತನ ಸ್ವಭಾವದ ಕೋಶವಾಗಿದೆ ಎಂದು ಭಾವಿಸುವುದಾದರೆ ಅದು ಪೂರ್ಣವಾಗಿ ತಪ್ಪಾಗುತ್ತದೆ. ಈ ಲೋಕಕ್ಕೆ ಒಂದೇ ರೀತಿಯ ಸ್ವಭಾವವಿದೆ ಅದುವೇ ಮಾನವ ಸ್ವಭಾವ; ಅದಕ್ಕೆ ನಿಕ್ಷೇಪದ ರೂಪದಲ್ಲಿಯಾಗಲೀ ಬೇರೆಯಾವ ಅರ್ಥದಲ್ಲಿಯಾಗಲೀ ನೂತನ ಸ್ವಭಾವವಿಲ್ಲ; ಅದು ಯಾವ ವಾಗ್ದಾನಗಳನ್ನು ಎಂದಿಗೂ ಪಡೆದಿರುವುದಿಲ್ಲ. ಇದಕ್ಕೆ ತೀರಾ ವ್ಯತಿರಿಕ್ತವಾಗಿ, ದೇವರ ವಾಗ್ದಾನುಕ್ರಮಸಾರವಾಗಿ ಮಾನವರಿಗೆ ಎಂದಿಗಾದರೂ ಮುಕ್ತವಾಗಿರುವ ಅತ್ಯಂತ ಉನ್ನತವಾದ ಹೆಬ್ಬಯಕೆಯೆಂದರೆ **"ಪುನರ್‌ವಶ"** – ಏದೇನ್ ತೋಟದಲ್ಲಿ ಕಳಕೊಂಡಿದ್ದು ಕಲ್ವಾರಿಯಲ್ಲಿ ಪುನಃಪಡಕೊಂಡ ಮಾನವ ಸ್ವಭಾವದ ಪೂರ್ಣವಾದ ಸಂಪೂರ್ಣತೆಗೆ ಪುನಃಸ್ಥಾಪಿಸುವಿಕೆ – ಅ.ಕೃ 3:19–23.

ಅದೇ ರೀತಿಯಲ್ಲಿ, ನೂತನ ಒಡಂಬಡಿಕೆಯಲ್ಲಿರುವ ಮಾನವ ಜಾತಿಗೆ ಸಾಮಾನ್ಯವಾಗಿ ಅನ್ವಯವಾಗದಿರುವ, ಆದರೆ ಕೇವಲ ಪ್ರತಿಷ್ಠೆಗೊಂಡವರಿಗಾಗಿ, ಪವಿತ್ರಾತ್ಮನಿಂದ ನೂತನ ಸ್ವಭಾವದ ಆತ್ಮಕ್ಕಾಗಿ ಪಡಕೊಂಡವರಿಗೆ ಮಾತ್ರವೇ ಅನ್ವಯವಾಗುವ ಲೆಕ್ಕವಿಲ್ಲದಷ್ಟು ಹೇಳಿಕೆಗಳ ಮೇಲೆ ಚರ್ಚಿಸಬಹುದು. ಅಪೋಸ್ತಲನು ತನ್ನ ಪತ್ರಿಕೆಗಳ ಪ್ರಾರಂಭದಲ್ಲಿ ಅಭಿನಂದಿಸುವ ಮಾತುಗಳನ್ನು ಜಾಗರೂಕತೆಯಿಂದ ಗಮನಿಸುವುದು ಪ್ರಯೋಜನಕಾರಿ ಯಾಗಿದೆ. ಅನೇಕರು ಭಾವಿಸುವಂಥಾಃ ಎಲ್ಲಾ ಮಾನವರಿಗೂ ಸಾಮಾನ್ಯವಾಗಿ ಅನ್ವಯವಾಗುವ ರೀತಿಯಲ್ಲಿ ಅವುಗಳು ಸಂಬೋಧಿಸಲ್ಪಟ್ಟಿಲ್ಲ. ಆದರೆ ಸಭೆಗೆ, ದೇವಭಕ್ತರಿಗೆ, ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರನ್ನು ಮಾತ್ರವೇ ಸಂಬೋಧಿಸಲ್ಪಟ್ಟಿವೆ.

ಆದುದರಿಂದ, ನಾವು ನೆನಪಿನಲ್ಲಿಟ್ಟುಕೊಳ್ಳ ಬೇಕಾದುದೇನೆಂದರೆ, 'ಮಾನವನೆಂದರೆ ಏನು?' ಎಂಬುದನ್ನು ನಾವು ಈ ಅಧ್ಯಾಯದಲ್ಲಿ ಚರ್ಚಿಸುವಾಗ,

ನಾವು ಸಭೆಯೆಂದರೆ ಏನು? ಕ್ರಿಸ್ತನಲ್ಲಿ ನೂತನ ಸೃಷ್ಟಿಗಳು ಎಂದರೆ ಏನು?, ಅಥವಾ ಸಭೆಯು ಈಗಾಗಲೇ ಪಡಕೊಂಡಿದ್ದು ಮೊದಲನೆಯ ಪುನರುತ್ಥಾನದಲ್ಲಿ ಭಾಗಿಗಳಾಗಿರುವವರ ಆತ್ಮಿಕ ಸ್ವಭಾವೇಂದರೆ ಏನು? ಎಂಬುವುದನ್ನು ಚರ್ಚಿಸುತ್ತಿಲ್ಲವೆಂದು ನೆನಪಿನಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ನಾವು ಮೊದಲನೆಯ ಆದಾಮ ಮತ್ತು ಆತನ ಮಕ್ಕಳ ಬಗ್ಗೆ ಚರ್ಚಿಸುತ್ತಿದ್ದೇವೆ. ನಾವು ಒಂದು ಜನಾಂಗದವರಾಗಿ ಸ್ವಭಾವತಃ ಯಾರು ಮತ್ತು ಏನಾಗಿದ್ದೇವೆ? – ಮಾನವನೆಂದರೆ ಏನು? ಈ ರೀತಿಯಲ್ಲಿ ಮಾನವನು ಪತನಗೊಂಡದ್ದು ಹೇಗೆ ಮತ್ತು ಏಕೆ? ಆತನು ಯಾವುದಕ್ಕೆ ಬಿದ್ದುಹೋಗಿದ್ದಾನೆ? ಯಾವುದರ ಮೂಲಕ ಮಾನವನು ವಿಮೋಚನೆ ಹೊಂದಿದ್ದಾನೆ? ಮತ್ತು ಆತನು ಯಾವುದಕ್ಕೆ ಪುನಃಸ್ಥಾಪಿಸಲ್ಪಡುತ್ತಾನೆ ಮತ್ತು ಇವುಗಳಿಗೆ ಸಂಬಂಧಿತ ವಿಷಯಗಳ ಬಗ್ಗೆ ನಾವು ಚರ್ಚಿಸುತ್ತಿದ್ದೇವೆ.

## ಮಾನವ – ಆತನ ದೇಹ, ಆತ್ಮ ಮತ್ತು ಚೈತನ್ಯ
## Man-Body, Spirit, Soul

"ಪ್ರಾಣಿ" ಎಂಬ ಪದಕ್ಕೆ ನಿರ್ಧಿಷ್ಟವಾನ ವಿವರಣೆಯೇನೆಂದರೆ ಶರೀರದ ರಚನೆಯಿಂದ ಜ್ಞಾನೇಂದ್ರಿಯವುಳ್ಳ ಜೀವಿ ಎಂದು ಒಪ್ಪುವಂತೆ ಮಾನವನು ಭೂಮಿಯಲ್ಲಿರುವ ಪ್ರಾಣಿಗಳಿಗೆ ಪ್ರಧಾನನೂ, ದೊರೆಯೂ ಎಂಬುದನ್ನು ಸತ್ಯವೇದವು ವಿಜ್ಞಾನದೊಡನೆ ಒಪ್ಪಿಕೊಳ್ಳಲು ಹಿಂಜರಿಯುವುದಿಲ್ಲ. ಈ ವಿಷಯವನ್ನು ಪ್ರಸ್ತಾಪಿಸುವ ಅಧ್ಯಾಯವನ್ನು ಗಮನಿಸುವ; ಪ್ರವಾದಿ ದಾವೀದನು ಬಹಳ ಮುಖ್ಯವಾಗಿ ಗುರುತಿಸುವುದೇನೆಂದರೆ ಮಾನವ, ಆತನ ಪ್ರಕೃತಿಯಲ್ಲಿ ದೇವದೂತರಿಗಿಂತ ಕಡಿಮೆಯಾದವನು. ಭೂಮಿಯ ಎಲ್ಲಾ ಸೃಷ್ಠಿಗಳ ಮೇಲೆ ದೊರೆತನ ಮಾಡುವವನು ಕೆಳವರ್ಗದ ಎಲ್ಲಾ ಜ್ಞಾನೇಂದ್ರಿಯವುಳ್ಳ ಜೀವಿಗಳಿಗೆ ದೇವರ ಪ್ರತಿನಿಧಿಯಾಗಿದ್ದಾನೆ.

ದೇವರ ಪರಿಶುದ್ಧ ಗ್ರಂಥವು ಎಲ್ಲಿಯೂ ದೇವರ ಒಂದು ಚಿಕ್ಕ ತುಂಡು, ಕಿಡಿ ಎಲ್ಲಾ ಮನುಷ್ಯರನ್ನೂ ಸಂಪರ್ಕಿಸುತ್ತಿದೆ ಎಂದು ನೇರವಾಗಿ ಹೇಳಿರುವುದಿಲ್ಲ ಮತ್ತು ಅಂಥಾ ವಿಚಾರಕ್ಕೆ ನಮ್ಮನ್ನು ತೊಡಗಿಸುವುದಿಲ್ಲ. ಒಂದು ನೂತನ ವಿಚಾರ ಸರಣಿಯನ್ನು ರಚಿಸಬೇಕೆಂದಿರುವವರು ಇಂಥಾಃ ಬುಡವಿಲ್ಲದ ಊಹನೆಗಳನ್ನು ಮಾಡುವವರಾಗಿದ್ದಾರೆ. ಆದರೆ ಇದಕ್ಕೆ ಅವಶ್ಯವಾದ ಸ್ಥೂಲಪದಾರ್ಥಗಳ ಕೊರತೆ ಅವರಲ್ಲಿ ಕಂಡುಬರುತ್ತದೆ. ಪ್ರತಿಯೊಂದು ಮಾನವನಲ್ಲಿಯೂ ಆತನ ಜನನದಲ್ಲಿಯೇ ಕಿಂಚಿತ್ತಾದರೂ ದೇವರ ಭಾಗದ ಸಂಪರ್ಕವಿದ್ದೇ ಇರುತ್ತದೆ ಎಂಬ ಈ ಬುಡವಿಲ್ಲದ ಪೂರ್ವ ಸಿದ್ಧಾಂತಗಳು ಹಲವು ಸುಳ್ಳು ಸಿದ್ಧಾಂತಗಳಿಗೆ ಆಧಾರವನ್ನಾಗಿ ಮಾಡಿಕೊಳ್ಳಲಾಗಿದ್ದು ಇದು ದೇವರ ಗುಣಲಕ್ಷಣಗಳನ್ನು ಅಸಂಸ್ಕೃತವಾದ ಹೀನಾಯಮಾನವುಳ್ಳದ್ದಾಗಿದೆ. ದೇವರ ಜ್ಞಾನಕ್ಕೆ, ನ್ಯಾಯಕ್ಕೆ, ಪ್ರೀತಿಗೆ ಮತ್ತು ಶಕ್ತಿಗೆ ಅವಮಾನಕರವಾಗಿದೆ.

ಪ್ರತಿಯೊಬ್ಬ ಮಾನವ ಜೀವಿಗೂ ಆತನ ಜನನದ ಸಂದರ್ಭದಲ್ಲಿ ದೇವರ ಕಿಡಿಯ ಸಂಪರ್ಕವಿರುತ್ತದೆ ಎಂಬ ಕಲ್ಪನೆಯು ನಿತ್ಯ ನರಕಯಾತನೆಯ ವಿಚಾರಸರಣಿಯನ್ನು ಅಗತ್ಯವಾಗಿಸಿತು. ಇಲ್ಲಿ ಮಾಡುವ ಸಲಹೆ ಏನೆಂದರೆ, ಮಾನವನನ್ನು ಇತರ ಪ್ರಾಣಿಗಳಂತೆಯೇ ಸೃಷ್ಟಿಸಿದ್ದರೆ, ಆತನು ಇತರ ಪ್ರಾಣಿಗಳಂತೆಯೇ ಯಾವುದೇ ನಿತ್ಯ ನರಕದ ಯಾತನೆಯಿಲ್ಲದೇ ಮರಣಿಸುತ್ತಿದ್ದ. ಆದರೆ ದೇವರು ತನ್ನ ಸ್ವಂತಜೀವದ ಕಿಡಿಯೊಂದನ್ನು ಮಾನವನಲ್ಲಿ ಇಟ್ಟಿರುವುದರಿಂದ ಮಾನವನು ನಿತ್ಯನಿರಂತರನಾಗಿದ್ದಾನೆ. ಈ ಕಾರಣದಿಂದ ದೇವರಿಗೆ ಆತನ ನಾಶನವನ್ನು ಬಯಸಿದರೂ ಈ ತನ್ನ ಸೃಷ್ಟಿಯನ್ನು ನಾಶನಗೊಳಿಸಲು ಆತನಿಂದಲೂ ಸಾಧ್ಯವಿಲ್ಲ. ಮಾನವನನ್ನು ನಾಶಗೊಳಿಸಲಾಗದಿದ್ದರೆ ಆತನು ಎಲ್ಲಿಯಾದರೂ ಶಾಶ್ವತನಾಗಿ ಇರಲೇ ಬೇಕಾಗುತ್ತದೆ; ಮತ್ತು ಬಹುಪಾಲಿನ ಜನರು ಕೆಟ್ಟವರಾಗಿರುವುದರಿಂದ ಮತ್ತು ಕೇವಲ ಒಂದು 'ಚಿಕ್ಕ ಹಿಂಡು' ಮಾತ್ರವೇ ಭಕ್ತಿವಂತರಾಗಿದ್ದು, ದೇವರಿಗೆ ಪ್ರಿಯರಾಗಿರುವುದರಿಂದ, ಭಕ್ತಿಯಿಲ್ಲದವರಿಗೆ ಮುಂದೆ ನಿತ್ಯನರಕವು ಇರುವಂತೆ ಅಲ್ಪಸಂಖ್ಯೆಯಲ್ಲಿರುವ ಭಕ್ತವಂತರಿಗೆ ಆಶೀರ್ವಾದಕರ ಭವಿಷ್ಯವಿರುವ ಅನುಪಾತ ದಲ್ಲಿರುತ್ತದೆ ಎಂದು ಹೇಳಲಾಗುತ್ತಿದೆ. ಇಲ್ಲವಾದಲ್ಲಿ, ಮಾನವರ ಹೆಚ್ಚಿನ ಹಿತಕ್ಕಾಗಿ, ದೇವರ ಹೆಚ್ಚಿನ ಮಹಿಮೆಗಾಗಿ ಮತ್ತು ವಿಶ್ವದ ಹೆಚ್ಚಿನ ಶಾಂತಿ ಮತ್ತು ಸಮೃದ್ಧಿಗಾಗಿ ಎಲ್ಲಾ ಕೆಟ್ಟವರೂ ನಾಶವಾಗಬೇಕಾಗುತ್ತದೆ. ಹಕ್ಕಿನ ಹೇಳಿಕೆ ಏನೆಂದರೆ, ದೇವರು ಸೃಷ್ಟಿಸುವ ಶಕ್ತಿಯುಳ್ಳವನಾಗಿದ್ದರೂ ಆತನ ದೈವಿಕ ಕಿಡಿಯೊಂದು ವಿವರಿಸಲಾಗದ ಯಾವುದೋ ರೀತಿಯಲ್ಲಿ ಮಾನವನಲ್ಲಿ ಸೇರಿಹೋಗಿರುವುದರಿಂದ ಆತನಿಗೆ ಮಾನವನನ್ನು ನಾಶಗೊಳಿಸಲು ಸಾಧ್ಯವಾಗುತ್ತಿಲ್ಲ ಎಂಬುದು. ಈ ಸಮಗ್ರವಾದ ಪ್ರಸ್ತಾಪವು ತಪ್ಪು ಭ್ರಮೆಯುಳ್ಳದ್ದಾಗಿದೆ ; ಇದು ಯಾವುದೇ ದೇವರ ವಾಕ್ಯದ ಆಧಾರವನ್ನು ಹೊಂದಿರುವುದಿಲ್ಲ ಮತ್ತು ಇದು ಅಂಧಕಾರಯುಗದ ಕೃತಿಮ ಸೃಷ್ಟಿಯಾಗಿದ್ದು ದೇವರ ಪರಿಶುದ್ಧ ಗ್ರಂಥಗಳಿಗೆ ಸ್ಪಷ್ಟವಾಗಿ ವಿರೋಧವಾಗಿದೆ ಎಂದು ತೋರಿಸಿಕೊಡುವ ನಿರೀಕ್ಷೆಯಲ್ಲಿ ನಾವಿದ್ದೇವೆ.

ದೇವರ ಪರಿಶುದ್ಧ ಗ್ರಂಥಗಳು ಮಾನವನು ಎರಡು ವಸ್ತುಗಳಿಂದ ಉಂಟುಮಾಡಲ್ಪಟ್ಟಿದ್ದಾನೆ ಎಂಬುದಾಗಿ ಮಾನ್ಯಮಾಡುತ್ತದೆ. ಅವುಗಳೆಂದರೆ ದೇಹ ಮತ್ತು ಚೈತನ್ಯ (Body and Spirit). ಇವೆರಡೂ ಆತ್ಮನನ್ನು, ಚೇತನಯುಕ್ತನನ್ನು, ಬುದ್ಧಿವಂತನಾದ ಮನುಷ್ಯನನ್ನು

ಜೀವ ಅಥವಾ ಆತ್ಮ ಉತ್ಪತ್ತಿಗೊಳಿಸುತ್ತದೆ. 'ದೇಹ'ವೆಂಬ ಪದವು ಕೇವಲ ಪ್ರಾಕೃತಿಕ ಶರೀರದ ರಚನೆಗೆ ಮಾತ್ರವೇ ಅನ್ವಯವಾಗುತ್ತದೆ. ಅದು ಬದುಕಿರುವ ಜೀವಕ್ಕಾಗಲೀ ಅಥವಾ ಆ ಬದುಕಿನ ಫಲವಾದ ಚೇತನಯುಕ್ತ ವ್ಯಕ್ತಿಗಾಗಲೀ ಅಲ್ಲ. ದೇಹವಿಲ್ಲದೆ ಮನುಷ್ಯನಿರಲಾರನಾದರೂ ದೇಹವೆಂಬುದೇ ಮನುಷ್ಯನಲ್ಲ. ಜೀವನದ ಚೈತನ್ಯವಿಲ್ಲದೆ ಮನುಷ್ಯನಿರಲಾರದಾದರೂ ಆ ಚೈತನ್ಯವೆಂಬುದೇ ಮನುಷ್ಯನಲ್ಲ. ಚೈತನ್ಯ (ಆತ್ಮ = ಸ್ಪಿರಿಟ್) ಎಂಬುದು ಹಳೆ ಒಡಂಬಡಿಕೆಯಲ್ಲಿ ಹಿಬ್ರೂ ಮೂಲಪದವಾದ **'Ruach'** ನಿಂದ ಬಂದುದಾಗಿದೆ. ಪ್ರಾಥಮಿಕವಾಗಿ ಇದರ ಅರ್ಥ 'ಉಸಿರು' ಅಥವಾ 'ಪ್ರಾಣ'. ಹೀಗಾಗಿ ನಮ್ಮಲ್ಲಿ 'ಜೀವದ ಉಸಿರು' 'ಜೀವದ ಆತ್ಮ' ವೆಂಬ ಹೇಳಿಕೆಗಳಿವೆ. ಯಾಕೆಂದರೆ ಒಮ್ಮೆ ಪ್ರಾರಂಭವಾದ ಜೀವದ ಕಿಡಿಯು ಉಸಿರಿನಿಂದಲೇ ಬೆಂಬಲಿತವಾಗಿದೆ.

ಹೀಗಿದ್ದಾಗ್ಯೂ, 'ಜೀವದ ಆತ್ಮ'ವೆಂಬ ಪದವು ಉಸಿರಿಗಿಂತ ಹೆಚ್ಚಿನ ಅರ್ಥವನ್ನು ಕೊಡುವುದಾಗಿದೆ; ಅದು ಜೀವದ ಕಿಡಿಗೆ ತಾನೇ ಸಂಬಂಧಿಸಿದೆ ಮತ್ತು ಇದಿಲ್ಲದೆ ಉಸಿರಾಡುವಿಕೆ ಅಸಾಧ್ಯವಾಗಿದೆ. ಈ ಜೀವದ ಕಿಡಿಯು ನಮಗೆ ನಮ್ಮ ಪಿತೃಗಳಿಂದ ಬಂದಿದೆ. ಅದು ನಮ್ಮ ತಾಯಿಂದಿರ ಮೂಲಕ ಪೋಷಿಸಲ್ಪಟ್ಟು ಅಭಿವೃದ್ಧಿಗೊಂಡಿದೆ (ನಾಲ್ಕನೆಯ ಅಧ್ಯಾಯದ ಮೊದಲನೇ ಪುಟ ನೋಡಿ) ಮತ್ತು ಇದಕ್ಕಿಂತ ಹೆಚ್ಚಾಗಿ ಮನುಷ್ಯನ ಜೀವದ ಕಿಡಿಯು ಅದ್ಭುತವಾಗಿ ಸಂಪರ್ಕಿಸಲ್ಪಟ್ಟಿದೆ ಎಂಬುದು ಅಸತ್ಯ. ಪಶುಗಳ ಜೀವದ ಕಿಡಿಗೆ ಸಂಬಂಧಪಟ್ಟಂತೆ. ಕೆಳವರ್ಗದ ಪ್ರಾಣಿಗಳಾದ ಕುದುರೆ, ನಾಯಿ ಮತ್ತು ಹಸು ಮುಂತಾದವುಗಳು ಗಂಡುಪ್ರಾಣಿಗಳಿಂದ ಪಡೆಯಲ್ಪಟ್ಟಿದ್ದು ಅದೇ ಸಂತಾನದ ಹೆಣ್ಣು ಪ್ರಾಣಿಗಳಲ್ಲಿ ನಿಖರವಾಗಿ ಮಾನವರಂತೆಯೇ ಜನಿಸುತ್ತವೆ. ದೇವರ ವಾಕ್ಯವು ಇದಕ್ಕೆ ವ್ಯತಿರಿಕ್ತವಾದ ಏನನ್ನೂ ಸಲಹೆಮಾಡುವುದಿಲ್ಲ. ಸುಳ್ಳು ಸಿದ್ಧಾಂತವೊಂದನ್ನು ಎತ್ತಿಹಿಡಿಯುವ ಅನ್ವೇಷಣೆಯು ಮಾನವರದ್ದಾಗಿದೆ. ಅದು ಮಾನವ ಶಿಶುಗಳ ಜನನದಲ್ಲಿ ಒಂದು ದೈವಿಕ ಮಧ್ಯಸ್ಥಿಕೆ ಇದೆ ಎಂದು ಹೇಳಿಕೊಳ್ಳುತ್ತದೆ. ದೇವರು ಪ್ರಪಂಚದಲ್ಲಿ ಜನಿಸುವ ಪ್ರತಿಯೊಬ್ಬ ಮಾನವ ಶಿಶುವಿನ ನೇರವಾದ ಸೃಷ್ಟಿಕರ್ತನು ಎಂದು ಊಹಿಸುವುದು ದೇವರ ವಾಕ್ಯವು ವಿರೋಧಿಸುವುದನ್ನು ಅಂದರೆ ದೇವರು ಪಾಪ ಮತ್ತು ಎಲ್ಲಾ ಗೊಂದಲಗಳಿಗೆ, ಅಸಂಪೂರ್ಣತೆಗೆ ಕಾರಣನು ಎಂಬುದನ್ನು ಊಹಿಸುವುದಾಗುತ್ತದೆ. ದೇವರ ವಾಕ್ಯವು ಪ್ರಕಟಿಸುವುದೇನೆಂದರೆ, **"ನಮ್ಮ ಶರಣನಾದ ದೇವರು ಮಾಡುವ ಕಾರ್ಯದಲ್ಲಿ ಯಾವ ಕುಂದೂ ಇಲ್ಲ"** (ಧರ್ಮೋ. 32:4). ಮಾನಸಿಕವಾಗಿ, ದೈಹಿಕವಾಗಿ ಮತ್ತು ನೈತಿಕವಾಗಿ ಕುಂದುಳ್ಳದ್ದು ಅಥವಾ ವಿಕೃತಗೊಂಡದ್ದು ದೇವರ ಕೈಕೆಲಸವು ಅಲ್ಲವೇ ಅಲ್ಲ! ಅಂಥವುಗಳು ಅವರ ಸರ್ವಸಂಪೂರ್ಣ ಪೂರ್ವಜರಾದ ಆದಾಮ ಹವ್ವರಿಂದ ಎಷ್ಟೋ ದೂರದಲ್ಲಿ ತೆಗೆದುಹಾಕಲ್ಪಟ್ಟವರೂ, ಬಿದ್ದುಹೋದವರೂ ಆಗಿದ್ದಾರೆ. ಆದಾಮ ಹವ್ವರ ಸೃಷ್ಟಿಯ ಜವಾಬ್ಧಾರಿಯನ್ನು ಮಾತ್ರವೇ ದೇವರು ತೆಗೆದುಕೊಳ್ಳುವವನಾಗಿದ್ದಾನೆ. ದೇವರು ಎಲ್ಲಾ ಮಾನವರ ಸೃಷ್ಟಿಯನ್ನು ನೇರವಾಗಿ ತಾನೇ ಮಾಡುವವನಾಗಿದ್ದಾನೆ ಎಂದು ಹೇಳುವವರು ದೇವರು ಈ ಲೋಕದ ಎಲ್ಲಾ ತಿಳಿಗೇಡಿತನಕ್ಕೂ, ಹುಚ್ಚುತನಕ್ಕೂ, ದುರ್ಬಲ ಮನಸ್ಸಿಗೂ ಕಾರಣನಾಗಿದ್ದಾನೆ ಎಂದು ಹೇಳುವವರಾಗುತ್ತಾರೆ. ಆದರೆ ವಿಜ್ಞಾನ ಮತ್ತು ದೇವರ ವಾಕ್ಯ ಇವೆರಡೂ ಹೇಳುವುದೇನೆಂದರೆ ಮಕ್ಕಳು ತಮ್ಮ ಪೂರ್ವಜರಿಂದ ಅವರ ದುರ್ಗುಣಗಳನ್ನು ಅಥವಾ ಸದ್ಗುಣಗಳನ್ನು, ಅವರ ಬಲಹೀನತೆಗಳನ್ನು ಅಥವಾ ಮೇಧಾಶಕ್ತಿಯನ್ನು ಬಳುವಳಿಯಾಗಿ ಪಡಕೊಳ್ಳುತ್ತಾರೆ ಎಂದು ಹೇಳುತ್ತವೆ. ಅಪೋಸ್ತಲನು ಹೆಚ್ಚು ಸ್ಪಷ್ಟವಾಗಿ ಹೇಳುವುದೇನೆಂದರೆ **"ಒಬ್ಬ ಮನುಷ್ಯನ ಅವಿಧೇಯತೆಯಿಂದಲೇ ಪಾಪವೂ, ಪರಿಣಾಮವಾಗಿ ಪಾಪದಿಂದ ಮರಣವು ಈ ಲೋಕದೊಳಕ್ಕೆ ಸೇರಿದವು. ಎಲ್ಲರು ಪಾಪಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು''** (ರೋಮಾ 5:12). – **"ತಂದೆಗಳು ಹುಳಿ ದ್ರಾಕ್ಷೆಯನ್ನು ತಿಂದರು, ಮಕ್ಕಳ ಹಲ್ಲುಗಳು ಜಳಿತುಹೋಗಿವೆ"** (ಯೆರೆಮೀಯ 31:29,30 ಮತ್ತು ಯೆಹೆಜ್ಕೇಲ 18:2) ಎಂದು ಹೇಳುವುದರ ಮೂಲಕ ಪ್ರವಾದಿಗಳು ಸಹಾ ಇದೇ ವಿಷಯುವನ್ನು ಪ್ರಸ್ತಾಪಿಸುವವರಾಗಿದ್ದಾರೆ.

ದೇವರು ತನ್ನ ಅಮರತ್ವದ ದೈವೀಕ ಕಿಡಿಯೊಂದನ್ನು ಮೂಲ ಪಿತೃಗಳಲ್ಲಿ ನೆಟ್ಟಿದ್ದು ಅದೇ ಕಿಡಿಯು ಅವರ ಸಂತಾನದವರಲ್ಲಿ ಅದೇ ರೀತಿಯಲ್ಲಿ ಹರಿದು ಬರಲು ಸಾಧ್ಯವಿಲ್ಲವೇ? ಎಂದು ಯಾರಾದರೂ ಪ್ರಶ್ನಿಸಬಹುದು. ಈ ವಿಷಯದ ಬಗ್ಗೆ ನಾವು ಸತ್ಯವೇದದ ಹೇಳಿಕೆಗಳನ್ನು ಪರೀಕ್ಷಿಸೋಣ. ಅದೇ ಸಮಯದಲ್ಲಿ, ದೇವರ ವಾಕ್ಯದಲ್ಲಿ ಮುಕ್ತವಾಗಿ ಹೇಳಿರುವ ಸಂಗತಿಗಳಲ್ಲದೆ ಬೇರೆ ಯಾವುದೇ ಪ್ರಕಟನೆ ಇಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಆದುದರಿಂದ ಈ ವಿಷಯದಲ್ಲಿನ ಎಲ್ಲಾ ಸಂಗತಿಗಳನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ನಾವು ಆದಿಕಾಂಡದಲ್ಲಿನ ವಿವರಣೆಯಲ್ಲಿ ಏನು ನೋಡುತ್ತೇವೆ? ಅಲ್ಲಿ ಮಾನವನ ಸೃಷ್ಟಿಯ ಬಗ್ಗೆ ವಿಶಿಷ್ಟವಾದ ರೀತಿಯಲ್ಲಿ ಹೇಳಲ್ಪಟ್ಟಿದೆ. ಆದರೆ ಪ್ರಾಣಿಗಳ ಸೃಷ್ಟಿಯ ಬಗ್ಗೆ ವಿಶಿಷ್ಟವಾದ ವಿವರಣೆ ಇಲ್ಲ. ಆದಾಗ್ಯೂ ಹೇಳಿರುವ ಹೇಳಿಕೆಗಳು ಸಾಧಾರಣವಾದ ಮಾತುಗಳಲ್ಲಿವೆ ಮತ್ತು ಅವುಗಳಲ್ಲಿ ಯಾವುದೇ ಅತಿಮಾನುಷ್ಯ ಜೀವದ ಕಿಡಿಯ ಪಾಲುಕೊಡುವಿಕೆಯ ಬಗ್ಗೆ ಪ್ರಸ್ತಾಪವಿಲ್ಲ. ಆದಿಕಾಂಡದಲ್ಲಿನ ವಿವರಣೆಯಂತೆ ಪ್ರಾಣಿಗಳಿಗಿಂತ ಮಾನವನಿಗೆ ಇರುವ ಶ್ರೇಷ್ಟತೆಯು ಆತನು ಬೇರೆ ರೀತಿಯ ಉಸಿರೊಂದನ್ನು ಅಥವಾ ಆತ್ಮನನ್ನು ಹೊಂದಿರುವ

ಕಾರಣದಿಂದಲ್ಲ. ಆದರೆ ಆತನು ಶ್ರೇಷ್ಟವಾದ ಶರೀರವೊಂದನ್ನು ಉತ್ತಮವಾದ ಶರೀರರಚನೆಯನ್ನು – ಜ್ಞಾನ ಭರಿತವಾದ ಮೆದುಳು ರಚನೆಯನ್ನು ಹೊಂದಿದ್ದಾನೆ ಎಂಬ ಕಾರಣ. ಇದು ಆತನನ್ನು ಕೆಳವರ್ಗದ ಪ್ರಾಣಿಗಳಿಗಿಂತ ಹೆಚ್ಚು ಆಲೋಚಿಸುವಂತೆ ಮಾಡುತ್ತದೆ. ಈ ಕಾರಣದಿಂದ ಮಾನವನು ಶರೀರದ ರೂಪದಲ್ಲಿ ಆತ್ಮ ಸ್ವರೂಪನಾದ ದೇವರ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟಿದ್ದಾನೆ – ಯೋಹಾನ 4:24 .

## ಮಾನವನ ಆತ್ಮ (ಚೈತನ್ಯ)
## The Spirit of Man

ಈಗಾಗಲೇ ನಾವು ಕಂಡುಕೊಂಡಿರುವಂತೆ (8ನೇ ಅಧ್ಯಾಯದ ಆತ್ಮ ಎಂಬ ಪದದ ಅರ್ಥದ ವಿವರಣೆ ನೋಡಿ) ನಮ್ಮ ಸತ್ಯವೇದದ ಸಾಧಾರಣ ಭಾಷಾಂತರದಲ್ಲಿ 'ಆತ್ಮ' ಎಂಬ ಪದವು ಇಬ್ರಿಯ ಮೂಲದ 'Ruach' ಮತ್ತು ಗ್ರೀಕಿನ 'pneuma' ಎಂಬ ಪದಗಳಿಂದ ಬಂದುದಾಗಿದೆ; ಆದುದರಿಂದ 'ಆತ್ಮ' ಎಂಬ ಪದವನ್ನು ದೇವರ ಮಾತುಗಳಲ್ಲಿ ಸರಿಯಾದ ರೀತಿಯಲ್ಲಿ ಮೆಚ್ಚಿಕೊಳ್ಳುವಾಗ, ನಾವು ಅದು ಭಾಷಾಂತರಗೊಂಡಿರುವ ಮೂಲ ಭಾಷೆಯ ಪದಕ್ಕೆ ಅಂಟಿಕೊಂಡಿರುವ ಅರ್ಥಗಳನ್ನು ನೆನಪಿನಲ್ಲಿಟ್ಟು ಕೊಳ್ಳಬೇಕಾಗುತ್ತದೆ. ನಾವು ಕಂಡು ಕೊಂಡಿರುವಂತೆ 'ಸ್ಪಿರಿಟ್' ಎಂಬುದರ ಪ್ರಾಥಮಿಕ ಅರ್ಥ 'ಉಸಿರು' ಎಂಬುದಾಗಿದೆ. ಎರಡನೆಯದಾಗಿ ಅದನ್ನು ಒಂದು **'ಅದೃಶ್ಯವಾದ ಶಕ್ತಿ'** ಎಂಬ ಅರ್ಥದಲ್ಲಿ ಬಳಸಿಕೊಳ್ಳಲಾಗಿದೆ. ದೇವರ ಸಂಬಂಧದಲ್ಲಿ ಅದು ಆತನು ಶಕ್ತಿವಂತನು, ಆದರೆ ಅದೃಶ್ಯನು ಎಂಬುದನ್ನು ಸೂಚಿಸುತ್ತದೆ ಮತ್ತು ಇದು ದೇವರ ಪ್ರಭಾವ ಮತ್ತು ಕಾರ್ಯಾಚರಣೆಯ ಸಂಧರ್ಭಗಳಲ್ಲಿ ಉಪಯೋಗಿಸಲ್ಪಟ್ಟಿದೆ ಎಂಬುದನ್ನು ನೋಡಿದ್ದೇವೆ. ಅದು **ಮನಸ್ಸಿಗೆ** ಅನ್ವಯಿಸಲ್ಪಟ್ಟಿದೆ. ಯಾಕೆಂದರೆ ಅದು ಒಂದು ಅದೃಶ್ಯವಾದ ಹಾಗೂ ಸ್ಪರ್ಶಾತೀತವಾದ ಶಕ್ತಿಯಾಗಿದೆ; ವಾಕ್ಯಗಳು ಸಹಾ ಸ್ಪರ್ಶಾತೀತವೂ ಆದರೆ ಶಕ್ತಿಯುಳ್ಳವುಗಳೂ ಆಗಿವೆ. ಜೀವವು, ಬಹು ಮುಖ್ಯವುಳ್ಳದ್ದೂ, ವ್ಯಾಪಿಸುವಂಥಾದ್ದೂ ಆಗಿದ್ದರೂ ಅದೊಂದು ಅದೃಶ್ಯವಾದ ಶಕ್ತಿಯಾಗಿದೆ ಅಥವಾ ವಿದ್ಯುಚ್ಛಕ್ತಿಯಂಥಾಃ ಗುಣವುಳ್ಳದ್ದೂ ಆಗಿದೆ. ಆದುದರಿಂದ 'ಚೈತನ್ಯ' (ಆತ್ಮ) ಎಂಬ ಪದವನ್ನು ಈ ಎಲ್ಲಾ ಸಂಧರ್ಭಗಳಿಗೂ ಅನ್ವಯಿಸಲಾಗುತ್ತದೆ. ಇದರ ಫಲವಾಗಿ ನಮ್ಮಲ್ಲಿ ನಮ್ಮ ಮನಸ್ಸಿನ 'ಚೈತನ್ಯ'(ಆತ್ಮ)ದ ಬಗ್ಗೆ, ಅದೃಶ್ಯವಾದ ನಮ್ಮ ಮನಃಶಕ್ತಿಯ ಬಗ್ಗೆ ಹೇಳುವ ವೇದದ ಪದಗಳಿವೆ:– ಮಾನವನ ಆತ್ಮ, ಮಾನವನ ಮಾನಸಿಕ ಶಕ್ತಿ ಮತ್ತು ಚಿತ್ತ; ಜೀವಾತ್ಮ, ನಮ್ಮ ದೇಹವನ್ನು ಮತ್ತು ಎಲ್ಲಾ ರಚನೆಗಳನ್ನು ಪ್ರಚೋದಿಸುವ; ದೇವರ ಆತ್ಮ ಜೀವನ ಶಕ್ತಿ; ದೇವರ ಆತ್ಮ, ದೇವರು ಜೀವವುಳ್ಳ ಮತ್ತು ನಿರ್ಜೀವ ವಸ್ತುಗಳ ಮೇಲೆ ಪ್ರಯೋಗಿಸುವ ಆತನ ಶಕ್ತಿ ಮತ್ತು ಪ್ರಭಾವ, ಜ್ಞಾನದಾಯಕ ಆತ್ಮ, ವಿವೇಕತೆಯುಳ್ಳ ಆತ್ಮ; ಪ್ರೀತಿದಾಯಕ ಆತ್ಮ, ಪ್ರೀತಿಯಿಂದ ಪ್ರೇರೇಪಿಸಲ್ಪಡುವ ಮನಸ್ಸು ಅಥವಾ ಮನೋವೃತ್ತಿ; ಕೇಡಿನ ಮತ್ತು ಅಸೂಯೆಯ ಆತ್ಮ, ಮಾತ್ಸರ್ಯದಿಂದ ಪ್ರಚೋದನೆ ಗೊಂಡಿರುವ ಮನಸ್ಸು ಅಥವಾ ಮನೋವೃತ್ತಿ, ಸತ್ಯದ ಆತ್ಮ, ಸತ್ಯದಿಂದ ಪ್ರಯೋಗಿಸಲ್ಪಡುವ ಪ್ರಭಾವ ಅಥವಾ ಶಕ್ತಿ : ಪ್ರಪಂಚದ ಆತ್ಮ, ಈ ಲೋಕವು ಪ್ರಯೋಗಿಸುವ ಪ್ರಭಾವ ಅಥವಾ ಶಕ್ತಿ. ಇದರಂತೆ ಪರಲೋಕದ ಜೀವಿಗಳನ್ನು ಆತ್ಮೀಕ ಜೀವಿಗಳೆಂದು ವರ್ಣಿಸಲಾಗುತ್ತದೆ. ಅವುಗಳು ಅದೃಶ್ಯವಾದವುಗಳಾಗಿವೆ, ಶಕ್ತಿ, ಜ್ಞಾನ ಮುಂತಾದವುಗಳನ್ನು ಹೊಂದಿವೆ. ಇದು 'ದೇವರು ಆತ್ಮಸ್ವರೂಪಿಯಾಗಿದ್ದಾನೆ' ಎಂದು ನಮ್ಮ ಕರ್ತನಾದ ಯೇಸು ಕ್ರಿಸ್ತನು ಹೇಳಿರುವಂತೆ ತಂದೆ ದೇವರಿಗೆ ಮಾತ್ರವಲ್ಲ, ಇದು ನಮ್ಮ ಕರ್ತನಾದ ಯೇಸುಕ್ರಿಸ್ತನಿಗೂ ಅನ್ವಯವಾಗುತ್ತದೆ. ಯಾಕೆಂದರೆ, ಆತನ ಪುನರುತ್ಥಾನದ ನಂತರ "ಈಗ ಕರ್ತನು ಆತ್ಮನಾಗಿದ್ದಾನೆ" ಎಂದು ಪ್ರಕಟಿಸಲಾಗಿದೆ, ಇದು ದೇವದೂತರುಗಳಿಗೂ, ಸಭೆಗೂ ಅನ್ವಯುವಾಗುತ್ತದೆ. ಯಾಕೆಂದರೆ ಪ್ರಥಮಪುನರುತ್ಥಾನದಲ್ಲಿ ಜಯಹೊಂದುವ ಪ್ರತಿಯೊಬ್ಬರೂ ಆತ್ಮೀಕ ದೇಹವನ್ನು ಹೊಂದಿ ಕೊಳ್ಳುತ್ತಾರೆಂಬ ಭರವಸೆಯನ್ನು ನೀಡಲಾಗಿದೆ. ಸೈತಾನನು ಮತ್ತು ಅನುಚರರುಗಳು ಸಹಾ ಆತ್ಮ ಸ್ವರೂಪ ವುಳ್ಳವರಾಗಿದ್ದಾರೆ, ಅದೃಶ್ಯರು ಹಾಗೂ ಶಕ್ತಿಶಾಲಿ ಗಳಾಗಿದ್ದಾರೆಂದು ದೇವರ ವಾಕ್ಯವು ನಮಗೆ ತಿಳಿಸುವುದಾಗಿದೆ.

## ಹೊಸ ಒಡಂಬಡಿಕೆಯಲ್ಲಿ ಮರುನೂತನ ಸ್ವಭಾವದಲ್ಲಿನ ಆತ್ಮವು
## Spirit in Re The New Nature in The New Testament

ಮಾನವನ 'ಆತ್ಮ' ಎಂಬ ಪದವನ್ನು ಉಪಯೋಗಿಸುವ ನಮ್ಮ ಅಭಿಪ್ರಾಯವೇನೆಂದರೆ :

(1) 'ಆತ್ಮ' ಮತ್ತು 'ಆತ್ಮೀಕ' ಎಂಬ ಪದಗಳು ನೂತನ ಒಡಂಬಡಿಕೆಯಲ್ಲಿ ಹೆಚ್ಚಾಗಿ ಉಲ್ಲೇಖಿಸಲ್ಪಡುವುದೇನೆಂದರೆ (ಅ) 'ಚಿತ್ತ' ವಿಶೇಷವಾಗಿ ದೇವರ ವಾಕ್ಯದಿಂದ ಅಥವಾ ಆತ್ಮನಿಂದ ಪಡೆಯಲ್ಪಟ್ಟ ಭಕ್ತರುಗಳ ನೂತನ ಮನಸ್ಸು. 'ಕ್ರಿಸ್ತನಲ್ಲಿ ನೂತನ ಸೃಷ್ಟಿಗಳು' ಮಾನವ ಸ್ವಭಾವದಿಂದ ಆತ್ಮಿಕ ಸ್ವಭಾವಕ್ಕೆ ಬದಲಾಗುವುದಕ್ಕಾಗಿ ಕರೆಯಲ್ಪಟ್ಟವರಾಗಿದ್ದಾರೆ ಮತ್ತು ಅವರು ನಂಬಿಗಸ್ತರಾಗಿ ಇರುವುದಾದರೆ ಅವರಿಗೆ ಪುನರುತ್ಥಾನದಲ್ಲಿ ಕ್ರಿಸ್ತನಿಗೆ ಪರಲೋಕದ ತಂದೆಯ ವಿಶೇಷ ವ್ಯಕ್ತಿಯಾಗಿ

ಕೊಡಲ್ಪಟ್ಟಂತೆಯೇ (ಆ) ಆತ್ಮೀಕ ಅಥವಾ ಮಹಿಮಾ ಶರೀರವೊಂದನ್ನು ನೀಡಲಾಗುವುದು ಎಂಬ ವಾಗ್ದಾನವಿದೆ. ಈ ದೃಷ್ಟಿಕೋನದಲ್ಲಿ ಅವರ ಭವಿಷ್ಯದಲ್ಲಿನ ಪ್ರತೀಕ್ಷೆಯನ್ನು, ಸಭೆಯ ನಿರೀಕ್ಷೆಯನ್ನು (ಇ) ಆತ್ಮೀಕ ಮತ್ತು ಪರಲೋಕದ್ದು ಎಂದು ಕರೆಯಲಾಗುವುದು. ಈ ನಿರೀಕ್ಷೆಯು ಲೋಕದ ಮನುಕುಲದವರಿಗಲ್ಲ. 'ಆತ್ಮ' ಎಂಬ ಪದವನ್ನು (ಈ) ಮಾಂಸದೇಹಧಾರಿಗಳಲ್ಲದ ಆತ್ಮೀಕ ಶರೀರಿಗಳಾದ ದೇವದೂತರುಗಳಿಗೆ ಸಹಾ ಉಲ್ಲೇಖಿಸಲಾಗುವುದು. ಆದರೆ 'ಆತ್ಮ' ಮತ್ತು 'ಆತ್ಮೀಕ' ಎಂಬ ಪದಗಳು ಎಲ್ಲಿಯಾದರೂ, ಯಾವಾಗಲಾದರೂ ಉಪಯೋಗಿಸಲ್ಪಡುವಾಗ ಆ ಪದಗಳಿಗೆ 'ಅದೃಶ್ಯವಾಗಿರುವಿಕೆ' ಎಂಬ ಆಲೋಚನೆಯು ಸದಾ ಅಂಟಿಕೊಂಡಿರುತ್ತದೆ.

ಈ ಪದಗಳ ಉಪಯೋಗದ ಬಗ್ಗೆ ಕೆಲವೊಂದು ಉದಾಹರಣೆಗಳನ್ನು ಕೆಳಗೆ ನೀಡಲಾಗಿದೆ.

(ಅ) **"ಅಪೋಸ್ತಲನಾದ ಪೌಲನು ಯೆರೂಸಲೇಮಿಗೆ ಹೋಗಬೇಕೆಂದು ತನ್ನ 'ಆತ್ಮ' (ಮನಸ್ಸು–Pneuma) ದಲ್ಲಿ ಉದ್ದೇಶಿಸಿದನು"** (ಅ.ಕೃ 19:21).

(ಅ) **"ಪೌಲನ ಮನಸ್ಸು (Pneuma) ಅವನೊಳಗೆ ಕುದಿಯಿತು"** (ಅ.ಕೃ. 17:16)

(ಅ) **"ಪೌಲನು ತನ್ನ ಮನಸ್ಸಿನಲ್ಲಿ (Pneuma) ಅತ್ಯಾಸಕ್ತಿಯುಳ್ಳವನಾಗಿ ಯೇಸುವೇ ಬರಬೇಕಾದ ಕ್ರಿಸ್ತನೆಂದು ಯೆಹೂದ್ಯರಿಗೆ ಖಂಡಿತವಾಗಿ ಸಾಕ್ಷಿಹೇಳಿದನು"** (ಅ.ಕೃ. 18:5)

(ಅ) **"ಅಪೊಲ್ಲೊಸನು ಆಸಕ್ತ ಮನಸ್ಸುಳ್ಳವನಾಗಿದ್ದು (Pneuma of ardent mind) ಯೋಹಾನನು ಮಾಡಿಸಿದ ದೀಕ್ಷಾಸ್ನಾನವನ್ನು ಮಾತ್ರ ಬಲ್ಲವನಾದಾಗ್ಯೂ ಯೇಸುವಿನ ಸಂಗತಿಗಳನ್ನು ಸೂಕ್ಷ್ಮವಾಗಿ ಹೇಳಿ ಉಪದೇಶಿಸಿದನು"** (ಅ.ಕೃ 18:25)

(ಅ) **"ಇದಕ್ಕೆ ದೇವರೇ ನನ್ನ ಸಾಕ್ಷಿ; ಆತನ ಮಗನ ಸುವಾರ್ತೆಯನ್ನು ಸಾರುತ್ತಾ ಆತನನ್ನೇ ನನ್ನ ಆತ್ಮದಲ್ಲಿ (Pnueuma-my new mind,my new heart, my renewed will) ಆರಾಧಿಸುವವನಾಗಿದ್ದೇನೆ"** (ರೋಮಾ. 1:10).

(ಅ) **"ನೀವು ನಿಮ್ಮ ದೇಹದಲ್ಲಿಯೂ ಆತ್ಮದಲ್ಲಿಯೂ (Pneuma-mind) ದೇವರ ಪ್ರಭಾವನ್ನು ಪ್ರಕಾಶಪಡಿಸಿರಿ."** (1 ಕೊರಿಂಥ 6:20)

(ಅ) **"ನಾನಂತೂ ದೇಹದಿಂದ ದೂರವಾಗಿದ್ದರೂ ಆತ್ಮದಿಂದ (Pneuma –mentally) ಹತ್ತಿರದಲ್ಲಿದ್ದು ಈ ಕಾರ್ಯಮಾಡಿದವನನ್ನು ಕುರಿತು ಆಗಲೇ ಹತ್ತಿರವಿದ್ದವನಂತೆ ತೀರ್ಪುಮಾಡಿದ್ದೇನೆಂದರೆ** (1 ಕೊರಿಂಥ 5:3)

(ಅ) **"ಸಾತ್ವಿಕವಾದ ಶಾಂತ ಮನಸ್ಸು (Pneuma, Mind, disposition) ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ"** (1 ಪೇತ್ರ 3:4)

(ಆ) **"ಪ್ರಾಕೃತ ದೇಹವಾಗಿ ಬಿತ್ತಲ್ಪಡುತ್ತದೆ. ಆತ್ಮೀಕ (Pneumatikos) ದೇಹವಾಗಿ ಎದ್ದುಬರುವುದು" "ಪ್ರಾಕೃತ ದೇಹವಿರುವುದಾದರೆ ಆತ್ಮೀಕ (Pneumatikos), ದೇಹವೂ ಇರುವುದು"** (1 ಕೊರಿಂಥ 15:44)

(ಆ) **"ಆತ್ಮೀಕ (Pneumatikos)ವಾದುದು ಮೊದಲನೇದಲ್ಲ...ಆ ಮೇಲೆ ಆತ್ಮೀಕವಾದುದು (Pneumatikฺo)** (1 ಕೊರಿಂಥ 15:46)

(ಇ) **"ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವುದು (*Pneuma:* to have a mind controlled by God's Holy spirit or will) ಜೀವವೂ ಮನಶ್ಶಾಂತಿಯೂ ಆಗಿದೆ"** (ರೋಮಾ. 8:6).

(ಇ) **"ನಿಮ್ಮಲ್ಲಿ ಯಾರಾದರೂ . . . ಆತ್ಮನಿಂದ ನಡಿಸಿಕೊಳ್ಳುವ (*Pneumatikos :* Spirit begotten and possessed of the new mind) ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ"** (ಗಲಾತ್ಯ 6:1).

(ಇ) **"ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು (*Pneumatikos* : Blessings of a Spirit kind) ನಮಗೆ ಕ್ರಿಸ್ತನಲ್ಲಿ ಅನುಗ್ರಹಿಸಿದ್ದಾನೆ"** (ಎಫೆಸ 1:3)

(ಇ) **"ಪವಿತ್ರಾತ್ಮ (*Pneuma:* The Holy Spirit of God) ಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮಸಂಬಂಧವಾದ ಸಂಬಂಧವಾದ ಪದಗಳಿಂದಲೂ (*Pneumatikos :* songs in accord with your new spirit) . . .** (ಎಫೆಸ 5:19).

(ಇ) **"ನೀವು ಸಕಲ ಆತ್ಮೀಯ ಜ್ಞಾನವನ್ನೂ ಗ್ರಹಿಕೆಯನ್ನೂ ಹೊಂದಿ ಕರ್ತನ ಚಿತ್ತವಾದ ತಿಳುವಳಿಕೆಯಿಂದ ತುಂಬಿಕೊಂಡು... (*Pneumatikos*: under standing of all matters connected with your new spiritual relationship to God and his plan)"** (ಕೊಲೊಸ್ಸೆ 1:9)

(ಇ) **"ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ (Pneumatikos) ಮಂದಿರವಾಗುವುದಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ** ( 1 ಪೇತ್ರ 2:5)

(ಈ) **"ಗಾರಡುಗಾರ್ತಿಯಾದ (A damsel possessed of a – Pneuma an invisible power) ಒಬ್ಬ ದಾಸಿಯು ನಮ್ಮೆದುರಿಗೆ ಬಂದಳು. ಅವಳು ಕಣಿಹೇಳುವುದರಿಂದ . . . (through the fellowship with the fallen spirit beings)** (ಅ.ಕೃ. 16:16)

(ಈ) **"ದೆವ್ವಗಳು (Pneuma) ಬಿಟ್ಟು ಹೋದವು"** (ಅ.ಕೃ. 19:12)

(ಈ) **"ಆದರೆ ದೆವ್ವವು (Pneuma) ಅವರಲ್ಲಿ ಇಬ್ಬರಿಗೆ – ಯೇಸುವಿನ ಗುರುತು ನನಗುಂಟು . . . ಎಂದು ಹೇಳಿತು"** (ಅ.ಕೃ 19:15).

(ಈ) **"ದೇವದೂತನಾಗಲೀ, ದೇಹವಿಲ್ಲದ ಆತ್ಮವಾಗಲೀ (Pneuma) ಇಲ್ಲವೆಂದು ಸದ್ದುಕಾಯರು ಹೇಳುವರು''** (ಅ.ಕೃ. 23:8)

(ಈ)**"ಆತ್ಮವಾಗಲೀ (Pneuma) ದೇವದೂತನಾಗಲೀ ಅವನ ಸಂಗಡ ಮಾತಾಡಿದ್ದರೂ ಮಾತಾಡಿದ್ದಿರಬಹುದು"** (ಅ.ಕೃ 23:9).

## ಹಳೆ ಒಡಂಬಡಿಕೆಯಲ್ಲಿ ಆತ್ಮ
## Spirit in the Old Testament

(2) 'ಆತ್ಮ' ಎಂಬ ಪದವನ್ನು ವಿಶೇಷವಾಗಿ ಹಳೆ ಒಡಂಬಡಿಕೆಯಲ್ಲಿ ಮಾನವ ಜಾತಿಗೆ ಸರ್ವ ಸಾದಾರಣವಾಗಿ ಉಪಯೋಗಿಸಲಾಗಿದೆ; ಆದರೆ ಸದಾ (ಉ) ಜೀವಾತ್ಮ, ದೇವರು ಮೊಟ್ಟಮೊದಲಿಗೆ ಆದಾಮನಲ್ಲಿ ಜೀವತುಂಬಿ ಜಾಗೃತಗೊಳಿಸಿದ್ದು, ಅಂದಿನಿಂದ ಆತನ ಸಂತಾನದಲ್ಲಿ ಕ್ಷೀಣಗೊಂಡು ಹರಿದುಬಂತು – ಇದು ಅದೃಶ್ಯವಾದ ಶಕ್ತಿ ಅಥವಾ ಗುಣಧರ್ಮವಾಗಿದೆ; ಅಥವಾ (ಊ) ಮನಸ್ಸಿನ ಚೇತನ, ಚಿತ್ತ– ಜೀವವನ್ನು ನಿಯಂತ್ರಿಸುವ ಅದೃಶ್ಯವಾದ ಶಕ್ತಿಯಾಗಿದೆ.

## ರುವಾಕ್, ನ್ಯೂಮ – ಸಚೇತನಗೊಂಡ ಶಕ್ತಿ
## Ruach, Pneuma - An Animating Power

ಮಾನವ ಸೃಷ್ಟಿಯ ಬಗ್ಗೆ ಮಾತನಾಡುವಾಗ, ಜೀವಾತ್ಮವೆಂಬುದು ನಮಗೆ ಅರ್ಥವಾಗುತ್ತದೆ – ಜೀವದ ಉಸಿರು (ಪ್ರಾಣ). ಈ ಜೀವಾತ್ಮವು ವಿಶೇಷವಾಗಿ ಮನುಷ್ಯನಲ್ಲಿ ಮಾತ್ರವಲ್ಲ, ದೇವರ ಎಲ್ಲಾ ಸೃಷ್ಟಿಗಳಲ್ಲಿ ಸಾಮಾನ್ಯವಾದುದೆಂದು ದೇವರ ವಾಕ್ಯವು ನಮಗೆ ಸ್ಪಷ್ಟವಾಗಿ ತೋರಿಸಿಕೊಡುವುದಾಗಿದೆ. ಈ ಕೆಳಗಣ ದೇವರ ವಾಕ್ಯಗಳು ಇದನ್ನು ಸ್ಪಷ್ಟವಾಗಿ ನಿರೂಪಿಸುತ್ತವೆ :–

(ಉ) **"ಆಕಾಶದ ಕೆಳಗಿರುವ ಸಕಲಪ್ರಾಣಿಗಳನ್ನೂ ಅಳಿಸಿಬಿಡುವೆನು"** (ಆದಿ. 6:17)

(ಉ) **"ಎಲ್ಲಾ ಪ್ರಾಣಿಗಳಲ್ಲಿ ಅಂದರೆ ಸಕಲ ವಿಧವಾದ ಮೃಗ ಪಶು ಕ್ರಿಮಿ ಕೀಟಗಳಲ್ಲಿಯೂ, ಪಕ್ಷಿ ಮೊದಲಾದ ರೆಕ್ಕೆಯಿರುವ ಎಲ್ಲಾ ಜೀವಿಗಳಲ್ಲಿಯೂ . . . "** (ಆದಿ. 7:14)

(ಉ) **"ಪಶು, ಪಕ್ಷಿ, ಕ್ರಿಮಿಗಳು ಮನುಷ್ಯರು ಸಹಿತವಾಗಿ ಭೂಮಿಯ ಮೇಲೆ ಸಂಚರಿಸುವ ಸಕಲ ಪ್ರಾಣಿಗಳೂ ಲಯವಾದವು. ಮೂಗಿನಿಂದ ಶ್ವಾಸಬಿಡುವ ಭೂಜಂತುಗಳೆಲ್ಲಾ ಸತ್ತವು"** (ಆದಿ. 7:21–22)

(ಉ) **"ತಂದೆ ಯಾಕೋಬನು ಚೇತರಿಸಿಕೊಂಡನು'' (ಯಾಕೋಬನ ಜೀವಶಕ್ತಿಯು ಪುನಃಶ್ಚೇತನ ಪಡೆಯಿತು)** (ಆದಿ. 45:28)

(ಉ) **"ಆತನು (ದೇವರು) ಲೇಹಿಯಲ್ಲಿ ಒರಳಬಂಡೆಯನ್ನು ಸೀಳಿ ಅದರೊಳಗಿಂದ ನೀರು ಬರುವಂತೆ ಮಾಡಲು ಅವನು (ಸಂಸೋನನು) ಕುಡಿದು ಪುನಃ ಚೈತನ್ಯ ಹೊಂದಿದನು" [ಆತನ ಶಕ್ತಿ, ತೇಜಸ್ಸು, ಚೈತನ್ಯ ಇವುಗಳೆಲ್ಲವೂ ಆತನಿಗೆ ಮರಳಿ ಬಂತು]** (ನ್ಯಾಯ 15:19).

(ಉ) **"ಪ್ರತಿ ಪ್ರಾಣಿಯ ಪ್ರಾಣವೂ ಸಮಸ್ತ ಮನುಷ್ಯರ ಆತ್ಮಗಳೂ ಆತನ ಕೈಯಲ್ಲಿರುವುವು"** (ಯೋಬ 12:10)

(ಉ) **"ದೇವರೇ, ಎಲ್ಲಾ ಮನುಷ್ಯರ ಆತ್ಮಗಳಿಗೆ** (Ruach **– ಜೀವ – ಶಕ್ತಿ, ಜೀವಾತ್ಮ) ದೇವರಾಗಿರುವವನೇ . . .''** (ಅರಣ್ಯ 16:22)

ಮನುಷ್ಯರ ಮತ್ತು ಪಶುಗಳ ನಡುವೆ ಬೇಧವಿದೆ ಮತ್ತು ಪಶುಗಳಲ್ಲಿ ಬೇರೆಯದೇ ಆದ ಜೀವಾತ್ಮವಿದೆ (ಪ್ರಾಣ), ಮರಣದ ಸಮಯದಲ್ಲಿ ಮಾನವರ ಆತ್ಮಗಳು ಪರಲೋಕಕ್ಕೂ, ಪ್ರಾಣಿಗಳ ಆತ್ಮಗಳು ಪಾತಾಳ ಲೋಕಕ್ಕೆ ಹೋಗುತ್ತವೆ ಎಂಬ ವಿಚಾರಸರಣಿಯು ಪುರಾತನ ಕಾಲದಿಂದಲೂ ತತ್ವ ಜ್ಞಾನಿಗಳಲ್ಲಿ ಇರುವಂಥಾದ್ದು; ಬುದ್ಧಿವಂತನಾಗಿದ್ದ ಸೋಲೊಮೋನನೂ ಹೀಗೆ ಪ್ರಶ್ನಿಸುತ್ತಾನೆ :–

**"ಮನುಷ್ಯನ ಆತ್ಮವು ಮೇಲಕ್ಕೆ ಏರುತ್ತದೋ, ಪಶುವಿನ ಆತ್ಮವು ಕೆಳಕ್ಕೆ ಇಳಿದು ಭೂಮಿಗೆ ಸೇರುತ್ತದೋ ಯಾರಿಗೆ ಗೊತ್ತು? (ಯಾರು ರುಜುವಾತುಪಡಿಸಬಲ್ಲರು)''** (ಪ್ರಸಂಗಿ 3: 21). ಸೋಲೊಮೋನನು ತನ್ನ ತಿಳುವಳಿಕೆಯನ್ನು ಇದರ ಮೊದಲಿನ ವಚನಗಳಲ್ಲಿ ಈ ರೀತಿಯಾಗಿ ಹೇಳುವವನಾಗಿದ್ದಾನೆ :

**"ಮನುಷ್ಯನ ಗತಿಯೂ ಪಶುವಿನ ಗತಿಯೂ ಒಂದೇ; ಪಶುವಿಗೆ ಸಾವು ಬರುವ ಹಾಗೆ ಮನುಷ್ಯನಿಗೂ ಬರುವುದು; ಎಲ್ಲಕ್ಕೂ ಪ್ರಾಣ** (ruach – **ಜೀವಾತ್ಮ, ಜೀವದ ಉಸಿರು**) **ಒಂದೇ; ಮನುಷ್ಯನು ಪಶುವಿಗಿಂತ ಶ್ರೇಷ್ಠನಲ್ಲ; ಎಲ್ಲಾ ಬರಿಗಾಳಿಯೇ. ಎಲ್ಲಾ ಪ್ರಾಣಿಗಳೂ ಒಂದೇ ಸ್ಥಳಕ್ಕೆ ಹೋಗುವುವು; ಎಲ್ಲಾ ಮಣ್ಣಿನಿಂದಾದವು, ಎಲ್ಲಾ ಮಣ್ಣಿಗೆ ಪುನಃ ಸೇರುವುವು"** (ವಚನ 19–20). ಈ ವಿಷಯದಲ್ಲಿ, ಬೇರೆ ರೀತಿಯ ಜೀವವನ್ನು ಹೊಂದಿರುವುದರಲ್ಲಿ – ಆತನ ಪೂರ್ವ ಉತ್ಕೃಷ್ಟತೆಯನ್ನು ಹುಡುಕಬೇಕಾಗುತ್ತದೆ ಮತ್ತು ಅದನ್ನು ನಾವು ನೋಡುವಂತೆ ಎಲ್ಲಿಯಾದರೂ ಕಂಡುಕೊಳ್ಳಬೇಕಾಗುತ್ತದೆ.

(ಉ) **"ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಟ್ಟಿದ್ದೇನೆ"** (ಕೀರ್ತನೆ 31:5) (ruach ಜೀವಾತ್ಮ–ಅಗತ್ಯವಾದ ತ್ರಾಣ)

ಇದು ನಮ್ಮ ಕರ್ತನು ತನ್ನ ಮರಣದ ಮುನ್ನ ಶಿಲುಬೆಯಲ್ಲಿ ಮಾಡಿದ ಪ್ರವಾದನೀಯ ಹೇಳಿಕೆಯಾಗಿದೆ. ಆತನು ತನ್ನ ಜೀವಾತ್ಮನನ್ನು ತಂದೆ ದೇವರಿಂದ ಒಂದು ವರವಾಗಿ ಪಡಕೊಂಡಿದ್ದನು: ಆತನು ತಂದೆಯ ಯೋಜನೆಗೆ ತನ್ನ ವಿಧೇಯತೆಯನ್ನು ತೋರುವವನಾಗಿ ಮನುಷ್ಯನಾಗಿ ಮಾನವರ ವಿಮೋಚಕನಾದನು. ಮತ್ತು ತನ್ನ ಪ್ರಾಣವನ್ನು (ಜೀವಾತ್ಮನನ್ನು) ಅಥವಾ ಮಹತ್ವವಾದ ಸತ್ವವನ್ನು ಬಿಟ್ಟು ಕೊಡುವಾಗ, ಆತನು ತನ್ನ ಜೀವಾತ್ಮನನ್ನು ಪುನರುತ್ಥಾನದಲ್ಲಿ ಮರಳಿ ಪಡೆಯುವಂತೆ ದೇವರ ವಾಗ್ದಾನದ ಮೇಲೆ ತನ್ನ ಅವಲಂಬನೆಯನ್ನು ಪ್ರಕಟಿಸುತ್ತಾನೆ.

ಮಾನವಜಾತಿಯು ತನ್ನ ಜೀವವನ್ನು ಅಥವಾ ಜೀವಾತ್ಮನನ್ನು ಆದಿ ತಂದೆಯಾದ ಆದಾಮನ ಮೂಲಕ ದೇವರಿಂದ ಪಡಕೊಂಡಿದೆ. ಆದಾಮನು ತನ್ನ ಅವಿಧೇಯತೆಯ ಮೂಲಕ ಈ ಜೀವಾತ್ಮನ ಮೇಲೆ ತನ್ನ ಅಧಿಕಾರವನ್ನು ಕಳಕೊಂಡಿದ್ದಾನೆ ಮತ್ತು ಕ್ರಮೇಣವಾಗಿ ಅದರ ಮೇಲಿನ ಹಿಡಿತವನ್ನು ಬಿಟ್ಟುಕೊಟ್ಟಿದ್ದಾನೆ ಮತ್ತು ನಿಧಾನವಾಗಿ ತನ್ನ ಒಂಬೈನೂರ ಮೂವತ್ತನೆಯ ವಯಸ್ಸಿನಲ್ಲಿ ಮರಣಹೊಂದಿದ್ದಾನೆ. ನಂತರದಲ್ಲಿ ಆತನ ದೇಹವು ಸೃಷ್ಟಿಯ ಮೊದಲು ಇದ್ದ ಮಣ್ಣಿಗೆ ಮರಳಿತು. ಮತ್ತು ಜೀವಾತ್ಮವು, ಜೀವನದ ಭಾಗ್ಯವು, ಜೀವಿಸುವಾಧಿಕಾರ ಅಥವಾ ಅನುಮತಿಯು ಯಾವುದೇ ಅನಿಶ್ಚಿತವಾದ ಭಾಗ್ಯವು ಅಥವಾ ಪಡಕೊಂಡ ಸೌಕರ್ಯವು ಅದರ ಶರತ್ತುಗಳು ನೆರವೇರಿಸದೇ ಹೋದಲ್ಲಿ ಅದನ್ನು ನೀಡಿದಾತನಿಗೆ ಹಿಂತಿರುಗುವ ರೀತಿಯಲ್ಲಿ ಅದನ್ನು ದಯಪಾಲಿಸಿದ ದೇವರ ಬಳಿಗೆ ಹಿಂತಿರುಗಿತು – **"ಮಣ್ಣು ಭೂಮಿಗೆ ಸೇರಿ ಇದ್ದ ಹಾಗಾವುದು; ಆತ್ಮವು ತನ್ನನ್ನು ದಯಪಾಲಿಸಿದ ದೇವರ ಬಳಿಗೆ ಸೇರುವುದು"** (ಪ್ರಸಂಗಿ 12:7). ಈ ವಾಕ್ಯಭಾಗದಲ್ಲಿ ಯಾವುದೂ ಕೆಲವರು ಹೇಳುವಂತೆ ಜೀವಾತ್ಮವು (ಪ್ರಾಣಪಕ್ಷಿಯು) ದೇವರ ಬಳಿಗೆ ಹಾರಿಹೋಗುವುದೆಂದು ಹೇಳುವುದಿಲ್ಲ. ಯಾಕೆಂದರೆ ಜೀವಾತ್ಮವು ಒಂದು ಬುದ್ದಿವಂತಿಕೆಯಲ್ಲ ಅಥವಾ ಒಂದು ವ್ಯಕ್ತಿಯಲ್ಲ. ಆದರೆ ಅದು ಕೇವಲ ನಷ್ಟಗೊಂಡ ಶಕ್ತಿ ಅಥವಾ ಸೌಕರ್ಯವಾಗಿದೆ ಮತ್ತು ಈ ಕಾರಣದಿಂದ ಅದು ತನ್ನ ಮೂಲದಾತನ ಬಳಿಗೆ ಹಿಂತಿರುಗುತ್ತದೆ. ಇದರ ಆಲೋಚನೆ ಏನೆಂದರೆ, ಮಾನವನು ಪಾಪ ಮಾಡಿದ ಮೇಲೆ ಆತನಿಗೆ ಇನ್ನು ಜೀವಿಸುವ ಹಕ್ಕಿಲ್ಲ; ಮುಟ್ಟುಗೋಲು ಹಾಕಿಕೊಂಡ ಆತನ ಜೀವಿಸುವ ಹಕ್ಕು ದೇವರಿಗೆ ಹಿಂದಿರುಗುವಿಕೆಯಾಗಿದೆ ಮತ್ತು ಆತನ ಮಾಂಸ ಶರೀರವು ಮಣ್ಣಿಗೆ ಮರಳುವುದು ಆತನ ಸ್ಥಿತಿಯನ್ನು ಸೃಷ್ಟಿಯ ಮುನ್ನ ಇದ್ದ ಸ್ಥಿತಿಗೆ ಕುಗ್ಗಿಸಲ್ಪಡುವುದು.

ಆದರೆ ನಮ್ಮ ಕರ್ತನಾದ ಯೇಸುವಿಗೆ ತನ್ನ ಜೀವಾತ್ಮವು ಜೀವಿಸುವ ಅಧಿಕಾರ ಮತ್ತು ಶಕ್ತಿಯು ದೈವಿಕ ವ್ಯವಸ್ಥೆಗಳಿಗನುಸಾರವಾಗಿ ಹಿಂತಿರುಗುವುದೆಂಬ ದೇವರ ವಾಗ್ದಾನಗಳ ಮೇಲೆ ನಿರೀಕ್ಷೆ ಇದ್ದುದರಿಂದ, ಆತನ ವಿಮೋಚನಾ ತ್ಯಾಗದ ಮೂಲಕ ಕೆಲವು ನಿರೀಕ್ಷೆ ಮತ್ತು ವಾಗ್ದಾನಗಳು" "ನೂತನ ಒಡಂಬಡಿಕೆಯ ಮಧ್ಯಸ್ಥನಾದ ಯೇಸುವಿನ" (ಇಬ್ರಿಯ 12:24) ಮೂಲಕ ಎಲ್ಲಾ ಮಾನವರಿಗೂ ಬಿಡುಗಡೆ ಆಯಿತು. ಆದುದರಿಂದ ನಂಬಿಗಸ್ಥನು ನಿರೀಕ್ಷೆ ಇಲ್ಲದವರಾದ ಇತರರಂತೆ ದುಃಖಪಡುವ ಕಾರಣವಿಲ್ಲ. ಅದಾಮನು ತನಗಾಗಿ ಮತ್ತು ತನ್ನ ಎಲ್ಲಾ ಕುಟುಂಬದವರಿಗಾಗಿ ಕಳಕೊಂಡ ಜೀವಿಸುವ ಹಕ್ಕನ್ನು ನಮ್ಮ ವಿಮೋಚಕನು ಕೊಂಡುಕೊಂಡಿದ್ದಾನೆ. ಆದುದರಿಂದ ನಂಬಿಗಸ್ತರು ತಮಗಾಗಿ (ಮತ್ತು, ಇತರಿಗಾಗಿ ದೇವರ ಯೋಜನೆಯ ತಿಳುವಳಿಕೆಯಿಂದಾಗಿ) ತಮ್ಮ ಆತ್ಮಗಳನ್ನು (ತಮ್ಮ ಜೀವದ ಶಕ್ತಿಯನ್ನು) ಪುನರುತ್ಥಾನದಲ್ಲಿನ ದೇವರ ವಾಗ್ದಾನದಲ್ಲಿ ಪೂರ್ಣ ನಂಬಿಕೆಯೊಡನೆ ಯೇಸು ಮಾಡಿದಂತೆ, ಸ್ತೆಫನನು ಮಾಡಿದಂತೆ ತಂದೆ ದೇವರ ಕೈಗಳಲ್ಲಿ ಅರ್ಪಿಸಿಕೊಳ್ಳಬಹುದು. ಪುನರುತ್ಥಾನವೆಂದರೆ, ಈ ಲೋಕದವರಿಗೆ ಮಾನವ ಶರೀರವನ್ನು ಮತ್ತು ಅದರ ಜೀವಕಳೆ ತುಂಬುವ ಅಥವಾ ಜೀವನ ಶಕ್ತಿಯಿಂದ (ಇಬ್ರಿಯ Ruach – ಗ್ರೀಕ್ Pneuma) ಸ್ಫೂರ್ತಿತುಂಬುವಂತೆ ಮಾನ್ಯಮಾಡುವುದು ಎಂಬರ್ಥ. ಸುವಾರ್ತಾ ಸಭೆಗೆ, 'ಪ್ರಥಮ ಮುಖ್ಯ ಪುನರುತ್ಥಾನದಲ್ಲಿ' ಪಾಲುದಾರರಾಗುವುದು ಎಂದರೆ ಆತ್ಮೀಕ ಜೀವದಲ್ಲಿ ಅಥವಾ ಜೀವನ ಶಕ್ತಿಯಲ್ಲಿ (ಸತ್ವದ) ಪಾಲುಕೊಡುವುದು – 1 ಕೊರಿಂಥ 15:42–45 (ಇಬ್ರಿಯ Ruach – ಗ್ರೀಕ್ Pneuma).

ಭೂಮಿಯಲ್ಲಾಗುವ ಪುನರುತ್ಥಾನದ ಬಗ್ಗೆ ಯೆಹೆಜ್ಕೇಲನ ಪ್ರವಾದನೆಯ ನಕ್ಷಾ ಚಿತ್ರಣದಲ್ಲಿ ಕೊಟ್ಟಿರುವಂತೆ (ಯೆಹೆಜ್ಕೇಲ 37:5–10,13,14) ಶರೀರ ಮತ್ತು ಜೀವಾತ್ಮದ ಸಂಬಂಧದ ಬಗ್ಗೆ ಸ್ಪಷ್ಟವಾಗಿದೆ. ಪ್ರವಾದಿಯು ಅದನ್ನು ಸಾಂಕೇತಿಕವಾಗಿ ತಿಳಿಸಿದ್ದಾನೆ ಎಂಬುದು ವಿಷಯವಲ್ಲ. ಆದಾಗ್ಯೂ ಪ್ರವಾದಿಯು ರುಜುಪಡಿಸುವುದು ಮಾನವ ದೇಹವು ಜೀವದ ಉಸಿರನ್ನು ಸ್ವೀಕರಿಸದಿದ್ದರೆ ಅವರಲ್ಲಿ ಜೀವವಿಲ್ಲ. ಪ್ರಾಣಿಗಳಲ್ಲೂ ಇದು ಸಾಮಾನ್ಯವಾಗಿದೆ. ಯಾವನೂ ಉಸಿರಿಲ್ಲದೆ ಜೀವಿಸಲು ಸಾಧ್ಯವಿಲ್ಲ. ಯೆಹೆಜ್ಕೇಲನ ಹೇಳಿಕೆಯನ್ನು ವಿಮರ್ಶಾನಾತ್ಮಕವಾಗಿ ಗಮನಿಸೋಣ:

(ಉ) **"ಇಗೋ ನಾನು ನಿಮ್ಮೊಳಗೆ ಶ್ವಾಸವನ್ನು** (ruach – spirit of Life, Life energy) **ಹೊಗಿಸುವೆನು, ನೀವು ಬದುಕುವಿರಿ"** (ಯೆಹೆಜ್ಕೇಲ 37:5).

(ಉ) **"ನಾನು ನಿಮ್ಮಗಳ ಮೇಲೆ ನರಗಳನ್ನು ಹಬ್ಬಿಸಿ ಮಾಂಸವನ್ನು ಹರಡಿ ಚರ್ಮವನ್ನು ಹೊದಿಸಿ ನಿಮ್ಮಲ್ಲಿ ಶ್ವಾಸವನ್ನು** (ruach – spirit of Life, Life energy) **ತುಂಬುವೆನು; ಆಗ ನೀವು ಬದುಕಿ ನಾನೇ ಕರ್ತನೆಂದು ತಿಳಿದುಕೊಳ್ಳುವಿರಿ"** (ಯೆಹೆಜ್ಕೇಲ 37:6).

(ಉ) **"ನಾನು ನೋಡಲಾಗಿ ಆಹಾ, ಅವುಗಳ ಮೇಲೆ ನರಗಳು ಹಬ್ಬಿಕೊಂಡವು, ಮಾಂಸವು ಹರಡಿಕೊಂಡಿತು, ಚರ್ಮವು ಮೇಲ್ಹೊದಿಕೆ ಆಯಿತು; ಶ್ವಾಸ** (ruach – spirit of Life, Life energy) **ಮಾತ್ರ ಇರಲಿಲ್ಲ"** (ಯೆಹೆಜ್ಕೇಲ 37:8)

(ಉ) **"ಆಗ ಆತನು ನನಗೆ – ನರಪುತ್ರನೇ ನೀನು ಶ್ವಾಸಕ್ಕೆ** (ruach – spirit of Life, Life energy, margin, breath) **ನುಡಿ, ನುಡಿ; ಶ್ವಾಸವೇ** (ruach – breath or spirit of Life) **ಕರ್ತನಾದ ದೇವರು ಇಂತೆನ್ನುತ್ತಾನೆ – ನೀನು ಚತುರ್ದಿಕ್ಕುಗಳಿಂದ ಬೀಸಿ ಹತಶರೀರಗಳು ಬದುಕುವಂತೆ ಅವುಗಳ ಮೇಲೆ ಸುಳಿ"** (ಯೆಹೆಜ್ಕೇಲ 37:9).

(ಉ) **"ನಾನು ಅಪ್ಪಣೆಯಂತೆ ನುಡಿದೆನು; ಇಗೋ, ಶ್ವಾಸವು** (ruach – spirit of Life, breath of Life, Living energy) **ಅವುಗಳಲ್ಲಿ ಹೊಕ್ಕಿತು, ಬದುಕಿದವು, ಕಾಲೂರಿ ನಿಂತವು"** (ಯೆಹೆಜ್ಕೇಲ 37:10).

(ಉ) **"ನನ್ನ ಜನರೇ, ನೋಡಿರಿ, ನಾನು ನಿಮ್ಮಗೋರಿಗಳನ್ನು ತೆರೆದು ಅವುಗಳೊಳಗಿಂದ ನಿಮ್ಮನ್ನು ಎಬ್ಬಿಸಿದಾಗ ನಾನೇ ಕರ್ತನು ಎಂದು ನಿಮಗೆ ದೃಢವಾಗುವುದು. ಇಗೋ ನನ್ನ ಶ್ವಾಸವನ್ನು** (ruach – spirit of Life, breath of life) **ನಿಮ್ಮಲ್ಲಿ ಹೊಗಿಸಿ ನಿಮ್ಮನ್ನು ಬದುಕಿಸಿ ನಿಮ್ಮ ದೇಶದಲ್ಲಿ ನೆಲೆಗೊಳಿಸುವೆನು"** (ಯೆಹೆಜ್ಕೇಲ 37:13–14)

ಸೃಷ್ಟಿ ಕರ್ತನು ಆದಾಮನಿಗೆ ದಯಪಾಲಿಸಿ ಕೊಟ್ಟಿದ್ದ ಈ ಜೀವಾತ್ಮ ಅಥವಾ ಜೀವನ ಶಕ್ತಿಯನ್ನು ಆತನು ವಿಧೇಯನಾಗಿದ್ದರೆ ನಿರಂತರವಾಗಿ ಇಟ್ಟುಕೊಳ್ಳುವ ಸೌಭಾಗ್ಯ ಆತನಿಗಿತ್ತು. ಆತನು ತನ್ನ ಅವಿಧೇಯತೆಯಿಂದ ಈ ಹಕ್ಕನ್ನು ಕಳಕೊಂಡನು ಮತ್ತು ಜೀವದ ಹಕ್ಕು ಆತನು ದಯಪಾಲಿಸಿದ ಮಹಾ ದೇವರಿಗೆ ಹಿಂತಿರುಗಿತು, ಒಬ್ಬ ವ್ಯಕ್ತಿಯಾಗಿ ಅಲ್ಲ, ಒಂದು ವಸ್ತುವಾಗಿ ಅಲ್ಲ ಆದರೆ ಒಂದು ಹಕ್ಕು ಅಥವಾ ಸೌಕರ್ಯವಾಗಿ ಜೀವಾತ್ಮವು ದೇವರ ಬಳಿಗೆ ಹಿಂತಿರುಗಿ ಹೋಯಿತು. ಆತನು ಅದನ್ನು ಶರತ್ತುಬದ್ಧವಾಗಿ ದಯಪಾಲಿಸಿದ್ದನು. ಆದರೆ, ಆ ಶರತ್ತುಗಳ ಉಲ್ಲಂಘನೆಯಾಯಿತು – ಪ್ರಸಂಗಿ 12:7.

(ಉ) **ಗಾಳಿಯನ್ನು ತಡೆಯುವ ಶಕ್ತಿಯು ಹೇಗೆ ಯಾರಿಗೂ ಇಲ್ಲವೋ ಹಾಗೆ ತಮ್ಮ ಮರಣದಿನವನ್ನು ತಡೆಯುವ ಶಕ್ತಿಯು ಯಾರಿಗೂ ಇಲ್ಲ** [No man hath power over the spirit (ruach– ಜೀವಾತ್ಮ, ಜೀವದ ಕಿಡಿ) to retain the spirit (rauch – **ಜೀವಾತ್ಮ**) – ಪ್ರಸಂಗಿ 8:8.

ದೇವರ ಕೃಪೆಯಿಂದ ಜೀವಿಸುವ ಹಕ್ಕನ್ನು ಅಥವಾ ಮರಣದಲ್ಲಿ ಪ್ರತಿಯೊಬ್ಬ ಮನುಷ್ಯನೂ ದೇವರಿಗೆ ಸಮರ್ಪಿಸುವುದನ್ನು ಕಳಕೊಂಡವರೆಲ್ಲರೂ ಅಮೂಲ್ಯವಾದ ರಕ್ತದ ಬೆಲೆಯಿಂದ ಕೊಳ್ಳಲ್ಪಟ್ಟವ ರಾಗಿದ್ದಾರೆ, ಮತ್ತು ಕೊಂಡಾತನನ್ನು ನೂತನ ಜೀವದಾಯಕನು, ಪುನರುಜ್ಜೀವಗೊಳಿಸುವಾತನು ಅಥವಾ ಜನಾಂಗದ ತಂದೆ ಎಂದು ಘೋಷಿಸಲಾಗಿದೆ. ಆತನನ್ನು ಅಂತಿಮವಾಗಿ ಸ್ವೀಕರಿಸುವವರೆಲ್ಲರಿಗೆ ಆತನು ಧಾರಾಳವಾಗಿ ಜೀವವನ್ನು ನೀಡುವಾತನು ಆಗಿದ್ದಾನೆ.

ನಾವು ನೂತನ ಒಡಂಬಡಿಕೆಯಿಂದ ಒಂದೇ ಒಂದು ಉದಾಹರಣೆಯನ್ನು ನೀಡುತ್ತೇವೆ :–

(ಉ) **"ಆತ್ಮ** (Pneuma – ಜೀವ – ಜೀವದ ಕಿಡಿ, ಉಸಿರು) **ವಿಲ್ಲದ ದೇಹವು ಸತ್ತದ್ದಾಗಿರುವ ಪ್ರಕಾರವೇ ಕ್ರಿಯೆಗಳಿಲ್ಲದ ನಂಬಿಕೆಯೂ ಸತ್ತದ್ದೇ"** (ಯಾಕೋಬ 2:26).

## ರೂವ್ಹಾಕ್, ನ್ಯೂಮ – ಮನಸ್ಸು, ಚಿತ್ತ

## Ruach, Pneuma - The, Mind The Will

ಮನಸ್ಸು ಅಥವಾ ಚಿತ್ತವೆಂಬುದು ಒಂದು ಅದೃಶ್ಯವಾದ ಶಕ್ತಿ ಅಥವಾ ಪ್ರಭಾವವಾಗಿರುವುದರಿಂದ, ಅವನ್ನು ಇಬ್ರಿಯ ಮತ್ತು ಗ್ರೀಕ್ ಭಾಷೆಗಳಲ್ಲಿ ಒಂದೇ ಪದಗಳಿಂದ

ಕರೆಯಲಾಗುತ್ತದೆ ಎಂದು ಕೆಳಗಣ ಉದಾಹರಣೆಗಳು ತೋರಿಸಿಕೊಡುತ್ತವೆ :–

(ಊ) ಹನ್ನಳು – **"ನನ್ನ ಮನೋವೇದನೆಯನ್ನು** (Rauch – ಮನಸ್ಸು, ಮನೋವೃತ್ತಿ) **ಕರ್ತನ ಮುಂದೆ ಹೊಯ್ದಿದ್ದೇನೆ"** ಅಂದಳು (1 ಸಮು. 1:15)

(ಊ) **ಮೂರ್ಖನು ತನ್ನ ಕೋಪವನ್ನೆಲ್ಲಾ** (Rauch –plans, thoughts, mind, purpose ಯೋಜನೆಗಳು, ಆಲೋಚನೆಗಳು, ಮನಸ್ಸು ಉದ್ಧೇಶಗಳನ್ನೆಲ್ಲಾ) **ತೋರಿಸುವನು** (ಜ್ಞಾನೋಕ್ತಿ 29:11).

(ಊ) **"ನಾನು ವ್ಯಥೆಪಡುತ್ತಾ ದೇವರನ್ನು ಸ್ಮರಿಸುವೆನು; ಮನ** (Rauch–ಮನಸ್ಸು, ಧೈರ್ಯ) **ಗುಂದಿದವನಾಗಿಯೇ ಹಂಬಲಿಸುವೆನು** (ಕೀರ್ತನೆ 77:3)

(ಊ) **"ನಾನು ಆಂತರ್ಯದಲ್ಲಿ ಮಾತನಾಡಿ ಕೊಳ್ಳುವೆನು ಅಂದುಕೊಂಡು ಮನಸ್ಸಿನಲ್ಲಿ** (Rauch – ಮನಸ್ಸು) **ವಿಚಾರಿಸಿಕೊಂಡೆನು"** (ಕೀರ್ತನೆ 77:6)

(ಊ) **"ಯಥಾರ್ಥರಿಗೆ** (Rauch – disposition, mind ಮನೋವೃತ್ತಿ, ಮನಸ್ಸು) **ಸರಳತೆಯು ಮಾರ್ಗದರ್ಶಕ** (ಜ್ಞಾನೋಕ್ತಿ 11:3)

(ಊ) **"ಮನುಷ್ಯನ ನಡತೆಯೆಲ್ಲಾ ಸ್ವಂತ ದೃಷ್ಟಿಗೆ ಶುದ್ಧ; ಕರ್ತನು ಅಂತರಂಗ** (Rauch–mind, thoughts, motives ಮನಸ್ಸು, ಆಲೋಚನೆಗಳು, ಉದ್ಧೇಶಗಳು) **ವನ್ನೇ ಪರೀಕ್ಷಿಸುವನು"** (ಜ್ಞಾನೋಕ್ತಿ 16:2)

(ಊ) **"ಗರ್ವದಿಂದ ಭಂಗ; ಉಬ್ಬಿನಿಂದ** (Rauch –disposition, will, mind, ಮನೋವೃತ್ತಿ, ಚಿತ್ತ, ಮನಸ್ಸು,) **ದೊಬ್ಬು"** (ಜ್ಞಾನೋಕ್ತಿ 16:18).

(ಊ) **ದೀನರ** (Rauch – mind, disposition ಮನಸ್ಸು, ಮನೋವೃತ್ತಿ) **ಸಂಗಡ ದೈನ್ಯದಿಂದಿರುವುದು ವಾಸಿ"** (ಜ್ಞಾನೋಕ್ತಿ 16:19).

(ಊ) **"ಹಮ್ಮುಗಾರನಿಗಿಂತ ತಾಳ್ಮೆ** (Rauch – mind, disposition ಮನಸ್ಸು, ಧೈರ್ಯ)**ಯುಳ್ಳವನು ಉತ್ತಮ. ನಿನ್ನ ಮನಸ್ಸು** (Rauch – ಮನಸ್ಸು, ಧೈರ್ಯ) **ಕೋಪಕ್ಕೆ ಆತುರಪಡದಿರಲಿ"** (ಪ್ರಸಂಗಿ 7:8.9).

ನೂತನ ಒಡಂಬಡಿಕೆಯಿಂದ ಕೆಲವೊಂದು ಉದಾಹರಣೆಗಳು :–

(ಊ) **"ಆ ಬಾಲಕನು (ಯೋಹಾನ) ಬೆಳೆದು ಆತ್ಮ** (Pneuma – mind, character ಮನಸ್ಸು, ಗುಣಲಕ್ಷಣ) **ದಲ್ಲಿ ಬಲವುಳ್ಳವನಾದನು"** (ಲೂಕ. 1:80)

(ಊ) **"ಜಾಗ್ರತೆ ಬೇಕಾದಲ್ಲಿ ಆಲಸ್ಯವಾಗಿರದೆ ಆಸಕ್ತಚಿತ್ತ** (Pneuma - mind, disposition, character ಮನೋವೃತ್ತಿ, ಗುಣಲಕ್ಷಣ) **ರಾಗಿದ್ದು ಕರ್ತನ ಸೇವೆ ಮಾಡುವವರಾಗಿರ್ರಿ"** (ರೋಮಾ. 12:11)

(ಊ) **"ನಾವು ಪ್ರಾಪಂಚಿಕ ಆತ್ಮವನ್ನು** (Pneuma – disposition, mind ಮನೋವೃತ್ತಿ, ಮನಸ್ಸು) **ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರವನ್ನು ತಿಳುಕೊಳ್ಳುವುದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು"** (1 ಕೊರಿಂಥ 2:13)

**''ನನ್ನ ಆತ್ಮಕ್ಕೆ ಉಪಶಮನವಿಲ್ಲವೆ''** (Pneuma – mind, ಮನಸ್ಸು)(2 ಕೊರಿಂಥ 2:13)

(ಊ) **"ನೀವು ನಿಮ್ಮ ಆಂತರ್ಯದಲ್ಲಿ** (Pneuma – character, disposition ಗುಣಲಕ್ಷಣ, ಮನೋವೃತ್ತಿ) **ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ"** (ಎಫೆಸ 4:23).

(ಊ) **"ಸಾತ್ವಿಕವಾದ ಶಾಂತಮನಸ್ಸು** (Pneuma – mind, disposition ಮನಸ್ಸು, ಮನೋವೃತ್ತಿ) **ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ"** (1 ಪೇತ್ರ 3:4).

ಪರಿಶುದ್ಧ ಗ್ರಂಥದಲ್ಲಿ ಈ ಮೂಲಪದಗಳ ಉಪಯೋಗವು ನಮಗೆ ನಮ್ಮ ಆಂಗ್ಲ ಪದವಾದ 'ಸ್ಪಿರಿಟ್' ಎಂಬುದು ಒಳ್ಳೆಯ ಸಮಾನಪದವಾಗಿದೆ ಎಂಬುದನ್ನು ತೋರಿಸುತ್ತದೆ. ಯಾಕೆಂದರೆ ನಾವು ಜೀವಾತ್ಮದ ಬಗ್ಗೆ ಮಾತ್ರ ಮಾತನಾಡುವುದಿಲ್ಲ, ಅಲ್ಲದೇ ಸಾತ್ವಿಕವಾದ ಮನಸ್ಸು, ಒಳ್ಳೆಯ ಆತ್ಮ, ಕೋಪದ ಮನಸ್ಸು ಅಥವಾ ಮನಃಸ್ಥಿತಿ, ಕಹಿಯಾದ ಮನಸ್ಸು ಮತ್ತು ಕೆರಳಿದ ಮನಸ್ಸು ಇವುಗಳ ಬಗ್ಗೆಯೂ ಮಾತನಾಡುತ್ತೇವೆ ಮತ್ತು ನಾವು ಈ ಪದಪ್ರಯೋಗಗಳನ್ನು ಕೆಳವರ್ಗದ ಪ್ರಾಣಿಗಳಿಗೂ, ಮನುಷ್ಯರಿಗೂ ಉಪಯೋಗಿಸುತ್ತೇವೆ. ನಾವು ಸಾಬೀತುಪಡಿಸುವ ಸತ್ಯವು ವಿಫುಲವಾಗಿ ನಿರೂಪಿಸಲ್ಪಡುತ್ತದೆ – ಅವುಗಳೆಂದರೆ, ಆತ್ಮವೆಂಬುದು ನಿಜ ಮಾನವನಲ್ಲ, ಆತ ಮತ್ತೊಬ್ಬ ವ್ಯಕ್ತಿಯಲ್ಲ, ಆದರೆ ಈ ಪದವನ್ನು ಮಾನವನ ಸೃಷ್ಟಿಯಲ್ಲಿ ಉಪಯೋಗಿಸಿದಾಗ ಇದು ಕೇವಲ ಜೀವದ ಕಿಡಿ ಅಥವಾ ಜೀವ ಶಕ್ತಿಯನ್ನು ಸೂಚಿಸುತ್ತದೆ ಮತ್ತು ಇದು ಎಲ್ಲಾ ಪ್ರಾಣಿಗಳಲ್ಲಿ ಸರ್ವಸಾಮಾನ್ಯವಾಗಿದೆ.

## ಜೀವಗಳ ಉಸಿರು
## NESHAMAH - The Breach of Lives

Rauch ಎಂಬ ಪದವನ್ನು ಕೆಲವೊಮ್ಮೆ 'ಉಸಿರು' ಎಂಬುದಾಗಿ ಭಾಷಾಂತರಗೊಳಿಸಿದಾಗ್ಯೂ ಇಬ್ರಿಯ ಭಾಷೆಯಲ್ಲಿ ಉಸಿರಿಗೆ NESHAMAH ಎಂಬ ಮತ್ತೊಂದು ಪದವಿದೆ. ಇದು ಇಪ್ಪತ್ತಾರು ಸಾರಿ ಕಂಡುಬರುತ್ತದೆ ಮತ್ತು ಅದರಲ್ಲಿ ಹತ್ತೊಂಬತ್ತು ಬಾರಿಗೆ ಇದನ್ನು 'ಉಸಿರು' ಎಂದೂ, – ಒಮ್ಮೆ 'ಸ್ಪೂರ್ತಿ' ಎಂದೂ, ಎರಡು ಸಾರಿ 'ಸ್ಪಿರಿಟ್' ಎಂದೂ, ಒಮ್ಮೆ 'ಆತ್ಮ'ವೆಂದೂ, ಮೂರಿಬಾರಿ 'ಬಿರುಗಾಳಿ' ಅಥವಾ ಸ್ಫೋಟವೆಂದು ಭಾಷಾಂತರಗೊಳಿಸಲಾಗಿದೆ. ಈ ಪದದ ಅರ್ಥಗಳ ನಮೂನೆಗಳಾಗಿ ಮತ್ತು ಈ ಪದವು ಕೇವಲ ಜೀವನ ಶಕ್ತಿಯನ್ನು ಸೂಚಿಸುತ್ತದೆ ಎಂಬುದನ್ನು ಸಾಬೀತುಪಡಿಸುವುದಕ್ಕಾಗಿ ಮತ್ತು ಯಾವುದೇ ಅರ್ಥದಲ್ಲಿ ಇದು ನಿತ್ಯನಿರಂತರವಾದ ಜೀವಿತವಾಗಿದೆ ಅಥವಾ ಅಮರತ್ವವುಳ್ಳದ್ದಾಗಿದೆ ಎಂಬ ಅರ್ಥವನ್ನು ತಿಳಿಯಪಡಿಸುವುದಿಲ್ಲ ಎಂಬುದಕ್ಕಾಗಿ ಈ ಕೆಳಗಣ ಪ್ರಯೋಗಗಳನ್ನು ಗಮನಿಸಿರಿ :–

**"ಕರ್ತನಾದ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು** (neshamah) **ಊದಿದನು** (nephach – ಗಾಳಿ ತುಂಬು, ಊದು). **ಆಗ ಮನುಷ್ಯನು ಬದಕುವ ಪ್ರಾಣಿಯಾದನು"** (ಆದಿಕಾಂಡ 2:7)

**"ಮೂಗಿನಿಂದ ಜೀವ** (Caiyah) **ಶ್ವಾಸಬಿಡುವ** (neshamah) **ಭೂಜಂತುಗಳೆಲ್ಲಾ ಸತ್ತವು"** (ಆದಿಕಾಂಡ 7:22)

ಸತ್ಯವೇದದಲ್ಲಿ ಈ ಎರಡು ಕಡೆಗಳಲ್ಲಿ ಕಂಡುಬರುವ neshamah ಎಂಬ ಪದವು ನಿರ್ಲಯತ್ವದ ಸೂಚನೆ ಅಥವಾ ನಿರ್ಲಯತ್ವದ ಸಿದ್ಧಾಂತವನ್ನು ಹೊಂದಿರುವುದಿಲ್ಲ ಮತ್ತು ಅದು ಕೇವಲ ಜೀವನ ಶಕ್ತಿಯನ್ನು ಮಾತ್ರವೇ ಸೂಚಿಸುತ್ತದೆ ಎಂಬ ನಮ್ಮ ವಾದ ವಿಷಯವನ್ನು ಸಾಬೀತು ಪಡಿಸಲು ಹೇರಳವೆನಿಸುತ್ತದೆ. ಈ ಜೀವನ ಶಕ್ತಿಯನ್ನು ಆದಾಮನಿಗೆ ನೀಡಲಾಯಿತು ಎಂದು ನಮಗೆ ತಿಳಿಸಲಾಗಿದೆ ಮತ್ತು ಇದೇ ಜೀವನ ಶಕ್ತಿಯು ಎಲ್ಲಾ ಭೂಜಂತುಗಳಲ್ಲಿಯೂ ಅಂದರೆ ಒಣಭೂಮಿಯ ಪಕ್ಷಿಗಳಲ್ಲಿಯೂ, ಪ್ರಾಣಿಗಳಲ್ಲಿಯೂ, ಪಶುಗಳಲ್ಲಿಯೂ. ನೆಲದ ಮೇಲೆ ಹರಿದಾಡುವ ಜಂತುಗಳಲ್ಲಿಯೂ, ಮಾತ್ರವಲ್ಲದೆ ಮನುಷ್ಯರಲ್ಲಿಯೂ ಇದೆ ಎಂಬುದಾಗಿ ಎರಡನೆಯ ವಾಕ್ಯದಲ್ಲಿ ಪ್ರಕಟಿಸಲಾಗಿದೆ. ಈ ಜೀವನ ಶಕ್ತಿಯನ್ನು ಕಸಿದುಕೊಂಡಾಗ, ಮಾನವರೊಳಗೊಂಡಂತೆ ಈ ಎಲ್ಲಾ ಆತ್ಮಗಳೂ ಹಾಗೂ ಕೆಳವರ್ಗದ ಜೀವಿಗಳೂ ಸಹಾ ಸತ್ತುಹೋಗುತ್ತವೆ ಎಂದೂ ಪ್ರಕಟಿಸಲಾಗಿದೆ. ಅವೆಲ್ಲವೂ ಒಂದೇ ರೀತಿಯಲ್ಲಿ ಸಾಯುತ್ತವೆ. ಆದರೆ ಮಾನವನ ಬಗ್ಗೆ ದೇವರಿಗೆ ಒಂದು ಉದ್ದೇಶವಿದ್ದು ಸೂಕ್ತ ಸಮಯದಲ್ಲಿ ಆತನಿಗೆ ಈಡುಬಲಿಯೊಂದನ್ನು ಅರ್ಪಿಸಲಾಯಿತು ಮತ್ತು ಮುಂಬರುವ ಸೂಕ್ತಕಾಲದಲ್ಲಿ ಪುನರುತ್ಥಾನದ ಶಕ್ತಿಯ ಮೂಲಕ ಮರಣದಿಂದ ಬಿಡುಗಡೆಯ ವಾಗ್ದಾನವೊಂದನ್ನು ನೀಡಲಾಗಿದೆ.

## ಮಾನವರ ಆತ್ಮ
## A Human Soul

ದೇವರು ಮಾನವನನ್ನು ಮಣ್ಣಿನಿಂದ ಉಂಟುಮಾಡಿ ಆತನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದಾಗ ಮಾನವನು **'ಬದುಕುವ ಪ್ರಾಣಿಯಾದನು'** (ಆದಿ. 2:7) ಎಂದು ದಾಖಲಿಸಲಾಗಿದೆ ಎಂಬುದನ್ನು ಸೃಷ್ಟಿಕಾರ್ಯದ ಬಗ್ಗೆ ಆದಿಕಾಂಡದಲ್ಲಿ ಓದುವ ಅನೇಕರು ಗಮನಿಸಿದ್ದಾರೆ. ಈ ಹೇಳಿಕೆಯು ಸಾಮಾನ್ಯ ಓದುಗರಿಗೆ 'ಆತ್ಮ' ಎಂಬ ಪದದ ಬಗ್ಗೆ ತಪ್ಪು ಕಲ್ಪನೆಯೊಂದನ್ನು ನೀಡುವುದಾಗಿದೆ. ಈ ಬಗ್ಗೆ ಅವರಿಗೆ ಬೋಧಿಸುವವರು ಸರಿಯಾದ ರೀತಿಯಲ್ಲಿ ಅವರಿಗೆ ಉಪದೇಶಿಸಬೇಕಾಗಿತ್ತು. ಹೀಗೆ ಬೋಧಿಸುವವರು ಮೊದಲಿಗೆ ಈ ಬಗ್ಗೆ ಸರಿಯಾಗಿ ತಿಳಿದುಕೊಳ್ಳಬೇಕಾಗಿತ್ತು. ಇದು ಅವರು ಆತನಿಗೆ ಗಲಿಬಿಲಿಯನ್ನು ಉಂಟುಮಾಡಿ ಈ ಪ್ರಚಲಿತ ತಪ್ಪುಗ್ರಹಿಕೆಗೆ ಬಲವಾದ ಕಾರಣವಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಲಾರನು. ಆದರೆ ಇದರ ಸತ್ಯಾಸತ್ಯತೆಗಳನ್ನು ತನ್ನ ಆಯ್ದ ವೇದಪಂಡಿತರುಗಳು ಕಂಡುಹಿಡಿದು ಪ್ರಾಯಶಃ ಸಾಹಸಕ್ಕೆ ಮೀರಿ ಸಾಬೀತುಪಡಿಸುತ್ತಾರೆಂದು ಆತನು ಭಾವಿಸುತ್ತಾನೆ

'ಆತ್ಮ' ಎಂಬ ಪದದ ಅರ್ಥವನ್ನು ಗ್ರಹಿಸಿಕೊಳ್ಳಲಾರದೆ, ಹಲವರು ಅದನ್ನು ಬೇಕಾಬಿಟ್ಟಿ ಉಪಯೋಗಿಸುವ ಸ್ವತಂತ್ರ್ಯತೆ ತೆಗೆದುಕೊಳ್ಳುತ್ತಾರೆ. ಹೀಗಾಗಿ ಅವರು ದೇವರ ವಾಕ್ಯದ ಹೇಳಿಕೆಗಳನ್ನು ಬುಡಮೇಲು ಮಾಡುವವರಾಗಿದ್ದು ಮಾನವನ್ನು ಒಬ್ಬ ಆತ್ಮ ಜೀವಿ ಎಂದು ಹೇಳುವ ಬದಲು, ಮಾನವನು ಆತ್ಮವನ್ನು ಹೊಂದಿದ್ದಾನೆ ಎಂದು ಹೇಳುತ್ತಾರೆ, ಇದೊಂದು ಬೇರೆಯದೇ ಆದ ಆಲೋಚನೆ ಆಗಿದೆ. ಪ್ರತಿಯೊಬ್ಬ ಸತ್ಯ ಅನ್ವೇಷಕನೂ ಈ ವಿಷಯದ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ತನ್ನ ಪೂರ್ವಗ್ರಹಿತ ಮನಸ್ಸನ್ನು ವಿಶೇಷವಾಗಿ ತಾನು ಅರ್ಥಮಾಡಿಕೊಳ್ಳಲಾಗದ ವಿಶಿಷ್ಟ ಸಂಗತಿಗಳನ್ನು ಕಳಚಿಹಾಕುವುದು ಅವಶ್ಯ: ಯಾಕೆಂದರೆ, ಗಹನವಾದ ಆದರೆ ಅರ್ಥವಾಡಿಕೊಳ್ಳಲಾಗದ ಸಂಗತಿಗಳಿಗೆ ಇಲ್ಲಸಲ್ಲದ ಗುಣಧರ್ಮಗಳನ್ನು ಮತ್ತು ಶಕ್ತಿಯನ್ನು ಕೊಡುವುದು ಸರ್ವೇಸಾಮಾನ್ಯವಾದ ಧೋರಣೆಯಾಗಿದೆ. ಹೀಗಾಗಿ ಆತ್ಮವು ಅದ್ಭುತವಾದ ವಿವೇಕ ಹಾಗೂ ಅದ್ಭುತವಾದ ಶಕ್ತಿಯನ್ನು ಹೊಂದಿರುವಂಥಾದ್ದು, ಅವಿನಾಶಕರವಾದುದು,

ಅಸ್ಪರ್ಷವಾದುದು ಮತ್ತು ಗ್ರಹಿಸಲಾಗದ್ದು ಎಂಬುದು ಅದರ ಬಗ್ಗೆ ಇರುವ ಸಾಮಾನ್ಯವಾದ ಅನಿಸಿಕೆಯಾಗಿದೆ.

ಮೆಥೋಡಿಸ್ಟ್ ಬಿಷೊಪರೊಬ್ಬರು ಆತ್ಮದ ಬಗ್ಗೆ ಕೊಟ್ಟಿರುವ ಈ ಅರ್ಥವಿವರಣೆಯು ಸಂಪ್ರದಾಯವಾದಿಗಳ ವಿಚಾರಣಸರಣಿಗೆ ಅನುಸಾರ ವಾಗಿಯೇ ಇರುವುದಾದರೂ ವಿಶ್ಲೇಷಣೆ ಮಾಡಿದಾಗ ಇದು ಅಸಂಬದ್ಧವಾಗಿದೆ ಎಂದು ತಿಳಿದುಬರುತ್ತದೆ :– " ಇದಕ್ಕೆ ಯಾವುದೇ ಅಂತರಂಗ ಅಥವಾ ಬಹಿರಂಗ ಎಂಬುದಿರುವುದಿಲ್ಲ, ಯಾವುದೇ ದೇಹವಾಗಲೀ, ರೂಪವಾಗಲೀ ಅಥವಾ ಭಾಗಗಳಾಗಲೀ ಇರುವುದಿಲ್ಲ; ಇಂಥಾಃ ಮಿಲಿಯಾಂತರವಾದವುಗಳನ್ನು ಒಂದು ಚಿಕ್ಕ ಚಿಪ್ಪಿನಲ್ಲಿ ಇಡಬಹುದು" ಎಂಬೀ ವಿವಿಧ ಸಂಗತಿಗಳನ್ನು ಆತ್ಮದ ಬಗ್ಗೆ ಒಂದು ವಿಚಾರಣಸರಣಿಯೊಂದನ್ನು ನೀಡುವಂತೆ ಅವರು ಪ್ರತಿಪಾದಿಸುತ್ತಾರೆ. ಆದರೆ ಇದು ಸಂಪೂರ್ಣವಾಗಿ ತಪ್ಪಾಗಿದೆ. ಅವರ ವಿಚಾರಸರಣಿ ಯೆಂದರೆ ಆತ್ಮವೆಂಬುದು ನಿಜವಾದುದು, ದೈವತ್ವದ ಒಂದು ಕಿಡಿಯೂ ಆಗಿದ್ದು ದೈವತ್ವದ ಗುಣಲಕ್ಷಣ ಮತ್ತು ಬುದ್ಧಿವಂತಿಕೆ, ಜೀವ ಮುಂತಾದವುಗಳನ್ನು ಹೊಂದಿದೆ. ಇದು ದೇಹದಿಂದ ಪ್ರತ್ಯೇಕವಾದುದಾಗಿದ್ದು ದೇಹದಲ್ಲಿ ಸ್ವಲ್ಪಕಾಲ ತಂಗಿದ್ದು ಅದನ್ನು ತನ್ನ ನಿವಾಸ ಸ್ಥಾನವನ್ನಾಗಿ ಮಾಡಿಕೊಂಡಿರುತ್ತದೆ. ದೇಹವು ಸವೆದುಹೋದಾಗ ಅಥವಾ ಅಶಕ್ತವಾದ ಅದು ದೇಹವನ್ನು ಬಿಟ್ಟುಹೋಗುತ್ತದೆ. ಆತ್ಮವು ದೇಹವನ್ನು ಪ್ರವೇಶಿಸುವುದನ್ನು ಯಾರೂ ಎಂದೂ ಕಂಡಿಲ್ಲ, ಅದರಂತೆ ಆತ್ಮವು ದೇಹದಲ್ಲಿದ್ದಾಗ ಯಾವ ಸಂಧಿಗ್ಧವಾದ ಪರೀಕ್ಷೆಯಿಂದಲೂ, ಅತ್ಯಂತ ಸುಧಾರಿತವಾದ ಸೂಕ್ಷ್ಮದರ್ಶನಗಳ ಹಾಗೂ ಛಾಯಚಿತ್ರ ಅಥವಾ ಕ್ಷಕಿರಣಗಳ ("X-Rays") ಮೂಲಕವಾಗಲೀ ಅದನ್ನು ಕಾಣಲು ಸಾಧ್ಯವಿಲ್ಲ. ಹೀಗಾಗಿ ಅದಕ್ಕೆ ದೇಹವಿಲ್ಲವೆಂದೂ, ರೂಪವಿಲ್ಲವೆಂದೂ ಅಥವಾ ಯಾವುದೇ ಭಾಗಗಳಿಲ್ಲವೆಂದೂ ಭಾವಿಸಲಾಗಿದೆ. ಈ ಕಾರಣದಿಂದ ಅದು ಬಹಳ ಚಿಕ್ಕದ್ದಾಗಿದ್ದು ಅದನ್ನು ಸೂಕ್ಷ್ಮದರ್ಶನದ ಮೂಲಕ ಗುರುತಿಸಲು ಸಾಧ್ಯವಿಲ್ಲ ಮತ್ತು ಇಂಥಾಃ 5000 ಮಿಲಿಯ ಆತ್ಮಗಳನ್ನು ಒಂದು ಚಿಕ್ಕ ಚಿಪ್ಪಿನಲ್ಲಿ ಇಡಬಹುದಾಗಿದೆ ಎಂದು ಹೇಳಲಾಗುತ್ತದೆ. ನಿಜವಾಗಿಯೂ ಈ ಬಿಷೊಪರು ಏನೂ ಅಲ್ಲದರ ಘನವಾದ ಅರ್ಥವಿವರಣೆಯೊಂದನ್ನು ಕೊಟ್ಟಿದ್ದಾರೆ! ಮಿಲಿಯಾಂತರ ಏನೂ ಅಲ್ಲವಾದವುಗಳನ್ನು ಒಂದು ಸಣ್ಣ ಚಿಪ್ಪಿನಲ್ಲಿಡಬಹುದೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ!

ಆದರೆ, ಅಂಥಾಃ ಅನಾಗರೀಕ ಊಹಾಪೋಹಗಳಿಗೆ ಬುನಾದಿಯಾದರೂ ಎಲ್ಲಿದೆ? ಇದು ಸಂಪೂರ್ಣವಾಗಿ ಅಸಮರ್ಥನೀಯವಾದುದೆಂದು ನಾವು ಉತ್ತರಿಸುತ್ತೇವೆ. ಮಾನವನು ಭವಿಷ್ಯದಲ್ಲಿನ ಜೀವನದ ಬಗ್ಗೆ ದೇವರ ವಿಚಾರಣಸರಣಿ ಮತ್ತು ಯೋಜನೆಗಳನ್ನು ತಿರಸ್ಕರಿಸಿ ತನ್ನದೇ ಆದ ಸ್ವಂತ ವಿಚಾರಸರಣಿಯನ್ನು ಮಾಡುವುದರ ಫಲ ಇದಾಗಿದೆ. ಮಾನವ ವಿಚಾರಣ ಸರಣಿಯು ಹೇಳುವುದೇನೆಂದರೆ, ಎಂದೂ ಮರಣಹೊಂದದ ಯಾವುದಾದರೂ ಒಂದಿರಲೇ ಬೇಕು, ಇಲ್ಲವಾದಲ್ಲಿ ಭಾವೀ ಜೀವನವೆಂಬುದಿಲ್ಲವೆಂದು. ದೈವಿಕ ವಿಚಾರಸರಣಿಯ ಪ್ರಕಾರ ಆರಂಭದಲ್ಲಿ ಸೃಷ್ಟಿಸಿದ ಆ ದೇವರು ತಾನೇ ಸತ್ತವರನ್ನು ಪುನರುತ್ಥಾನಗೊಳಿಸ ಶಕ್ತನಾಗಿದ್ದಾನೆ. ಇದುವೇ ದೇವರ ವಾಕ್ಯಕ್ಕೂ ಮತ್ತು ಈ ಲೋಕದ ನಾಗರೀಕ ಹಾಗೂ ಅನಾಗರೀಕ ಮಾನವರೆಲ್ಲರ ವಿಚಾರಣಸರಣಿಗಳಿಗೂ ಇರುವ ತಿಕ್ಕಾಟ. ಎಲ್ಲಾ ಮಾನವ ವಿಚಾರಸರಣಿಗಳೂ, ಮಾನವರು ಸಾಯುವುದೇ ಇಲ್ಲ, ಹೀಗಿರುವುದರಿಂದ ಜೀವದಾಯಕನ ಅಥವಾ ಪುನರುತ್ಥಾನದಾಯಕನ ಅವಶ್ಯಕತೆ ಇಲ್ಲವೆಂದು ಹೇಳುತ್ತವೆ. ಆದರೆ, ಸತ್ಯವೇದವು ಮಾನವನು ಸಾಯುತ್ತಾನೆ ಮತ್ತು ಜೀವದಾಯಕ ಅಥವಾ ಪುನರುತ್ಥಾನದಾಯಕನು ಇಲ್ಲವಾದಲ್ಲಿ ನಿಜವಾಗಿಯೂ ಮರಣವೇ ಎಲ್ಲರ ಅಂತ್ಯವಾಗಿಬಿಡುತ್ತದೆ ಮತ್ತು ಭವಿಷ್ಯತ್ ಜೀವನವೆಂಬುದಿಲ್ಲ ಎಂದು ಹೇಳುತ್ತದೆ.

ತಮ್ಮ ವಿಚಾರಸರಣಿಗಳನ್ನು ಬೆಂಬಲಿಸುವಂತೆ ಈ ಲೋಕವು ಮತ್ತು ಇದರ ಧಾರ್ಮಿಕ ಗ್ರಂಥಗಳೆಲ್ಲವೂ (ಇದರಲ್ಲಿ ಕ್ರೈಸ್ತರೆಂದು ಹೇಳಿಕೊಳ್ಳುವ ಹೆಚ್ಚಿನವರು ಬರೆದ ಮರಣ, ಸ್ವರ್ಗ, ನರಕ ಮತ್ತು ದೈವ ಶಿಕ್ಷೆಗಳ ತತ್ವಶಾಸ್ತ್ರ ಬಗ್ಗೆ ಗ್ರಂಥಗಳೂ ಒಳಗೊಂಡಿವೆ ಎಂದು ತಿಳಿಸಲು ನಾವು ವಿಷಾದಿಸುತ್ತೇವೆ) ನಮಗೆ ಆತ್ಮದ ನಿರ್ಲಯತ್ವ ಸಿದ್ಧಾಂತಗಳನ್ನು ಅಂದರೆ ಮಾನವನಲ್ಲಿ ಆತ್ಮವಿದೆ, ಅದಕ್ಕೆ ಆತನ ದೇಹದಿಂದ ಪ್ರತ್ಯೇಕವಾದ ಜೀವವಿದೆ ಮತ್ತು ಅದು ನಿರ್ಲಯತ್ವವುಳ್ಳದ್ದು, ವಿನಾಶವಿಲ್ಲದ್ದು. ಆದುದರಿಂದ ನಿತ್ಯನಿರಂತರವಾದ ನೋವು ಅಥವಾ ಸಂತೋಷಕ್ಕೇ ಮೊದಲೇ ನೇಮಿಸಲ್ಪಟ್ಟದ್ದು ಎಂಬುದಾಗಿ ಬೋಧಿಸುತ್ತವೆ. ಆಗ ನಾವು ಈ ವಿಚಾರಣೆಗಳನ್ನು ಮಾಡುತ್ತೇವೆ :

## ಆತ್ಮವೆಂದರೇನು?
## What is a Soul ?

ಸತ್ಯವೇದದ ದೃಷ್ಟಿಕೋನದಲ್ಲಿ ಈ ಪ್ರಶ್ನೆಯನ್ನು ಪರೀಕ್ಷಿಸುವಲ್ಲಿ ಮಾನವನಲ್ಲಿ ದೇಹವಿದೆ ಮತ್ತು ಚೈತನ್ಯವಿದೆ ಎಂದು ಕಂಡುಕೊಳ್ಳುತ್ತೇವೆ. ಆದರೆ ಇದು ಆತ್ಮವಾಗಿದೆ. ವಿಜ್ಞಾನವು ಸತ್ಯವೇದದೊಂದಿಗೆ ಈ ಬಗ್ಗೆ ಒಪ್ಪಿಕೊಳ್ಳುತ್ತದೆ. ನಿಜವಾಗಿ ವಿಜ್ಞಾನದಲ್ಲಿ ಒಂದಾದ Phrenology ಎಂಬುದು ಮಾನವನ ಮತ್ತು ಕೆಳವರ್ಗದ ಪ್ರಾಣಿಗಳ ತಲೆಬುರಡೆಗಳನ್ನು ಅವುಗಳ ಮಾಲಿಕರ ಸೂಚಿಕೆಗಳನ್ನೂ, ಗುಣಲಕ್ಷಣಗಳನ್ನು, ಸ್ವಾಭಾವಿಕ ಲಕ್ಷಣಗಳನ್ನು ಓದುವಂತೆ ಉಪಯೋಗಿಸುತ್ತದೆ: ಶರೀರ ವಿಜ್ಞಾನದ ಮೂಲಕ ಎಲ್ಲರಿಗೂ ಸ್ವಲ್ಪ ಮಟ್ಟಿಗಾದರೂ ಮತ್ತೊಬ್ಬರ

ಗುಣಲಕ್ಷಣಗಳನ್ನು ನಿರ್ಣಯಿಸಲು ಸಾಮರ್ಥ್ಯವಿದೆಯಲ್ಲವೋ ? ಎಲ್ಲರೂ ಬುದ್ದಿವಂತರ ಮತ್ತು ಬುದ್ಧಿಹೀನರ, ಕರುಣಾಳುಗಳ ಮತ್ತು ಕ್ರೂರಿಗಳ ವ್ಯತ್ಯಾಸ ತಿಳಿದಿರುತ್ತಾರೆ. ಶರೀರ ರಚನೆಯ ವಿಭಜಿಸಲಾಗದ ರೀತಿಯಲ್ಲಿ ಸ್ವಭಾವ, ಗುಣಲಕ್ಷಣ ಮತ್ತು ಮನೋವೃತ್ತಿಗಳೊಂದಿಗೆ ಸಂಬಂಧಿಸಿದೆ ಎಂಬುದನ್ನು ಕಲಿಯದಿರುವವರು ಜೀವನದ ಪಾಠಗಳ ಉಪಯೋಗ ಮಾಡಿಕೊಂಡಿರುವುದಿಲ್ಲ ಮತ್ತು ನಮ್ಮ ಈ ಪ್ರಸ್ತಾಪದ ಬಗ್ಗೆಯಾಗಲೀ, ಬೇರೆ ಯಾವ ವಿಷಯದ ಬಗ್ಗೆಯಾಗಲೀ ಟೀಕಿಸಲು ಸಮರ್ಥರಲ್ಲ.

ಸತ್ಯವೇದದಲ್ಲಿ ಕಂಡುಬರುವಂತೆ 'ಆತ್ಮ' ಎಂಬ ಪದವು ಒಂದು ಚೇತನಯುಕ್ತ ವ್ಯಕ್ತಿಯನ್ನು ಸೂಚಿಸುತ್ತದೆ ; ಅಂದರೆ ಬುದ್ಧಿಶಕ್ತಿಯುಳ್ಳ, ಇಂದ್ರಿಯಜ್ಞಾನವುಳ್ಳ, ಗ್ರಹಣ ಶಕ್ತಿಯುಳ್ಳ ವ್ಯಕ್ತಿತ್ವ. ನಮ್ಮ ಮನಸ್ಸು ಎಲ್ಲಾ ಪೂರ್ವಾಗ್ರಹಗಳಿಂದ ಮುಕ್ತವಾಗಿ ನಾವು ಈ ಬಗ್ಗೆ ತಿಳಿದುಕೊಳ್ಳಲು ಆದಿಕಾಂಡದಲ್ಲಿನ ಸೃಷ್ಟಿ ಚರಿತ್ರೆಗೆ ಹೋಗಿ ಇವುಗಳನ್ನು ಗಮನಿಸೋಣ :–

(1) ಶರೀರ ರಚನೆ ಅಥವಾ ದೇಹವನ್ನು ಉಂಟುಮಾಡಲಾಯಿತು.

(2) 'ಜೀವದ ಉಸಿರು' ಎಂದು ಕರೆಯಲ್ಪಡುವ ಜೀವಾತ್ಮವನ್ನು ಅದಕ್ಕೆ ಸಂಪರ್ಕಿಸಲಾಯಿತು

(3) 'ಜೀವಿಸುವ ಆತ್ಮ' ಅಥವಾ 'ಚೇತನಯುಕ್ತ'ವು ಇದರ ಫಲವಾಯಿತು.

ಇವುಗಳು ಬಹಳ ಸರಳವಾದವುಗಳಾಗಿದ್ದು ಇವುಗಳನ್ನು ಬಹಳ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಇದು ದೇಹವೆಂಬುದು ಅಥವಾ ಚೇತನ ಅಥವಾ ಜೀವ ಉಸಿರು ಅಥವಾ ಪ್ರಾಣವೆಂಬುದು ಆತ್ಮವಲ್ಲವೆಂದು ತೋರಿಸಿಕೊಡುತ್ತದೆ. ಆದರೆ, ಇವೆರಡೂ ಕರ್ತನಿಂದ ಜೋಡಿಸಲ್ಪಟ್ಟಾಗ, ಇದರ ಫಲವಾದ ಗುಣಧರ್ಮ ಅಥವಾ ಅವಸ್ಥೆಯೆಂದರೆ ಜೀವಿಸುವ ಮಾನವನು ಜೀವಿಸುವವನೂ, ಜೀವಿಸುವ ಆತ್ಮನೂ ಆತ್ಮನಾಗಿ ಗ್ರಹಿಸುವ ಶಕ್ತಿಯನ್ನು ಹೊಂದಿದವನಾದನು. ಇದರಲ್ಲಿ ಯಾವುದೇ ರಹಸ್ಯಗರ್ಭಿತವಾದುದಿಲ್ಲ, ದೈವಿಕ ಕಿಡಿಯೊಂದು ಕೆಳವರ್ಗದ ಪ್ರಾಣಿಗಿಂತಲೂ ಹೆಚ್ಚಾಗಿ ಮಾನವಕುಲಕ್ಕೆ ತುಂಬಲ್ಪಟ್ಟಿತು ಎಂಬುವ ಯಾವುದೇ ಸಂದೇಶವಿಲ್ಲ. ನಿಜವಾಗಿಯೂ, ಕೆಳವರ್ಗದ ಪ್ರಾಣಿಗಳು ಉಂಟುಮಾಡಲ್ಪಡುತ್ತಿದ್ದಾಗ ಮತ್ತು ಅದನ್ನು ವಿಶಿಷ್ಟವಾಗಿ ವರ್ಣಿಸದೇ ಇರುವಾಗ ನಾವು ತಿಳಿದುಕೊಳ್ಳಬೇಕಾದುದೆಂದರೆ, ಈ ಪ್ರಕ್ರಿಯೆಯು ಹೆಚ್ಚುಕಡಿಮೆ ಅದೇ ರೀತಿಯಾಗಿದ್ದಿರಬಹುದೆಂದು ತಿಳಿದುಕೊಳ್ಳಬಹುದು. ನಾಯಿಯ ಶರೀರ ರಚನೆಯಿಲ್ಲದೆ ನಾಯಿ ಇಲ್ಲ ಅದರೆ ದೇಹವಿಲ್ಲ, ಆ ದೇಹದಲ್ಲಿ ಚೈತನ್ಯ ಅಥವಾ ಪ್ರಾಣ (ಉಸಿರು) ಇರಲಾರದೆಂಬುದು ನಮಗೆ ತಿಳಿದದೆ. ನಾಯಿಯ ದೇಹಕ್ಕೆ ಜೀವಕೊಡದ ಹೊರತು ಅದು ಎಂದಿಗೂ ನಾಯಿಯಾಗುವುದಿಲ್ಲ ಮೊದಲಿಗೆ ಅದರಲ್ಲಿ ಜೀವದ ಕಿಡಿಯನ್ನು, ಜೀವದ ಉಸಿರನ್ನು ತುಂಬಬೇಕಾಗುತ್ತದೆ. ನಂತರದಲ್ಲಿಯೇ ನಾಯಿಯ ಬದುಕು ಪ್ರಾರಂಭವಾಗುತ್ತದೆ. ಇದು ಎಲ್ಲಾ ಪ್ರಾಣಿಗಳಿಗೂ ಅನ್ವಯವಾಗುತ್ತದೆ.

ಇದಕ್ಕೆ ಪೂರ್ಣ ಅನುಗುಣವಾಗಿ ನಾವೀಗ ಅನೇಕರನ್ನು ಚಕಿತಪಡಿಸಬಹುದಾದ ಒಂದು ಸತ್ಯ ಸಂಗತಿಯ ಬಗ್ಗೆ ಗಮನಸೆಳೆಯುವವರಾಗಿದ್ದೇವೆ. ಅದೇನೆಂದರೆ, ಪರಿಶುದ್ಧ ಗ್ರಂಥಗಳ ಪ್ರಕಾರ ಪ್ರತಿಯೊಂದು ನಾಯಿಯೂ ಒಂದು ಆತ್ಮವಾಗಿದೆ, ಪ್ರತಿಯೊಂದು ಕುದುರೆಯೂ ಒಂದು ಆತ್ಮವಾಗಿದೆ, ಪ್ರತಿಯೊಂದು ಹಸುವೂ ಒಂದು ಆತ್ಮ, ಪ್ರತಿಯೊಂದು ಪಕ್ಷಿ, ಪ್ರತಿಯೊಂದು ಮೀನು ಸಹಾ ಒಂದೊಂದು ಆತ್ಮಗಳಾಗಿವೆ. ಅಂದರೆ ಇವುಗಳೆಲ್ಲವೂ ಚೇತನಯುಕ್ತವಾದ ಜೀವಿಗಳು ಎಂದರ್ಥ. ಅವುಗಳಿಗೆ ಜ್ಞಾನಗ್ರಾಹಕ ಶಕ್ತಿ ಇದೆ. ಸತ್ಯವಾಗಿ ಅವುಗಳಲ್ಲಿ ಕೆಲವು ಹೆಚ್ಚಿನ ಮಟ್ಟದಲ್ಲಿ, ಕೆಲವು ಬೇರೆಯವುಗಳಿಗಿಂತ ಕಡಿಮೆ ಮಟ್ಟದಲ್ಲಿ ಈ ಶಕ್ತಿ ಹೊಂದಿದೆ. ಆದರೆ 'ಆತ್ಮ' ಎಂಬ ಪದವು ಉಚಿತವಾಗಿ ಮತ್ತು ಸತ್ಯವೇದದ ಪ್ರಕಾರ ಅತ್ಯಂತ ಶ್ರೇಷ್ಟನೆನಿಸಿಕೊಂಡಿರುವ ಮಾನವರಿಂದ ಮೊದಲ್ಗೊಂಡು ಎಲ್ಲಾ ವಿಧವಾದ ಪ್ರಾಣಿ ಪಕ್ಷಿ, ಮೀನು ಮುಂತಾದ ಸಕಲ ಜೀವ ಜಂತುಗಳಿಗೂ ಅನ್ವಯವಾಗುತ್ತದೆ. ಅವುಗಳೆಲ್ಲವೂ ಆತ್ಮಗಳಾಗಿವೆ. ನಾವು ಆ ಪದವನ್ನು ತಪ್ಪಾಗಿ ಅರ್ಥೈಸಿ ಸಾಧಾರಣವಾದ ರೀತಿಯಲ್ಲಿ ಎಲ್ಲವಕ್ಕೂ ಆತ್ಮವಿದೆ ಎಂದು ಕರೆಯುತ್ತಿಲ್ಲ ಎಂಬುದನ್ನು ಗುರುತಿಸಿ. ಆದಾಗ್ಯೂ ಅವುಗಳಲ್ಲಿ ಪ್ರಾಣವಿದೆ ಎಂಬ ಅರ್ಥದಲ್ಲಿ ಅವುಗಳಲ್ಲಿ ಆತ್ಮವಿದೆ, ಅವುಗಳು ಜೀವಿಸುವ ಆತ್ಮಗಳಾಗಿವೆ ಎಂಬುದನ್ನು ನಾವೀಗ ಸಾಬೀತು ಪಡಿಸೋಣ :

ಆದಿಕಾಂಡದ ಮೊದಲನೆಯ, ಎರಡನೆಯ ಮತ್ತು ಒಂಬತ್ತನೆಯ ಅಧ್ಯಾಯಗಳಲ್ಲಿ 'ಜೀವಿಸುವ ಆತ್ಮ'ಗಳೆಂಬ ಪದವನ್ನು ಕೆಳವರ್ಗದ ಪ್ರಾಣಿಗಳಿಗೆ ಇಬ್ರಿಯ ಭಾಷೆಯಲ್ಲಿ ಒಂಬತ್ತು ಸಾರಿ ಅನ್ವಯಿಸಲಾಗಿದೆ. ಆದರೆ, ಭಾಷಾಂತರಕಾರರು (ಆತ್ಮನ ಬಗ್ಗೆ ಪ್ಲಾಟೋನಿಕ್ ತತ್ವಜ್ಞಾನದ ಪ್ರಕಾರ ತಪ್ಪಾಗಿ ಆದರೆ ಸಾಮಾನ್ಯವಾದ ಭ್ರಾಂತಿಯಿಂದೊಡಗೂಡಿದ ಸಂಗತಿಗಳನ್ನು ಕಾಪಾಡುವ ಸಲುವಾಗಿಯೋ ಎಂಬಂತೆ) ದೃಢನಿಶ್ಚಯದಿಂದ ತಮ್ಮ ಕಾರ್ಯವನ್ನು ಕಾದುಕೊಂಡಿದ್ದಾರೆ. ಹೀಗಾಗಿ, 'ಆತ್ಮ' ಎಂಬ ಪದವು ಸ್ಫೂರ್ತಿದಾಯಕವಾದ ಸತ್ಯವೇದದ ಉಪಯೋಗದಲ್ಲಿ ಮಾನವನಿಗೆ ಅನ್ವಯವಾಗುವಂತೆಯೇ ಕೆಳವರ್ಗದ ಪ್ರಾಣಿಗಳಲ್ಲಿಯೂ ಸಾಮಾನ್ಯವಾಗಿದೆ ಎಂಬ

ಈ ಸತ್ಯದಿಂದ ಆಂಗ್ಲ ಓದುಗರನ್ನು ಸಾಧ್ಯವಾದಷ್ಟು ಮಟ್ಟಿಗೆ ಮೌಢ್ಯದಲ್ಲಿಡಲಾಗಿದೆ. ಈ ಎಲ್ಲಾ ಪ್ರಕರಣಗಳಲ್ಲಿ ಮತ್ತು ದೇವರ ವಾಕ್ಯದ ಬೇರೆ ಬೇರೆ ಸಂದರ್ಭಗಳಲ್ಲಿ ಈ ಇಬ್ರಿಯ ಪದವನ್ನು ಉಪಯೋಗಿಸಿರುವ ಸ್ಥಳದಲ್ಲಿ ಬೇರೊಂದು ಆಂಗ್ಲಪದವನ್ನು ಉಪಯೋಗಿಸಿ ಈ ಆಲೋಚನೆಯನ್ನು ಮುಚ್ಚಿಹಾಕಲು ಮತ್ತು 'ಆತ್ಮ'ವೆಂಬ ಪದವು ಮಾನವರಿಗೆ ಮಾತ್ರವೇ ಅನ್ವಯಗೊಳಿಸಲು ಹೇಗೆ ಸಾಧ್ಯ? ಆದುದರಿಂದ ಅವರು ಅತ್ಯಂತ ಜಾಗರೂಕತೆಯಿಂದ ಈ ಅಂಶವನ್ನು ಕಾಪಾಡಿದ್ದಾರೆ. ಸತ್ಯವೇದದಲ್ಲಿ ಒಂದು ಕಡೆ ಮಾತ್ರವೇ ಕೆಳವರ್ಗದ ಪ್ರಾಣಿಗಳಿಗೆ 'ಆತ್ಮ' ಎಂಬ ಪದವನ್ನು ಉಪಯೋಗಿಸಲಾಗಿದೆ – ಅರಣ್ಯ 31:28ರಲ್ಲಿ ನಾವು ಆತ್ಮ ಎಂಬ ಪದವನ್ನು ಕೆಳವರ್ಗದ ಪ್ರಾಣಿಗಳಿಗೂ ಉಪಯೋಗಿಸುವುದನ್ನು ಕಾಣುತ್ತೇವೆ. ಅವರು ಈ ಪ್ರಸ್ತಾಪವನ್ನು ವಿಶಿಷ್ಟವಾಗಿ ವಾಕ್ಯಗಳನ್ನು ವಿಚಿತ್ರವಾಗಿ ಜೋಡಿಸುವಂತೆ ಉಪಯೋಗಿಸುವ ಒತ್ತಾಯಕ್ಕೆ ಒಳಗಾಗಿದ್ದಾರೆ. ಬೇರೆ ರೀತಿಯ ಭಾಷಾಂತರವು ಯುಕ್ತವಾಗಿ ಸಾಧ್ಯವಿದ್ದಿಲ್ಲ. ಆ ವಾಕ್ಯಭಾಗವು ಇಂತಿದೆ :–

**"ಯುದ್ಧಕ್ಕೆ ಹೋದ ಭಟರಿಗೆ ಬರುವ ಭಾಗದಿಂದ ಮನುಷ್ಯ, ದನ ಕತ್ತೆ, ಆಡು, ಕುರಿ ಇವುಗಳಲ್ಲಿ ನೀನು ಐನೂರರಲ್ಲಿ ಒಂದರ** (ಆಂಗ್ಲ ಭಾಷೆಯಲ್ಲಿ ಒಂದು Soul–ಆತ್ಮ ಎಂಬುದಾಗಿದೆ) **ಮೇರೆಗೆ ಕರ್ತನಿಗೋಸ್ಕರ ಕಪ್ಪವನ್ನು ಅರ್ಪಿಸಬೇಕು"** – (ಅರಣ್ಯ 31:28). ಇಲ್ಲಿ ನಾವು 'ಆತ್ಮ' ಎಂಬ ಪದವನ್ನು ಕೆಳವರ್ಗದ ಪ್ರಾಣಿಗಳಿಗೂ, ಮಾನವನಿಗೂ ಉಪಯೋಗಿಸುವುದನ್ನು ಗಮನಿಸುತ್ತೇವೆ. ಅದೇ ರೀತಿ ಅನುವಾದಕರುಗಳು ಯಾವುದೇ ತಿರುಚಿದ ಸಿದ್ಧಾಂತಗಳ ಕಡೆಗೆ ವಾಲುವವರಿಂದ ಮುಕ್ತರಾಗಿದ್ದಾರೆ. ಸತ್ಯವೇದದ ಬೇರೆ ಬೇರೆ ಕಡೆಗಳಲ್ಲಿಯೂ ಇದೇ ರೀತಿಯಲ್ಲಿ ಕಂಡುಬರಬಹುದಿತ್ತು.

ನಾವೀಗ ಇಬ್ರಿಯ ಮೂಲ ಪದವಾದ Soul (Nehphesh) ಎಂಬುದು ಆದಿಕಾಂಡದಲ್ಲಿನ ಒಂಬತ್ತು ವಾಕ್ಯಭಾಗಗಳಲ್ಲಿ ಕೆಳವರ್ಗದ ಪ್ರಾಣಿಗಳ ಸಂಬಂಧದಲ್ಲಿ ಉಪಯೋಗಿಸಿರುವುದನ್ನು ಪರಿಶೀಲಿಸೋಣ :

(1) **"ಹೀಗೆ ದೇವರು ಮಹಾಜಲಚರಗಳನ್ನೂ ನೀರಿನಲ್ಲಿ ತುಂಬಿರುವ ಸಕಲವಿಧವಾದ ಜೀವಿಗಳನ್ನೂ** (ಅಂದರೆ Living Soul (Nehphesh) ಉಳ್ಳವುಗಳನ್ನು) . . . . . **ಉಂಟುಮಾಡಿದನು"** (ಆದಿ. 1:20,21). ಇಲ್ಲಿ ಪರಿಸರ ಬರಹದಲ್ಲಿ Soul (Nehphesh) ಎಂಬ ಪದವನ್ನು ಗುರುತಿಸಿರಿ; ಇದು ಮಾನವನು ಸೃಷ್ಟಿಯಾಗುವುದಕ್ಕಿಂತ ಒಂದು ದಿನ ಮೊದಲು ಅಂದರೆ ಐದನೆಯ ದಿನದ ಸೃಷ್ಟಿಕಾರ್ಯವಾಗಿತ್ತು. ಇವುಗಳು ಮೀನಿನ ಆತ್ಮಗಳಾಗಿದ್ದವು.

(2) **"ದೇವರು ಭೂಮಿಯಿಂದ ಚಲಿಸುವ ಜೀವಜಂತುಗಳು** [Living Soul(Nehphesh)] **ಉಂಟಾಗಲಿ ಅಂದನು. ಪಶುಕ್ರಿಮಿಗಳೂ, ಕಾಡುಮೃಗಗಳೂ ತಮ್ಮ ತಮ್ಮ ಜಾತಿಗನುಸಾರ ಹುಟ್ಟಲಿ ಅಂದನು"** (ಆದಿ 1:24) ಇವುಗಳು ಒಣಭೂಮಿಯ ಪ್ರಾಣಿಗಳಾಗಿದ್ದವು, ಮೀನುಗಳಿಗಿಂತಲೂ ಉತ್ತಮವಾದವುಗಳು ಆದರೆ ಇನ್ನೂ ಸೃಷ್ಟಿಸಲ್ಪಡದ ಮಾನವರಿಗಿಂತ ಮನುಷ್ಯ ಆತ್ಮ ಅಥವಾ ಜೀವಿಗೆ ಮೊದಲು ಸೃಷ್ಟಿಸಲ್ಪಟ್ಟವು.

(3) **"ಇದಲ್ಲದೆ ಭೂಮಿಯ ಮೇಲೆ ತಿರುಗಾಡುವ ಮೃಗಗಳು, ಆಕಾಶದಲ್ಲಿ ಹರಿದಾಡುವ ಪಕ್ಷಿಗಳು, ನೆಲದಲ್ಲಿ ಹರಿದಾಡುವ ಕ್ರಿಮಿಕೀಟಗಳು ಎಂಬ ಜೀವಿಗಳಿಗೆ** [Living Soul(Nehphesh)] **ಎಲ್ಲಾ ಹುಲ್ಲು ಸೊಪ್ಪುಗಳನ್ನು ಆಹಾರಕ್ಕಾಗಿ ಕೊಟ್ಟಿದ್ದೇನೆ ಎಂದು ಹೇಳಿದನು"** (ಆದಿ 1:30). ಇಲ್ಲಿ ಕೆಳವರ್ಗದ ಪ್ರಾಣಿಗಳನ್ನು ವಿಶೇಷಿಸಲಾಗಿದೆ ಮತ್ತು ಅವುಗಳೆಲ್ಲವೂ ಸಹಾ ಜೀವಿಸುವ ಪ್ರಾಣಿಗಳು [Living Soul(Nehphesh)] ಎಂದು ವಿಶಿಷ್ಟವಾಗಿ ಪ್ರಕಟಿಸಲಾಗಿದೆ. ಇದು ಮಾನವರಿಗೆ ಉಪಯೋಗಿಸುವ ಪದಗಳೇ ಆಗಿವೆ.

(4) **"ಆಗ ದೇವರು ಎಲ್ಲಾ ಭೂಜಂತುಗಳನ್ನೂ ಆಕಾಶದ ಪಕ್ಷಿಗಳನ್ನು ಮಣ್ಣಿನಿಂದ ನಿರ್ಮಿಸಿ –ಇವುಗಳಿಗೆ ಆ ಮನುಷ್ಯನು ಏನೇನು ಹೆಸರಿಡುವನು ನೋಡೋಣ ಎಂದು ಅವನ ಬಳಿಗೆ ಬರಮಾಡಿದನು. ಮನುಷ್ಯನು ಒಂದೊಂದು ಪ್ರಾಣಿಗೆ** [Living Soul(Nehphesh)] **ಯಾವಾವ ಹೆಸರಿಟ್ಟನೋ ಅದೇ ಹೆಸರಾಯಿತು"** (ಆದಿ. 2:19). ಇಲ್ಲಿ ಟೀಕೆ ಅನವಶ್ಯ. ಆತ್ಮವು ವಿಶೇಷವಾಗಿ ಮನುಷ್ಯನ ಭಾಗ ಅಥವಾ ಸ್ವಭಾವ ಅಲ್ಲ ಎಂಬುದರ ಬಗ್ಗೆ ಪ್ರಶ್ನೆಯೇ ಏಳುವುದಿಲ್ಲ. ಆದರೆ ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಾಗ ಇದು ಕೆಳವರ್ಗದ ಪ್ರಾಣಿಯಿಂದ ಹಿಡಿದು ಮೇಲ್ಮಟ್ಟದ ಎಲ್ಲಾ ಸಚೇತನ ಪ್ರಾಣಿಗಳಿಗೂ – ಸಂವೇದನಾ ಶಕ್ತಿಯುಳ್ಳ ಪ್ರಾಣಿಗಳಿಗೂ ಅನ್ವಯವಾಗುತ್ತದೆ.

(5) **"ಭೂಮಿಯ ಮೇಲೆ ತಿರುಗಾಡುವ ಎಲ್ಲಾ ಜೀವಜಂತುಗಳೂ** [Living Soul (Nehphesh)] **ನಿಮಗೆ ಆಹಾರವಾಗಿರುವುವು. ಆದರೆ ರಕ್ತದಿಂದ ಕೂಡಿರುವ ಮಾಂಸವನ್ನು ನೀವು ತಿನ್ನಬಾರದು; ರಕ್ತವು ಜೀವವಷ್ಟೆ** [Soul (Nehphesh)]**"** (ಆದಿ. 9:3,4) ಇಲ್ಲಿ ಮನುಷ್ಯರು ತಿನ್ನಬಹುದಾದ ಪ್ರಾಣಿಗಳನ್ನು ಜೀವವುಳ್ಳ ಪ್ರಾಣಿಗಳು [Living Soul (Nehphesh)] ಎಂಬುದಾಗಿ ಹೇಳಿರುವುದು ಮಾತ್ರವಲ್ಲ, ಅವುಗಳ ರಕ್ತವು ಅದರ ಜೀವವನ್ನು [Soul (Nehphesh)] ಪ್ರತಿನಿಧಿಸುತ್ತದೆ ಎಂದು ಹೇಳಿದೆ. ಆದುದರಿಂದ ಮನುಷ್ಯನು ಈ ರಕ್ತದಿಂದ ಕೂಡಿದ ಮಾಂಸವನ್ನು ತಿನ್ನಲು ನಿಷೇಧಿಸಲಾಗಿದೆ. – ರಕ್ತ ದಾಹವನ್ನು ಬೆಳೆಸಿಕೊಳ್ಳುವುದನ್ನು ನಿಷೇಧಿಸಲಾಗಿದೆ.

(6) **"ನಾನು ನಿಮ್ಮನ್ನೂ ನಿಮ್ಮ ಸಂತತಿಯವರನ್ನೂ ನಿಮ್ಮ ಕೂಡ ನಾವೆಯಿಂದ ಹೊರಟುಬಂದ ಪಶು, ಪಕ್ಷಿ, ಮೃಗಾದಿ ಸಕಲ ಭೂಜಂತುಗಳನ್ನೂ ಕುರಿತು ಸ್ಥಿರಪ್ರತಿಜ್ಞೆಮಾಡುತ್ತೇನೆ. ಆ ಪ್ರತಿಜ್ಞೆ ಯಾವುದೆಂದರೆ ಇನ್ನುಮೇಲೆ ಎಲ್ಲಾ ಪ್ರಾಣಿಗಳು ಪ್ರಳಯದಿಂದ ನಾಶವಾಗುವುದಿಲ್ಲ"** (ಜೀವಿಸುವ ಆತ್ಮ – Living Soul (Nehphesh) (ಆದಿ. 9:9–11). ಇದು ಮನುಷ್ಯರು ಮಾತ್ರವಲ್ಲ ಸ್ವಭಾವದಲ್ಲಿ, ಶರೀರರಚನೆ ಮುಂತಾದವುಗಳಲ್ಲಿ ಆತನಿಗಿಂತ ಕೀಳಾಗಿರುವ ಎಲ್ಲಾ ಜೀವಿಗಳೂ ಆತ್ಮಗಳು ಎಂಬುವ ಒಂದು ಸರಳ ಹೇಳಿಕೆಯಾಗಿದೆ.

(7) **"ನಾನು ನಿಮ್ಮನ್ನೂ ನಿಮ್ಮ ಸಂಗಡ ಇರುವ ಸಮಸ್ತ ಜೀವರಾಶಿಗಳನ್ನೂ** [Living Soul(Nehphesh)] **ಕುರಿತು ಎಲ್ಲಾ ತಲತಲಾಂತರಗಳಲ್ಲಿಯೂ ಮಾಡುವ ಈ ಪ್ರತಿಜ್ಞೆಗೆ ಮೇಘಗಳಲ್ಲಿ ನಾನಿಟ್ಟಿರುವ ಮುಗಿಲುಬಿಲ್ಲೇ ಗುರುತಾಗಿರುವುದು"** (ಆದಿ. 9:12–13). ಇದಕ್ಕಿಂತ ಕೂಲಂಕುಷವಾದುದು ಮತ್ತೇನು ಬೇಕು?

(8) **"ಆಗ ನಾವು ನಿಮ್ಮನ್ನೂ ಎಲ್ಲಾ ಜೀವರಾಶಿಗಳನ್ನೂ** [Living Soul (Nehphesh)] **ಕುರಿತು ಮಾಡುವ ಪ್ರತಿಜ್ಞೆಯನ್ನು ಜ್ಞಾಪಕಮಾಡಿಕೊಳ್ಳುವೆನು"** (ಆದಿ. 9:15).

(9) **"ಆ ಬಿಲ್ಲು ಮೇಘಗಳಲ್ಲಿ ಕಾಣಿಸುವಾಗ ನಾನು ಅದನ್ನು ನೋಡಿ ದೇವರಾದ ನನಗೂ ಎಲ್ಲಾ ಜೀವರಾಶಿಗಳಿಗೂ** [Living Soul (Nehphesh)] **ಆದ ಶಾಶ್ವತವಾದ ಒಡಂಬಡಿಕೆಯನ್ನು ಜ್ಞಾಪಕಮಾಡಿಕೊಳ್ಳುವೆನು"** (ಆದಿ. 9:16).

ಇದೇ ಅಭಿಪ್ರಾಯಗಳೂ ವಚನ 16ರಲ್ಲಿ ಮರುಕಳಿಸಿದೆ. ತಪ್ಪು ತರ್ಜುಮೆ ಎಂಬ ಪರದೆಯನ್ನು ಸರಿಸಿದಾಗ ಇದರ ಅರ್ಥದ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ ಮತ್ತು ದೇವರು ತನ್ನ ವಾಕ್ಯದಿಂದ ಗ್ರಹಿಸಬಯಸುವುದನ್ನು ನಾವು ಗ್ರಹಿಸುತ್ತೇವೆ.

ಇದೇ ರೀತಿಯಲ್ಲಿ ನಾವು ಸತ್ಯವೇದದ ಇತರ ಪುಸ್ತಕಗಳ ಕಡೆಗೂ ನೋಡಬಹುದಾಗಿದೆ. ಆದರೆ ಆತ್ಮವೆಂಬುದು ಮನುಷ್ಯರಂತೆ ಕೆಳವರ್ಗದ ಪ್ರಾಣಿಗಳಿಗೂ ಅನ್ವಯಿಸುತ್ತದೆ ಎಂಬುದನ್ನು ನಾವು ಯಾವುದೇ ವಿವೇಚನೆಯುಳ್ಳ ಮನಸ್ಸಿಗೆ ಅರ್ಥವಾಗುವಷ್ಟರ ಮಟ್ಟಿಗೆ ಈಗಾಗಲೇ ಉಲ್ಲೇಖಿಸಿದ್ದೇವೆ. ಆದುದರಿಂದ ಭವಿಷ್ಯದ್ ಜೀವನದ ಬಗ್ಗೆ ಮಾನವನ ನಿರೀಕ್ಷೆಗಳು ಮತ್ತು ಕೆಳವರ್ಗದ ಪ್ರಾಣಿಗಳ ಮೇಲೆ ಆತನ ಈಗಿನ ಶ್ರೇಷ್ಠತೆ ಇವುಗಳು ಆತನು ಮಾತ್ರವೇ ಆತ್ಮವುಳ್ಳವನು, ಇತರ ಪ್ರಾಣಿಗಳಿಗಿಲ್ಲ ಎಂಬ ಎಲ್ಲಾ ಹೇಳಿಕೆಗಳೂ, ವಿಚಾರಸರಣಿಗಳೂ ಅಸತ್ಯವಾದವುಗಳಾಗಿವೆ ಮತ್ತು ನಾವು ಈ ಸಂಗತಿಗಳನ್ನು ದೈವಿಕ ಪ್ರಕಟನೆಯ ಸತ್ಯವಾದ ದೃಷ್ಟಿಕೋನದ ಮೂಲಕ ನೋಡುವುದಾದರೆ ಅವುಗಳಿಗೆ ಮೂಲಸ್ವರೂಪವಾದ ಪುನಃರಚನೆಯ ಅಗತ್ಯವಿದೆಯೆಂದು ಕಂಡುಬರುತ್ತದೆ.

ಸಣ್ಣ ಹುಳುವಿನಿಂದ ಹಿಡಿದು ಆನೆಯವರೆಗೆ, ಮರಿಗಪ್ಪೆಯಿಂದ ಹಿಡಿದು ತಿಮಿಂಗಿಲದವರೆಗೆ ಎಲ್ಲಾ ಜೀವಿಗಳೂ. ಚಲಿಸುವ ಜೀವ ಜಂತುಗಳೂ ಜೀವಿಸುವ ಪ್ರಾಣಿಗಳಾಗಿವೆ ಆದುದರಿಂದ ಇವುಗಳೆಲ್ಲವುಗಳಿಗೂ ಆತ್ಮೀಕ ಪರಿಸ್ಥಿತಿಗೆ ವರ್ಗಾಯಿಸಲ್ಪಡುವುದರ ಮೂಲಕವಾಗಿಯೋ ಅಥವಾ ಪುನರುತ್ಥಾನದ ಮೂಲಕವಾಗಿಯೋ ಭವಿಷ್ಯದ್ ಜೀವಿತ ಉಂಟೆಂದು ನಾವು ಬೋಧಿಸುತ್ತೇವೆಂದು ಯಾರೂ ತಪ್ಪಾಗಿ ಭಾವಿಸಕೂಡದು. ಇಂಥಾಃ ಆಲೋಚನೆಗಳು ಅತಿಕೆಟ್ಟ ಬುದ್ಧಿಗೇಡಿತನ – ಹುಚ್ಚುತನದ್ದು, ಯಾವುದೇ ವಿವೇಚನೆಯ ಛಾಯೆ ಇಲ್ಲದ್ದೂ ಆಗಿದೆ. ಪ್ರಾಣಿಸ್ವಭಾವದ ಈ ಕೆಳವರ್ಗದ ಬಿಲಿಯಾಂತರ ಜೀವಿಸುವ ಆತ್ಮಗಳು ಪ್ರತಿಕ್ಷಣದಲ್ಲಿ ಹುಟ್ಟುತ್ತವೆ, ಮತ್ತು ಅಷ್ಟೇ ಆತ್ಮಗಳು ಪ್ರತಿಕ್ಷಣದಲ್ಲಿ ಮರಣಿಸುತ್ತವೆ.

ನಮ್ಮ ವಾದವೇನೆಂದರೆ, ಮಾನವನು ಅತ್ಯಂತ ಶ್ರೇಷ್ಠವರ್ಗದ ಆತ್ಮವಾಗಿದ್ದಾನೆ, ಮತ್ತು ಕೆಳವರ್ಗದ ಎಲ್ಲಾ ಪ್ರಾಣಿಗಳ, ಸಚೇತನಗಳ ರಾಜನೂ, ಒಡೆಯನೂ ಆಗಿದ್ದಾನೆ. ಹೀಗಿದ್ದರೂ ಆತನು ಈ ಲೋಕದ ಮಾನವ ಆತ್ಮವಾಗಿ ಅವುಗಳಲ್ಲಿ ಒಬ್ಬನಾಗಿದ್ದಾನೆ. ಆದಾಗ್ಯೂ ಆತನು ಮೂಲದಲ್ಲಿ (ಆದಾಮನಾಗಿ) ಭವ್ಯವಾಗಿ ರಚಿಸಲ್ಪಟ್ಟನು ಮತ್ತು ದೇವರ ಸ್ವರೂಪದಲ್ಲಿ ಉಂಟುಮಾಡಲ್ಪಟ್ಟನು ಎಂಬುದಾಗಿ ಹೇಳಿರುವುದು ಉಚಿತವಾಗಿದೆ – ಆತನು ಸೃಷ್ಟಿಸಿದಾತನ ಪ್ರತೀಕವಾಗಿದ್ದಾನೆ.

ಮಾನವನು ಒಬ್ಬ ಜೀವಿಸುವ ಆತ್ಮವಾಗಿ ತನ್ನ ಶ್ರೇಷ್ಠ ಶರೀರರಚನೆಯ ಕಾರಣ ಕೆಳವರ್ಗದ ಪ್ರಾಣಿಗಳಿಗಿಂತ ವಿಭಿನ್ನವಾಗಿದ್ದಾನೆ; ಆತನ ಶ್ರೇಷ್ಠತೆಯು ಕೇವಲ ಆತನ ಪ್ರಾಮಾಣಿಕ ರೂಪದಿಂದ ಮಾತ್ರವೇ ಸೂಚಿತವಾದುದಲ್ಲ; ಅದು ದೇವರ ರೀತಿಯಲ್ಲಿರುವ ಆತನ ಶ್ರೇಷ್ಠವಾದ ಮಾನಸಿಕ ಸಂಪನ್ನತೆಯಾಗಿದ್ದು ಆತನ ಚಹರೆಯಲ್ಲಿ ಅದು ಪ್ರತಿಫಲಿಸುತ್ತದೆ. ಮಾನವನು ದೈಹಿಕ ರೂಪದಿಂದಲ್ಲ, ತನ್ನ ಮಾನಸಿಕ ಮತ್ತು ನೈತಿಕ ಪ್ರಮಾಣಿಕತೆಯಿಂದ ದೇವರ ಸ್ವಭಾವದಲ್ಲಿ ಸೃಷ್ಟಿಸಲ್ಪಟ್ಟನು. ಕೆಳವರ್ಗದ ಅನೇಕ ಪ್ರಾಣಿಗಳು ಅಥವಾ ಜೀವಿಗಳಲ್ಲಿ ವಿವೇಚನಾ ಶಕ್ತಿ ಇದ್ದು ಅದನ್ನು ಅವುಗಳು ಸಹಸ್ರಾರು ರೀತಿಯಲ್ಲಿ ವ್ಯಕ್ತಪಡಿಸಿದಾಗಲೂ, ಪ್ರತಿಯೊಂದಕ್ಕೂ ಒಂದು ಮಿತಿ ಇದೆ ಅದನ್ನು ಮೀರಿ ಹೆಚ್ಚಿನ ಪ್ರಗತಿ ಉಂಟಾಗಲಾರದು; ಆದರೆ ಮಾನವನ ವಿವೇಚನಾ ಶಕ್ತಿ ಬಹುಮಟ್ಟಿಗೆ ಮಿತಿ ಇಲ್ಲದ್ದು. ಯಾಕೆಂದರೆ, ಆತನು 'ದೇವರ ಸ್ವರೂಪ'ದಲ್ಲಿ ಅಂದರೆ ತನ್ನನ್ನು ಸೃಷ್ಟಿಸಿದಾತನ ಸ್ವರೂಪದಲ್ಲಿಯೇ ಆತನು ಸಹಾ ಉಂಟುಮಾಡಲ್ಪಟ್ಟನು. ಮಾನವನು ಪಾಪದಲ್ಲಿ ಬಿದ್ದು

ಸಹಸ್ರಾರು ವರ್ಷಗಳ ಅಂಧಕಾರತೆ ಮತ್ತು ಕಳಂಕವನ್ನು ತಾಳಿಕೊಂಡಾಗ್ಯೂ ದೇವರ ಸಾರೂಪ್ಯವನ್ನು ಇನ್ನೂ ಕಾಣಬಹುದು. ಆತನು – ವಿಶೇಷವಾಗಿ ದೇವರೊಂದಿಗೆ ಪುನಃ ಸಂಧಾನದ ಕ್ರಿಸ್ತನ ಸೇವೆಯನ್ನು ಅಂಗೀಕರಿಸಿದವರು ಮತ್ತು ಅವರು ಪುನಃ 'ದೇವರ ಮಕ್ಕಳಾಗಿದ್ದು' ದೇವರ ಪ್ರೀತಿಯ ಮಗನ ಸ್ವರೂಪಕ್ಕೆ ಹೊಂದಿಕೊಳ್ಳಲು ಬಯಸುವವರಾಗಿದ್ದಾರೆ.

ಉದಾಹರಣೆಗಾಗಿ; ಕುದುರೆಗಳು, ನಾಯಿಗಳು ಮತ್ತು ಪಕ್ಷಿಗಳು ಇವುಗಳಿಗೆ ಅನೇಕ ಪದಗಳ ಅರ್ಥವನ್ನು ಹೇಳಿಕೊಡಬಹುದು ಮತ್ತು ಅದರಿಂದ ಅವುಗಳು ಜೀವಿತದ ಅನೇಕ ಸಂಗತಿಗಳ ಬಗ್ಗೆ ಅರ್ಥಮಾಡಿಕೊಳ್ಳಲು ಸಮರ್ಥವಾಗುತ್ತವೆ. ಕೆಲವೊಮ್ಮೆ ಅವುಗಳು ತಮ್ಮ ವಿವೇಚನಾ ಶಕ್ತಿಯನ್ನು ನಿರೂಪಿಸುತ್ತವೆ. ಕೆಲವು ಇಪ್ಪತ್ತರವರೆಗೆ ಪ್ರಾಣಿಗಳಿಗೆ ಎಣಿಸಲೂ ಸಾಧ್ಯವಾಗ ಬಹುದು. ಆದರೆ, ಕುದುರೆಗಳಿಗೆ, ನಾಯಿಗಳಿಗೆ ಮತ್ತು ಪಕ್ಷಿಗಳಿಗೆ ಆಲ್ಜಿಬ್ರ ಅಥವಾ ಜ್ಯಾಮೆಟ್ರಿ ಇಲ್ಲವೇ ಅಸ್ಟ್ರೋನಮಿ ಮುಂತಾದ ಶಾಸ್ತ್ರಗಳನ್ನು ಹೇಳಿಕೊಡಲು ಯಾರಿಗೆ ಸಾಧ್ಯ? ಕೆಳವರ್ಗದ ಕೆಲವು ಉತ್ತಮವಾದ ಪ್ರಾಣಿಗಳಿಗೆ ಕೆಲಮಟ್ಟಿಗೆ ನೈತಿಕ ಪ್ರಾಮಾಣಿಕತೆ ಮತ್ತು ಅವುಗಳ ಒಡೆಯರಿಗೆ ಆಭಾರಿತನ, ಕುರಿಗಳನ್ನು ಕೊಲ್ಲದಿರಲು, ಕಚ್ಚದಿರಲು, ಒದೆಯದಿರಲು ಮುಂತಾದ ಸಂಗತಿಗಳನ್ನು ಕಲಿಸಿಕೊಡಬಹುದು. ಆದರೆ ಆ ಮೂಕ ಪ್ರಾಣಿಗಳಿಗೆ ದಶಾಜ್ಞೆಗಳನ್ನು ಕಲಿಸಿಕೊಡಲು ಯಾರಿಗೆ ಸಾಧ್ಯ? ಅವುಗಳಿಗೆ ಅವುಗಳ ಒಡೆಯರ ಬಗ್ಗೆ, ಅವರ ಸ್ನೇಹಿತರ ಬಗ್ಗೆ ಒಂದು ರೀತಿಯ ಪ್ರೀತಿಯನ್ನು ಕಲಿಸಬಹುದು. ಆದರೆ ದೇವರನ್ನು ಪ್ರೀತಿಸಲು, ಆರಾಧಿಸಲು ಅವುಗಳಿಗೆ ಕಲಿಸಲು, ಅವುಗಳನ್ನು ನಿರ್ಲಕ್ಷ್ಯಭಾವದಿಂದ ಉಪಯೋಗಿಸುವವರ ಬಗ್ಗೆ ಕೇವಲ ಸಹನೆಗಿಂತ ತಾಳಿಕೊಳ್ಳುವಂತೆ ಕಲಿಸಿಕೊಡಲು ಯಾರಿಂದಾದೀತು?

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಈ ಎಲ್ಲಾ ವ್ಯತ್ಯಾಸಗಳು ಈ ಕೆಳವರ್ಗದ ಪ್ರಾಣಿಗಳಿಗೆ ಬೇರೆ ವಿಧವಾದ ಪ್ರಾಣ ಅಥವಾ ಜೀವಾತ್ಮವಿದೆ ಎಂಬ ಕಾರಣದಿಂದಲ್ಲ. ಯಾಕೆಂದರೆ **"ಎಲ್ಲಕ್ಕೂ ಪ್ರಾಣ ಒಂದೇ"** (ಪ್ರಸಂಗಿ 3:19) ಎಂದು ನಾವು ನೋಡಿದ್ದೇವೆ. ಮಾನವನಿಗೆ ಮಾತ್ರವೇ ಆತ್ಮವಿದೆ, ಪಶುಗಳಿಗೆ ಇಲ್ಲ ಎಂಬುದಲ್ಲ. ಯಾಕೆಂದರೆ, ಎಲ್ಲಕ್ಕೂ ಆತ್ಮವಿದೆ ಎಂದು ನಾವು ನೋಡಿದ್ದೇವೆ. ಆದರೆ ನಾವು ಕಂಡುಕೊಂಡಿರುವಂತೆ ಮತ್ತು ಎಲ್ಲಾ ಮನುಷ್ಯರೂ ಸಾಕ್ಷಿಗಳಾಗಿರುವಂತೆ ಪ್ರತಿಯೊಂದೂ ಭಿನ್ನವಾದ ಶರೀರ ರಚನೆ ಇದೆ ಮತ್ತು ಇವುಗಳು ಪ್ರತಿಯೊಂದೂ ವಿಧ ವಿಧವಾದ ಗುಣಲಕ್ಷಣಗಳನ್ನು ನೀಡುತ್ತವೆ ಮತ್ತು ಇವುಗಳಿಂದ ಬುದ್ಧಿ ಶಕ್ತಿಯಲ್ಲಿ ಯಾವುದು ಕಡಿಮೆ, ಯಾವುದು ಹೆಚ್ಚು ಎಂದು ತಿಳಿದುಬರುತ್ತದೆ. ಗಾತ್ರದಿಂದಾಗಲೀ, ದೇಹದ ತೂಕದಿಂದಾಗಲೀ ಶ್ರೇಷ್ಟತೆಯನ್ನು ನಿರ್ಧರಿಸಲು ಸಾಧ್ಯವಿಲ್ಲ ಎಂಬುದನ್ನು ಗಮನಿಸ ಬೇಕು. ಇಲ್ಲವಾದಲ್ಲಿ ಆನೆ ಮತ್ತು ತಿಮಿಂಗಲಗಳು ಈ ಲೋಕದ ಒಡೆಯರುಗಳಾಗುತ್ತಿದ್ದವು. ಶ್ರೇಷ್ಟತೆಯು ಮಿದುಳಿನ ರಚನೆ ಮತ್ತು ಕಾರ್ಯಗಳ ಮೇಲೆ ಆಧಾರಿತವಾದ 'ದೈಹಿಕ ಗುಣಲಕ್ಷಣ' ಮೂಲಕ ನಿರ್ಧರಿಸಲ್ಪಡುತ್ತದೆ ಮತ್ತು ಪ್ರತಿನಿಧಿಸಲ್ಪಡುತ್ತದೆ.

ಆದುದರಿಂದ ಮಾನವನು ಈ ಭೂಮಿಯಲ್ಲಿನ ಅತ್ಯಂತ ಶ್ರೇಷ್ಟವಾದ ಸೃಷ್ಟಿಯಾಗಿದ್ದಾನೆ. ಭೂಮಿಯೊಳಗಿಂದ ಉತ್ಪನ್ನವಾಗಿ ಮಣ್ಣಿಗೆ ಸಂಬಂಧಪಟ್ಟವನು. ಆತನ ಉತ್ಕೃಷ್ಟತೆಯು ಆತನ ಬೌದ್ಧಿಕ ಸಂಪನ್ನತೆಯಲ್ಲಿದೆ – ಅದು ಒಂದು ಅಭಿವೃದ್ಧಿಯಲ್ಲ, ಆದರೆ ಸೃಷ್ಟಿಕರ್ತನ ಕೊಡುಗೆಯಾಗಿದೆ.

## "ಪಾಪ ಮಾಡುವ ಪ್ರಾಣಿಯೇ ಸಾಯುವುದಾಗಿದೆ"
## "The Soul that Sinneth, it shall die"

ಮೇಲಿನವುಗಳೊಂದಿಗೆ ಪೂರ್ಣ ಸಾಮರಸ್ಯವಿದೆ, ಆದರೆ ಈ ಪ್ರಸ್ತಾಪದ ಬಗ್ಗೆ ಸಾಮಾನ್ಯ ಆಲೋಚನೆಗೆ ಹೊರತಾಗಿದೆ. ಮಾನವ ವೇದಾಂತವು ಮತ್ತು ಪಾರಾಯಣ ಪುಸ್ತಕಗಳ ಆತ್ಮವು ನಿಶ್ಚಯಪೂರ್ವಕವಾಗಿ ನಾಶಕರವಾಗುವುದಿಲ್ಲ ಎಂದು ಘೋಷಿಸುತ್ತದೆ. ಆದರೆ ಆತ್ಮದ ಮರಣದ ಬಗ್ಗೆ ದೇವರ ವಾಕ್ಯವು (Bible) ಬಾರಿ ಬಾರಿಯಾಗಿ ಪ್ರಕಟಿಸುತ್ತದೆ. ಉದಾಹರಣೆಗಾಗಿ, ನಮ್ಮ ಕರ್ತನು ಈಡುಬಲಿಯ ಬೆಲೆಯಾಗಿ ಸಮರ್ಪಿಸಲ್ಪಟ್ಟ ಸಂಧರ್ಭವನ್ನು **"ಆತನು ತನ್ನ ಆತ್ಮವನ್ನು ಪ್ರಾಯಶ್ಚಿತ್ತಯಜ್ಞವನ್ನಾಗಿ ಒಪ್ಪಿಸಿದನು"** (ಯೆಶಾಯ 53:10) **"ಆತನು ತನ್ನ ಪ್ರಾಣವನ್ನು ಧಾರೆಯೆರೆದನು"** (ಯೆಶಾಯ 53:10,12) ಎಂಬುದಾಗಿ ಬರೆಯಲ್ಪಟ್ಟಿದೆ. ಇದು ಅಗತ್ಯವಾಗಿತ್ತು. ಯಾಕೆಂದರೆ ಆದಾಮನ ಆತ್ಮಕ್ಕೆ ಮರಣದಂಡನೆ ವಿಧಿಸಲಾಗಿತ್ತು ಮತ್ತು ಮಾನವನಿಗೆ ನೀಡಲ್ಪಟ್ಟ ವಾಗ್ದಾನವೆಂದರೆ ಆತ್ಮದ ವಿಮೋಚನೆ ಅಥವಾ ಮರಣದ ಪ್ರಾಭಲ್ಯದಿಂದ ವಿಮೋಚನೆ. **"ದೇವರು ನನ್ನ ಪ್ರಾಣವನ್ನು ಮೃತ್ಯು ಹಸ್ತದಿಂದ ತಪ್ಪಿಸಿ ಸ್ವೀಕಾರ ಮಾಡುವನು"** (Sheol - ಮರಣ ಸ್ಥಿತಿ) (ಕೀರ್ತನೆ 49:15). ಮತ್ತು ನಾವು ಕಂಡುಕೊಂಡಂತೆ, ನಮ್ಮ ಎಲ್ಲಾ ಸ್ನೇಹಿತರೂ ಎಲ್ಲಾ ಮಾನವ ಜಾತಿಯೂ **"ಯೇಸುವಿನಲ್ಲಿ ನಿದ್ರೆಹೋಗಿರುವರು"** ಮತ್ತು ಅವರ ಎಲ್ಲಾ ಆತ್ಮಗಳೂ ಈ ರೀತಿಯಾಗಿ ಒಂದೇ ವಿಮೋಚನೆಯಲ್ಲಿ ವಿಮೋಚಿಸಲ್ಪಡುತ್ತವೆ – 1 ಥೆಸ. 4:14.

ಅಪೋಸ್ತಲನು ಇಲ್ಲಿ "ಕ್ರಿಸ್ತನಲ್ಲಿರುವವರು" ಎಂದು ಹೇಳುವಾಗ ಕೇವಲ ಭಕ್ತ ಸಂತರನ್ನು ಕುರಿತಾಗಿ ಮಾತ್ರವೇ

ಹೇಳಿರುವುದಿಲ್ಲ, ನೂತನ ಸೃಷ್ಟಿಗಳು ಎಂದು ಕರೆಯುವವರನ್ನು ಸಹಾ ಸೇರಿಸಿದ್ದಾನೆ ಎಂದು ನಾವು ಇಲ್ಲಿ ಗಮನಿಸುವವರಾಗಿದ್ದೇವೆ. ಅವರುಗಳು ಕ್ರಿಸ್ತನೊಂದಿಗೆ ಸಹಬಾಧ್ಯಸ್ಥರಾಗುವುದಕ್ಕಾಗಿ ಪವಿತ್ರಾತ್ಮನ ಮುಖಾಂತರ ಹುಟ್ಟಿದವರಾಗಿದ್ದಾರೆ ಮತ್ತು ಸಭೆಯೆಂಬ ಕ್ರಿಸ್ತನ ದೇಹದ ಅಂಗಾಂಗಗಳಾಗಿದ್ದಾರೆ. ಆದರೆ "ಯೇಸುವಿನಲ್ಲಿ ನಿದ್ರೆಹೋದವರಲ್ಲಿ" ಇಡೀ ಜನಾಂಗವೇ ಸೇರಿಕೊಂಡಿದೆ. ಯಾಕೆಂದರೆ ನಮ್ಮ ಕರ್ತನಾದ ಯೇಸುವು ಇಡೀ ಮಾನವ ಕುಲದ ಪಾಪನಿವಾರಣಾರ್ಥವಾಗಿ ತನ್ನನ್ನು ಸಮರ್ಪಿಸಿಕೊಂಡಿದ್ದಾನೆ ಮತ್ತು ಈ ಸಮರ್ಪಣೆಯ ಸದ್ಗುಣದ ಕಾರಣ ನಮ್ಮ ಜೀವದಾಯಕನು, ನಮ್ಮನ್ನ ಮಾತ್ರವಲ್ಲ ಸಮಸ್ತ ಲೋಕದವರ ಜೀವದಾಯಕನು, ಸಮಸ್ತ ಲೋಕದ ಪಾಪಗಳನ್ನು ನಿವಾರಣೆ ಮಾಡುವವನು – 1 ಯೋಹಾನ 2;2. 1 ತಿಮೋ. 2:4–6.

ಅಪೋಸ್ತಲನು ಈ ಆಲೋಚನೆಯನ್ನು ತನ್ನ ಮನಸ್ಸಿನಲ್ಲಿಟ್ಟುಕೊಂಡಿದ್ದನೆಂಬುದು ಈ ಸನ್ನಿವೇಶದಲ್ಲಿ ಪ್ರಕಟವಾಗುತ್ತದೆ. ಇಲ್ಲಿ ಆತನು ವಿಶ್ವಾಸಿಗಳನ್ನು ನಿರೀಕ್ಷೆಯಿಲ್ಲದವರಂತೆ ದುಃಖಪಡಬೇಡಿರೆಂದು ಎಚ್ಚರಿಸುತ್ತಾನೆ ಮತ್ತು ಈ ನಿರೀಕ್ಷೆಗೆ ಯೇಸು ಪಾಪಿಗಳಿಗಾಗಿ ಸತ್ತನು ಮತ್ತು ಮಾನವನ ನೀತಿನಿರ್ಣಯಕ್ಕಾಗಿ ಪುನಃ ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು ಎಂಬ ಸತ್ಯಸಂಗತಿಯನ್ನು ಕಾರಣವನ್ನಾಗಿ ನೀಡುತ್ತಾನೆ. ಈ ಕಾರಣದಿಂದ "ಯೇಸುವಿನಲ್ಲಿ ನಿದ್ರೆಹೋದ" ಎಲ್ಲರೂ ಅಥವಾ ಮರಣದಂಡನೆಯಿಂದ ನ್ಯಾಯಯುಕ್ತವಾಗಿ ಮುಕ್ತರಾದವರೆಲ್ಲರೂ, ಸತ್ತರೊಳಗಿಂದ ಜೀವಿತ ರಾಗುವುದಕ್ಕಾಗಿ ಯೇಸುಕ್ರಿಸ್ತನಿಗೆ ವಶವರ್ತಿ ಗಳಾದವರೆಲ್ಲರೂ ದೇವರ ಶಕ್ತಿಯ ಮೂಲಕವಾಗಿ ಸತ್ತವರೊಳಗಿಂದ ಬರಮಾಡಲ್ಪಡುವರು. ಅಪೋಸ್ತಲನು ಒಂದುವೇಳೆ ಕೇವಲ ಭಕ್ತರು ಮಾತ್ರವೇ ಯೇಸುವಿನ ಮೂಲಕವಾಗಿ ಆಶೀರ್ವದಿಸಲ್ಪಡುತ್ತಾರೆ ಎಂಬ ಅರ್ಥವನ್ನು ಹೊಂದಿದ್ದರೆ, ಅಂದಿನಿಂದ ಇಂದಿನವರೆಗೆ ವಿಶ್ವಾಸಿಗಳಿಗೆ ಆತನ ವಾಕ್ಯದಲ್ಲಿ ಯಾವುದೇ ಸಮಾಧಾನ ದೊರಕದು. ಯಾಕೆಂದರೆ ಅಂದಿನಿಂದ ಇಂದಿನವರೆಗಿನ ಹೆಚ್ಚಿನ ಸಂಖ್ಯೆಯ ನಂಬಿಗಸ್ಥ ಸ್ನೇಹಿತರನ್ನು ಭಕ್ತರೆಂದು ಕರೆಯುವಂತಿಲ್ಲ; ಸತ್ತವರೊಳಗಿಂದ ಜೀವಿತರಾಗುವುದು ಕೇವಲ ಭಕ್ತರಿಗೆ ಮಾತ್ರವೇ ಮೀಸಲಾದ ಆಶೀರ್ವಾದವಾಗಿರುತ್ತಿದ್ದರೆ ಅಂಥಾಃ ಅಲೋಚನೆಯು ಸಮಾಧಾನಕ್ಕೆ ಬದಲಾಗಿ ಅದರ ವ್ಯತಿರಿಕ್ತವಾಗಿ ಕೋಪ ಅಥವಾ ಸಂಕಟವೆಂದಾಗುತ್ತಿತ್ತು. ಆದರೆ ಅಪೋಸ್ತಲನು ಸಮಸ್ತ ಲೋಕವು ಯೇಸುವಿನಲ್ಲಿ ನಿದ್ರೆಹೋಗಿರುವುದನ್ನು ಸೂಚಿಸುತ್ತಾನೆ. ಈ ದೃಷ್ಟಿಕೋನವನ್ನು ಪರಲೋಕದ ತಂದೆಯ ಮತ್ತು ಆತನ ಸತ್ಯವಾಕ್ಯಗಳ ಮೂಲಕ ಅವರೆಲ್ಲರೂ ಆತನು ದೈವಿಕ ಒಳ್ಳೆಯತನದ ಉದ್ದ ಅಗಲ ಎತ್ತರಗಳಲ್ಲಿ ಸಂತೋಷಪಡಬೇಕೆಂಬ ತನ್ನ ಕೃಪಾಭರಿತವಾದ ಯೋಜನೆಗಳನ್ನು ತಿಳಿಸಿಕೊಟ್ಟಿರುವ ಆತನ ಪ್ರತಿಷ್ಠೆ ಹೊಂದಿದ ಜನರ ಹೊರತಾಗಿ ಯಾರೂ ಅರಿಯರು. "ನಿರೀಕ್ಷೆಯಿಲ್ಲದ ಅನ್ಯ ಜನರಂತೆ ದುಃಖಪಡಬೇಡಿರಿ" – 1 ಥೆಸ. 4:13.

ಸ್ವಾಭಾವಿಕ ನಿದ್ರೆಯೋಪಾದಿಯಲ್ಲಿ ಇದು ಕಂಡುಬರುವುದಾದಲ್ಲಿ ಸಂಪೂರ್ಣವಾದ ಪ್ರಜ್ಞಾಹೀನತೆ ಎಂಬ ಅರ್ಥ ನೀಡುತ್ತದೆ, ಅದರಂತೆ ಮರಣದಲ್ಲಿ, ನಿದ್ರೆ ಎಂಬ ರೂಪಕಾತ್ಮಕವು ಒಂದು ಸಂಪೂರ್ಣವಾದ ಪ್ರಜ್ಞಾಹೀನ ಕಾಲಾವಾಧಿಯಾಗಿದೆ ಇದಕ್ಕೂ ಹೆಚ್ಚಾಗಿ, ಇದು ತಂದೆಯ ಉದ್ದೇಶ ಮತ್ತು ಸಂರಕ್ಷಣೆಯ ಉದ್ದೇಶದ ಹೊರತಾಗಿ ಸಂಪೂರ್ಣವಾಗಿ ಅಸ್ತಿತ್ವವಿಲ್ಲದಿರುವಿಕೆಯ ಕಾಲಾವಧಿಯಾಗಿದೆ. ಆದುದರಿಂದ ನಿದ್ರೆಯಿಂದ ಎಚ್ಚೆತ್ತುಕೊಳ್ಳುವುದು ಪುನಃವಶಪಡಕೊಂಡವರಿಗೆ ಮರಣದಲ್ಲಿ ಪ್ರಜ್ಞೆಯನ್ನು ಕಳಕೊಂಡ ಕ್ಷಣದಿಂದಲೇ ಆ ಪ್ರಜ್ಞಾಹೀನ ಸ್ಥಿತಿಯಿಂದ ಚೇತರಿಸಿಕೊಳ್ಳುವುದರ ನಡುಗಾಲದ ಸಮಯದಲ್ಲಿ ಯಾವುದೇ ಗ್ರಹಣ ಶಕ್ತಿ ಇರುವುದಿಲ್ಲ. ಅರಿವು ಇರುವ ಗ್ರಹಣ ಶಕ್ತಿಯನ್ನು ಪರಿಗಣಿಸುವುದಾದರೆ ಎಚ್ಚರವಾಗುವ ಕ್ಷಣವು ಮರಣದ ನಂತರದ ಕ್ಷಣವಾಗುತ್ತದೆ.

ಇದೇ ಸ್ಥಿತಿಯನ್ನು ಗಾಯಗೊಂಡು ಮೆದುಳಿನ ಮೇಲೆ ಒತ್ತಡವಾದಾಗ ಮರಣ ಸಂಭವಿಸದಿದ್ದರೂ ಉಂಟಾಗುವ ತಾತ್ಕಾಲಿಕ ಪ್ರಜ್ಞಾಹೀನತೆಯಲ್ಲಿಯೂ ಗಮನಿಸ ಬಹುದಾಗಿದೆ. ಈ ರೀತಿಯ ಸ್ಥಿತಿಗಳಲ್ಲಿ, ಮೆದುಳಿಗೆ ಉಂಟಾಗಿರುವ ಒತ್ತಡವನ್ನು ಚಿಕಿತ್ಸೆಯ ಮೂಲಕ ಸರಿಪಡಿಸಿದಾಗ, ಆ ವ್ಯಕ್ತಿಯ ಪ್ರಜ್ಞಾವಸ್ಥೆಯು ಪುನಃ ಥಕ್ಕನೇ ಉಂಟಾಗುವುದನ್ನು ವಿವಿಧ ಸಂಧರ್ಭಗಳಲ್ಲಿ ಮೆದುಳಿನ ಆಘಾತದ ನಿಮಿತ್ತ ಆಲೋಚನೆಯು ಭಂಗಪಡಲ್ಪಟ್ಟು ನಿಂತುಹೋಗಿದ್ದ ಒಂದು ಮಾತನ್ನು ಪೂರ್ತಿ ಗೊಳಿಸುವುದಾಗಿ ತಿಳಿಯಲಾಗಿದೆ. ಅದರಂತೆ ದೈವಿಕ ಶಕ್ತಿಯು ಸಂಪೂರ್ಣವಾಗಿ ಪ್ರತಿಯೊಂದು ಮೆದುಳಿನ ಪ್ರತಿಯೊಂದು ಮಡಿಕೆಯನ್ನು ನಕಲು ಮಾಡಿ ಜೀವಕಳೆ ತುಂಬುತ್ತದೆ ಮತ್ತು ಅವನನ್ನು ಉಜ್ಜೀವಿಸಗೊಳಿಸುತ್ತದೆ. ಹೀಗಾಗಿ ಎಚ್ಚರಗೊಳ್ಳುವ ಸಮಯದಲ್ಲಿ ಮಾನವಕುಲದ ಪ್ರಪಂಚವು ಸಾಮಾನ್ಯವಾಗಿ ಮರಣಹೊಂದುವ ಸಮಯದಲ್ಲಿ ನುಡಿವ ಅದೇ ಮಾತುಗಳೊಡನೆ ಮತ್ತು ಆಲೋಚನೆಗಳೊಡನೆ ಪುನಃಶ್ಚೇತನಗೊಳ್ಳುತ್ತದೆ. ಆದರೆ ನಾವಿಲ್ಲಿ ಸಾಮಾನ್ಯವಾಗಿ ಲೋಕದವರನ್ನು ಸೂಚಿಸುತ್ತಿದ್ದೇವೆಂಬುದನ್ನು ಮರೆಯಬಾರದು. ಲೋಕದಿಂದ ಆಯ್ದುಕೊಂಡ ವಿಶೇಷ ವರ್ಗದವರು, ಅಂದರೆ, ಸಭೆ, ಕ್ರಿಸ್ತನ ಶರೀರ, ಮೊದಲನೆಯ ಪುನರುತ್ಥಾನದಲ್ಲಿ ಪಾಲ್ಗೊಳ್ಳುವವರನ್ನು ಕುರಿತು

ಹೇಳುತ್ತಿಲ್ಲ. ಅವರಿಗೆ ಹಲವಾರು ಅಂಶಗಳಲ್ಲಿ ಭಿನ್ನವಾದ ಅನುಭವಗಳಾಗುತ್ತವೆ.

ಆದರೆ, ಆದಾಮನ ಮರಣವು, ದೈವಿಕ ಯೋಜನೆ ಮತ್ತು ಈಡುಬಲಿಯ ಮೂಲಕ, ನಾಶವಾಗುವುದರ ಬದಲಿಗೆ ತಾತ್ಕಾಲಿಕವಾಗಿ ಜೀವಿಸುವವರಿಂದ ತಡೆ ಅಂದರೆ ನಿದ್ರೆ ಎಂದು ಕರೆಯಲ್ಪಡುವದು. ಪರಂತು ನಾವು ದೇವರ ವಾಕ್ಯವು ಬಹು ನಿರ್ದಿಷ್ಟವಾಗಿ ತಿಳಿಸುತ್ತದೆ. ಪುನಃವಶಪಡಕೊಂಡಾಗ ಅಥವಾ ಮರಣ ನಿದ್ರೆಯಿಂದ ಎಚ್ಚತ್ತುಕೊಂಡ ನಂತರದಲ್ಲಿ ಪ್ರತಿ ವ್ಯಕ್ತಿಯು ಮಹಿಮೆಯುಳ್ಳ ಯೇಸುವಿನ ಮಾರ್ಗದರ್ಶನ ಮತ್ತು ಆಡಳಿತದಲ್ಲಿ ಸಂಪೂರ್ಣ ಸಮರ್ಪಕತೆಗೆ ಮತ್ತು ಜೀವಿತಕ್ಕೆ ಹಿಂತಿರುಗುತ್ತಾನೋ ಅಥವಾ ಆತನು ಇಚ್ಛಾ ಪೂರ್ವಕವಾಗಿ ಅಥವಾ ಮೊಂಡತನದಿಂದ ಪಾಪದ ಮಾರ್ಗವನ್ನು ಆರಿಸಿಕೊಳ್ಳುತ್ತಾನೋ ಎಂಬುದು ಪ್ರತಿಯೊಂದು ವ್ಯಕ್ತಿಯ ಮೇಲೆ ಅವಲಂಬಿಸಿರುತ್ತದೆ. ಆತನು ಎರಡನೆಯದನ್ನು ಆರಿಸಿಕೊಳ್ಳುವುದಾದರೆ ಆತನಿಗೆ ಆದಾಮನಿಗಾಗಿ ನಿಗದಿಪಡಿಸಲ್ಪಟ್ಟ ಶಿಕ್ಷೆ ಅಂದರೆ ಮರಣವುಂಟಾಗುತ್ತದೆ. ಆದರೆ, ಅದು ಇನ್ನು ಮುಂದೆ ಆದಾಮನ ಪಾಪ ದಂಡನೆಯಾಗಿದ್ದ ಆದಾಮನ ಮರಣವೆನಿಸಿಕೊಳ್ಳುವುದಿಲ್ಲ, ಅದು ಎರಡನೆಯ ಮರಣವಾಗಿದೆ. ಈ ಎರಡನೆಯ ಮರಣವನ್ನು ಎಲ್ಲಿಯೂ ನಿದ್ರೆ ಎಂಬುದಾಗಿ ಕರೆದಿರುವುದಿಲ್ಲ ಮತ್ತು ಇದರಿಂದ ಪುನಃ ಎಚ್ಚರವಾಗುತ್ತದೆ ಎಂಬ ಕಿಂಚಿತ್ತೂ ಮಾಹಿತಿ ಎಲ್ಲಿಯೂ ದೊರೆಯುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಇದನ್ನು **"ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮ ವೈಭವಕ್ಕೂ ದೂರವಾಗಿರುವ ನಿತ್ಯನಾಶನ"** (2 ಥೆಸ. 1:9 ನೋಡಿರಿ) ಎಂದು ಕರೆಯಲಾಗುವುದು.

ಮಿಲಿಯಾಂತರ ಯುಗದಲ್ಲಿ ವಿಮೋಚನೆಗೊಂಡ ಮತ್ತು ಎಚ್ಚರಗೊಂಡ ವರ್ಗ, ಸಾಮಾನ್ಯವಾಗಿ ಶೋಧನೆಗೊಳಗಾಗುವರು. ಸತ್ಯವೇದವು ಹೇಳುವಂತೆ **"ಪಾಪಮಾಡುವವನೇ ಸಾಯುವನು"** ಎಂಬ (ಯೆಹೆಜ್ಕೇಲ 18:20) ಈ ವಾಕ್ಯಭಾಗವು ಸಾಮಾನ್ಯವಾಗಿ ಪ್ರಸ್ತುತ ಸಮಯಕ್ಕೆ ಅನ್ವಯವಾಗುವುದಿಲ್ಲ ಎಂಬುದು ಕೆಳಗಣ ಮೂರು ಯೋಗ್ಯ ವಿಷಯಗಳಿಂದ ನಮಗೆ ವೇದ್ಯವಾಗುತ್ತದೆ:

(1) ಪ್ರಸ್ತುತ ಸಮಯದಲ್ಲಿ ಭಕ್ತಿವಂತರೂ, ಪಾಪಿಗಳೂ ಸಾಯುವುದರಿಂದ ಇದು ಈಗ ಅರ್ಥಹೀನವಾಗಿದೆ.

(2) ಇದನ್ನು ಎರಡನೆಯ ವಾಕ್ಯದ ರೂಪದಲ್ಲಿ ಹೇಳಲಾಗಿದೆ ಮತ್ತು ಇದು ವ್ಯಕ್ತಿಗತ ನಡವಳಿಕೆಯ ಮೇಲೆ ಆತುಕೊಂಡಿದೆ ಮತ್ತು ಇದನ್ನು ಪ್ರಸ್ತುತ ಸಮಯಕ್ಕೆ ಅನ್ವಯಿಸಲಾಗದು. ಯಾಕೆಂದರೆ ಒಬ್ಬ ಮನುಷ್ಯನ ಅವಿಧೇಯತೆಯಿಂದ ಮರಣದಂಡನೆಯು ತಮ್ಮ ಮೇಲೆ ಬಂದಿರುವ ಕಾರಣ ಎಲ್ಲರೂ ಮರಣಕ್ಕೆ ಒಳಗಾಗುವವರಾಗಿದ್ದಾರೆ ಮತ್ತು ಇದು ಪರೋಕ್ಷವಾಗಿ ಎಲ್ಲಾ ಜನಾಂಗಗಳ ಮೇಲೆ ಪರಿಣಾಮ ಬೀರುವುದಾಗಿದೆ – ರೋಮಾ. 5:12.

(3) ಸಾಮಾನ್ಯವಾಗಿ ಈ ದಿನಗಳಲ್ಲಿ ಪ್ರಚಲಿತ ದಲ್ಲಿರುವಂತೆ ಈ ಪರಿಚ್ಛೇದವು ಆದಾಮನ ಪಾಪದಿಂದ ವಿಮುಕ್ತಿಹೊಂದಿದವರಿಗೆ ಸೂಚಿತ ವಾಗುತ್ತದೆಂದು ಈ ಸನ್ನಿವೇಶವು ನಮಗೆ ತೋರಿಸಿಕೊಡುತ್ತದೆ. ಈ ಕಾರಣದಿಂದ ಇದರ ವಿಶೇಷವಾದ ಅನ್ವಯವು ಮುಂಬರುವ ಮಿಲಿಯಾಂತರ ಯುಗಕ್ಕೆ ಸಂಬಂಧಿಸಿರುತ್ತದೆ. ಈ ಸಂಬಂಧಗಳು ಯೆಹೂದ್ಯ ಯುಗದ ಒಡಂಬಡಿಕೆಯ ಧರ್ಮಶಾಸ್ತ್ರವನ್ನು ಮರೆಯದೆ ಮಿಲಿಯಾಂತರ ಯುಗದ ಒಡಂಬಡಿಕೆಗೆ ಹೋಲಿಕೆ ಎಂಬುದನ್ನು ಗಮನಿಸಬೇಕಾಗುತ್ತದೆ. ಆದರೆ ಎರಡನೆಯದಕ್ಕೆ ಉತ್ತಮವಾದ ಮಧ್ಯಸ್ಥಗಾರನಿದ್ದಾನೆ ಮತ್ತು ನೀತಿವಂತರಾಗಿ ನಡೆಯ ಬಯಸುವ ಎಲ್ಲರಿಗೂ ಸಹಾಯ ಮತ್ತು ನೆರವನ್ನು ನೀಡಲು ಸಿದ್ಧನಿದ್ದಾನೆ. ಅನಪೇಕ್ಷಿತ ಕುಂದುಕೊರತೆಗಳಿಗೆ ದೋಷವನ್ನು ಹೊರಿಸುವುದಿಲ್ಲ.

ಈ ಸನ್ನಿವೇಶವು ಪ್ರಕಟಿಸುವುದೇನೆಂದರೆ, ಇನ್ನು ಮುಂದೆ **"ತಂದೆಗಳು ಹುಳಿದ್ರಾಕ್ಷೆಯನ್ನು ತಿಂದರು, ಮಕ್ಕಳ ಹಲ್ಲುಗಳು ಚಳಿತು ಹೋಗಿವೆ"** (ಯೆಹೆಜ್ಕೇಲ 18:2)" ಎಂಬ ಗಾದೆಯ ಮಾತು ಇನ್ನು ಮುಂದೆ ಇರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಪ್ರತಿಯೊಂದು ಆತ್ಮವು ತನ್ನ ಬಗ್ಗೆ ದೇವರಿಗೆ ಜವಾಬ್ದಾರಿಯುಳ್ಳದ್ದಾಗಿದೆ ಮತ್ತು **"ಪಾಪಮಾಡುವವನೇ ಸಾಯುವನು; ಮಗನು ತಂದೆಯ ದೋಷಫಲವನ್ನು ಅನುಭವಿಸನು, ತಂದೆಯು ಮಗನ ದೋಷಫಲವನ್ನು ಅನುಭವಿಸನು". ಶಿಷ್ಟನ ಶಿಷ್ಟತನದ ಫಲವು ಶಿಷ್ಟನದೇ,** ದುಷ್ಟನ ದುಷ್ಟತನದ ಫಲವು ದುಷ್ಟನದೇ (ಯೆಹೆಜ್ಕೇಲ 18:2,4,20). ಈ ಕಾಲವು ಈಗ ಇನ್ನೂ ಬಂದಿಲ್ಲವೆಂಬುದು ಸ್ಪಷ್ಟವಾಗಿದೆ. ಮಕ್ಕಳ ಹಲ್ಲುಗಳು ಅವರ ತಂದೆಯರು ಹುಳಿದ್ರಾಕ್ಷೆಯನ್ನು ತಿಂದ ಕಾರಣ ಇನ್ನೂ ಚಳಿತುಹೋಗುತ್ತಿವೆ; ನಾವಿನ್ನೂ ವಂಶಪಾರಂಪರ್ಯದ ನಿಯಮದಲ್ಲೇ ಇದ್ದೇವೆ; ಎಲ್ಲರೂ ಇನ್ನೂ ಆದಾಮನ ಪಾಪದ ಕಾರಣ ಸಾಯುತ್ತಲೇ ಇದ್ದಾರೆ ಹೊರತು ವೈಯುಕ್ತಿಕ ಪಾಪದ ದೆಸೆಯಿಂದಲ್ಲ. ಇದರ ಪುರಾವೆಯಾಗಿ ಮನುಷ್ಯ ಸಂತತಿಯ ಸುಮಾರು ಮೂರನೆಯ ಒಂದು ಭಾಗ ಶೈಶ್ಯಾವಸ್ಥೆಯಲ್ಲಿಯೇ ಅಂದರೆ ಯಾವುದೇ ತಿಳಿವಳಿಕೆ ಅಥವಾ ಜವಾಬ್ದಾರಿಗಳನ್ನು ಸ್ವಂತ ಹೊರುವ ವಯಸ್ಸನ್ನು ತಲುಪದೇ ಮರಣಿಸುತ್ತಿವುದು ವಿವಾದಾತೀತ ಸತ್ಯವಾಗಿದೆ ಎಂಬುದನ್ನು ಗಮನಿಸಬಹುದು. ಪ್ರಾಣ ಸಂಕಟ ಪಡುವ ಅಥವಾ ಮರಣಿಸಲಿರುವ ಕೆಲವೇ ದಿನಗಳ ಅಥವಾ ತಿಂಗಳ ಎಳೆಯ ಶಿಶುಗಳು ತಮ್ಮ ಸ್ವಂತ ಪಾಪಗಳ

ದೆಸೆಯಿಂದ ಸಾಯದೇ ಅವುಗಳು ಆದಾಮನ ಸಂತತಿಯ ಸದಸ್ಯರುಗಳಾಗುವುದರಿಂದ ಸಾಯುತ್ತಿದ್ದಾವೆಂಬುದು ಯಾರಿಗೆ ಕಾಣುವುದಿಲ್ಲ? ನಮ್ಮ ಮೂಲ ತಂದೆಯಾದ ಆದಾಮನಿಗೆ **"ನೀನು ಮಣ್ಣೇ, ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ"** (ಆದಿ 3:19) ಎಂಬ ಶಾಪಕ್ಕೆ ಆತನ ಸಂತತಿಯುವರು ತುತ್ತಾಗಿದ್ದಾರೆ. ಇದು ವಂಶಪಾರಂಪರ್ಯವಾಗಿ ಶಾಪದಲ್ಲಿ ಪಾಲು ತೆಗೆದುಕೊಂಡಿದೆ ಮತ್ತು ಕ್ರಿಸ್ತನ ಅಮೂಲ್ಯವಾದ ಈಡುಬಲಿಯ ಮೂಲಕ ಕಲ್ವಾರಿಯಲ್ಲಿ ಸಂಪಾದಿಸಲ್ಪಟ್ಟ ಪುನಃ ಜೀವಿತರಾಗಿ ಎದ್ದು ಬರುವ ಆಶೀರ್ವಾದಕ್ಕೂ ಪಾತ್ರವಾಗಿದೆ.

ನಾವು ಯೆರೆಮೀಯ 31:29–34ರಲ್ಲಿ ಯೆಹೆಜ್ಕೇಲನು ಹೇಳಿದಂಥಃ ಷರತ್ತಿಗನುಸಾರವಾದ ಮತ್ತೊಂದು ಷರತ್ತನ್ನು ನೋಡುತ್ತೇವೆ. ಯೆರೆಮೀಯನ ಗ್ರಂಥದಲ್ಲಿ ಮಾತ್ರವೇ ನಾವು ಹೆಚ್ಚು ವಿವರಗಳನ್ನು ಕಾಣಬಹುದಾಗಿದೆ. ಈ ಶರತ್ತುಗಳು ಪ್ರಸ್ತುತ ಸಮಯಕ್ಕೆ ಅನ್ವಯಿಸುವುದಿಲ್ಲ, ಆದರೆ ಇದು ಭವಿಷದ್ ಕಾಲವೊಂದಕ್ಕೆ ಅನ್ವಯಿಸುತ್ತದೆ ಎಂಬುದನ್ನು ತೋರಿಸುವಂತೆ ಯೆರೆಮೀಯನು ಹೀಗೆ ಬರೆಯುತ್ತಾನೆ :

**"ತಂದೆಗಳು ಹುಳಿದ್ರಾಕ್ಷೆಯನ್ನು ತಿಂದರು, ಮಕ್ಕಳ ಹಲ್ಲುಗಳು ಚಳಿತುಹೋಗಿವೆ ಎಂದು ಆ ಕಾಲದಲ್ಲಿ ಜನರು ಮತ್ತೆ ಅನ್ನರು. ಸಾಯತಕ್ಕವನು ತನ್ನ ದೋಷದಿಂದ ಸಾಯುವನು. ಹುಳಿದ್ರಾಕ್ಷೆಯನ್ನು ತಿನ್ನುವವನ ಹಲ್ಲುಗಳೇ ಚಳಿತುಹೋಗುವುವು"** – ಯೆರೆಮೀಯ 31:29–34.

**"ಆ ಕಾಲದಲ್ಲಿ"** ಎಂಬ ಮಾತುಗಳು ಸ್ಪಷ್ಟವಾಗಿ ಕ್ರಿಸ್ತನ ಆಡಳಿತದಲ್ಲಿ ಪುನಃವಶಪಡಿಸುವ ಭವಿಷ್ಯದ್ ಕಾಲವನ್ನು ಸೂಚಿಸುವುದಾಗಿದೆಯೇ ಹೊರತು ಖಂಡಿತವಾಗಿಯೂ ಪಾಪ ಮತ್ತು ಮರಣದಿಂದ ತುಂಬಿದ ಪ್ರಸ್ತುತ ಕಾಲವನ್ನಲ್ಲ. ಪ್ರವಾದಿಯು ಮಿಲಿಯಾಂತರ ಯುಗದ ಇತರ ಲಕ್ಷಣಗಳ ಬಗ್ಗೆಯೂ ಹೇಳಿದ್ದಾನೆ ಎಂಬುದನ್ನು ಗಮನಿಸಬೇಕು. ಆತನು ಇಸ್ರಾಯೇಲ್ಯ ಮತ್ತು ಯೆಹೂದ್ಯರಲ್ಲಿ ದೃಢಪಡಲಿರುವ ನೂತನ ಒಡಂಬಡಿಕೆಯ ಬಗ್ಗೆಯೂ ಮಾತನಾಡುತ್ತಾನೆ. ಇದು ನಿತ್ಯನಿರಂತರವಾದ ಒಡಂಬಡಿಕೆಯಾಗಿದ್ದು ಅದರಲ್ಲಿ ಅವರು ಕಾಲದಿಂದ ನಿರೀಕ್ಷಿಸುತ್ತಿರುವ ಅಬ್ರಹಾಮನಿಗೆ ನೀಡಲ್ಪಟ್ಟ ವಾಗ್ದಾನ ಮತ್ತು ಆಶೀರ್ವಾದಗಳನ್ನು ಹೊಂದಿಕೊಳ್ಳಲಿರುವರು – ರೋಮಾ. 11:26–31 ಹೋಲಿಸಿ.

ಆದಾಮನ ಮರಣಶಾಪದಿಂದ ವಿಮುಕ್ತರಾದವರೆಲ್ಲರಿಗೂ ಅವರು ದೇವರ ಕೃಪೆಯನ್ನು ಅರಿತುಕೊಂಡ ನಂತರವೂ ದೇವರ ಕೃಪೆಯನ್ನು ವ್ಯರ್ಥ ಮಾಡಿಕೊಂಡರೆ ಮರಣವು ಪುನಃ ಪಾಪಕ್ಕೆ ನೀಡಲ್ಪಡುವ ಶಿಕ್ಷೆಯಾಗಿದೆ ಎಂಬ ಇದೇ ಆಲೋಚನೆಯು ನಮ್ಮ ಕರ್ತನ ಈ ಮಾತುಗಳಲ್ಲಿ ಕಂಡು ಬರುತ್ತದೆ – **"ಇದಲ್ಲದೆ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ. ಆತ್ಮ ದೇಹ ಎರಡನ್ನೂ ಕೂಡಾ ನರಕದಲ್ಲಿ ಹಾಕಿ ನಾಶಮಾಡ ಬಲ್ಲಾತನಿಗೇ ಹೆದರಿರಿ"** (ಮತ್ತಾಯ 10:28) [ಪ್ರಸ್ತುತ ಜೀವವನ್ನು ತೆಗೆಯುವವರಿಗೆ ಹೆದರಬೇಡಿರಿ, ಯಾಕೆಂದರೆ ಇದು ಈಗಾಗಲೇ ಮರಣ ಶಾಪಕ್ಕೆ ತುತ್ತಾಗಿದೆ, ಹೇಗೂ, ನೀವು ಇದರಿಂದ ವಿಮೋಚಿಸಲ್ಪಟ್ಟಿದ್ದೀರೆಂಬುದನ್ನು ನೆನಪುಮಾಡಿರಿ, ಭವಿಷ್ಯದ್ ಜೀವಿತವು ನಿಮಗೆ ಸಾಧ್ಯವಾಗಿದೆ. ಕ್ರಿಸ್ತನ ವಿಮೋಚನೆಯ ಮೂಲಕ ದೇವರು ನಿಮಗೆ ಒದಗಿಸಿರುವ ಇದನ್ನು ಯಾರೂ ನಿಮ್ಮಿಂದ ಕಸಿದುಕೊಳ್ಳಲಾರರು. ಆದರೆ ದೇಹ ಮತ್ತು ಆತ್ಮವನ್ನು ಗೆಹನ್ನಾ ಎಂಬ ನರಕದಲ್ಲಿ ಹಾಕಬಲ್ಲಾತನಿಗೆ ಹೆದರಿರಿ]. ಇಲ್ಲಿ ಆತ್ಮವನ್ನು ನಾಶಪಡಿಸಬಲ್ಲ ಪ್ರಶ್ನಾತೀತವಾದ ಅಧಿಕಾರ ಹೊಂದಿದ ದೇವರ ಶಕ್ತಿಯು ಸಕಾರಾತ್ಮಕವಾಗಿ ವ್ಯಕ್ತವಾಗಿದೆ. ದೇವರ ವಾಕ್ಯವನ್ನು ತಿರುಚಬಲ್ಲ ದೈವಜ್ಞಾನ ಶಾಸ್ತ್ರವು "ದೇವರು ಗೆಹನ್ನಾದಲ್ಲಿ ಆತ್ಮದ ಸಂತೋಷವನ್ನಷ್ಟೇ ನಾಶಪಡಿಸುತ್ತಾನೆ ಆದರೆ ಆತ್ಮವನ್ನೇ ನಾಶಪಡಿಸಲು ಅವನಿಂದ ಸಾಧ್ಯವಿಲ್ಲ" ಎಂದು ಹೇಳುತ್ತದೆಂಬುದನ್ನು ನಾವು ಬಲ್ಲವರಾಗಿದ್ದೇವೆ. ಇದು ದೇವರ ವಾಕ್ಯವನ್ನು ತಿರುಚುವುದಾಗಿದೆ ಮತ್ತು ದೇವರ ವಾಕ್ಯವನ್ನು ವಿರೂಪಗೊಳಿಸುವವರಿಗೆ ಬರುವ ದುಷ್ಪರಿಣಾಮದಿಂದ ಅವರು ತಪ್ಪಿಸಿಕೊಳ್ಳಲಾರರು ಎಂದು ನಾವು ಇದಕ್ಕೆ ಉತ್ತರಿಸುವವರಾಗಿದ್ದೇವೆ. ಇಲ್ಲಿ ಉಪಯೋಗಿಸಲ್ಪಟ್ಟಿರುವ 'ಗೆಹನ್ನಾ' ಎಂಬ ಪದವು 'ಎರಡನೆಯ ಮರಣ'ವನ್ನು ಅಂದರೆ ದೇವರ ಮಹಾ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬರಿಗೂ ಉಂಟಾಗುವ ಭಯಂಕರವಾದ ನಾಶನವನ್ನು ಸೂಚಿಸುವುದಾಗಿದೆ ಎಂಬುದನ್ನು ನಾವು ಬೇರೊಂದೆಡೆಯಲ್ಲಿ (The Truth about Hell ಎಂಬ ಲೇಖನದಲ್ಲಿ) ತೋರಿಸಿಕೊಡುವವರಾಗಿದ್ದೇವೆ. ಆತನು ಸೂಕ್ತ ಸಮಯದಲ್ಲಿ ಎಲ್ಲಾ ಜನರಿಗೂ ಸರಳವಾದ ರೀತಿಯಲ್ಲಿ ಮಾತನಾಡುತ್ತಾನೆ ಮತ್ತು ಆತನು ಸಾಮ್ಯಗಳ ಮೂಲಕ ಮತ್ತು ಗುಪ್ತವಾದ ಮಾತುಗಳ ಮೂಲಕ ಮಾತಾಡಿ ಸಭೆಯವರನ್ನು ಮಾತ್ರ ಎಚ್ಚರಿಸಿದ್ದಾನೆ – ಅ.ಕೃ. 3:23; ಮತ್ತಾಯ 13:11.

ಆದುದರಿಂದ ದೇವರ ವಾಕ್ಯವು ಪ್ರಶ್ನಾತೀತವಾಗಿ ಮಾನವನು ಒಬ್ಬ ವ್ಯಕ್ತಿ ಅಥವಾ ಆತ್ಮವಾಗಿದ್ದಾನೆ ಮತ್ತು ದೇವರ ವ್ಯವಸ್ಥೆಯಲ್ಲಿ ಆತನ ಅಸ್ಥಿತ್ವದ ಹಕ್ಕು ಪಾಪದ ದೆಸೆಯಿಂದ ಮುಟ್ಟುಗೋಲು ಹಾಕಲ್ಪಟ್ಟಿತ್ತು ಮತ್ತು ಆತನು ಈಗ ಆ ಮರಣದ ಶಿಕ್ಷೆಯ ಅಥವಾ ಶಾಪಕ್ಕೆ ಒಳಗಾಗಿದ್ದಾನೆ; ಮಾನವನ ಎಲ್ಲಾ ಹಕ್ಕುಗಳು ಯೇಸುಕ್ರಿಸ್ತನಿಂದ ಕೊಂಡುಕೊಳ್ಳಲ್ಪಟ್ಟಿವೆ. ಯಾಕೆಂದರೆ ಆತನು ಎಲ್ಲರ ಸಲುವಾಗಿ ಈಡುಬಲಿಯಾಗಿ ತನ್ನನ್ನು

ಸಮರ್ಪಿಸಿಕೊಂಡಿದ್ದಾನೆ; ಇದರ ಪರಿಣಾಮವಾಗಿ ಮರಣವನ್ನು ಮರಣವು, ಉಗ್ರವಾದ ನಾಶನವೆಂದು ಎಣಿಸಬೇಕಾದ್ದಿಲ್ಲ. ಅದು ಕೇವಲ ತಾತ್ಕಾಲಿಕವಾದ ನಿದ್ರೆಯಾಗಿದೆ. ಇದರಿಂದ ಮಾನವ ಕುಲದ ಪ್ರಪಂಚವು ತನ್ನ ವಿಮೋಚಕನ ಮೂಲಕ ಯುಗಾಂತರ ಕಾಲದ ಮುಂಜಾವಿನಲ್ಲಿ ಎಬ್ಬಿಸಲ್ಪಡುವವರು ಎಂಬುದಾಗಿ ನಾವೀಗ ಹಕ್ಕಿನ ಹೇಳಿಕೆಯನ್ನು ನೀಡುವವರಾಗಿದ್ದೇವೆ.

## ತಪ್ಪು ಭಾಷಾಂತರಗಳಿಂದ ಉಂಟಾಗಿರುವ ಗೊಂದಲಗಳು

## Confusion Through Mistranslations

ಆತ್ಮವೆಂದರೇನು? ನಿಜವಾದ ಮನುಷ್ಯನೆಂದರೆ ಏನು? ಎಂಬುದರ ಬಗ್ಗೆ ದಟ್ಟವಾದ ತಪ್ಪು ತಿಳುವಳಿಕೆಗಳನ್ನು ಹೊಂದಿದ್ದು ಆಂಗ್ಲ ಭಾಷೆಯ ನಮ್ಮ ಸಾಮಾನ್ಯ ಭಾಷಾಂತರಕಾರರು ನಮ್ಮನ್ನು ಭಯಂಕರವಾಗಿ ಗೊಂದಲಕ್ಕೊಳಪಡಿಸಿದ್ದರೆ ನಾವು ಆಶ್ಚರ್ಯ ಪಡಬೇಕಾದುದ್ದಿಲ್ಲ. ಆ ಪ್ರಸ್ತಾಪದ ಬಗ್ಗೆ ಅವರಿಗಿರುವ ಪೂರ್ವ ಕಲ್ಪನೆಯು ಅವರಿಗೆ ಈ ರೀತಿಯಲ್ಲಿ ಭಾಷಾಂತರಿಸಲು ಒತ್ತಾಯಪಡಿಸಿದೆ ಮತ್ತು ಅವರು ಆಂಗ್ಲ ಓದುಗರನ್ನು ಸಹಾ ಹತ್ತು ಪಟ್ಟು ಗೊಂದಲ ಕ್ಕೊಳಪಡಿಸಿದ್ದಾರೆ. – (1) ಪ್ರಸ್ತಾಪದ ಬಗ್ಗೆ ತಪ್ಪಾದ ಬೋಧನೆಗಳು (2) ಆ ತಪ್ಪು ಬೋಧನೆಗಳನ್ನು ಬೆಂಬಲಿಸುವಂತೆ ಮಾಡಲಾದ ತಪ್ಪಾದ ಭಾಷಾಂತರಗಳು ಈ ರೀತಿಯಲ್ಲಿ ದ್ವಿಗುಣವಾಗಿ ಅವುಗಳ ಸರಿಯಾದ ಅರ್ಥವನ್ನು ತಿರುಚಿಹಾಕಿದ್ದಾರೆ ಮತ್ತು ನಿಜವಾದ ಅರ್ಥವನ್ನು ಮುಚ್ಚಿಹಾಕಿದ್ದಾರೆ.

ಹೀಗಿದ್ದಾಗ್ಯೂ, ನಾವೀಗ ದೇವರ ಕೃಪೆಯಿಂದ ಪ್ರತಿಯೊಂದು ವಿಚಾರಗಳಲ್ಲೂ ಒದಗಿಸಲಾಗುವ ಸಹಾಯಗಳುಳ್ಳ ದಿನಗಳಲ್ಲಿ ಜೀವಿಸುತ್ತಿದ್ದೇವೆ. ಹೀಗಾಗಿ ಸಾಧಾರಣ ವಿದ್ಯೆಯುಳ್ಳ ಯಾವುದೇ ಪುರುಷ ಅಥವಾ ಸ್ತ್ರೀಯು, ಅವರ ಮುಂದಿರುವ ಸಹಾಯದಿಂದ, ಸಮಗ್ರವಾದ ಪ್ರಸ್ತಾಪದ ಬಗ್ಗೆ ಉತ್ತಮ ದೃಷ್ಟಿಕೋನ ಹೊಂದಿಕೊಳ್ಳ ಬಹುದಾಗಿದೆ. ಆಂಗ್ಲ ಭಾಷೆಯ ಸಾಧಾರಣ ಭಾಷಾಂತರದ ಸ್ಪಷ್ಟವಾದ ಒಳನೋಟವನ್ನು ಕಂಡುಕೊಳ್ಳಲು ಮೂರು ವಿಧವಾದ ಕಾರ್ಯಗಳು ಈಗ ಲಭ್ಯವಿವೆ. ಇವು ಅವುಗಳು ಇಬ್ರಿಯ ಮತ್ತು ಗ್ರೀಕ್ ಮೂಲ ಭಾಷೆಗಳಿಂದ ಯಾವ ರೀತಿಯಲ್ಲಿ ಭಾಷಾಂತರಿಸಲ್ಪಟ್ಟವು ಎಂಬುದನ್ನು ಸರಿಯಾಗಿ ತೋರಿಸಿಕೊಡುತ್ತವೆ. ಅವುಗಳೆಂದರೆ – (1) The Englishman's Hebrew and Greek Concordance of the Holy Scriptures [UnSectarian] (2) Professor Young's Analytic concordance to the Bible [Presbyterian] (3) Dr Strong's Exhaustive Concordance [Methodist]. ಬೈಬಲ್ ಅನುಕ್ರಮಣಿಕೆ ಹೊಂದಾಣಿಕೆ ಕೃತಿಗಳಾದ ಇವು ಮೂರೂ ದೇವರ ವಾಕ್ಯದ ಪ್ರತಿಯೊಂದು ಶಬ್ದವನ್ನೂ ಅದು ಯಾವ ಮೂಲದಿಂದ ಬಂದಿದೆ ಎಂಬುದನ್ನು ತೋರಿಸಿಕೊಡುತ್ತವೆ. ವಿವಿಧ concordance ಗಳು ಸತ್ಯವೇದ ಹೊಂದಾಣಿಕೆಯ ಅನುಕ್ರಮಣ ಕೃತಿ ಯಾವ ಮತೀಯ ಪಂಗಡಗಳಿಗೆ ಸೇರಿದೆ ಎಂಬುದನ್ನು ನಾವು ತೋರಿಸಿರುವೆವಾದರೂ ನಾವು ಇದುವರೆಗೆ ಗಮನಿಸಿರುವಂತೆ ಅವುಗಳ ಖಚಿತತೆಯಲ್ಲಿ ಯಾವುದೇ ಪಂಗಡ ಪಕ್ಷಪಾತಗಳು ಕಂಡುಬಂದಿಲ್ಲ. ಒಂದು ರೀತಿಯ ವೈವಿಧ್ಯಮಯ ರೀತಿಯಲ್ಲಿ ಇವನ್ನು ತಂದದ್ದಾಗಿದ್ದು, ಅವುಗಳ ಸಾಕ್ಷಿಯು ಸಾಮರಸ್ಯವುಳ್ಳದ್ದೂ ಮತ್ತು ನಿಶ್ಚಿತಾಭಿಪ್ರಾಯವುಳ್ಳವುಗಳೂ ಆಗಿವೆ. ಅವುಗಳಲ್ಲಿರುವ ವ್ಯತ್ಯಾಸಗಳು ಅನುಕೂಲತೆ ಮತ್ತು ಉಪಯುಕ್ತತೆಗೆ ಮಾತ್ರವೇ ಸಂಬಂಧಿಸಿವೆ.

ಈ ನಿರ್ಧಿಷ್ಟ ಪ್ರಮಾಣದ ಕಾರ್ಯವನ್ನು ಪರೀಕ್ಷಿಸುವಾಗ ನಮಗೇನು ತೋರಿಬರುತ್ತದೆ ?

1. ಇಬ್ರಿಯ ಪದವಾದ neh-pesh ಎಂಬುದನ್ನು ಸಾಮಾನ್ಯವಾಗಿ "Soul" ಹಳೆಒಡಂಬಡಿಕೆಯಲ್ಲಿ 436 ಬಾರಿ ತರ್ಜುಮೆಗೊಳಿಸಲಾಗಿದೆ. ಇದಕ್ಕೆ Sentient being (ಚೇತನಯುಕ್ತವಾದ ಅಸ್ತಿತ್ವದ ಜೀವಿ) ಎಂಬ ಅರ್ಥವಿದೆ. ಇದನ್ನು 36 ವಿಧಗಳಲ್ಲಿ ಭಾಷಾಂತರಗೊಳಿಸಲಾಗಿದೆ; Any= 4 'appetite' = 2, beast= 1 body = 4 breath= 1 creature =9, [ಆದಿ. 1:21, 24; 2:19;9:10,12,15,16; ಯಾಜಕ 11:46, ಎರಡು ಬಾರಿಗೆ] ; Dead :5, Deadly= 1; desire:3, Discontended:1, Fish:1(Isa. 19:10, ), Ghost =2, Greedy=1; hath =1 he=1(Psalm 105:18), Heart =15, hearty=1. herself=1, her=1, himself=4, Life=100, lust=2, man=2; me=3 (Num. 23:10; judges 16:30; 1 Kings 20:32); Mind=15; Mortally=1, Myself=1 (Psa. 131:2); one=1 (Lev. 4:27); 'Own"=1 (Pro. 14:10); person=24 (Gen. 14:21; 36:6, Num. 13:19; 35:11, 15,30 Deut. 10:22; 27:25; Josh 20:3,9) "Pleasure=3, self=21, slay =1, things =2 (Lev 11:10, Ezek 47:9); 'will=3, your=3.

ನೂತನ ಒಡಂಬಡಿಕೆಯುಲ್ಲಿನ psuche [ಚೇತನಯುಕ್ತವಾದ ಅಸ್ತಿತ್ವದ ಜೀವಿ] ಎಂಬ ಪದವು Neh-pesh ಎಂಬುದಕ್ಕೆ ಸಮವಾಗಿದ್ದು ಇದನ್ನು 56 ಬಾರಿ

Soul ಎಂಬುದಾಗಿಯೂ ಮತ್ತು ಮೂರು ಬಾರಿ Mind ಎಂಬುದಾಗಿಯೂ (Acts 14:2, Phil. 1:27, Hebrew 12:3) ಭಾಷಾಂತರಿಸಲಾಗಿದೆ; Heart=1 (Eph. 6:6); Life =41 times.

ಈ ವಿವಿಧ ರೀತಿಯ ಭಾಷಾಂತರಗಳಲ್ಲಿ ಯಾವುದೇ ಒಂದು ಕೊನೆಯದಕ್ಕಿಂತಲೂ ಹೆಚ್ಚಾಗಿ ಸತ್ಯವನ್ನು ಮಂಕುಗೊಳಿಸಲಾಗಿಲ್ಲ. Life ಎಂಬುದು ಒಂದು Soul or being ಎಂಬುದು ಮತ್ತೊಂದು ಎಂಬ ಅಭಿಪ್ರಾಯವನ್ನು ನೀಡಲು ಹವಣಿಸುತ್ತಿದೆ ಮತ್ತು ಮನುಷ್ಯನು ತನ್ನ ಜೀವವನ್ನು ಕಳಕೊಂಡರೂ ತನ್ನ ಆತ್ಮವನ್ನು, ತನ್ನ ಅಸ್ಥಿತ್ವವನ್ನು ಕಳಕೊಳ್ಳಲಾರನು ಎಂಬ ಅಭಿಪ್ರಾಯವನ್ನು ಪೋಷಿಸಲು ಪ್ರಯತ್ನಿಸಲಾಗಿದೆ. ಕೆಳಕಂಡವುಗಳು ಕೆಲವೊಂದು ಘಟನೆಗಳಾಗಿದ್ದು ಇದರಲ್ಲಿ Psuche ಎಂಬ ಪದವನ್ನು Life ಎಂಬುದಾಗು ತರ್ಜುಮೆಗೊಳಿಸಲಾಗಿದೆ. ಆದರೆ ಇದನ್ನು being ಅಥವಾ Soul ಎಂಬುದಾಗಿ ತರ್ಜುಮೆಗೊಳಿಸುತ್ತಿದ್ದರೆ ಗೊಂದಲ ನಿವಾರಿಸಬಹುದಿತ್ತು :–

**"ಕೂಸಿನ ಪ್ರಾಣವನ್ನು** (psuche–soul, being) **ತೆಗೆಯಬೇಕೆಂದಿದ್ದವರು ಸತ್ತುಹೋದರು"** – ಮತ್ತಾಯ 2:20.

**"ಪ್ರಾಣಾಧಾರಣೆಗೆ** (psuche – soul, being) **ಏನು ಊಟಮಾಡಬೇಕು . . . ಎಂದು ಚಿಂತೆ ಮಾಡಬೇಡಿರಿ"** – ಮತ್ತಾಯ 6:25.

**"ಊಟಕ್ಕಿಂತ ಪ್ರಾಣವು** (psuche –soul, being)... **ಮೇಲಾದುದಲ್ಲವೇ?"** – ಮತ್ತಾಯ 6:25.

**"ತನ್ನ ಪ್ರಾಣವನ್ನು** (psuche- Soul, being) **ಕಂಡುಕೊಂಡವನು ಅದನ್ನು ಕಳಕೊಳ್ಳುವನು; ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು** (psuche- soul, being) **ಕಳಕೊಂಡವನು ಅದನ್ನು ಕಂಡುಕೊಳ್ಳುವನು"** – ಮತ್ತಾಯ 10:39.

**"ತನ್ನ ಪ್ರಾಣವನ್ನು** (psuche - soul, being) **ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು** (psuche –soul being) **ಕಳಕೊಂಡವನು ಅದನ್ನು ಕಂಡುಕೊಳ್ಳುವನು"** – ಮತ್ತಾಯ 16:25.

**"ಮನುಷ್ಯಕುಮಾರನು ಸೇವೆ ಮಾಡಿಸಿಕೊಳ್ಳುವುದಕ್ಕೆ ಬರಲಿಲ್ಲ ..... ತನ್ನ ಪ್ರಾಣವನ್ನು** (psuche- soul,being) **ಈಡುಕೊಡುವುದಕ್ಕಾಗಿಯೂ ಬಂದನು"** – ಮತ್ತಾಯ 20:28.

**"ಸಬ್ಬತ್ ದಿನದಲ್ಲಿ ಯಾವುದನ್ನು ಮಾಡುವುದು ನ್ಯಾಯ?** .... **ಪ್ರಾಣವನ್ನು** (psuche-¸soul, being) **ಉಳಿಸುವುದೋ, ತೆಗೆಯುವುದೋ?"** – ಮಾರ್ಕ 3:4.

**"ತನ್ನ ಪ್ರಾಣವನ್ನು** (psuche) **ಉಳಿಸಿಕೊಳ್ಳ ಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿಯೂ ಸುವಾರ್ತೆಯ ನಿಮಿತ್ತವಾಗಿಯೂ ತನ್ನ ಪ್ರಾಣವನ್ನು** (psuche-soul, being) **ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು. ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣ** (psuche-life, being) **ನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಒಬ್ಬನು ತನ್ನ ಪ್ರಾಣಕ್ಕೆ** (psuche- life, being) **ಏನು ಈಡು ಕೊಡಬಹುದು?"** – ಮಾರ್ಕ : 8:35–37.

ಆಂಗ್ಲ ಭಾಷೆಯ ಎಷ್ಟು ಓದುಗರು ದೇವರ ವಾಕ್ಯದಲ್ಲಿ Life ಮತ್ತು Soul ಎಂಬ ಪದಗಳು ಎರಡು ಬಾರಿ ಉಪಯೋಗಿಸಲ್ಪಟ್ಟಿದ್ದು ಇವೆರಡೂ ಗ್ರೀಕ ಪದವಾದ psuche ನಿಂದ ಬಂದುದೆಂದು ತಿಳಿದಿದ್ದಾರೆ?

**"ಮನುಷ್ಯಕುಮಾರನು . . . ತನ್ನ ಪ್ರಾಣವನ್ನು** (psuche- life, being) **ಈಡುಕೊಡುವುದಕ್ಕೂ ಬಂದನು"** – ಮಾರ್ಕ 10:45.

**"ಸಬ್ಬತ್ತು ದಿನದಲ್ಲಿಯಾವುದನ್ನು ಮಾಡುವುದು ನ್ಯಾಯ?** . . . . **ಪ್ರಾಣವನ್ನು** (psuche- Soul, being) **ಉಳಿಸುವುದೋ, ಹಾಳುಮಾಡುವುದೋ?"** – ಲೂಕ 6:9.

**"ತನ್ನ ಪ್ರಾಣವನ್ನು** (psuche-soul,being) **ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ಪ್ರಾಣವನ್ನು** (psuche- soul, being) **ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು. ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ತನ್ನನ್ನೇ ಕೆಡಿಸಿಕೊಂಡರೆ ಅಥವಾ ನಷ್ಟಪಡಿಸಿಕೊಂಡರೆ ಅವನಿಗೆ ಪ್ರಯೋಜನವೇನು?** – ಲೂಕ 9:24.

**"ಆ ಕಾರಣದಿಂದ ಪ್ರಾಣಾ** (psuche- soul, being) **ಧಾರಣೆಗೆ ಏನು ಊಟಮಾಡಬೇಕು . . . ಎಂದು ಚಿಂತೆಮಾಡಬೇಡಿರಿ. ಊಟಕ್ಕಿಂತ ಪ್ರಾಣವು,** (psuche-soul, being) **ಉಡುಪಿಗಿಂತ ದೇಹವು ಮೇಲಾದದ್ದಷ್ಟೆ"** – ಲೂಕ 12: 22,23.

**" ಯಾವನಾದರೂ ನನ್ನ ಬಳಿಗೆ ಬಂದು . . . . ತನ್ನ ಪ್ರಾಣವನ್ನು** (psuche- soul, being) ಸಹಾ **ಹಗೆ ಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು"** – ಲೂಕ 14:26.

**"ತನ್ನ ಪ್ರಾಣವನ್ನು** (psuche-soul,being) **ದೊರಕಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಪ್ರಾಣವನ್ನು** (psuche-soul, being) **ಕಳಕೊಂಡವನು ಅದನ್ನು ರಕ್ಷಿಸಿಕೊಳ್ಳುವನು"** – ಲೂಕ 17:33.

ಈ ಕಡೇ ವಚನ ಮತ್ತು ಅದರ ಹಿಂದಿನ ಕೆಲವು ವಚನಗಳಲ್ಲಿನ ಆಲೋಚನೆ ಏನೆಂದರೆ, ದೇವರ ಮಕ್ಕಳು ತಮ್ಮ ಪ್ರಸ್ತುತ ಅಸ್ಥಿತ್ವವು ಹೇಗೂ ಮರಣದ ದಂಡನೆಗೆ ತುತ್ತಾಗಿದೆ; ಆದರೆ ದೇವರ ಕೃಪೆಯು ಅದರಿಂದ ನಮ್ಮನ್ನು ವಿಮೋಚಿಸುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಇದು ನಿರಂತರವಾದ ಜೀವನವಲ್ಲ ಆದರೆ ಇದು ಪುನರುಜ್ಜೀವನ, ಅಥವಾ ಪುನರುತ್ಥಾನ, ಪುನಃ ಜೀವಿಸುವುದು ಆಗಿದೆ. ಈ ಸುವಾರ್ತಾ ಯುಗದ ಕರೆ ಏನೆಂದರೆ, ವಿಮೋಚಕನ ಮಾದರಿಯನ್ನು ಅನುಸರಿಸಿ, ನಮ್ಮ ಜೀವನವನ್ನು ಕರ್ತನ ಸೇವೆಗಾಗಿ ಜೀವಂತ ಸಮರ್ಪಣೆಯಾಗಿ ಅರ್ಪಿಸುವುದು. – ವಾಗ್ದಾನವೇನೆಂದರೆ ಈ ರೀತಿ ನಂಬಿಕೆಯಿಂದ ಮಾಡುವ ಕ್ರಿಸ್ತನ ವಿಶ್ವಾಸಿಗಳೆಲ್ಲರಿಗೆ ಮೊದಲನೆಯ ಪುನರುತ್ಥಾನದ ಕಾರ್ಯಾಚರಣೆಯಲ್ಲಿ ದೈವಿಕ ಸ್ವಭಾವದಲ್ಲಿ ಆತನೊಂದಿಗೆ ಪಾಲು ದೊರೆಯುವುದು. ಈ ರೀತಿಯಲ್ಲಿ ಅವರು ಪುನಃ ತಮ್ಮ ಆತ್ಮವನ್ನು, ಜೀವವನ್ನು (Zoee), ಅಸ್ಥಿತ್ವವನ್ನು ಸಮೃದ್ಧಿಯಾಗಿ ಪಡಕೊಳ್ಳುವರು – ಯೋಹಾನ 10:10.

**"ಒಳ್ಳೇ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು** (psuche-soul, being) **ಕೊಡುತ್ತಾನೆ"** (ಯೋಹಾನ 10:11) [ನಮ್ಮ ಕರ್ತನು ಮರಣದವರೆಗೆ ತನ್ನ ಪ್ರಾಣವನ್ನು ಚೆಲ್ಲಿದನು, ಆತನು ತನ್ನ ಆತ್ಮನನ್ನೇ ಪಾಪದ ಯಜ್ಞವನ್ನಾಗಿ ಸಮರ್ಪಿಸಿದನು] – ಯೆಶಾಯ 53: 10,12.

**"ನನ್ನ ಕುರಿಗಳಿಗೋಸ್ಕರ ನನ್ನ ಪ್ರಾಣವನ್ನು** (psuche-soul,being) **ಕೊಡುತ್ತೇನೆ"** – ಯೋಹಾನ 10:15.

**"ನಾನು ತಿರುಗಿ** (ದೇವರ ಶಕ್ತಿ ಮತ್ತು ವಾಗ್ದಾನಕ್ಕನುಸಾರವಾಗಿ ಪುನರುತ್ಥಾನದಲ್ಲಿ) **ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು** (psuche-soul, being) **ಕೊಡುತ್ತೇನೆ; ಅದರ ನಿಮಿತ್ತವಾಗಿ ತಂದೆಯು ನನ್ನನ್ನು ಪ್ರೀತಿಸುತ್ತಾನೆ"** – ಯೋಹಾನ 10:17.

**"ತನ್ನ ಪ್ರಾಣದ** (psuche-soul,being) **ಮೇಲೆ ಮಮತೆ ಇಡುವವನು ಅದನ್ನು ಕಳಕೊಳ್ಳುವನು, ಇಹಲೋಕದಲ್ಲಿ ತನ್ನ ಪ್ರಾಣವನ್ನು** (psuche-soul, being) **ಹಗೆಮಾಡುವವನು ನಿತ್ಯಜೀವಕ್ಕಾಗಿ ಅದನ್ನು ಕಾಪಾಡಿಕೊಳ್ಳುವನು"** – ಯೋಹಾನ 12:25.

ಇಲ್ಲಿರುವ ಆಲೋಚನೆ ಏನೆಂದರೆ, ಪ್ರಸ್ತುತ ಕೇಡುಗಾಲದಲ್ಲಿ ದೇವರಿಗೆ ನಿಷ್ಠೆಯಿಂದಿರುವುದು ಅವಶ್ಯಕವಾಗಿ ಪ್ರಸ್ತುತ ಪರಿಸ್ಥಿತಿಗಳಿಗೆ ಅತೃಪ್ತಿಗೊಂಡಿರುವುದು ಮತ್ತು ದೇವರ ಸೇವೆಯಲ್ಲಿ , ನೀತಿಗಾಗಿ ಮತ್ತು ಸಹಜೀವಿಗಳಿಗಾಗಿ ಎಲ್ಲವನ್ನೂ ತ್ಯಾಗಮಾಡುವುದು ಎಂಬ ಅರ್ಥ ನೀಡುತ್ತದೆ – ಈ ರೀತಿಯಲ್ಲಿ ದೇವರ ಚಿತ್ತದಂತೆ ಬರಲಿರುವ ಇನ್ನೂ ಅನುಕೂಲಕರ ಪರಿಸ್ಥಿತಿಯಲ್ಲಿ ಅಸ್ಥಿತ್ವದಲ್ಲಿರಲು (soul,being) ಯೋಗ್ಯರಾಗುವುದು. ಪ್ರಸ್ತುತ ಪರಿಸ್ಥಿತಿಯನ್ನು ಪ್ರೀತಿಸುವವನು, ನೀತಿವಂತಿಕೆ ಮತ್ತು ದೇವರಿಗೆ ವಿಧೇಯತೆ ಇವುಗಳಿಗಿಂತ ಪ್ರಸ್ತುತ ಸಮಯದ ಸಂತೋಷ, ಸಂಭ್ರಮಗಳಿಗೆ ಹೆಚ್ಚಾದ ಬೆಲೆಕೊಡುವವನು ದೇವರು ಆತನಿಗೆ ಕಾಣಿಕೆಯಾಗಿ ನೀಡಲಿರುವ ಮುಂದಣ ಅಸ್ಥಿತ್ವಕ್ಕೆ ಅಂದರೆ ಆತನ ಜೀವವನ್ನು ಮತ್ತು ಇರುವಿಕೆಯನ್ನು ಪ್ರಥಮ ಪುನರುತ್ಥಾನದಲ್ಲಿ ಮರಳಿ ಪಡೆಯಲು ಅನರ್ಹನಾಗುವನು.

**"ನನಗಾಗಿ ಪ್ರಾಣವನ್ನು** (psuche-soul,being) **ಕೊಟ್ಟೀಯಾ ?"** – ಯೋಹಾನ 13:38.

**"ಪ್ರಾಣವನ್ನೇ** (psuche-soul, being) **ಸ್ನೇಹಿತರಿಗಾಗಿ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವುದೂ ಇಲ್ಲ"** – ಯೋಹಾನ : 15:13.

**"ನಮ್ಮ ಕರ್ತನಾದ ಯೇಸುವಿನ ನಿಮಿತ್ತ ಜೀವದ** (psuche-soul,being) **ಹಂಗನ್ನು ತೊರೆದವರಾದ . . ."** – ಅ.ಕೃ 15:26.

**"ಅವನ ಪ್ರಾಣ** (psuche-soul, being) **ಅವನಲ್ಲಿ ಅದೆ"** (ಅವನ ಪ್ರಾಣ ಹೋಗಿಲ್ಲ, ಆತನು ಸತ್ತಿಲ್ಲ) – ಅ.ಕೃ. 20:10.

**"ಪ್ರಾಣವನ್ನು** (psuche-soul,being, existence) **ಉಳಿಸಿಕೊಳ್ಳುವುದೇ ವಿಶೇಷವೆಂದು ನಾನು ಎಣಿಸುವುದಿಲ್ಲ"** – ಅ.ಕೃ. 20:24.

ಪುನರುತ್ಥಾನದಲ್ಲಿ ವಾಗ್ದಾನಮಾಡಲ್ಪಟ್ಟ ಮುಂದಣ ಅಸ್ಥಿತ್ವದೊಂದಿಗೆ ಹೋಲಿಸಿ ಅಪೋಸ್ತಲನು ಪ್ರಸ್ತುತ ಇರುವಿಕೆಯನ್ನು ಕಡಿಮೆ ಬೆಲೆಯುಳ್ಳದೆಂದು ಸರಿಯಾದ ರೀತಿಯಲ್ಲಿ ಕಲಿತುಕೊಂಡಿದ್ದಾನೆ. ಆತನು ಅದನ್ನು ಕರ್ತನಿಗಿಂತ ಆತನ ಕೃಪೆಯ ಮೌಲ್ಯಕ್ಕಿಂತ, ಕರ್ತನ ಸೇವೆಯನ್ನು ಮಾಡುವ ಅವಕಾಶಗಳಿಗಿಂತ ಹೆಚ್ಚು

ಪ್ರಿಯವೂ, ಅಮೂಲ್ಯವೂ ಎಂದೆಣಿಸಲಿಲ್ಲ. ಆತನು ಮೊದಲ ಪುನರುತ್ಥಾನ ಪಡೆಯುವ ನಿರೀಕ್ಷೆಯಿಂದ ತನ್ನ ಒಡೆಯನಿಗಾಗಿ ಜೀವನವನ್ನೇ ಸವೆಸುವ ಇಚ್ಛೆಯುಳ್ಳವನಾಗಿದ್ದನು. ಇದನ್ನು ಆತನು ನಮಗೆ ಫಿಲಿಪ್ಪಿ 3: 8–11ರಲ್ಲಿ ಸ್ಪಷ್ಟವಾಗಿ ಹೇಳಿರುತ್ತಾನೆ.

**"ಜನರೇ, ಈ ಪ್ರಯಾಣದಿಂದ ಸರಕಿಗೂ ಹಡಗಿಗೂ ಮಾತ್ರವಲ್ಲದೆ ನಮ್ಮ ಪ್ರಾಣಗಳಿಗೂ** (psuche-soul, being) **ಕಷ್ಟವೂ ಬಹು ನಷ್ಟವೂ ಸಂಭವಿಸುವುದೆಂದು ನನಗೆ ತೋರುತ್ತದೆ"** – ಅ.ಕೃ, 27:10.

**"ನಿಮ್ಮಲ್ಲಿ ಒಬ್ಬನಿಗಾದರೋ ಪ್ರಾಣ ನಷ್ಟವಾಗುವುದಿಲ್ಲ.** (psuche-soul,being)**"** – ಅ.ಕೃ.. 27:22.

**"ನಾನೊಬ್ಬನೇ ಉಳಿದಿದ್ದೇನೆ. ನನ್ನ ಪ್ರಾಣವನ್ನೂ** (psuche-soul,being) **ತೆಗೆಯಬೇಕೆಂದಿದ್ದಾರೆ"** – ರೋಮಾ. 11:3.

**"ಅವರು ನನ್ನ ಪ್ರಾಣದ** (psuche-soul, being) **ಸಂರಕ್ಷಣೆಗಾಗಿ ತಮ್ಮ ಪ್ರಾಣಗಳನ್ನು ಅಪಾಯಕ್ಕೆ ಗುರಿಮಾಡಿದರು"** – ರೋಮಾ. 16:4.

**"ಅವನು ಜೀವದ** (psuche-soul, being) **ಆಶೆಯನ್ನು ಲಕ್ಷ್ಯಮಾಡದೆ ಕ್ರಿಸ್ತನ ಕೆಲಸದ ನಿಮಿತ್ತ ಸಾಯುವ ಹಾಗಿದ್ದನೆಂದು ನೀವು ತಿಳಿದು . . . ಸೇರಿಸಿಕೊಳ್ಳಿರಿ"** – ಫಿಲಿಪ್ಪಿ 2:30.

**"ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು** (psuche-soul,being) **ಕೊಟ್ಟಿದ್ದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದು ಬಂದಿದೆ. ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು** (psuche-souls,,beings) **ಕೊಡುವ ಹಂಗಿನಲ್ಲಿದ್ದೇವೆ"** – 1 ಯೋಹಾನ 3:16.

**"ಸಮುದ್ರ ಜೀವಿ** (psuche-soul,being) **ಗಳೊಳಗೆ ಮೂರರಲ್ಲಿ ಒಂದು ಭಾಗ ಸತ್ತು ಹೋಯಿತು"** – ಪ್ರಕಟನೆ : 8:9.

**"ಅವರು ಪ್ರಾಣದ** (psuche-soul,being) **ಮೇಲಣ ಪ್ರೀತಿಯನ್ನು ತೊರೆದು . . . "** – ಪ್ರಕಟನೆ 12:11.

ಆತ್ಮನ ಮೇಲಿನ ಈ ಪ್ರಸ್ತಾಪದ ಬಗ್ಗೆ ನಮ್ಮ ಮನಸ್ಸು ಸ್ಪಷ್ಟವಾದ ಮೇಲೆ ಮತ್ತು ಯಾವ ರೀತಿಯಲ್ಲಿ neh-pesh ಮತ್ತು psuche ಎಂಬ ಪದಗಳು ಸ್ಫೂರ್ತಿದಾಯಕ ಲೇಖಕರುಗಳಿಂದ ಸತ್ಯವೇದದಲ್ಲಿ ಉಪಯೋಗಿಸಲ್ಪಟ್ಟಿವೆ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡ ನಂತರ ಕೇವಲ ಅಜ್ಞಾನಿಗಳಿಗೆ ಮಾತ್ರವಲ್ಲ ಅನೇಕ ವಿದ್ಯಾವಂತರಿಗೂ ಅನಿಶ್ಚಿತವೂ, ವಿವರಿಸಲಾಗದ್ದೂ ಮತ್ತು ಅರ್ಥಮಾಡಿಕೊಳ್ಳಲಾಗದ್ದೂ ಆದ soul, ghost ಮುಂತಾದ ಅಸ್ಪಷ್ಟ ಪದಗಳು ಉಂಟುಮಾಡಿರುವ ರಹಸ್ಯ ಸಂಗತಿಗಳನ್ನು ನಾವು ಹೊರಪಡಿಸಿದ್ದೇವೆ.

ಆದರೆ ದೇಹವೆಂಬುದೇ ಆತ್ಮವೆಂದು ಯಾರೂ ಆಲೋಚಿಸಬಾರದು. ಇದು ತಪ್ಪಾದುದು. ಯಾಕೆಂದರೆ ನಮ್ಮ ಕರ್ತನು "ದೇವರು ದೇಹವನ್ನೂ, ಆತ್ಮವನ್ನೂ ಸಹಾ ನಾಶಮಾಡಬಲ್ಲವನಾಗಿದ್ದಾನೆ" ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಮತ್ತೊಂದೆಡೆಯಲ್ಲಿ ದೇಹವಿಲ್ಲದೆ ಆತ್ಮವಿಲ್ಲ, ಯಾವುದೇ ಚೇತನಯುಕ್ತ ಪ್ರಾಣಿಯೂ ಅದು ಪರಲೋಕದ್ದಾಗಿರಲಿ, ಭೂಲೋಕದ್ದಾಗಿರಲಿ, ಆತ್ಮೀಕವಾಗಿರಲಿ, ಪ್ರಾಣಿಯದ್ದಾಗಿರಲಿ ಅದು ದೇಹವಿಲ್ಲದೆ ಇರಲಾರದು.

ನಾವು ಮಾನವ ಸೃಷ್ಟಿಯ ಬಗ್ಗೆ ಆದಿಕಾಂಡದ ದಾಖಲೆಯನ್ನು ನೋಡುವಾಗ, ಮೊದಲಿಗೆ ದೇವರು ಮಾನವನ ದೇಹವನ್ನು ಸೃಷ್ಟಿಸಿದನು, ಆದರೆ, ಅದನ್ನು ಸಚೇತನಗೊಳಿಸುವವರೆಗೆ ಅದು ಮನುಷ್ಯ, ಆತ್ಮ ಅಥವಾ ಜೀವಿಯಾಗಿರಲಿಲ್ಲ. ಅದಕ್ಕೆ ಕಣ್ಣಿದ್ದರೂ ನೋಡಲು ಸಾಧ್ಯವಿದ್ದಿಲ್ಲ, ಕಿವಿಯಿದ್ದರೂ ಕೇಳಲು ಸಾಧ್ಯವಿದ್ದಿಲ್ಲ, ಬಾಯಿದ್ದರೂ ಮಾತನಾಡಲು ಸಾಧ್ಯವಿದ್ದಿಲ್ಲ, ನಾಲಿಗೆಯಿದ್ದರೂ ರುಚಿನೋಡಲಾಗುತ್ತಿದ್ದಿಲ್ಲ, ಮೂಗಿನ ಹೊಳ್ಳೆ ಇದ್ದರೂ ವಾಸನೆ ಗ್ರಹಿಸಲಾಗುತ್ತಿದ್ದಿಲ್ಲ, ಹೃದಯವಿದ್ದರೂ ಅದು ಮಿಡಿಯುತ್ತಿದ್ದಿಲ್ಲ, ರಕ್ತವಾದರೋ ತಂಪಾಗಿತ್ತು, ಅದರಲ್ಲಿ ಜೀವವಿದ್ದಿಲ್ಲ, ಶ್ವಾಸಕೋಶಗಳು ಅಲುಗಾಡುತ್ತಿದ್ದಿಲ್ಲ. ಅದು ಮನುಷ್ಯನಾಗಿರದೆ ಒಂದು ಹೆಣದಂತಿತ್ತು. ಅದು ಒಂದು ಚೇತನರಹಿತವಾದುದ್ದಾಗಿತ್ತು.

ಮಾನವನ ಸೃಷ್ಟಿ ಪ್ರಕ್ರಿಯೆಯ ಎರಡನೆಯ ಹಂತದಲ್ಲಿ ಸರಿಯಾದ ರೀತಿಯಲ್ಲಿ ರೂಪಿಸಲ್ಪಟ್ಟಿದ್ದು ಮತ್ತು ಎಲ್ಲಾ ರೀತಿಯಲ್ಲಿಯೂ ಸಿದ್ಧಮಾಡಲ್ಪಟ್ಟ ದೇಹಕ್ಕೆ ಚೈತನ್ಯ ನೀಡುವುದಾಗಿದೆ. ಇದನ್ನು **"ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು"** (ಆದಿಕಾಂಡ 2:7) ಎಂಬ ಮಾತುಗಳಲ್ಲಿ ವರ್ಣಿಸಲಾಗಿದೆ; ಒಬ್ಬ ಆರೋಗ್ಯವಂತ ಮನುಷ್ಯನು ನೀರಿನಲ್ಲಿ ಮುಳುಗಿ ಆತನ ಚೇತನವು ಪೂರ್ಣವಾಗಿ ನಿಂತುಹೋದಾಗ, ಅವನನ್ನು ತಿರುಗಿ ಬದುಕಿಸುವಂತೆ ಆತನ ತೋಳುಗಳನ್ನು ಅಲುಗಾಡಿಸಿ ಆತನ ಶ್ವಾಸಕೋಶವು ತಿದಿ ಒತ್ತುವಂತೆ ಮಾಡಿದಲ್ಲಿ ಉಸಿರಾಟವು ಮೂಗಿನಿಂದ ಪುನಃ ಪ್ರಾರಂಭಗೊಳ್ಳುತ್ತದೆ ಎಂದು ಹೇಳಲಾಗುತ್ತದೆ. ಆದಾಮನ ಪ್ರಕರಣದಲ್ಲಿ ಯಾವುದೇ ಶ್ರಮವಿಲ್ಲದೇ ಸೃಷ್ಟಿಕರ್ತನು ಸಮರ್ಪಕವಾದ ಶರೀರ ರಚನೆಯು ವಾತಾವರಣದಲ್ಲಿನ ಜೀವದಾಯಕವಾದ ಆಮ್ಲಜನಕವನ್ನು ಉಸಿರಾಡುವಂತೆ ಮಾಡಿದನು.

ಚೈತನ್ಯದಾಯಕವಾದ ಉಸಿರು ಪ್ರವೇಶಿಸುವಾಗ, ಶ್ವಾಸಕೋಶವು ವಿಕಾಸಗೊಳ್ಳುತ್ತದೆ, ರಕ್ತಕಣಗಳು ಆಮ್ಲಜನಕದಿಂದ ತುಂಬಿಕೊಳ್ಳುವುದು ಮತ್ತು ಅದು ಹೃದಯಕ್ಕೆ ರವಾನೆಯಾಗುವುದು ಮತ್ತು ನಂತರದಲ್ಲಿ ಇದು ದೇಹದ ಇತರ ಭಾಗಗಳಿಗೆ ಮುಂದೂಡಲ್ಪಡುವುದು ಮತ್ತು ಇದುವರೆಗೆ ಸುಪ್ತಾವಸ್ಥೆಯಲ್ಲಿದ್ದ ನರಮಂಡಲವನ್ನು ಎಚ್ಚರಗೊಳಿಸುವುದು. ಅವುಗಳು ಚೈತನ್ಯ ಮತ್ತು ಶಕ್ತಿಯನ್ನು ಪಡಕೊಳ್ಳುವುವು. ಶಕ್ತಿಯು ಮಿದುಳನ್ನು ತಲುಪಿದ ಕ್ಷಣ ಮಾತ್ರದಲ್ಲಿ ಆಲೋಚನೆ, ಗ್ರಹಿಕೆ, ವಿವೇಚನಾ ಶಕ್ತಿ, ದೃಷ್ಟಿ, ವಾಸನೆ ಹಿಡಿಯುವಿಕೆ, ಭಾವನೆಗಳು ಮತ್ತು ರುಚಿ ಸವಿಯುವಿಕೆ ಮುಂತಾದವುಗಳು ತಕ್ಷಣವೇ ತಾನೇ ತಾನಾಗಿ ಪ್ರಾರಂಭಗೊಳ್ಳುವುವು. ಜೀವವಿಲ್ಲದೆ ಇದ್ದ ಶರೀರವು ಒಬ್ಬ ಮನುಷ್ಯ ಜೀವಿಸುವ ಪ್ರಾಣಿಯಾಯಿತು, ಚೇತನ ಭರಿತ ಜೀವಿಯಾಯಿತು; ವಾಕ್ಯಭಾಗದಲ್ಲಿ ಹೇಳಿದಂತೆ ಜೀವಿಸುವ ಆತ್ಮನ ಪರಿಸ್ಥಿತಿಯನ್ನು ತಲುಪಿತು. ಮತ್ತೊಂದು ಮಾತುಗಳಲ್ಲಿ ಹೇಳುವುದಾದರೆ **"ಜೀವಿಸುವ ಪ್ರಾಣಿ"** ಎಂಬ ಪದವು **"ಚೇತನ ಸಹಿತ ವ್ಯಕ್ತಿ"** ಎಂಬ ಪದಕ್ಕೆ ಸಮವಾಗಿದೆ. ಅದಕ್ಕೆ ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ. ಅಂದರೆ, ಸ್ಪರ್ಶ ಜ್ಞಾನವುಳ್ಳ, ಗ್ರಹಣಶಕ್ತಿಯುಳ್ಳ, ಆಲೋಚನೆಗಳುಳ್ಳಾತನು ಎಂಬುದೇ.

ಇದಕ್ಕೂ ಹೆಚ್ಚಾಗಿ ಆದಾಮನು ತನ್ನ ಶರೀರ ರಚನೆಯಲ್ಲಿ ಸಮರ್ಪಕವಾಗಿದ್ದರೂ ಜೀವವೃಕ್ಷದ ಫಲವನ್ನು ತಿನ್ನುವುದರ ಮೂಲಕ ತನ್ನ ಜೀವವನ್ನು, ಆತ್ಮ ಅಥವಾ ಚೇತನವನ್ನು ಸಂರಕ್ಷಿಸುವ ಅಗತ್ಯತೆ ಇತ್ತು. ಆತನು ಪಾಪಮಾಡಿದಾಗ, ದೇವರು ಆತನನ್ನು ಏದೇನ್ ತೋಟದಿಂದ ಅಟ್ಟಿಬಿಟ್ಟನು. ಇಲ್ಲವಾದರೆ, **"ಈತನು ಕೈಚಾಚಿ ಜೀವವೃಕ್ಷದ ಫಲವನ್ನು ಸಹಾ ತೆಗೆದು ತಿಂದು ಶಾಶ್ವತವಾಗಿ ಬದುಕುವವನಾಗಬಹುದೆಂದು"** (ಆದಿ. 3:22) ದೇವರು ಆಲೋಚಿಸಿದನು. ದೇವರ ವಾಕ್ಯದಿಂದ ಪ್ರಕಾಶಿಸುವ ಸತ್ಯದ ಬೆಳಕಿನಲ್ಲಿ ಯಾವ ರೀತಿಯಲ್ಲಿ ಇಬ್ಬನಿ ಹಾಗೂ ರಹಸ್ಯ ಸಂಗತಿಗಳು ಚದುರಿಹೋಗುತ್ತವೆಂದು ನೋಡಿರಿ!

ಮಾನವನು ಪಾಪ ಮತ್ತು ಮರಣದ ಶಾಪದಿಂದ ಪತನಗೊಂಡು ಆತನ ಪರಿಸ್ಥಿತಿಯು 'ಬಹು ಒಳ್ಳೆಯದೆಂದು' ಸೃಷ್ಟಿಕರ್ತನೂ, ಮಹಾ ನಿರ್ಮಾಯಕನೂ ಆದಿಯಲ್ಲಿ ಸಷ್ಟಪಡಿಸಿದ ಪರಿಪೂರ್ಣತೆಯಿಂದ (ಆದಿ. 1:31) ಬಹಳ ದೂರ ಸರಿದಿದ್ದಾನೆ. ಆದರೂ ಕೆಲವರು, ಆಲೋಚನೆಯ ದುರ್ಬಲ ಅಂಗಾಂಗಗಳನ್ನು ಅಭಿವೃದ್ಧಿಪಡಿಸಿಕೊಂಡರೂ ಶ್ರೇಷ್ಠವಾದ ಬೌದ್ಧಿಕ ಸಾಮರ್ಥ್ಯವನ್ನು ಉಪಯೋಗಿಸದೇ ಇರುವುದರ ಮೂಲಕವೂ ಶ್ರೇಷ್ಠವಾದ ಬೌದ್ಧಿಕ ಸಾಮರ್ಥ್ಯವನ್ನು ಪ್ರತಿನಿಧಿಸುವ ತಮ್ಮ ಮಿದುಳಿನ ಅಂಗಾಗಗಳನ್ನು ಕುಬ್ಜಗೊಳಿಸಿಕೊಂಡಿದ್ದಾರೆ. ಆದಾಗ್ಯೂ ಅಂಗಾಗಗಳು ಇನ್ನೂ ಅಲ್ಲಿ ಅವೆ ಮತ್ತು ಅಭಿವೃದ್ಧಿ ಹೊಂದಿಕೊಳ್ಳಲು ಶಕ್ತವಾಗಿವೆ. ಆದರೆ ಸಂಪೂರ್ಣತೆಗೆ ಹತ್ತಿರವಾಗಿರುವ ಹೆಚ್ಚಿನ ಮೃಗಗಳಲ್ಲಿ ಈ ರೀತಿಯಾಗಿರುವುದಿಲ್ಲ. ಈ ರೀತಿಯಲ್ಲಿ ಸೃಷ್ಟಿಕರ್ತನು ಮನುಷ್ಯನಿಗೆ ಉತ್ತಮವಾದ ಮತ್ತು ಅಚ್ಚುಕಟ್ಟಾದ ಶರೀರ ರಚನೆಯನ್ನು ದಯಪಾಲಿಸಿದ್ದಾನೆ ಮತ್ತು ಮೃಗಗಳಿಗಿಂತ ಭಿನ್ನವಾಗಿ ಆತನನ್ನು ಉಂಟುಮಾಡಿದ್ದಾನೆ. ಅವುಗಳಿಗೆ ಒಂದೇವಿಧವಾದ ಮಾಂಸ ಮತ್ತು ಮೂಳೆಗಳುಂಟು, ಒಂದೇ ಗಾಳಿಯನ್ನು ಸೇವಿಸುತ್ತಾರೆ, ಒಂದೇ ನೀರನ್ನು ಕುಡಿಯುತ್ತಾರೆ ಒಂದೇ ರೀತಿಯ ಆಹಾರವನ್ನೂ ಸೇವಿಸುತ್ತಾರೆ ಮತ್ತು ಎಲ್ಲರೂ ಆತ್ಮಗಳು ಅಥವಾ ಜೀವಿಗಳು ಬುದ್ಧಿವಂತಿಕೆಯನ್ನು ಹೊಂದಿರುವ ಜೀವಿಗಳಾಗಿದ್ದಾರೆ; ಆದರೆ ಮಾನವನು ಉತ್ತಮವಾದ ದೇಹವನ್ನು ಹೊಂದಿದವನಾಗಿದ್ದು ಶ್ರೇಷ್ಠವಾದ ಜ್ಞಾನವನ್ನು ಹೊಂದಿದ್ದಾನೆ ಮತ್ತು ಸೃಷ್ಟಿಕರ್ತನಿಂದ ಸಂಪೂರ್ಣವಾಗಿ ಬೇರೆಯಾದ ರೀತಿಯಲ್ಲಿ ನಡೆಸಿಕೊಳ್ಳುವವನಾಗಿದ್ದಾನೆ. ಮಾನವನನ್ನು ಆತನ ಮೂಲವಾದ ದೇವರ ಸ್ವಾರೂಪ್ಯದಿಂದ ಪಾಪವು ಕುಂಠಿತಗೊಳಿಸುವ ಅನುಪಾತಕ್ಕೆ ತಕ್ಕಂತೆ ಆತನು "ಮೃಗಪ್ರಾಯ"ನಾಗುತ್ತಿದ್ದಾನೆಂದು ಹೇಳಲಾಗುತ್ತದೆ. ಅಂದರೆ ಹೆಚ್ಚು ಸಮೀಪವಾಗಿ ಮೃಗವನ್ನು ಹೋಲುವುದು ಮತ್ತು ಶ್ರೇಷ್ಠವಾದ ಮತ್ತು ಅಚ್ಚುಕಟ್ಟಾದ ಸಂವೇದನಾ ಶಕ್ತಿಯ ಆಧಾರವಿಲ್ಲದಿರುವಿಕೆ.

ಈ ಪ್ರಸ್ತಾಪದ ಬಗ್ಗೆ ತಮ್ಮ ತಿಳುವಳಿಕೆಯ ಕಣ್ಣುಗಳು ತೆರೆಯುವವರು 'ಆತ್ಮ' ಎಂಬ ಪದವು 'ಬುದ್ಧಿಶಕ್ತಿ'ಯನ್ನೂ, ಶ್ವಾಸ ಅಥವಾ ಜೀವಾತ್ಮ ಎಂಬ ಪದವು ಜೀವಿಸುವ ದೈವಿಕ ಶಕ್ತಿಯನ್ನೂ ಸೂಚಿಸುತ್ತದೆ ಎಂದು ಕಂಡುಕೊಳ್ಳುತ್ತಾರೆ. ಮೇಲಿನವುಗಳಿಂದ, ಪ್ರಾಣಪ್ರಜ್ಞೆಯಿರುವ ಪ್ರತಿಯೊಂದು ಜೀವಿಗೂ ಮೊಟ್ಟಮೊದಲಿಗೆ ಒಂದು ಶರೀರವಿರುತ್ತದೆ ; ಎರಡನೆಯದಾಗಿ, ಅದನ್ನು ಚೇತನಗೊಳಿಸುವ ಒಂದು ಜೀವಾತ್ಮ ಮತ್ತು ಮೂರನೆಯದಾಗಿ ಇವುಗಳ ಫಲವಾಗಿ ಒಂದು ಅಸ್ತಿತ್ವವಿರುತ್ತದೆ ಎಂದು ನಾವು ಕೂಡಲೇ ಕಂಡುಕೊಳ್ಳಬಹುದು. ಈ ಅಭಿದಾನವನ್ನು ಗ್ರಹಿಸಲು ಸಹಾಯವಾಗುವಂಥಾಃ ಉದಾಹರಣೆ ಎಂದರೆ ಶಾಖ ಮತ್ತು ಆತ್ಮಗಳೊಡನೆ ಇರುವ ಸಾಮ್ಯತೆ. ಕಲ್ಲಿದ್ದಲಿನ ಗುಡ್ಡೆಯನ್ನು ಆಮ್ಲಜನಕವು ತಲಪುವಂತೆ ಅನುಕೂಲಕರ ಸ್ಥಿತಿಯಲ್ಲಿ ಇಟ್ಟು ಅದಕ್ಕೆ ಬೆಂಕಿ ಹತ್ತಿಸಿದಲ್ಲಿ ನೂತನ ಸಂಗತಿಯೊಂದು ಉತ್ಪತ್ತಿಯಾಗುತ್ತದೆ. ಅದುವೇ ಶಾಖ. ಕಲ್ಲಿದ್ದಲಿಗೆ ಕೆಲವೊಂದು ಸ್ಥಿತಿಯಲ್ಲಿ ಶಾಖೋತ್ಪನ್ನ ಮಾಡುವ ಸಾಮರ್ಥ್ಯವಿದ್ದರು ಅದುವೇ ಶಾಖವಲ್ಲ. ಅದರಂತೆ ಆಮ್ಲಜನಕವೂ ಶಾಖವಲ್ಲ. ಅದರೂ ಅದು ಸಹಾ ಕೆಲವೊಂದು ಅನುಕೂಲಕರ ಸ್ಥಿತಿಯಲ್ಲಿ ಶಾಖವನ್ನು ಉತ್ಪಾಧಿಸುತ್ತದೆ. ಈ ಹೋಲಿಕೆಗೆ ಅನುಗುಣವಾಗಿ ಆತ್ಮಕ್ಕೆ ಬೇಕಾದ ಕೆಲವೊಂದು ಅರ್ಹತೆಗಳು ದೇಹದಲ್ಲಿದ್ದರೂ

ಅದುವೇ ಆತ್ಮವಲ್ಲ. ಅದರಂತೆ ಪ್ರಾಣವಾಗಲೀ, ಜೀವವಾಗಲೀ ಆತ್ಮವಲ್ಲ. ಅದು ಚೇತನಾಯುಕ್ತವಾದ ಜೀವಿಯ ಉತ್ಪತ್ತಿಗಾಗಿ ದೇವರಿಂದ ಬಂದ ಶಕ್ತಿಯಾಗಿದೆ. ದೇಹವು ಪ್ರಾಣ ಅಥವಾ ಶ್ವಾಸದೊಂದಿಗೆ ಅಥವಾ ಜೀವಾತ್ಮದೊಂದಿಗೆ ಯುಕ್ತವಾದ ರೀತಿಯಲ್ಲಿ ಐಕ್ಯಗೊಂಡಾಗ ಹೊಸದೊಂದನ್ನು ಉಂಟುಮಾಡುತ್ತದೆ ಅದುವೇ ಆತ್ಮ ಅಥವಾ ಚೇತನಾಯುಕ್ತವಾದ ಜೀವಿ.

ಅಳಿವಿನ ಪ್ರಕ್ರಿಯೆಯು, ಮರಣವು ಈ ವಾಸ್ತವಾಂಶದೊಂದಿಗೆ ಸಾಮರಸ್ಯದಲ್ಲಿದೆ. ಪ್ರಾಣ ಅಥವಾ ಜೀವಾತ್ಮವನ್ನು ಹಿಂತೆಗೆದುಕೊಂಡಲ್ಲಿ ಮರಣ ವುಂಟಾಗುತ್ತದೆ. ಈಗಿನ ಪ್ರಶ್ನೆ ಏನೆಂದರೆ 'ಮರಣ ಹೊಂದುವುದು ಯಾವುದು?' ಜೀವವೋ (ಪ್ರಾಣವೋ?), ಅಥವಾ ಜೀವಾತ್ಮವೋ? ಎಂಬುದು. ಖಂಡಿತವಾಗಿಯೂ ಅಲ್ಲ; ಇದು ಎಂದಿಗೂ ಚೇತನಾಯುಕ್ತವಾದುದ್ದಲ್ಲ, ವಿದ್ಯುಚ್ಛಕ್ತಿಯಂತೆ ಇದೊಂದು ಸಿದ್ಧಾಂತ ಅಥವಾ ಶಕ್ತಿಯಾಗಿದೆ. ಅದಕ್ಕೆ ಯಾವುದೇ ಆಲೋಚನೆಯಾಗಲೀ, ಭಾವನೆಗಳಾಗಲೀ ಇರುವುದಿಲ್ಲ. ಹೀಗಾಗಿ ಅದು ಸಾಯಲಾರದು. ದೇಹವು ಸಾಯುವುದೋ? ನಾವು 'ಇಲ್ಲ'ವೆಂದು ಉತ್ತರಿಸುತ್ತೇವೆ. ತಂದೆಯು ಕೊಟ್ಟ ಜೀವವನ್ನು ದೇಹವು ಕಳಕೊಳ್ಳಬಹುದು, ಆದರೆ ದೇಹಕ್ಕೆ ಸ್ವತಃ ಪ್ರಾಣ ಅಥವಾ ಆತ್ಮದ ಹೊರತಾಗಿ ಯಾವುದೇ ಪ್ರಜ್ಞೆ ಇರುವುದಿಲ್ಲ, ಭಾವನೆ ಇರುವುದಿಲ್ಲ, ಯಾವುದೇ ಜ್ಞಾನವಾಗಲೀ ಇರುವುದಿಲ್ಲ. ಆದುದರಿಂದ ಅದು ಸತ್ತಿತೆಂದು ಹೇಳಲಾಗುವುದಿಲ್ಲ; ಶ್ವಾಸ ತುಂಬುವ ಮೊದಲು ಅದು ನಿರ್ಜೀವಿಯಾಗಿತ್ತು. ಅದರಲ್ಲಿ ಜೀವಶ್ವಾಸ ಇರುವಾಗ ಅದು ಜೀವಂತವಾಗಿತ್ತು. ಜೀವಶ್ವಾಸ ತೆಗೆಯಲ್ಪಟ್ಟಾಗ ಅದು ಪುನಃ ನಿರ್ಜೀವಿಯಾಯಿತು.

ಹಾಗಾದರೆ ಸಾಯುವುದಾದರೂ ಯಾವುದು? ಆತ್ಮವು ಸಾಯುತ್ತದೆಂದು ನಾವು ಉತ್ತರಿಸುತ್ತೇವೆ. ಚೇತನಯುಕ್ತವಾದುದು ಸ್ಥಗಿತಗೊಳ್ಳುವುದು. ಪ್ರಾಣ ಮತ್ತು ಅಥವಾ ಜೀವಾತ್ಮವು ಶರೀರದೊಡನೆ ಅನ್ಯೋನ್ಯವಾಗುವುದರ ಮೂಲಕ ಚೇತನಯುಕ್ತವಾದ ಜೀವಿಯು ಉಂಟುಮಾಡಲ್ಪಟ್ಟಿತೆಂದು ನಾವು ನೆನಪುಮಾಡಿಕೊಳ್ಳೋಣ. ಇವೆರಡರ ಬೇರ್ಪಡುವಿಕೆಯು ಮರಣವನ್ನುಂಟುಮಾಡುತ್ತದೆ. ಕೆಳವರ್ಗದ ಪ್ರಾಣಿಗಳಲ್ಲಿ ಇದು ಸತ್ಯ, ಯಾರೂ ಒಂದು ಕ್ಷಣಕ್ಕೂ ಅದನ್ನು ಪ್ರಶ್ನಿಸುವುದಿಲ್ಲ; ಆದರೆ ಇದು ದೇವರ ಬೌದ್ಧಿಕ ಸ್ವರೂಪದಲ್ಲಿ ಮತ್ತು ಆತನಂತೆ ನೈತಿಕತೆಯಿಂದೊಡಗೂಡಿ ಉಂಟುಮಾಡಲ್ಪಟ್ಟ ಅತ್ಯಂತ ಶ್ರೇಷ್ಠ ಪ್ರಾಣಿಯಾದ ಮಾನವನ ಬಗ್ಗೆಯೂ ಇದು ನಿಜವಲ್ಲವೇ? ಇದು ಯಾವುದಕ್ಕೂ ಕಡಿಮೆ ಇಲ್ಲದ ಸತ್ಯವಾಗಿದೆ ಮತ್ತು ಎಲ್ಲಾ ವಿವೇಕಶಾಲಿ ಮನಸ್ಸಿಗೂ ಇದು ಅದರಷ್ಟೇ ಸ್ಪಷ್ಟವಾಗಿದೆಯಲ್ಲವೇ? ಈ ಪ್ರಸ್ತಾಪವನ್ನು ವಿರೋಧಿಸುವಂತೆ ಕೆಲವೊಂದು ದೇವರ ವಾಕ್ಯಗಳನ್ನು ತಿರುಚಲಾಗಿದೆ ಅಥವಾ ತಪ್ಪಾಗಿ ಅರ್ಥೈಸಲಾಗಿದೆ ಎಂಬುದು ನಮಗೆ ತಿಳಿದಿದೆ. ಆದರೆ ಸೂಕ್ತಸಮಯದಲ್ಲಿ, ಅವುಗಳನ್ನು ಪರ್ಯಾಲೋಚಿಸಲಾಗುವುದು ಮತ್ತು ಅವುಗಳು ಈ ಪ್ರಸ್ತುತಿಗೆ ನಿರಪೇಕ್ಷವಾಗಿ ಸೂಕ್ತವಾಗಿದೆ ಎಂದು ಕಂಡುಕೊಳ್ಳಲಾಗುವುದು.

ಮಾನವನ ಮತ್ತು ಪ್ರಾಣಿಗಳ ದೇಹದ ಚೇತನ ಮತ್ತು ಆತ್ಮದ ಸಂಬಂಧದ ಬಗ್ಗೆ ಮತ್ತೊಂದು ದೃಷ್ಟಾಂತವನ್ನು ತೆಗೆದುಕೊಳ್ಳಿರಿ; ಒಂದು ಉರಿಸದ ಮೊಂಬತ್ತಿಯು ನಿರ್ಜೀವವಾದ ಮಾನವ ದೇಹ ಅಥವಾ ಶವಕ್ಕೆ ಅನುಗುಣವಾಗಿದೆ. ಆದರೆ ಆ ಮೊಂಬತ್ತಿಯನ್ನು ಉರಿಸಿದಾಗ ಅದು ಸೃಷ್ಟಿಕರ್ತನು ಮೊದಲು ಜೀವಕೊಟ್ಟ ಆ ಜೀವಕಿರಣಕ್ಕೆ ಅನುಗುಣವಾಗಿ ಬಿಡುತ್ತದೆ. ಉರಿ ಅಥವಾ ಬೆಳಕು ಚೇತನಯುಕ್ತವಾದುದಕ್ಕೆ, ತಿಳುವಳಿಕೆಗೆ ಅಥವಾ ಆತ್ಮ ಗುಣಕ್ಕೆ ಅನುರೂಪವಾಗಿದೆ; ಆಮ್ಲಜನಕಯುಕ್ತ ವಾತಾವರಣವು ಮೊಂಬತ್ತಿಯ ಇಂಗಾಲದೊಡನೆ ಸೇರಲ್ಪಟ್ಟು ಆ ಉರಿಯನ್ನು ಉತ್ತೇಜಿಸುವಾಗ ಅದು ಜೀವಕರ ಶ್ವಾಸಕ್ಕೆ ಅಥವಾ ಜೀವಾತ್ಮಕ್ಕೆ ಅನುಗುಣವಾಗಿ ತೋರಿಬರುತ್ತದೆ. ಇದು ಐಹಿಕ ಶರೀರದೊಂದಿಗೆ ಸೇರಿಕೊಂಡು ಆತ್ಮ ಅಥವಾ ಜ್ಞಾನಯುಕ್ತವಾದ ಅಸ್ತಿತ್ವವೊಂದನ್ನು ಉಂಟುಮಾಡುತ್ತದೆ. ಮೊಂಬತ್ತಿಯನ್ನು ಆಕಸ್ಮಿಕವಾಗಿ ನಾಶಪಡಿಸಿದಾಗ ಉರಿಯು ಹೇಗೂ ನಂದಿಹೋಗುತ್ತದೆ. ಅದರಂತೆ ಪ್ರಾಣಿಯ ಅಥವಾ ಮಾನವನ ದೇಹವು ಖಾಯಿಲೆ ಅಥವಾ ಆಕಸ್ಮಿಕಗಳಿಂದ ನಾಶಗೊಂಡಾಗ, ಆತ್ಮ ಅಥವಾ ಇರುವಿಕೆ, ವಿವೇಕ, ವ್ಯಕ್ತಿತ್ವ ಇವುಗಳು ಕೂಡಾ ನಾಶಗೊಳ್ಳುತ್ತವೆ. ಅಥವಾ ಮೊಂಬತ್ತಿಯ ಉರಿಗೆ ಗಾಳಿಯ ಸರಬರಾಜು ಅಗ್ನಿಶಾಮಕ ಉಪಕರಣವೊಂದರಿಂದ ಸ್ಥಗಿತಗೊಳಿಸುವಾಗ, ಅಥವಾ ಮೊಂಬತ್ತಿಯನ್ನು ನೀರಿನಲ್ಲಿ ಮುಣುಗಿಸಿದಾಗ, ದೀಪವು ಆರಿ ಹೋಗುತ್ತದೆ ಆದರೆ ಮೊಂಬತ್ತಿಯು ಹಾಗೇ ಉಳಿದುಹೋಗುತ್ತದೆ. ಅದರಂತೆ ನೀರಿನಲ್ಲಿ ಮುಣುಗಿದಾಗ, ಶ್ವಾಸಕಟ್ಟುವಿಕೆಯ ಕಾರಣ ಶ್ವಾಸವು ನಿಂತುಹೋದಾಗ ಪ್ರಾಣ, ಜೀವ, ಮಾನವನ ಅಥವಾ ಪ್ರಾಣಿಯ ಅಸ್ತಿತ್ವ ಇನ್ನಿಲ್ಲವಾಗುವುದು ಆದರೆ ದೇಹವು ತುಲನಾತ್ಮಕ ವಾಗಿಯೂ ಹಾಗೆಯೇ ಉಳಿಯುವುದು.

ಅನುಕೂಲಕರ ಪರಿಸ್ಥಿತಿಯಲ್ಲಿ ಒಂದು ಉರಿಯುವ ಮೊಂಬತ್ತಿಯಿಂದ ಮತ್ತೊಂದು ಮೊಂಬತ್ತಿಯನ್ನು ಅಥವಾ ಕೆಲವು ಮೊಂಬತ್ತಿಗಳನ್ನು ಉರಿಸಲು ಸಾಧ್ಯವಾಗುವುದು ಆದರೆ ಆರಿಹೋದ ಮೊಂಬತ್ತಿಯು ತನ್ನನ್ನು ತಾನೇ ಅಥವಾ ಮತ್ತೊಂದನ್ನು ಹೇಗೆ ಉರಿಸಲಾಗದೋ ಹಾಗೆಯೇ ಮಾನವ ಅಥವಾ ಪ್ರಾಣಿಯ ದೇಹವು

ಜೀವದಿಂದಿರುವಾಗ ದೈವಿಕ ವ್ಯವಸ್ಥೆಗೆ ತಕ್ಕಂತೆ ಇತರ ಜೀವಿಗಳನ್ನು ಉತ್ಪತ್ತಿಮಾಡಲು ಸಾಧ್ಯ, ಆದರೆ ಆದರೆ ಪ್ರಾಣ ಅಥವಾ ಜೀವದ ಕಿರಣವು ಹಾರಿಹೋದ ಕೂಡಲೇ ಆಲೋಚಿಸುವ, ಅನುಭವಿಸುವ ಮತ್ತು ಉತ್ಪಾದಿಸುವ ಶಕ್ತಿಯು ಸ್ಥಗಿತಗೊಳ್ಳುತ್ತದೆ. ಇದಕ್ಕೆ ಸಾಮರಸ್ಯವಾಗಿ ನಾವು ದೇವರ ವಾಕ್ಯದಲ್ಲಿ ಯಾಕೋಬನ ಮಕ್ಕಳ ಬಗ್ಗೆ ಹೀಗೆ ಓದುತ್ತೇವೆ **"ಯಾಕೋಬನಿಂದ ಹುಟ್ಟಿದವರೆಲ್ಲರೂ ಎಪ್ಪತ್ತು ಮಂದಿ"** (ವಿಮೋ. 1:5). ಯಾಕೋಬನು ತನ್ನ ಜೀವಕಿರಣವನ್ನು ಮತ್ತು ದೇಹ ರಚನೆಯನ್ನು ಮತ್ತು ಅದರೊಂದಿಗೆ ತನ್ನ ಆತ್ಮ (ಪ್ರಾಣ) ಮತ್ತು ಬುದ್ಧಿವಂತಿಕೆಯನ್ನು ತನ್ನ ತಂದೆಯಾದ ಇಸಾಕನಿಂದ ಪಡೆದನು. ಅದರಂತೆ ಅವುಗಳು ಆದಾಮನಿಂದ ಹರಿದು ಬಂದವು. ಆದಾಮನಿಗೆ, ಆತನೊಬ್ಬನಿಗೆ ದೇವರು ಜೀವವನ್ನು ನೇರವಾಗಿ ದಯಪಾಲಿಸಿದನು. ಯಾಕೋಬನು ಜೀವ, ಶರೀರರಚನೆ ಮತ್ತು ಆತ್ಮವನ್ನು ತನ್ನ ಜನಾಂಗದವರಿಗೆ ದಾಟಿಸಿದನು. ಅದರಂತೆ ಮಾನವ ಜಾತಿಯವರೆಲ್ಲರೂ ಮಾಡುತ್ತಿರುವರು.

ಒಂದು ಮೊಂಬತ್ತಿಯಲ್ಲಿ ಸಾಮರ್ಥ್ಯವಿರುವ ಯಾವುದರಿಂದಲಾದರೂ ಪುನಃ ಹತ್ತಿಸಬಹುದಾಗಿದೆ; ಆದರೆ ದೈವಿಕ ವ್ಯವಸ್ಥೆಯಲ್ಲಿ ಜೀವಕಿರಣವನ್ನು ಕಳಕೊಂಡ ಮಾನವ ದೇಹವು 'ವ್ಯರ್ಥವಾಗಿ' ಹೋಗುವುದು. ಮಣ್ಣಿನಿಂದ ಉಂಟಾದದ್ದು ಮಣ್ಣಿಗೇ ಹಿಂತಿರುಗುವುದು ದೇವರ ಶಕ್ತಿ ಅಥವಾ ಅದ್ಭುತ ಕಾರ್ಯದ ಹೊರತಾಗಿ ಅದನ್ನು ಪುನಃಜೀವಗೊಳಿಸಲು ಸಾಧ್ಯವಿಲ್ಲ. ಆದಕಾರಣ ಪುನರುತ್ಥಾನದ ವಾಗ್ದಾನವು ಜೀವವನ್ನು ಪುನಃ ಹೊತ್ತಿಸುವ, ಪುನಃ ಅಸ್ಥಿತ್ವಕ್ಕೆ ಹಿಂತಿರುಗಿಸುವ ವಾಗ್ದಾನವಾಗಿದೆ. ಯಾವುದೇ ಆತ್ಮವು ದೇಹವಿಲ್ಲದೆ, ಪುನಃಸ್ಥಾಪಿಸಲ್ಪಟ್ಟ ಜೀವ ಶಕ್ತಿ ಅಥವಾ ಚೈತನ್ಯವಿಲ್ಲದೆ ಇರಲು ಸಾಧ್ಯವಿಲ್ಲದ ಕಾರಣ, ಪುನರುತ್ಥನದ ವಾಗ್ದಾನವು ನೂತನ ಶರೀರಗಳ, ನೂತನ ಶರೀರ ರಚನೆಗಳ ಅರ್ಥ ನೀಡುತ್ತದೆ. ಈ ರೀತಿಯಲ್ಲಿ ದೇವರ ವಾಕ್ಯವು ನಮಗೆ ಮಣ್ಣಿಗೆ ಹಿಂತಿರುಗಿಸಲ್ಪಟ್ಟ ಮಾನವ ಶರೀರಗಳು ಪುನಃಸ್ಥಾಪನೆ ಪಡಕೊಳ್ಳುವುದಿಲ್ಲ, ಆದರೆ ಪುನರುತ್ಥಾನದಲ್ಲಿ ದೇವರು ನಮಗೆ ತನ್ನ ಇಷ್ಟಪ್ರಕಾರ ನೂತನ ಶರೀರನ್ನು ನೀಡುತ್ತಾನೆ ಎಂದು ತಿಳಿಸುತ್ತದೆ – 1 ಕೊರಿಂಥ 15:37–40.

ಅಪೋಸ್ತಲನು ಇಲ್ಲಿ, ಪುನರುತ್ಥನದಲ್ಲಿ ನೂತನ ಸ್ವಭಾವದವರೆಂದು ಎಣಿಸಲ್ಪಡುವ ಒಂದು ವಿಶೇಷ ವರ್ಗದವರುಂಟು ಎಂದು ಪ್ರಕಟಿಸುತ್ತಾನೆ. ಅವರು ಮಾನವ ಅಥವಾ ಮಾಂಸ ಶರೀರದ ಬದಲಾಗಿ ಆತ್ಮೀಕ ಶರೀರವುಳ್ಳವರಾಗಿರುತ್ತಾರೆ. ನಾವು ಅಪೇಕ್ಷಿಸುವಂತೆ ಈ ವಿವಿಧ ರೀತಿಯ ಶರೀರದ ಕಾರಣ ಸ್ವಭಾವದಲ್ಲಿ ಹೆಚ್ಚಿನ ಬದಲಾವಣೆ ಉಂಟಾಗುವುದು ಎಂದು ಇಲ್ಲಿ ತೋರಿಸುವವನಾಗಿದ್ದಾನೆ. ಇಲ್ಲಿ ಪುನಃ ಮೊಂಬತ್ತಿಯನ್ನು ಉದಾಹರಣೆಯನ್ನಾಗಿ ಬಳಸಿಕೊಳ್ಳಬಹುದು; ಒಂದು ವೇಳೆ ಮಾಂಸ ಅಥವಾ ಮಾನವ ಶರೀರವನ್ನು ಕೊಬ್ಬಿನ ಮೊಂಬತ್ತಿಗೆ ಹೋಲಿಸುವುದಾದರೆ, ನೂತನ ಶರೀರವನ್ನು ಬಹುಶಃ ಹೆಚ್ಚು ಪ್ರಕಾಶ ನೀಡಬಲ್ಲ ಮೇಣದ ಬತ್ತಿಗೆ ಹೋಲಿಸಬಹುದು ಅಥವಾ ನಿಶ್ಚಯವಾಗಿ ಗೋಳಾಕಾರದ ವಿದ್ಯುಚ್ಛಕ್ತಿ ಉಪಕರಣವೊಂದಕ್ಕೆ ಹೋಲಿಸಬಹುದು.

ನಮ್ಮ ಸೃಷ್ಟಿಕರ್ತನು ಪುನರುತ್ಥಾನದಲ್ಲಿ ಖಾತರಿಪಡಿಸಿದ ಶಕ್ತಿ ಮತ್ತು ಜ್ಞಾನಕ್ಕಿಂತ ಯಾವುದೇ ಕಡಿಮೆಯಾದರೆ, ಯಾವುದೋ ಬಿರುಕು ಅಥವಾ ದೋಷದ ಕಾರಣದಿಂದ ಆಯಿತೆಂದು ಹೆದರಬಹುದು. ಹಾಗಾಗಿ ಸ್ವರೂಪವನ್ನು ಕಳೆದುಕೊಂಡಿತೆಂದುಕೊಳ್ಳಬಹುದು. ಬಹುಮುಖ್ಯವಾಗಿ ಪ್ರಥಮ ಪುನರುತ್ಥಾನವನ್ನು ಉತ್ತಮವಾದ ಬದಲಾವಣೆಯಿಂದ ಆತ್ಮೀಕ ಜೀವಿಯಾಗಲು ಪಾಲು ಹೊಂದುವುದು. ಆದರೆ ನಾವು ಇದನ್ನು ಈ ಬಗ್ಗೆ ಮಾಡಬೇಕಾದವನಲ್ಲಿ ಸುಭದ್ರವಾಗಿ ನಂಬಬಹುದಾಗಿದೆ. ನಮ್ಮ ಅಪ್ಪಟ ಆಲೋಚನೆಯನ್ನು ಬಲ್ಲಾತನು ಅವುಗಳನ್ನು ನೂತನ ಮಿದುಳಿನಲ್ಲಿ ಯಾವುದೋ ಒಂದು ಉಪಯುಕ್ತ ಪಾಠ ಅಥವಾ ಅಮೂಲ್ಯ ಅನುಭವವು ಕಳೆದುಹೋಗದ ರೀತಿಯನ್ನು ಪುನಃ ಉತ್ಪಾಧಿಸಬಹುದು. ಆತನು ತಪ್ಪುಮಾಡದಿರುವಂತೆ ಬಹಳ ಬುದ್ಧಿವಂತನೂ, ನಿಷ್ಕರುಣಿಯಾಗದಂತೆ ಬಹಳ ಒಳ್ಳೆಯವನೂ ಆಗಿದ್ದಾನೆ; ಮತ್ತು ಆತನು ವಾಗ್ದಾನಮಾಡಿದವುಗಳೆಲ್ಲವನ್ನೂ ನಾವು ಆಲೋಚಿಸುವುದಕ್ಕಿಂತಲೂ, ಕೇಳಿಕೊಳ್ಳುವುದಕ್ಕಿಂತಲೂ ಅಧಿಕವಾದ ರೀತಿಯಲ್ಲಿ ತುಂಬಿಸಿಕೊಡುತ್ತಾನೆ.

ಹೂಣಲ್ಪಟ್ಟ ನಮ್ಮ ದೇಹವು ಅಣುಅಣುವಾಗಿ ಪುನಃಸ್ಥಾಪಿಸಲ್ಪಡುತ್ತೆಂದು ಅನೇಕರು ಭಾವಿಸುತ್ತಾರೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಅಪೋಸ್ತಲನು ಹೇಳುವುದೇನೆಂದರೆ – **"ಯಾವುದೇ ಬೀಜವನ್ನು ಬಿತ್ತುವಾಗ ಬರೀ ಕಾಳನ್ನೇ ಹೊರತು ಮುಂದೆ ಆಗ ಬೇಕಾದ ದೇಹವನ್ನು ಬಿತ್ತುವುದಿಲ್ಲ"** (1 ಕೊರಿಂಥ 15:37) ಎಂದಿದ್ದಾನೆ. ಪುನರುತ್ಥಾನದ ಶಕ್ತಿಯಲ್ಲಿ ದೇವರು ಆತ್ಮನನ್ನು, ಚೇತನಾಯುಕ್ತವಾದ ಜೀವಿಯನ್ನು ಪುನಃಸ್ಥಾಪಿಸ ಬಯಸುತ್ತಾನೆ; ಮತ್ತು ಆತನ ಅಂತ್ಯವಿಲ್ಲದ ಜ್ಞಾನದಲ್ಲಿ ತನ್ನ ಮನವೊಪ್ಪುವ ದೇಹವನ್ನು ಪ್ರತಿಯೊಂದು ವ್ಯಕ್ತಿಗೆ ಕೊಡಲಿರುವನು; ಆತನ ಸಭೆಗೆ, ಈ ಯುಗದಲ್ಲಿ ಆಯ್ಕೆಗೊಳ್ಳುವ ಆತನ ಮದಲಗಿತ್ತಿಗೆ ಆತ್ಮೀಕ ದೇಹವನ್ನು, ಪುನಃಸ್ಥಾಪಿತ ವರ್ಗಕ್ಕೆ ಮಾನವ ದೇಹವನ್ನು ನೀಡುತ್ತಾನೆ, ಆದರೆ ಮರಣದಲ್ಲಿ ಅದನ್ನು ಕಳಕೊಂಡ ದೇಹವಲ್ಲ – 1 ಕೊರಿಂಥ 15: 37,38.

ಆದಾಮನ ಸೃಷ್ಟಿಯಲ್ಲಿದ್ದಂತೆ, ಶರೀರ ಮತ್ತು ಜೀವಾತ್ಮವನ್ನು ಒಂದುಗೂಡಿಸಿ ಚೇತನಯುಕ್ತ

ಜೀವಿಯನ್ನು ಉಂಟುಮಾಡಿದಂತೆ, ಯಾವುದೇ ಕಾರಣದಿಂದ ಇವುಗಳ ಅಳಿವು ಚೇತನಯುಕ್ತ ಜೀವವನ್ನು ಸ್ಥಗಿತಗೊಳಿಸುತ್ತದೆ. ಎಲ್ಲಾ ವಿಧವಾದ ಆಲೋಚನೆಗಳೂ, ಭಾವನೆಗಳೂ ನಿಂತುಹೋಗುತ್ತವೆ. ಜೀವವು (ಅಂದರೆ ಚೇತನಾಯುಕ್ತವಾದುದು) ಇನ್ನಿಲ್ಲವಾಗುವುದು; ದೇಹವು ತಾನು ಉಂಟುಮಾಡಲ್ಪಟ್ಟ ಮಣ್ಣಿಗೆ ಹಿಂತಿರುವುದು; ಆದರೆ ಪ್ರಾಣ ಅಥವಾ ಶ್ವಾಸವು ಅದನ್ನು ಆದಾಮನಿಗೆ ಮತ್ತು ಆತನ ಮೂಲಕ ಆತನ ಜನಾಂಗದವರಿಗೆ ದಯಪಾಲಿಸಿದ ದೇವರ ಬಳಿಗೆ ಹಿಂತಿರುಗುವುದು. – **"ಮಣ್ಣು ಭೂಮಿಗೆ ಸೇರಿ ಇದ್ದ ಹಾಗಾಗುವುದು. ಆತ್ಮವು ತನ್ನನ್ನು ದಯಪಾಲಿಸಿದ ದೇವರ ಬಳಿಗೆ ಸೇರುವುದು"** (ಪ್ರಸಂಗಿ 12:7). ಅದು ದೇವರ ಬಳಿಗೆ ಹಿಂತಿರುಗುವುದೆಂದರೆ ಸಂತಾನೋತ್ಪತ್ತಿಯಲ್ಲಿದ್ದಂತೆ ಇನ್ನು ಮುಂದೆ ಮಾನವ ನಿಯಂತ್ರಣಕ್ಕೆ ವಶವರ್ತಿಯಾಗಿರುವುದಿಲ್ಲ ಮತ್ತು ದೈವಿಕ ಶಕ್ತಿಯಿಲ್ಲದೆ ಅದು ಪುನಃಸ್ಥಾಪನೆಗೊಳ್ಳುವುದಿಲ್ಲ. ಈ ಸತ್ಯವನ್ನು ಗ್ರಹಿಸಿ, ದೇವರ ಸೂಚನೆಗೆ ಒಳಪಟ್ಟವರು ಪುನರುತ್ಥಾನದ ಮೂಲಕವಾದ ತಮ್ಮ ಭವಿಷ್ಯ ಜೀವನದ ನಿರೀಕ್ಷೆಯನ್ನು ದೇವರಿಗೆ ಮತ್ತು ಕ್ರಿಸ್ತನಿಗೆ, ಈಗ ಉನ್ನತಕ್ಕೇರಿರುವ ಆತನ ಪ್ರತಿನಿಧಿಗೆ ಒಪ್ಪಿಸಿಕೊಡುತ್ತಾರೆ (ಲೂಕ 23:46, ಅ.ಕೃ. 7:59). ಹಾಗಾದರೆ, ದೇವರು ಮಾನವನ ಭವಿಷ್ಯತ್ ಜೀವನದ ಬಗ್ಗೆ ಈಡುಬಲಿಯ ಮತ್ತು ವಾಗ್ದಾನ ಮಾಡಲ್ಪಟ್ಟ ಪುನರುತ್ಥಾನದ ಮೂಲಕ ಏನೂ ಮಾಡಿರದಿದ್ದರೆ, ಮರಣವು ಮಾನವ ಕುಲದ ಎಲ್ಲಾ ನಿರೀಕ್ಷೆಗಳ ಅಂತ್ಯವಾಗಿರುತ್ತಿತ್ತು – 1 ಕೊರಿಂಥ 15: 14–18.

ಆದರೆ, ದೇವರು ನಾವು ಪುನಃ ಜೀವಿಸುವ ಮುನ್ನೇರ್ಪಾಡನ್ನು ಮಾಡಿರುತ್ತಾನೆ. ಆತನು ತನ್ನ ಈ ಕೃಪಾಪೂರ್ಣವಾದ ಯೋಜನೆಯನ್ನು ಬಹಿರಂಗಪಡಿಸಿದಂದಿನಿಂದ, ಈ ಪ್ರಸ್ತಾಪದ ಮೇಲೆ ಬುದ್ಧಿವಂತಿಕೆಯಿಂದ ಮಾತನಾಡುವವರೂ, ಬರೆಯುವವರೂ (ಉದಾಹರಣೆಗೆ, ಸ್ಫೂರ್ತಿಭರಿತರಾದ ಸತ್ಯವೇದ ಬರಹಗಾರರು) ಸಾಮಾನ್ಯವಾದ ಒಪ್ಪಿಗೆಯೋ ಎಂಬಂತೆ ಮರಣ ಮತ್ತು ಪುನರುತ್ಥಾನಗಳ ನಡುವಿನ ಪ್ರಜ್ಞಾಹೀನ ಸ್ಥಿತಿಯ ಬಗ್ಗೆ ಮಾತನಾಡುತ್ತಾ ಪ್ರಜ್ಞೆಯು 'ನಿದ್ರೆಯ' ಕಾರಣ ತಡೆಹಿಡಿಯಲಾಗುತ್ತದೆ ಎಂದು ಹೇಳುತ್ತಾರೆ. ಇದಕ್ಕೆ ಕೊಡುವ ಉದಾಹರಣೆಯು ಸಹಾ ಅದ್ಭುತವಾಗಿದೆ; ಎಚ್ಚರವಾಗುವ ಒಂದು ಕ್ಷಣವು ಅವರಿಗೆ ಅವರ ಸಾವಿನ ಕ್ಷಣದ ಮುಂದಿನ ಕ್ಷಣದಂತೆ ಕಂಡುಬರುವುದು. ಉದಾಹರಣೆಗೆ ನಾವು ಲಾಜ಼ರನ ಮರಣದ ಬಗ್ಗೆ ಓದುತ್ತಾ ನಮ್ಮ ಕರ್ತನು **"ನಮ್ಮ ಮಿತ್ರನಾದ ಲಾಜ಼ರನು ನಿದ್ರೆಮಾಡುತ್ತಾನೆ. ನಾನು ಅವನನ್ನು ನಿದ್ರೆಯಿಂದ ಎಬ್ಬಿಸುವುದಕ್ಕಾಗಿ ಹೋಗುತ್ತೇನೆ"** (ಯೋಹಾನ 11:11) ಎಂದಿದ್ದಾನೆ. ನಂತರದಲ್ಲಿ, ಶಿಷ್ಯರು ಅರ್ಥಮಾಡಿಕೊಳ್ಳುವಲ್ಲಿ ತಡವಾದಾಗ **"ಯೇಸು ಸ್ಪಷ್ಟವಾಗಿ ಅವರಿಗೆ – ಲಾಜ಼ರನು ಸತ್ತು ಹೋದನು"** ಎಂದೆನ್ನುತ್ತಾನೆ (14ನೇ ವಚನ). ಮರಣದಲ್ಲಿ ಎಚ್ಚರವಾಗಿರುವ ವಿಚಾರ ಸರಿಯಾಗಿದ್ದರೆ, ಲಾಜ಼ರನು ತಾನು ಸತ್ತ ಆ ನಾಲ್ಕು ದಿನಗಳ ಅನುಭವದ ಬಗ್ಗೆ ಏನೂ ಹೇಳದಿರುವುದು ಗಮನಾರ್ಹವಾಗಿದೆ ಅಲ್ಲವೇ? ಆತನು ಯಾತನೆಯುಳ್ಳ 'ನರಕ'ದಲ್ಲಿದ್ದೆನೆಂದು ಯಾರೂ ಹೇಳುವುದು ಇಲ್ಲ. ಯಾಕೆಂದರೆ ನಮ್ಮ ಕರ್ತನೇ ಹೇಳುವಂತೆ ಲಾಜ಼ರನನ್ನು ಯೇಸುವಿನ ತನ್ನ ಸ್ನೇಹಿತನೆಂದಿದ್ದಾನೆ. ಆತನು ಪರಲೋಕದ ಪರಮ ಸುಖ ಅನುಭವಿಸುತ್ತಿದ್ದರೆ ಕರ್ತನು ಆತನನ್ನು ಅಲ್ಲಿಂದ ಖಂಡಿತವಾಗಿಯೂ ವಾಪಾಸ್ಸು ಕರೆಯುತ್ತಿದ್ದಿಲ್ಲ. ಹಾಗೆ ಮಾಡುತ್ತಿದ್ದರೆ ಅದು ಸ್ನೇಹದ ಕಾರ್ಯವಾಗುತ್ತಿದ್ದಿಲ್ಲ. ಆದರೆ ನಮ್ಮ ಕರ್ತನು ವ್ಯಕ್ತಪಡಿಸಿರುವಂತೆ, ಲಾಜ಼ರನು ಮರಣ ನಿದ್ರೆಹೋಗಿದ್ದನು. ಕರ್ತನು ಆತನನ್ನು ಪುನಃ ಜೀವಿತನಾಗಿ ಅಂದರೆ, ಆತನ ಪ್ರಾಜ್ಞಾ ಸ್ಥಿತಿಗೆ, ಆತನ ಚೇತನಾಯುಕ್ತತೆಗೆ ಎಬ್ಬಿಸಿದನು. ಆತನ ಆತ್ಮವು ಹಿಂತಿರುಗಿ ಪುನರ್ಜೀವಿತಗೊಂಡಿತು. ಇವುಗಳೆಲ್ಲವೂ ಆತನ ಕೃಪೆಯಾಗಿದ್ದು ಇವನ್ನು ಲಾಜ಼ರನು ಆತನ ಎಲ್ಲಾ ಸ್ನೇಹಿತರುಗಳು ಬಹಳವಾಗಿ ಮೆಚ್ಚಿಕೊಳ್ಳುತ್ತಾರೆ.

ಎಚ್ಚರಿಕೆಯ ಹಾಗೂ ಪುನರುತ್ಥಾನದ ಆ ಮುಂಜಾವಿಗೆ ಹೋಲಿಸಿದರೆ ನಾವೆಲ್ಲರೂ ಈಗ ಮರಣ ರಾತ್ರಿಯಲ್ಲಿದ್ದೇವೆ ಎಂಬ ಅರ್ಥವನ್ನು ಸತ್ಯವೇದವು ನಮಗೆ ಹರಡುತ್ತದೆ. **"ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳುಕೊಂಡರೂ ಮುಂಜಾನೆ ಹರ್ಷಧ್ವನಿ ಕೇಳಿಸುವುದು"** (ಕೀರ್ತನೆ 30:5) – ಇದುವೇ ಪುನರುತ್ಥಾನದ ಮುಂಜಾವು. ಆಗ ಮಲಗಿರುವವರೆಲ್ಲರೂ ತಮ್ಮ ಸಮಾಧಿಯಿಂದ ಎದ್ದು ಬರುವರು ಎಂಬುದಾಗಿ ಪ್ರವಾದಿಯು ಹೇಳಿದ್ದಾನೆ – **"ಮೃತರಾದ ನಿನ್ನ ಜನರು ಬದುಕುವರು, ನನ್ನವರ ಹೆಣಗಳು ಜೀವದಿಂದೇಳುವವು, ಮಣ್ಣಿನಲ್ಲಿ ಪವಳಿಸಿರುವವರೇ, ಎಚ್ಚತ್ತು ಹರ್ಷ ಧ್ವನಿಗೈಯಿರಿ"** (ಯೆಶಾಯ 26:19).

ಅಪೋಸ್ತಲನು ಸಹಾ ಇದನ್ನು ಯುಕ್ತವಾದ ರೀತಿಯಲ್ಲಿ ಆಗಾಗ್ಗೆ ಉಪಯೋಗಿಸಿರುತ್ತಾನೆ. ಇದು ನಿರೀಕ್ಷಾದಾಯಕ ಮತ್ತು ಶಾಂತಿಭರಿತವಾದ ರೂಪಕವಾಗಿದೆ. ಉದಾಹರಣೆಗೆ, ಲೂಕನು ಮೊಟ್ಟಮೊದಲ ರಕ್ತಸಾಕ್ಷಿಯಾದ ಸ್ತೆಫನನಿಗೆ **"ಆತನು ನಿದ್ರೆಹೊಂದಿದನು"** ಎನ್ನುತ್ತಾನೆ (ಅ.ಕೃ. 7:60) ಅಂತಿಯೋಕ್ಯದಲ್ಲಿ ಪೌಲನ ಭಾಷಣದ ಬಗ್ಗೆ ಬರೆಯುತ್ತಾ **"ದಾವೀದನು ದೈವ ಸಂಕಲ್ಪದಿಂದ ನಿದ್ರೆ ಹೋದನು"** (ಅ.ಕೃ. 7:60, 13:36) ಎಂದಿದ್ದಾನೆ. ಪೇತ್ರನು ಸಹಾ ಇದೇ ರೀತಿಯಲ್ಲಿ ವ್ಯಕ್ತಪಡಿಸುವವನಾಗಿ **"ನಮ್ಮ ಪಿತೃಗಳು ನಿದ್ರೆಹೊಂದಿದ ದಿನದಿಂದ ಮೊದಲುಗೊಂಡು ... "** (2 ಪೇತ್ರ 3:4) ಎಂದು ಬರೆಯುತ್ತಾನೆ. ಕೆಳಕಂಡ ಉಲ್ಲೇಖಗಳು ತೋರಿಸುವಂತೆ ಪೌಲನು ಸಹಾ ಇದೇ ರೀತಿಯ ಉಪಯೋಗ ಮಾಡಿದ್ದಾನೆ :–

**"ಗಂಡನು ಸತ್ತಿದ್ದರೆ"** (ನಿದ್ರೆಹೋಗಿದ್ದರೆ – fall asleep ಎಂಬುದಾಗಿ ಗ್ರೀಕ್ ಸತ್ಯವೇದದಲ್ಲಿದೆ) . . . . . " – 1 ಕೊರಿಂಥ 7:39.

**"ಇವರಲ್ಲಿ ಹೆಚ್ಚು ಜನರು ಇಂದಿನವರೆಗೂ ಇದ್ದಾರೆ, ಕೆಲವರು ನಿದ್ರೆಹೋಗಿದ್ದಾರೆ"** – 1 ಕೊರಿಂಥ 15:6.

**"ಇದು ಮಾತ್ರವಲ್ಲದೆ ಕ್ರಿಸ್ತನವರಾಗಿ ನಿದ್ರೆಹೋದವರು ನಾಶವಾದರು"** – 1 ಕೊರಿಂಥ 15:18.

**"ಕ್ರಿಸ್ತನು ಸತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆಹೋದವರಲ್ಲಿ ಪ್ರಥಮಫಲವಾದನು"** – 1 ಕೊರಿಂಥ 15:20.

**"ಕೇಳಿರಿ, ಇದುವರೆಗೆ ಗುಪ್ತವಾಗಿದ್ದ ಸಂಗತಿಯನ್ನು ನಿಮಗೆ ತಿಳಿಸುತ್ತೇನೆ – ನಾವೆಲ್ಲರೂ ನಿದ್ರೆಹೋಗುವುದಿಲ್ಲ"** – 1 ಕೊರಿಂಥ 15:51.

**"ಸಹೋದರರೇ, ನಿದ್ರೆಹೋಗುವವರ ಗತಿ ಏನೆಂದು ನೀವು ತಿಳಿಯದೆ ಇದ್ದು ನಿರೀಕ್ಷೆ ಇಲ್ಲದವರಾದ ಇತರರಂತೆ ದುಃಖಿಸುವುದು ನಮ್ಮ ಮನಸ್ಸಿಗೆ ಒಪ್ಪುವುದಿಲ್ಲ"** – 1 ಥೆಸ. 4:13.

**"ಯೇಸು ಸತ್ತು ಜೀವಿತನಾಗಿ ಎದ್ದನೆಂದು ನಾವು ನಂಬಿದ ಮೇಲೆ ಅದರಂತೆ ಯೇಸುವಿನಲ್ಲಿದ್ದುಕೊಂಡು ನಿದ್ರೆಹೋಗುವವರನ್ನು ಸಹ ದೇವರು ಆತನೊಡನೆ ಕರಕೊಂಡು ಬರುವನೆಂದು ನಂಬ ಬೇಕಲ್ಲವೇ?"** – 1 ಥೆಸ. 4:14.

**"ಕರ್ತನು ಪ್ರತ್ಯಕ್ಷನಾಗುವವರೆಗೂ ಜೀವದಿಂದುಳಿದಿರುವ ನಾವು ನಿದ್ರೆಹೋದವರಿಗಿಂತ ಮುಂದಾಗುವುದೇ ಇಲ್ಲ"** – 1 ಥೆಸ. 4:15.

ಇದೇ ಆಲೋಚನೆಯನ್ನು ಪ್ರವಾದಿಯಾದ ದಾನಿಯೇಲನು ಸಹಾ ವ್ಯಕ್ತಪಡಿಸಿದ್ದಾನೆ. ಪುನರುತ್ಥಾನವನ್ನು ವಿವರಿಸುತ್ತಾ ಆತನು ಹೇಳುವುದೇನೆಂದರೆ – **"ದೂಳಿನ ನೆಲದೊಳಗೆ ದೀರ್ಘ ನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚತ್ತು..."** (ದಾನಿ. 12:2). ಈ ವಿವರಣೆಯಲ್ಲಿ ನಿದ್ರೆ ಹೋದವರೊಳಗೆ, ಒಳ್ಳೆಯವರು, ಕೆಟ್ಟವರು ಇಬ್ಬರೂ ಇದ್ದಾರೆ. ಕರ್ತನ ದಿನವನ್ನು ಅಂದರೆ ಕ್ರಿಸ್ತನ ದಿನವನ್ನು, ಮಿಲಿಯಾಂತರ ಯುಗದ ದಿನವನ್ನು ಕಾಯುತ್ತಾ ಅವರು ಶಾಂತತೆಯಲ್ಲಿ ನಿದ್ರೆಹೋಗಿದ್ದಾರೆ. **"ಆತನು ನನ್ನ ವಶದಲ್ಲಿಟ್ಟಿರುವುದನ್ನು ಆತನು ಆ ದಿನಕ್ಕಾಗಿ ಕಾಪಾಡುವುದಕ್ಕೆ ಶಕ್ತನಾಗಿದ್ದಾನೆಂದು ದೃಢವಾಗಿ ನಂಬಿದ್ದೇನೆ"** (2 ತಿಮೋ. 1:12) ಎಂದು ಪೌಲನು ಬರೆಯುತ್ತಾನೆ. ಇದೇ ಆಲೋಚನೆಯು – ದೇವರು ಮೊದಲು ಅಬ್ರಹಾಮನೊಡನೆ ಪುನರುತ್ಥಾನದ ಬಗ್ಗೆ ಬೋಧಿಸಿದ ಕಾಲದಿಂದಲೂ ಹಳೆ ಒಡಂಬಡಿಕೆಯಲ್ಲಿ ಸಾದ್ಯಂತವಾಗಿ ಹರಿದಿದೆ. **"ಆತನು ತನ್ನ ಪಿತೃಗಳೊಂದಿಗೆ ನಿದ್ರೆಹೋದನು"** ಎಂಬ ಮಾತುಗಳು ಹಳೆ ಒಡಂಬಡಿಕೆಯಲ್ಲಿ ಸಾಮಾನ್ಯವಾಗಿದೆ. ಆದರೆ ಯೋಬನು ಈ ಮಾತುಗಳನ್ನು ಇನ್ನೂ ಪ್ರಭಲವಾದ ರೀತಿಯಲ್ಲಿ ಹೇಳುವವನಾಗಿ **"ಒಬ್ಬ ಮನುಷ್ಯನು ಸತ್ತು ಪುನಃ ಬದುಕಾನೆ? ಹಾಗಾಗುವುದಾದರೆ ನನಗೆ ಬಿಡುಗಡೆಯಾಗುವವರೆಗೆ ನನ್ನ ವಾಯಿದೆಯ ದಿನಗಳಲ್ಲೆಲ್ಲಾ ಕಾಯ್ದುಕೊಂಡಿರುವೆನು"** (ಯೋಬ 14:14). ಇಂದಿನ ಸಾಯುವ ಸಮಯವು ದೇವರ ಕ್ರೋಧದ ಸಮಯವಾಗಿದೆ. ದೇವರು ಇತ್ತ ಮೂಲ ಪಾಪದ ನಿಮಿತ್ತವಾದ ಮರಣ ಶಾಪವು ಎಲ್ಲರ ಮೇಲಿತ್ತು. ಆದಾಗ್ಯೂ ಸೂಕ್ತಸಮಯದಲ್ಲಿ ಈ ಶಾಪವು ತೆಗೆದು ಹಾಕಲ್ಪಡುವುದು ಮತ್ತು ವಿಮೋಚಕನ ಮೂಲಕ ಲೋಕದ ಎಲ್ಲಾ ಕುಟುಂಬಗಳವರಿಗೂ ಆಶೀರ್ವಾದವುಂಟಾಗುವುದು ಎಂಬ ವಾಗ್ದಾನವು ನಮಗೆ ದೇವರಿಂದಲೇ ಕೊಡಲ್ಪಟ್ಟಿತ್ತು. ಯೋಬನು ಮುಂದುವರಿಸುತ್ತಾ – **"ನೀನು ಕರೆದರೆ ಉತ್ತರ ಕೊಡುವೆನು. ನೀನು ಸೃಷ್ಟಿಸಿದ ನನ್ನ ಮೇಲೆ ನಿನಗೆ ಹಂಬಲಿಕೆ ಹುಟ್ಟೀತು"** (ಯೋಬ 14:15, ಯೋಹಾ. 5:25) ಎಂದಿದ್ದಾನೆ. ನೂತನ ಒಡಂಬಡಿಕೆಯ ಕಾಲದವರಾದ ನಾವು ನಮ್ಮ ಕರ್ತನ ಒಡಂಬಡಿಕೆಯನ್ನು ಹೀಗೆ ಓದುತ್ತೇವೆ. **"ಸತ್ತವರು ದೇವಕುಮಾರನ ಧ್ವನಿಯನ್ನು ಕೇಳುವ ಕಾಲ ಬರುತ್ತದೆ, ಈಗಲೇ ಬಂದದೆ... ಸಮಾಧಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವುದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವುದು"** – ಯೋಹಾನ 5: 25,28,29).

ಮರಣ ಅಥವಾ 'ನಿದ್ರೆ' ಎಂಬುದು ನಿರಪೇಕ್ಷವಾಗಿ ಒಂದು ಪ್ರಜ್ಞಾಹೀನ ಸ್ಥಿತಿಯ ಕಾಲಾವಧಿಯಾಗಿದೆ. ಆ ನಿದ್ರೆಯಿಂದ ಎಚ್ಚೆತ್ತವರಿಗೆ ಆ ಕಾಲಾವಧಿಯ ಬಗ್ಗೆ ಯಾವ ತಿಳುವಳಿಕೆಯೂ ಇರುವುದಿಲ್ಲ. ನಿಜವಾಗಿ 'ನಿದ್ರೆ'ಎಂಬುದು ಕೇವಲ ಅನುಕೂಲಕ್ಕಾಗಿ ಉಪಯೋಗಿಸುವ ಪದವಾಗಿದ್ದು 'ಮರಣ'ವು ಮರಣವೇ ಆಗಿದೆ. ಸತ್ತವರು ಸಂಪೂರ್ಣವಾಗಿ ನಾಶವಾಗಿದ್ದಾರೆ. ಅದರ ಹೊರತಾಗಿ ದೇವರ ವಿವೇಕವು ಅವರ ಅನನ್ಯತೆಯನ್ನು ಕಾಪಾಡಿ ಅವರು ಎಚ್ಚರಗೊಳ್ಳುವುದನ್ನು ಯೇಸುಕ್ರಿಸ್ತನ ಮೂಲಕ ನಿರ್ಣಯಿಸಿದ್ದಾನೆ – ಇದು ಪುನರ್ ಸಂಘಟನೆ ಅಥವಾ ಪುನರ್‌ಜೀವಿಸುವುದಾಗಿದೆ. ಇದು ನಿಜವಾಗಿಯೂ ಪುನಃಸೃಷ್ಟಿ ಆಗಿದೆ. ಆದಾಮ ಮತ್ತು ಹವ್ವರ ಮೂಲ ಸೃಷ್ಟಿಗಿಂತಲೂ ಮಿಗಿಲಾದ ದೇವರ ಶಕ್ತಿಯ ಪ್ರಕಟನೆಯಾಗಿದೆ. ಇದು ಇಬ್ಬರು ವ್ಯಕ್ತಿಗಳಿಗಿಂತಲೂ 50 ಮಿಲಿಯಕ್ಕೂ ಹೆಚ್ಚು ವ್ಯಕ್ತಿಗಳ ಪುನರ್‌ಸೃಷ್ಟಿಯೇ ಆಗಿದೆ. ಇದು ಲೆಕ್ಕವಿಲ್ಲದಷ್ಟು ವೈವಿದ್ಯಮಯಗಳ

ಪುನರುತ್ಪತ್ತಿಯಾಗಿದೆ. ನಮ್ಮ ದೇವರು ಮಾತ್ರವೇ ಅಂಥಾಃ ಸರ್ವಶಕ್ತ ಜ್ಞಾನ ಮತ್ತು ಶಕ್ತಿಗಳನ್ನು ಹೊಂದಿದ್ದಾನೆ; ಆತನು ಇದನ್ನು ಮಾಡಲು ಶಕ್ತನೂ, ಇಚ್ಛೆಯುಳ್ಳವನೂ ಆಗಿದ್ದಾನೆ. ಎಲ್ಲಾ ದೈವಿಕ ಲಕ್ಷಣಗಳನ್ನು ಪ್ರಕಟಪಡಿಸುವ ಪ್ರಯೋಜನಗಳಲ್ಲಿ ಕೆಡುಕಿನ ಅನುಮತಿಯನ್ನು ನಿರ್ಮೂಲ ಮಾಡುವುದು ಒಂದು ಪ್ರಯೋಜನವಾಗಿದೆ. ಇಲ್ಲವಾದಲ್ಲಿ ಈ ದೈವಿಕ ಲಕ್ಷಣಗಳು ಪ್ರಕಟವಾಗುತ್ತಿದ್ದಿಲ್ಲ ಮತ್ತು ತಿಳಿದುಬರುತ್ತಿದ್ದಿಲ್ಲ. ಮಾನವರ ಮತ್ತು ದೇವದೂತರ ಮುಂದೆ ದೈವಿಕ ಜ್ಞಾನವು ಪ್ರಕಾಶಿಸುತ್ತದೆ. ಅಂತೆಯೇ ದೇವರ ಪ್ರೀತಿಯು, ದೇವರ ಶಕ್ತಿಯೂ, ಕಡೆಯಲ್ಲಿ ದೇವರ ಜ್ಞಾನವು ಸಹಾ ದೇವರ ಲಕ್ಷಣವನ್ನು ಪ್ರದರ್ಶಿಸುವಂತೆ ಕಂಡುಬರುತ್ತದೆ ಮತ್ತು ಎಲ್ಲಾ ಸೃಷ್ಟಿಗಳು ಸಹಾ ಅವನ್ನು ತಮ್ಮದಾಗಿಸಿಕೊಳ್ಳುತ್ತವೆ.

ಸತ್ತವರ ಪುನರುತ್ಥಾನದ ಅಗತ್ಯತೆಯ ಬಗ್ಗೆ ದೇವರ ವಾಕ್ಯವು ಹೆಚ್ಚು ಸ್ಪಷ್ಟವೂ, ಕೂಲಂಕುಷವೂ ಆಗಿದೆ – ಯಾರೂ ಮರಣಹೊಂದದೇ ಹೋದಲ್ಲಿ ಸತ್ತವರು ಪುನರುತ್ಥಾನಗೊಳ್ಳುವುದಾದರೂ ಹೇಗೆ? ಆದರೆ, ಕೆಲವರು ಸಮರ್ಥಿಸುವಂತೆ **"ಸಾಯುವಂತೆ ಕಾಣುವವರೆಲ್ಲರೂ,** ಅವರು ಸದಾ ಇದ್ದುದಕ್ಕಿಂತಲೂ ಇನ್ನೂ ಹೆಚ್ಚು ಜೀವಂತರಾಗಿದ್ದಾರೆ": ಈ ರೀತಿಯಾಗಿ ಇದು ಪ್ರತಿ ಬುದ್ಧಿವಂತ ಪಂಚ ಜ್ಞಾನೇಂದ್ರಿಯಗಳನ್ನೂ ವಿರೋಧಿಸುವುದಲ್ಲದೆ, **"ಜೀವಿತರ ಗುಂಪಿನಲ್ಲಿ ಸೇರಿದವನಿಗೆ ನಿರೀಕ್ಷೆಯುಂಟು; ಸತ್ತ ಸಿಂಹಕ್ಕಿಂತ ಬದುಕಿರುವ ನಾಯಿಯೇ ಲೇಸು. ಜೀವಿತರಿಗೆ** (ಕಡಿಮೆ ಬುದ್ದಿವಂತರಿಗೆ ಸಹಾ) **ಸಾಯುತ್ತೇವೆಂಬ ತಿಳುವಳಿಕೆಯು ಉಂಟಷ್ಟೆ; ಸತ್ತವರಿಗೋ ಯಾವ ತಿಳುವಳಿಕೆಯೂ ಇಲ್ಲ. ಅವರಿಗೆ ಇನ್ನು ಮೇಲೆ ಪ್ರತಿಫಲವೇನೂ ಇಲ್ಲ. ಅವರ ಜ್ಞಾಪಕವೇ** (ಸರ್ವಸಾಮಾನ್ಯವಾಗಿ) **ಹೋಯಿತಲ್ಲವೇ? ಅವರು ಸತ್ತಾಗಲೇ ಅವರ ಪ್ರೀತಿಯೂ, ಹಗೆಯೂ, ಹೊಟ್ಟೇಕಿಚ್ಚೂ ಅಳಿದುಹೋದವು, ಲೋಕದಲ್ಲಿ ನಡೆಯುವ ಯಾವ ಕೆಲಸದಲ್ಲಿಯೂ ಅವರಿಗೆ ಇನ್ನೆಂದಿಗೂ ಪಾಲೇ ಇಲ್ಲ"** (ಪ್ರಸಂಗಿ 9:4–6) ಎಂಬ ಸತ್ಯವೇದದ ಸಕಾರಾತ್ಮಕವಾದ ಹೇಳಿಕೆಯನ್ನು ಅಲ್ಲಗಳೆಯುವುದಾಗಿದೆ. [ಯಾಕೆಂದರೆ ಅವರು ಇನ್ನುಮುಂದೆ ಸೂರ್ಯನ ಅಡಿಯಲ್ಲಿ ನೆರವೇರುವ ಯಾವುದರಲ್ಲಿಯೂ ನಿರಂತನದ (ಇಬ್ರಿಯ olam = ದೀರ್ಘವಾದ ಅನಿಶ್ಚಿತಾವಧಿ) ಭಾಗವಾಗಿರುವುದಿಲ್ಲ.]

**"ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣಶಕ್ತಿಯಿಂದ ಮಾಡು; ನೀನು ಸೇರಬೇಕಾದ ಪಾತಾಳದಲ್ಲಿ* ಮರಣದ ಸ್ಥಿತಿ ಯಾವ ಕೆಲಸವೂ, ಯುಕ್ತಿಯೂ, ತಿಳುವಳಿಕೆಯೂ, ಜ್ಞಾನವೂ ಇರುವುದಿಲ್ಲ"** (ವಚನ 10). **"ನೀನು ಆ ಒಡೆಯರ ಮೇಲೆ ಕೈಮಾಡಿ ನಿರ್ಮೂಲಪಡಿಸಿ ಅವರ ಜ್ಞಾಪಕವನ್ನು ಅಳಿಸಿಬಿಟ್ಟಿದ್ದೀ; ಸತ್ತವರು ಪುನಃ ಬದುಕುವುದಿಲ್ಲ, ಪ್ರೇತಗಳು ಎದ್ದುಬರುವುದಿಲ್ಲವಲ್ಲಾ"** (ಯೆಶಾಯ 26:14).

**"ಹೀಗೆಯೇ ಮನುಷ್ಯರ ನಿರೀಕ್ಷೆಯನ್ನು ಹಾಳುಮಾಡುವಿ. ನೀನು ಅವನಿಗೆ ಶಾಶ್ವತವಾದ ಅಪಜಯವನ್ನು ಉಂಟುಮಾಡಿದ್ದರಿಂದ ಅವನು ಹೋಗೇ ಬಿಡುವನು. ನೀನು ಅವನ ಮುಖವನ್ನು ಮಾರ್ಪಡಿಸಿ ಅವನನ್ನು ತೊಲಗಿಸಿಬಿಡುವಿ. ಅವನ ಮಕ್ಕಳು ಘನತೆಯನ್ನು ಹೊಂದುವುದು ಅವನಿಗೆ ತಿಳಿಯುವುದಿಲ್ಲ. ಅವರು ಕುಂದಿಹೋಗುವಾಗಲೂ ಅವರ ಸ್ಥಿತಿಯು ಅವನಿಗೆ ಗೋಚರವಾಗುವುದಿಲ್ಲ"** – ಯೋಬ 14:19:21.

1 ಕೊರಿಂಥ 15:12–54ರವರೆಗಿನ ಭಾಗವನ್ನು ಓದಿಕೊಳ್ಳಿರಿ :

ಮೊದಲನೆಯ ವಚನದಲ್ಲಿ ಆತನು **"ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದಿರುತ್ತಾನೆಂದು ಸಾರೋಣವಾಗುತ್ತಿರುವಲ್ಲಿ ನಿಮ್ಮೊಳಗೆ ಕೆಲವರು – ಸತ್ತವರಿಗೆ ಪುನರುತ್ಥಾನವೇ ಇಲ್ಲವೆಂದು ಹೇಳುವುದು ಹೇಗೆ?"** ಎಂದು ಪ್ರಶ್ನಿಸುತ್ತಾನೆ.

ಸತ್ತವರು ಸತ್ತಿಲ್ಲವಾದರೆ, ಅವರು ಮೊದಲಿಗಿಂತಲೂ ಹೆಚ್ಚು ಜೀವಂತರಾಗಿರುವುದಾದರೆ, ಯಾರೂ ಸತ್ತೇ ಇಲ್ಲ, ಮತ್ತು ನಿಶ್ಚಯವಾಗಿಯೂ ಸತ್ತವರ ಪುನರುತ್ಥಾನವೆಂಬುದು ಇರುವುದೇ ಇಲ್ಲ. ಆದರೆ ಅಪೋಸ್ತಲರು ಅಂಥಾಃ ಯಾವುದೇ ವಿಚಾರಸರಣಿಯನ್ನು ಎತ್ತಿ ಹಿಡಿಯಲಿಲ್ಲ. ಆದರೆ ಇದಕ್ಕೆ ತೀರಾ ವ್ಯತಿರಿಕ್ತವಾಗಿ, ದೇವರು ಅವರನ್ನು ಪುನರುತ್ಥಾನಗೊಳಿಸದೇ ಹೋದಲ್ಲಿ ಸತ್ತವರೆಲ್ಲರೂ ಪಶುಗಳಂತೆ, ಕಾಡು ಮೃಗಗಳಂತೆ ನಾಶವಾಗಿ ಹೋಗುತ್ತಿದ್ದರು. ಅವರ ಬಗ್ಗೆ ಪುನರುತ್ಥಾನದ ನಿರೀಕ್ಷೆಯು ವ್ಯರ್ಥವಾಗಿ ಬಿಡುತ್ತಿತ್ತು. ವಿಶ್ವದ ಬಲು ದೊಡ್ಡ ತರ್ಕಶಾಸ್ತ್ರಿಯಾದ ಪೌಲನ ಪ್ರಭಲವಾದ ವಾಗ್ವಾದವನ್ನು ಗಮನಿಸಿರಿ.

* Sheol – ಸಮಾಧಿಯಲ್ಲಿರುವ ಹೆಣದ ಸ್ಥಿತಿಗೆ ವಿರೋಧವಾಗಿ ಆತ್ಮದ ಬಗ್ಗೆ ಇರುವ ಮರಣ ಪರಿಸ್ಥಿತಿ. ಇಬ್ರಿಯ ಬಾಷೆಯಲ್ಲಿ Qebar ಅಂದರೆ ಸಮಾಧಿ (ಕೀರ್ತನೆ 30:3; 49:15, 89:48 ಇವುಗಳಲ್ಲಿ Sheol ಅನ್ನು Grave ಎಂಬುದಾಗಿ ಭಾಷಾಂತರಪಡಿಸಿದರೆ 2 ಪೂರ್ವ 34:28ರಲ್ಲಿ Sheol ಅನ್ನು Grave ಎಂಬುದಾಗಿ ಭಾಷಾಂತರಿಸಲಾಗಿದೆ), ಯೋಬ 10:19, ಕೀರ್ತ. 83:5, 16:10, ಅ.ಕೃ. 2:27. "He made His grave (Qebar, tomb) with the wicked and rich" – **"ಅವನು ಸತ್ತಾಗ ದುಷ್ಟರ ಮಧ್ಯೆ ಪುಷ್ಟರ ನಡುವೆ ಅವನನ್ನು ಹೂಣಿಟ್ಟರು"** ಎಂದು ಓದುತ್ತೇವೆ – ಯೆಶಾಯ 535:9.

ಆತನು ಹೇಳುವುದೇನೆಂದರೆ :–

**"ಸತ್ತವರಿಗೆ ಪುನರುತ್ಥಾನವಿಲ್ಲವೆಂಬುದು ನಿಜವಾಗಿದ್ದರೆ ಕ್ರಿಸ್ತನಾದರೋ ಎದ್ದು ಬರಲಿಲ್ಲ. (ಇನ್ನೂ ಸತ್ತವನಾಗಿಯೇ ಇದ್ದಾನೆ) ಕ್ರಿಸ್ತನು ಎದ್ದು ಬರಲಿಲ್ಲವಾದರೆ ನಮ್ಮ ಪ್ರಸಂಗವು ಹುರುಳಿಲ್ಲದ್ದು ಮತ್ತು ನಿಮ್ಮ ನಂಬಿಕೆಯೂ ಹುರುಳಿಲ್ಲದ್ದು** (ಯಾಕೆಂದರೆ ಸತ್ತವನಾದ ಕ್ರಿಸ್ತನು ಏನೂ ತಿಳಿಯದವನಾಗಿರುತ್ತಾನೆ ಮತ್ತು ಯಾರಿಗೂ ಸಹಾಯ ಮಾಡುವ ಸ್ಥಿತಿಯಲ್ಲಿರುವುದಿಲ್ಲ) **ಇದಲ್ಲದೆ ಸತ್ತವರು ಎದ್ದು ಬರುವುದಿಲ್ಲವೆಂಬುದು ನಿಜವಾಗಿದ್ದ ಪಕ್ಷದಲ್ಲಿ ದೇವರು ಕ್ರಿಸ್ತನನ್ನು ಎಬ್ಬಿಸಲೇ ಇಲ್ಲ. ಎಬ್ಬಿಸಿದನೆಂದು ಸಾಕ್ಷಿ ಕೊಟ್ಟ ನಾವು ದೇವರ ವಿಷಯವಾಗಿ ಸುಳ್ಳು ಸಾಕ್ಷಿ ಹೇಳಿದವರಾಗಿ ಕಂಡು ಬಂದೆವು. ಎದ್ದು ಬರುವುದಿಲ್ಲವಾದರೆ ಕ್ರಿಸ್ತನೂ ಎದ್ದು ಬರಲಿಲ್ಲ"** – 1 ಕೊರಿಂಥ 15: 13–16.

ಇಲ್ಲಿ ಅಪೋಸ್ತಲನು ದೇಹದ ಪುನರುತ್ಥಾನದ ಬಗ್ಗೆ ವಾದಿಸುತ್ತಿಲ್ಲ ಎಂಬುದನ್ನು ಗಮನಿಸ ಬೇಕಾಗುತ್ತದೆ, ಆತನು ಜೀವಿಯ ಅಥವಾ ಆತ್ಮದ ಪುನರುತ್ಥಾನದ ಬಗ್ಗೆ ಮಾತನಾಡುತ್ತಾನೆ – ಆತನು ಪಾತಾಳದಲ್ಲಿ ಬಿಡಲ್ಪಡಲಿಲ್ಲ – His soul was not left in hell (ಅ.ಕೃ. 2:31). ಪೌಲನು ಈ ದಿನದಲ್ಲಿ ಪುನರುತ್ಥಾನದ ಬಗ್ಗೆ ಚಾಲ್ತಿಯಲ್ಲಿರುವ ಜನಪ್ರಿಯ ವಿಚಾರ ಸರಣಿಯನ್ನು ತಿಳಿದಿರುತ್ತಿದ್ದರೆ ಆತನು ಸುಮಾರಾಗಿ ಈ ರೀತಿಯಲ್ಲಿ ಹೇಳುತ್ತಿದ್ದಿರಬಹುದು "ನಿಮ್ಮಲ್ಲಿ ಕೆಲವರು ದೇಹದ ಪುನರುತ್ಥಾನದ ಬಗ್ಗೆ ಅದೊಂದು ಮುಖ್ಯವಾದುದು ಎಂಬಂತೆ ಮಾತನಾಡುತ್ತೀರಿ. ಆದರೆ ನಿಜವಾಗಿಯೂ ದೇಹವು ಅಡ್ಡಿ ಅಡಚಣೆಯನ್ನುಂಟುಮಾಡುವುದಾಗಿದೆ. ಅದೊಂದು ಆತ್ಮದ ಬಂದಿಖಾನೆಯಂತಿದೆ. ಅದರಿಂದ ಬಿಡುಗಡೆ ಹೊಂದುವ ಆತ್ಮವು ಬಹಳ ಉತ್ತಮವಾಗಿರುತ್ತದೆ. ದೇಹದ ಪುನರುತ್ಥಾನವು ಉಂಟಾಗುವಾಗ ಅದೊಂದು ಆಪತ್ತಿನಂತ್ತಿದ್ದು ಆತ್ಮದ ಪುನಃ ನಿರ್ಬಂಧವುಂಟಾಗಿ ಅದರ ಶಕ್ತಿಗೆ ಮಿತಿಯುಂಟಾಗುತ್ತದೆ.

ಆದರೆ ಅಪೋಸ್ತಲನು ಈ ರೀತಿಯಾಗಿ ಯಾವುದನ್ನೂ ಹೇಳಲಿಲ್ಲ. ಯಾಕೆಂದರೆ ಇದು ಸತ್ಯಕ್ಕೆ ವಿರುದ್ಧವಾಗಿದೆ. ಆತನು ಪ್ರಜ್ಞಾಹೀನ ಅಥವಾ ಸತ್ತ ಸ್ಥಿತಿಯಿಂದ, ಆತ್ಮದ ಅಥವಾ ಚೇತನಾಯುಕ್ತವಾದ ಜೀವಿಯ ಪುನರುತ್ಥಾನದ ಬಗ್ಗೆ ಬೋಧಿಸುವವನಾಗಿದ್ದಾನೆ. ಆದರೆ, ಸತ್ತ ದೇಹದ ಪುನರುತ್ಥಾನವನ್ನು ನಿರಾಕರಿಸುವವನಾಗಿದ್ದಾನೆ. ಆತನು ಹೇಳಿದ್ದೇನೆಂದರೆ – **"ಒಂದು ವೇಳೆ ಗೋಧಿಯನ್ನಾಗಲೀ ಬೇರೆ ಯಾವುದೋ ಬೀಜವನ್ನಾಗಲೀ ಬಿತ್ತುವಾಗ ಬರೀ ಕಾಳನ್ನೇ ಹೊರತು ಮುಂದೆ ಆಗಬೇಕಾದ ದೇಹವನ್ನು ಬಿತ್ತುವುದಿಲ್ಲ. ಆದರೆ ದೇವರು** (ಜೀವಿಯ ಅಥವಾ ಆತ್ಮದ ಪುನರುತ್ಥಾನದಲ್ಲಿ) **ತನ್ನ ಇಷ್ಟದಂತೆ ಅದಕ್ಕೆ** (ನೂತನ) **ದೇಹವನ್ನು ಕೊಡುತ್ತಾನೆ. ಒಂದೊಂದು ಬೀಜಕ್ಕೆ ಅದರದರ (ಸೂಕ್ತವಾದ) ದೇಹವನ್ನು ಕೊಡುತ್ತಾನೆ"** (1 ಕೊರಿಂಥ 15:37–38). ಮಾನವ ಬೀಜ ಕುಲದ ರಾಶಿಯು ಮಾನವ ದೇಹವನ್ನು ಪಡಕೊಳ್ಳುತ್ತವೆ; ಆದರೆ ಈಗಾಗಲೇ ಮಣ್ಣಿನಲ್ಲಿ ಕೊಳೆತುಹೋದ ದೇಹವನ್ನಲ್ಲ. ಅವುಗಳ ಅವಶೇಷಗಳು ಅಥವಾ ಸೂಕ್ಷ್ಮಾಣುಗಳು ಕಾಯಿಪಲ್ಯೆಗಳಿಗೆ ಮತ್ತು ಪ್ರಾಣಿಗಳ ದೇಹಕ್ಕೆ ಸೂಕ್ಷ್ಮಾತಿ ಸೂಕ್ಷ್ಮವಾಗಿ ಸೇರಿಹೋಗಿವೆ. ಹೀಗೆ ಸಭೆಯು ಅದರ ಕರ್ತನಂತೆ ಮಹಿಮಾ ಶರೀರವನ್ನು ಹೊಂದಿಕೊಳ್ಳುತ್ತದೆ ಮತ್ತು ಇದು ಅವರ ಲೌಕಿಕ ದೇಹಕ್ಕಿಂತ ಭಿನ್ನವಾಗಿರುತ್ತದೆ. ಹೀಗಾಗಿ ಅಪೋಸ್ತಲನು ಹೇಳುವುದೇನೆಂದರೆ – **"ಮುಂದೆ ನಾವು ಏನಾಗುವೆವೋ ಅದು ಇನ್ನೂ ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವೂ ಆತನ ಹಾಗಿರುವೆವೆಂದು ಬಲ್ಲೆವು. ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು"** – 1 ಯೋಹಾನ 3:2.

ಆದರೆ, ನಾವು ಅಪೋಸ್ತಲನ ಮುಂದಣ ವಾದವನ್ನು ಅನುಸರಿಸೋಣ. ಆತನು ಪ್ರಕಟಿಸುವುದೇನೆಂದರೆ :–

**"ಕ್ರಿಸ್ತನು ಎದ್ದು ಬಂದಿಲ್ಲವಾದರೆ ನಿಮ್ಮ ನಂಬಿಕೆಯು ನಿಷ್ಪ್ರಯೋಜಕವಾಗಿದೆ. ನೀವು ಇನ್ನೂ ನಿಮ್ಮ ಪಾಪಗಳಲ್ಲಿಯೇ ಇದ್ದೀರಿ. ಇದು ಮಾತ್ರವಲ್ಲದೆ ಕ್ರಿಸ್ತನವರಾಗಿ ನಿದ್ರೆಹೋದವರು ನಾಶವಾದರು"** – 1 ಕೊರಿಂಥ 15:17–18.

ಆತ್ಮಕ್ಕೆ ಸಾವಿಲ್ಲ ಆದುದರಿಂದ ಅದು ಸಾಯುವುದಿಲ್ಲ ಎಂದು ಒತ್ತಾಯಪೂರ್ವಕವಾಗಿ ಹೇಳಿಕೊಳ್ಳುವವರು ಮತ್ತು ಆ ಮೂಲಕ ಆತ್ಮನ ಅಥವಾ ಚೈತನ್ಯಯುಕ್ತವಾದ ಜೀವಿಯ ಪುನರುತ್ಥಾನವನ್ನು ನಿರಾಕರಿಸುವವರು ಮತ್ತು ಇದರ ಪರಿಣಾಮವಾಗಿ ಸತ್ಯವೇದದಲ್ಲಿ ಹೇಳಿರುವ ಪುನರುತ್ಥಾನದ ಸಂಬಂಧವಾದ ಎಲ್ಲಾ ಹೇಳಿಕೆಗಳೂ ಕೇವಲ ದೇಹಕ್ಕೆ ಸಂಬಂಧಪಟ್ಟವುಗಳೆಂದು ಹೇಳುವವರು ಅಪೋಸ್ತಲನ ಈ ಸ್ಫೂರ್ತಿಧಾಯಕವಾದ ಮಾತುಗಳ ಬಗ್ಗೆ ದಿಕ್ಕುತೋಚದವರಾಗಿದ್ದಾರೆ. ಸತ್ಯವೇದವು ಆತನು ಸತ್ತಿದ್ದನು ಎಂದು ಪ್ರಕಟಿಸಿರುವಾಗ ನಮ್ಮ ಕರ್ತನು ಆ ಮೂರು ದಿನಗಳಲ್ಲಿ ಜೀವಂತವಾಗಿದ್ದನು, "ಎಂದಿಗಿಂತಲೂ ಹೆಚ್ಚು ಜೀವಂತವಾಗಿದ್ದನು" ಎಂದು ಅವರು ಹೇಳುವುದಾದರೆ, ಮತ್ತು ಯೋಸೇಫನ ಸಮಾಧಿಯಲ್ಲಿಡಲ್ಪಟ್ಟಿದ್ದ ಆತನ ದೇಹವು ಪುನರುತ್ಥಾನ ಹೊಂದಿದ ಮೇಲೆಯೂ ಗಾಯದ ಕಲೆಗಳನ್ನು ಹೊಂದಿತ್ತೆಂದು ಆಲೋಚಿಸುವುದಾದರೆ ಅಂಥವರು ಸಾಯದೇ ಹೋದ ಕ್ರಿಸ್ತನ (ಕೇವಲ ತನ್ನ ದೇಹವನ್ನು ಮೂರುದಿನಗಳ ಮಟ್ಟಿಗೆ ತ್ಯಜಿಸಿದವನ) ಮೇಲೆ ನಂಬಿಕೆ ಇಡುವ ವ್ಯರ್ಥವಾದ ನಂಬಿಕೆಯನ್ನು ಸಾಧಿಸುವುದಾದರೂ ಹೇಗೆ? ಅಂಥಾಃ ನಂಬಿಕೆಯು ಮರಣದ ದಂಡನೆಯಿಂದ ಬಿಡುಗಡೆಗೊಳಿಸಲಾಗದು ಎಂದು ಅವರು ಒಪ್ಪುವುದಾದರೂ ಹೇಗೆ? ತನ್ನ ಮಾಂಸಧಾರಿ ಶರೀರದಿಂದ

ಮುಕ್ತಿಗೊಂಡ 'ಎಂದಿಗಿಂತ ಹೆಚ್ಚು ಜೀವಂತವಾಗಿರುವ' ಕ್ರಿಸ್ತನು ಪಾಪಿಗಳನ್ನು ರಕ್ಷಿಸಲು ಸಾಧ್ಯವಿಲ್ಲ. ಆದುದರಿಂದ ಕ್ರಿಸ್ತನಲ್ಲಿ ನಿದ್ರೆಹೋದವರೆಲ್ಲರೂ ನಾಶವಾಗಿದ್ದಾರೆ ಎಂದು ಹೇಳುವುದಾದರೂ ಹೇಗೆ?

ಅವರ ಸಮಗ್ರ ವಿಚಾರಸರಣಿಯು ಈ ಬಗ್ಗೆ ಸತ್ಯವೇದದಲ್ಲಿನ ಸತ್ಯತೆಯೊಂದಿಗೆ ಘರ್ಷಣೆಯನ್ನು ಉಂಟುಮಾಡುವುದಾಗಿದೆ. ಯಾವುದೇ ಆತ್ಮವು ನಾಶ (ಗ್ರೀಕ್ = apolloome–be destroyed) ಗೊಳ್ಳುತ್ತದೆ ಎಂಬುದನ್ನು ಅವರು ನಿರಾಕರಿಸುತ್ತಾರೆ. ಆದರೆ ಅಪೋಸ್ತಲನು ಹಾಗಾಗುತ್ತದೆ ಎನ್ನುತ್ತಾನೆ. ನಮ್ಮ ಕರ್ತನು ಸಹಾ **"ದೇವರು ಆತ್ಮ ಮತ್ತು ದೇಹ ಎರಡನ್ನೂ ಸಹಾ ನಾಶಮಾಡ ಬಲ್ಲವನಾಗಿದ್ದಾನೆ"** (ಮತ್ತಾಯ 10:28) ಎಂದು ಹೇಳಿದ್ದಾನೆ. ಅವರು ಯಾರಾದರೂ ಕರ್ತನಲ್ಲಿ ನಿದ್ರೆ ಹೋಗುತ್ತಾರೆ ಎಂಬುದನ್ನೂ ನಿರಾಕರಿಸುತ್ತಾರೆ. ಯಾಕೆಂದರೆ ಮರಣವೆಂಬುದು ಮುಂಜಾವಿನ ಪುನರುತ್ಥಾನದ ನಿರೀಕ್ಷೆಯಲ್ಲಿರುವ ನಿದ್ರೆ ಅಲ್ಲ ಎನ್ನುತ್ತಾರೆ. ಆದರೆ ನಮ್ಮ ಕರ್ತನೂ, ಅಪೋಸ್ತಲರೂ ಮತ್ತು ಎಲ್ಲಾ ಪ್ರವಾದಿಗಳೂ ಅದೊಂದು ನಿದ್ರೆಯಾಗಿದೆ ಮತ್ತು ಇದರಿಂದ ದೇವರ ಶಕ್ತಿಯು ಮಾತ್ರವೇ ಎಬ್ಬಿಸಿ ಪ್ರಜ್ಞಾಸ್ಥಿತಿಗೆ ಆತ್ಮ ಅಥವಾ ಜೀವಿಯನ್ನು ಯಾವುದಾದರೂ ನೆಲೆಯಲ್ಲಿ ಮರಳಿಸಲು ಸಾಧ್ಯ ಎಂದು ಹೇಳುವವರಾಗಿದ್ದಾರೆ. ಪ್ರಥಮ ಪುನರುತ್ಥಾನದಲ್ಲಿ ದೈವಿಕ ಸ್ವಭಾವಕ್ಕೆ ಉಂಟಾಗುವ 'ಬದಲಾವಣೆ'ಯನ್ನು ಅನುಭವಿಸುವವರು ತಾವು ಐಹಿಕ ಸ್ವಭಾವದಲ್ಲಿದ್ದದ್ದಕ್ಕೆ ತಕ್ಕಂಥಾಃ ಆತ್ಮ ಅಥವಾ ಜೀವಿಗಳಾಗಿರುತ್ತಾರೆ. ದೇವರು ಆತ್ಮಸ್ವರೂಪಿಯಾಗಿದ್ದಾನೆ ಎಂದು ಪ್ರಕಟಿಸಲಾಗಿದೆ. Psuche- sentient being ಎಂಬ ಇದೇ ಪದವನ್ನು ಇಲ್ಲಿ ಉಪಯೋಗಿಸಲಾಗಿದೆ. "ನನ್ನವನಾಗಿರುವ ನೀತಿವಂತನು ಹಿಂದೆಗೆದರೆ ಅವನಲ್ಲಿ ನನಗೆ (ನನ್ನ ಆತ್ಮಕ್ಕೆ – Psuche) ಸಂತೋಷವಿರುವುದಿಲ್ಲ" – ಇಬ್ರಿಯ 10:38.

"ಮಾನವನು ಸಾಯುವುದಿಲ್ಲ ಮತ್ತು ಸಾಯಲಾರನು. ಆದರೆ ಹಾಗೆಂದು ತೋರಿಬರುತ್ತದೆ" ಎಂಬ ಪ್ಲಾಟೋನಿಕ್ ತತ್ವಶಾಸ್ತ್ರವು ಕ್ರಿಸ್ತನ ಮೊದಲ ಆಗಮನ ಕಾಲದಲ್ಲಿ ಗ್ರೀಕ್‌ನಲ್ಲಿ ಚಾಲ್ತಿಯಲ್ಲಿದ್ದು ಅನ್ಯಜನರಿಗೆ ಸುವಾರ್ತೆ ಸಾರಲು ಅಡಚಣೆಯಾಗಿತ್ತು. ಉದಾಹರಣೆಗೆ ನಾವು ಓದುವಂತೆ ಪೌಲನು ಅಥೇನ ಪಟ್ಟಣದಲ್ಲಿ ಬೋಧಿಸುತ್ತಿದ್ದಾಗ ಆತನು ಸತ್ತವರ ಪುನರುತ್ಥಾನದ ಬಗ್ಗೆ ಮಾತನಾಡುವವರೆಗೆ ಆತನನ್ನು ತತ್ವಶಾಸ್ತ್ರಿಗಳು ಮಹಾ ಬೋಧಕನು ಎಂಬಂತೆ ಆಲಿಸುತ್ತಿದ್ದರು, ಅಷ್ಟೇ ಸಾಕು ಎಂಬಂತೆ ನಂತರ ಅವರಲ್ಲಿ ಯಾವುದೇ ಆಸಕ್ತಿ ಉಳಿಯಲಿಲ್ಲ; 'ಸತ್ತವರಿಗೆ ಪುನರುತ್ಥಾನವಲ್ಲದೆ ಬೇರೆ ಅಸ್ಥಿತ್ವವಿಲ್ಲ' ಎಂಬ ಯೆಹೂದ್ಯರ ಆಲೋಚನೆಗಿಂತ ತಾವು ಬಹಳ ಮುಂದುವರೆದಿದ್ದೇವೆಂದು ಅವರು ಭಾವಿಸಿದ್ದರು. ಅವರು ಸತ್ತವರ ಪುನರುತ್ಥಾನದ ಬಗ್ಗೆ ಕೇಳಿಸಿಕೊಂಡಾಗ 'ಸತ್ತವರು ಮೊದಲಿಗಿಂತಲೂ ಹೆಚ್ಚು ಜೀವಂತವಾಗಿದ್ದಾರೆ' ಎಂಬ ತಮ್ಮ ವಿಚಾರಸರಣಿಯನ್ನು ಪೌಲನು ಒಪ್ಪುತ್ತಿಲ್ಲ ಎಂಬುದನ್ನು ಅವರು ಗ್ರಹಿಸಿ ಆತನಿಗೆ ಗೇಲಿ ಮಾಡಿದರು – **"ಸತ್ತವರು ಎದ್ದುಬರುವ ವಿಷಯವನ್ನು ಕೇಳಿದಾಗ ಕೆಲವರು ಅಪಹಾಸ್ಯಮಾಡಿದರು; ಬೇರೆ ಕೆಲವರು ಈ ವಿಷಯದಲ್ಲಿ ಹೇಳುವುದನ್ನು ನಾವು ಇನ್ನೊಂದು ಸಾರಿ ಕೇಳುತ್ತೇವೆ ಅಂದರು"** (ಅ.ಕೃ 17:32).

**'ಮರಣವೆಂಬುದು ಮರಣವಲ್ಲ, ಅದು ಇನ್ನೂ ವಿಸ್ತಾರವಾದ ಸ್ಥಿತಿಗೆ ತಲಪುವ ಹೆಜ್ಜೆಯಾಗಿದೆ'** ಎಂಬ ಅನ್ಯಜನರ ಆಲೋಚನೆಯು ಕ್ರಿಸ್ತನ ಮೊದಲನೆಯ ಆಗಮನ ಕಾಲದವರೆಗೆ ಯೆಹೂದ್ಯರ ಆಲೋಚನೆಗೆ ವ್ಯಾಪಿಸಿರಲಿಲ್ಲ. ಫರಿಸಾಯರು ಯೆಹೂದ್ಯರ ಮುಖ್ಯ ಪಂಗಡವಾಗಿತ್ತು. ಕರ್ತನು **"ಶಾಸ್ತ್ರಿಗಳೂ ಫರಿಸಾಯರೂ ಮೋಶೆಯ ಪೀಠದಲ್ಲಿ ಕೂತುಕೊಂಡಿದ್ದಾರೆ"** (ಮತ್ತಾಯ 23:2) ಎಂದು ಹೇಳುವುದರ ಮೂಲಕ ಅವರುಗಳು ಮೋಶೆಯ ಧರ್ಮಶಾಸ್ತ್ರದ ವಾರಸುದಾರರೂ ಪ್ರತಿನಿಧಿಗಳೂ ಆಗಿದ್ದಾರೆ ಎಂದು ವರ್ಣಿಸಿದ್ದಾನೆ. ಫರಿಸಾಯರಿಗಿಂತ ಕಡಿಮೆ ಸಂಖ್ಯೆಯುವರಾದ ಸದ್ದುಕಾಯರು ಪ್ರಭಾವದಲ್ಲಿ ಅವರ ನಂತರದವರು; ನಿಜವಾಗಿಯೂ ಅವರುಗಳು ಅವಿಶ್ವಾಸಿಗಳೂ, ನಾಸ್ತಿಕರೂ ಆಗಿದ್ದಾರೆ.. ಅವರು ಭವಿಷ್ಯದ್ ಜೀವನವನ್ನು ಸಂಪೂರ್ಣವಾಗಿ ನಿರಾಕರಿಸಿದವರಾಗಿ ಮಾನವನು ಸಹಾ ಇತರ ಮೃಗಗಳಂತೆ ಸಾವನ್ನಪ್ಪುತ್ತಾನೆ ಮತ್ತು ಸತ್ತವರ ಪುನರುತ್ಥಾನವೆಂಬುದು ಇಲ್ಲ ಎಂಬುದನ್ನು ಎತ್ತಿಹಿಡಿಯುವವರಾಗಿದ್ದರು. ಮೆಸ್ಸೀಯನ ಯಾವುದೇ ವಾಗ್ದಾನಗಳನ್ನು ಮತ್ತು ಮನುಷ್ಯಾತೀತ ದಿವ್ಯಜ್ಞಾನ, ದೇವದೂತರುಗಳು ಮುಂತಾದವುಗಳನ್ನು ಅವರು ನಂಬಲಿಲ್ಲ. ಜೋಸೆಫಸ್ ಎಂಬಾತನು 'ಎಸ್ಸೆನೆಸ್' ಎಂಬ ಪಂಗಡದ ಬಗ್ಗೆ ಗಮನ ಸೆಳೆಯುವವನಾಗಿ "ಮಾನವನು ಎಂದಿಗೂ ನಿಜವಾಗಿ ಸಾಯುವುದಿಲ್ಲ, ಆದರೆ ಮರಣವೆಂದು ಕರೆಯಲ್ಪಡುವ ಸಂಧಿಗ್ಧ ಸಮಯದಲ್ಲಿ ಆತನು ಕೇವಲ ಜೀವನ ಅಭಿವೃದ್ಧಿಯ ಪ್ರತಿಪರ ಹೆಜ್ಜೆಯೊಂದನ್ನು ತೆಗೆದುಕೊಳ್ಳುತ್ತಾನೆ" ಎಂಬ ಪ್ಲಾಟೋನಿಕ್ ವಿಚಾರ ಸರಣಿಯು ಅನ್ಯಜನರಲ್ಲಿ ಪ್ರಚಲಿತವಾಗಿತ್ತು ಎಂದು ದೃಢವಾಗಿ ಹೇಳಿದ್ದಾನೆ. ಆದರೆ ಜೋಸೆಫಸ್ ತನ್ನ 'ಯೆಹೂದ್ಯರ ಚರಿತ್ರೆ'ಯನ್ನು ಆತನು ರೋಮ್ ಆಸ್ಥಾನದಲ್ಲಿರುವಾಗ ಯೆಹೂದ್ಯರ ಪರವಾಗಿ ಚಕ್ರವರ್ತಿಯ ಮನಸ್ಸನ್ನು ಪ್ರಭಾವ ಬೀರಲು ಬರೆದನೆಂಬುದನ್ನು ನಾವು ನೆನಪಿನಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಸತ್ಯವೇದವು ಹೇಳುವಂತೆ ಯೆಹೂದ್ಯರು ಚಂಡಿಗಳು (ಮಣಿಯದವರು) ಮತ್ತು

ದಂಗೆ ಏಳುವವರಾಗಿದ್ದರೆಂದು ರೋಮನ್ನರು ಕಂಡುಕೊಂಡರು. ಹಾಗಾಗಿ ಸ್ವಭಾವಿಕವಾಗಿ ಅವರ ಧರ್ಮದಲ್ಲಿ ದಂಗೆ ಏಳುವ ಪ್ರವೃತ್ತಿಯನ್ನು ಹೇಗೋ ಹುಟ್ಟುಹಾಕಿದರು ಎಂದು ಕಂಡುಕೊಂಡರು. ಇದೊಂದು ನಿಜವಾದ ಕಲ್ಪನೆಯಾಗಿದ್ದರೂ ದೇವರ ಪ್ರಕಟನೆಯ ಸತ್ಯಗಳು ಎಲ್ಲೆಲ್ಲಿ ಅನ್ವಯಿಸಲ್ಪಡುತ್ತದೋ ಅಲ್ಲೆಲ್ಲಾ ಬಿಡುಗಡೆಯ ಸ್ಫೂರ್ತಿಯನ್ನುಂಟುಮಾಡುವ ಧೋರಣೆ ಹೊಂದಿದೆ ಎಂಬುದು ನಿಸ್ಸಂದೇಹವಾಗಿಯೂ ಸತ್ಯಸಂಗತಿಯಾಗಿದೆ. ಯಾಜಕರ ಮತ್ತು ಜನರ, ಅರಸುಗಳ ಮತ್ತು ಪ್ರಜೆಗಳ ನಡುವೆ ಇರುವ ಅಗಾಧವಾದ ಭೇದಭಾವವನ್ನು ತೊಡೆದುಹಾಕಿ, ಎಲ್ಲರೂ ಒಬ್ಬ ಮಹಾ ನ್ಯಾಯಾಧಿಪತಿಯೂ, ಅರಸನೂ ಆದವನಿಗೆ ಒಳಗಾಗಬೇಕೆಂದು ಬೋಧಿಸುತ್ತದೆ. ಆದರೆ ಜೋಸೆಫಸ್‌ನು ಯೆಹೂದ್ಯ ಜನರ ಮತ್ತು ಯೆಹೂದಿ ಧರ್ಮದ ಬಗ್ಗೆ ಇರುವ ಈ ಕರಾರುವಕ್ಕಾದ ನಿರ್ಣಯಕ್ಕೆ ತಡೆಯೊಡ್ಡಲು ಬಯಸುತ್ತಾನೆ. ಹೀಗಾಗಿ ಆತನು ತನ್ನ ಗುರಿಯನ್ನು ಸಾಧಿಸುವಂತೆ ಈ ಸತ್ಯವನ್ನು ಇನ್ನೂ ಎಳೆದು ಯೆಹೂದಿ ಧರ್ಮವು (1) ಸತ್ತವರ ಪ್ರಜ್ಞಾ ಸ್ಥಿತಿಯ ವಿಷಯದಲ್ಲಿ (2) ನಿತ್ಯ ಯಾತನೆಯ ವಿಷಯದಲ್ಲಿ* ಬಹುಮಟ್ಟಿಗೆ ಇತರ ಅನ್ಯಧರ್ಮಗಳಂತೆಯೇ ಇದೆ ಎಂದು ನಿರೂಪಿಸಲು ಪ್ರಯತ್ನಿಸುತ್ತಾನೆ. ಇದನ್ನು ರುಜುವಾತುಪಡಿಸುವ ಯತ್ನದಲ್ಲಿ ಆತನು ಈ ಎಸ್ಸೆನ್ಸ್ ಪಂಗಡವನ್ನು ಅವರೇ ಯೆಹೂದ್ಯರ ಮುಖ್ಯ ಪಂಗಡವೆಂಬಂತೆ ಉಲ್ಲೇಖಿಸುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ, ಅವರುಗಳು ತೃಣಪ್ರಾಯರಾಗಿದ್ದ ಪ್ರಯುಕ್ತ ಹೊಸ ಒಡಂಬಡಿಕೆಯಲ್ಲಿ ಬಹಳ ಮಟ್ಟಿಗೆ ತಿಳಿಸಿಲ್ಲ. ಹಾಗಾಗಿ ಕರ್ತನ ಅಥವಾ ಅಪೋಸ್ತಲರೊಂದಿಗೆ ಘರ್ಷಣೆ ಮಾಡುವವರಾಗಿರಲಿಲ್ಲ. ಆದರೆ ಫರಿಸಾಯರೂ, ಸದ್ದುಕಾಯರೂ ನಿರಂತರವಾಗಿ ಮತ್ತು ಆಗಿಂದಾಗ್ಗ್ಯೆ ಹೀಗೆ – ಮಾಡುವವರಾಗಿದ್ದರು.

## ಆತನಿಗೆ ಎಲ್ಲರೂ ಜೀವಿಸುವವರೇ
(ಲೂಕ – 20:37,38)

## All Live unto Him (Luke - 20: 37,38)

ಧರ್ಮಶಾಸ್ತ್ರ ಪಂಡಿತರುಗಳಿಗೆ ಮತ್ತು ಫರಿಸಾಯರುಗಳಿಗೆ ನಮ್ಮ ಕರ್ತನು ಉತ್ತರಿಸಿ ಅವರನ್ನು ಹತಾಶೆಗೊಳಿಸಿದ ನಂತರ ಸದ್ದುಕಾಯರು ತಾವು ತಮ್ಮ ನಿಷ್ಠೆಯ ಶ್ರೇಷ್ಠತೆಯನ್ನು ತೋರಿಸಬೇಕೆಂದು ಅಲ್ಲಿ ಕಾಣಿಸಿಕೊಂಡು ನಮ್ಮ ಕರ್ತನ ತತ್ವ ಸಿದ್ಧಾಂತಗಳನ್ನು ಖಂಡಿಸತೊಡಗಿದರು. ಸತ್ತವರು ಸದಾಕಾಲಕ್ಕೂ ಸತ್ತವರೇ ಆಗಿದ್ದಾರೆ ಎಂದು ಹೇಳಿಕೊಳ್ಳುವ ಈ ಸದ್ದುಕಾಯರಿಗೆ ನಮ್ಮ ಕರ್ತನು **"ಸತ್ತವರು ಬದುಕಿ ಏಳುತ್ತಾರೆಂಬುದನ್ನು ಮೋಶೆಯೂ ಸೂಚಿಸಿದ್ದಾನೆ. ಅವನು ಪೊದೆಯ ಸಂಗತಿಯಿರುವ ಅಧ್ಯಾಯದಲ್ಲಿ ಕರ್ತನನ್ನು ಅಬ್ರಹಾಮನ ದೇವರು ಇಸಾಕನ ದೇವರು ಯಾಕೋಬನ ದೇವರು ಎಂದು ಹೇಳಿದ್ದಾನೆ. ದೇವರು ಜೀವಿತರಿಗೆ ದೇವರಾಗಿದ್ದಾನೆಯೇ ಹೊರತು ಜೀವವಿಲ್ಲದವರಿಗೆ ಅಲ್ಲ. ಆತನಿಗೆ ಎಲ್ಲರೂ ಜೀವಿಸುವವರೇ"** (ಲೂಕ 30: 37–38) ಎಂದು ಹೇಳುತ್ತಾನೆ.

ನಮ್ಮ ಕರ್ತನು ಈ ಮಾತುಗಳಿಂದ "ಸತ್ತವರು ಎಬ್ಬಿಸಲ್ಪಡುತ್ತಾರೆ" ಎಂಬುದು ರುಜುವಾತಾಗುತ್ತದೆ ಎಂಬ ಸಲಹೆ ನೀಡುತ್ತಾನೆ. ಯಾಕೆಂದರೆ, ದೇವರು ನಿಶ್ಚಯವಾಗಿಯೂ ಸಂಪೂರ್ಣವಾಗಿ ಎಂದೆಂದಿಗೂ ಅಸ್ಥಿತ್ವವಿಲ್ಲದವರೊಂದಿಗೆ ಸಂಪರ್ಕಿಸುವವನಲ್ಲ. ನಂತರದಲ್ಲಿ ಆತನು ಪುನರುತ್ಥಾನದ ವಿಷಯದಲ್ಲಿ ದೇವರ ಯೋಜನೆಗಳು ಸ್ಥಿರವಾದವುಗಳಾಗಿವೆ ಮತ್ತು ಜನರು 'ಸತ್ತವರು' ಎಂದು ಕರೆಯುವವರು ಆತನಲ್ಲಿ ಜೀವಿಸುವವರಾಗಿದ್ದಾರೆ ಎಂಬುದನ್ನು ಅವರಿಗೆ ತೋರಿಸಿಕೊಡುತ್ತಾನೆ – ದೇವರ ದೃಷ್ಟಿಯಲ್ಲಿ ಅವರು ಕೇವಲ ನಿದ್ರಿಸುವವರಾಗಿದ್ದಾರೆ. ಆದುದರಿಂದ ದೇವರ ವಾಕ್ಯಗಳು ಇವರ ಬಗ್ಗೆ "ನಿದ್ರಿಸುವವರು" ಎಂದು ಹೇಳುತ್ತವೆಯೇ ಹೊರತು 'ನಾಶಹೊಂದಿವರು' ಎಂದು ಹೇಳುವುದಿಲ್ಲ. ಮೂಲದ ದಂಡನೆಯು ನಾಶನ ಗೊಳಿಸುವುದಾಗಿದ್ದರೂ, ಈಡುಬಲಿಯ ಮೂಲಕ ಅದು ಚಿಗುರಿಕೊಂಡಿದೆ – **"ಮನುಷ್ಯರೇ ಸಾಯಿರಿ ಎಂದು ಆಜ್ಞಾಪಿಸಿ ಅವರನ್ನು ಪುನಃ ಮಣ್ಣಿಗೆ ಸೇರಿಸುತ್ತೀ"** ಎಂದು ಹಾಗೆಯೇ ಮೊಶೇಯು ಹೇಳಿದ್ದರೆ **"ನಿನ್ನ ಜೀವವನ್ನು ನಾಶದಿಂದ ತಪ್ಪಿಸುವವನೂ ... ಆಗಿದ್ದಾನೆ"** (ಪುನುರುತ್ಥಾನದಲ್ಲಿ) ಎಂದು ಹೇಳಲ್ಪಟ್ಟಿದೆ (ಕೀರ್ತನೆ 93:3, 103:4). **"ನಾನು ಅಬ್ರಹಾಮನ ದೇವರು"** ಎಂದು ಹೇಳುವಾಗ ದೇವರು ಹಿಂದಿನ ಸಂಗತಿಗಳು ಈಗಲೂ ಪ್ರಸ್ತುತವಿವೆ ಎಂದು ಮಾತ್ರ ಹೇಳದೆ ಮುಂದೆ ಬರಲಿರುವ ಸಂಗತಿಗಳನ್ನೂ ಈಗಾಗಲೇ ಬಂದಿವೆ ಎಂಬಂತೆ ಹೇಳುವವನಾಗಿದ್ದಾನೆ – ರೋಮಾ. 4:17.

## ಸಭೆಯ "ಆತ್ಮ ಪ್ರಾಣ ಶರೀರಗಳು ..."

### The Body, Spirit and Soul of the Church -
1 Thess. 5:23

"ಆತ್ಮ, ಪ್ರಾಣ ಮತ್ತು ಶರೀರ" ಎಂಬ ಈ ಪದಗಳು ಸಮಗ್ರ ಸಭೆಗೆ ಅಲಂಕಾರಿಕವಾಗಿ ಇಲ್ಲಿ ಉಪಯೋಗಿಸಲ್ಪಟ್ಟಿದೆ. ಉದಾಹರಣೆಗೆ ಇಲ್ಲಿ

* ನಿತ್ಯಯಾತನೆ ಎಂಬುದು ಕೆಲವರನ್ನು ಹೊರತುಪಡಿಸಿ ಯೆಹೂದ್ಯರ ವಿಶ್ವಾಸವಾಗಿರಲಿಲ್ಲ; ಆದರೆ ರೋಮನ್ ಚಕ್ರವರ್ತಿಯು ಈ ವಿಚಾರಣಸರಣಿಯ ಪರವಾಗಿದ್ದನು. ಯಾಕೆಂದರೆ ಇದು ಸಾಮಾನ್ಯ ಮನುಷ್ಯನ ಮೇಲೆ ಸಾರ್ವಭೌಮಿಕ ಪ್ರಭಾವವನ್ನು ಹೆಚ್ಚಿಸುವುದಾಗಿತ್ತು. ನಂತರದಲ್ಲಿ ಚಕ್ರವರ್ತಿಗಳು 'Pontifex Maximus' ಎಂಬ ಬಿರುದನ್ನು ತಮಗೆ ತಗುಲಿಸಿಕೊಂಡರು. – ಮುಖ್ಯ ಧಾರ್ಮಿಕ ನಾಯಕನಾದ ಪೋಪನು ಇನ್ನೂ ಸಹಾ ಇದನ್ನು ಲಗತ್ತಿಸಿಕೊಂಡಿದ್ದಾನೆ.

ಅಪೋಸ್ತಲನು **"ನಮ್ಮ ಕರ್ತನಾದ ಯೇಸುಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮ ಪ್ರಾಣ ಶರೀರಗಳು ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ"** (1 ಥೆಸ. 5:23) ಎಂದು ಪ್ರಾರ್ಥಿಸುವವನಾಗಿದ್ದಾನೆ. ಈ ಪ್ರಾರ್ಥನೆಯು ಸಮಗ್ರ ಸಭೆಗೆ – ಪರಲೋಕದಲ್ಲಿ ಬರೆಯಲ್ಪಟ್ಟಿರುವ ಆಯ್ದು ಸಭೆಗಳಿಗೆ ಅನ್ವಯ ವಾಗುತ್ತದೆಂದು ಅರ್ಥ ಮಾಡಿಕೊಳ್ಳಬೇಕು. ನಿಜವಾದ ಆತ್ಮನು ಇಂದು ಆತನ ಚಿಕ್ಕ ಹಿಂಡಿನಲ್ಲಿ ಕಾಪಾಡಲ್ಪಟ್ಟಿದೆ. ಅದರ ದೇಹವು ಮರೆಮಾಡುವ, ಉಸಿರುಕಟ್ಟಿಸುವ ಅಸಂಖ್ಯ ಹಣಜಿಗಳ ಮಧ್ಯೆ ಅವುಗಳನ್ನು ಎದುರಿಸಲಾರದ ಪರಿಸ್ಥಿತಿಯಲ್ಲಿದ್ದರೂ ಅದನ್ನು ಇಂದು ಗ್ರಹಿಸಬಹುದಾಗಿದೆ. ಅದರ ಆತ್ಮ, ಅದರ ಚಟುವಟಿಕೆ, ಅದರ ಬುದ್ಧಿವಂತಿಕೆ, ಆದರ ಚೇತಾನಾಶಕ್ತಿ ಇಂದು ಎಲ್ಲೆಲ್ಲೂ ನಿದರ್ಶನವಾಗಿವೆ ಮತ್ತು ಜನರಿಗೆ ಅವರ ಮಟ್ಟವನ್ನು ಶಿಲುಬೆ ಮತ್ತು ಈಡುಬಲಿಯ ಮೂಲಕ ಎತ್ತಿ ಹಿಡಿಯುವುದಾಗಿದೆ.

ಅಪೋಸ್ತಲನ ಈ ಮಾತುಗಳನ್ನು ಬೇರೆ ಯಾವುದೇ ರೀತಿಯಲ್ಲಿ ನಾವು ಅನ್ವಯಿಸುವಂತಿಲ್ಲ. ಜನರು ಎಷ್ಟೇ ಹೆಚ್ಚಾಗಿ ವ್ಯಕ್ತಿಗತ ಪ್ರಾಣ ಮತ್ತು ಜನರ ಆತ್ಮಗಳ ಸಂರಕ್ಷಣೆಯ ಬಗ್ಗೆ ಭಿನ್ನಾಭಿಪ್ರಾಯವುಳ್ಳವಾರಾಗಿದ್ದರೂ, ಎಲ್ಲರೂ ಅವರ ದೇಹವು ಕಾಪಾಡಲ್ಪಡುವುದಿಲ್ಲ, ಇತರ ಪ್ರಾಣಿಗಳಂತೆ ಅದು ಮಣ್ಣಿಗೆ ಹಿಂತಿರುಗಲ್ಪಡುತ್ತದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ದೇಹ ಎಂಬ ಪದದೊಂದಿಗೆ ಆತ್ಮ, ಪ್ರಾಣ ಎಂಬ ಪದಗಳು ಏಕವಚನದಲ್ಲಿವೆ, ಅವು ಬಹುವಚನದಲ್ಲಿಲ್ಲ.

## ಎಲ್ಲಾ ಆತ್ಮಗಳು ಹೋಗುತ್ತವೆ ಎಂದು ಹೇಳುವ ಶಿಯೋಲ್ ಅಥವಾ ಹೇಡ್ಸ್ ಏನನ್ನು ಸೂಚಿಸುತ್ತದೆ?

## What is signified by "Sheol" or "Hades" to which all souls go?

ಆತ್ಮಗಳು ನರಕಕ್ಕೆ (ಶಿಯೋಲ್ ಅಥವಾ ಹೇಡ್ಸ್‌ಗೆ) ಹೋಗುತ್ತವೆಂದು ಹೇಳುವುದರಿಂದ ಮರಣದ ನಂತರ – ಶರೀರದಿಂದ ಅಥವಾ ದೇಹದಿಂದ ಆತ್ಮವು ಬಿಡುಗಡೆಯಾದ ಮೇಲೆ ಮಾನವನ ಆತ್ಮವು ಸಹಾ ಸ್ಪರ್ಶಜ್ಞಾನ ಮತ್ತು ಪ್ರಜ್ಞೆಯನ್ನು ಹೊಂದಿರಲೇ ಬೇಕು. ಈ ದೆಸೆಯಲ್ಲಿ ನಾವು ನಮ್ಮ ಕರ್ತನ ವಾಕ್ಯಗಳನ್ನು ಪರೀಕ್ಷಿಸುವುದು ಮತ್ತು 'ನರಕ' (ಶಿಯೋಲ್ ಅಥವಾ ಹೇಡ್ಸ್) ಎಂದರೆ ಏನು ಕಂಡುಕೊಳ್ಳುವುದು ಯುಕ್ತವಾಗಿದೆ.

ಹಳೆ ಒಡಂಬಡಿಕೆ ಇಬ್ರಿಯ ಪದವಾದ 'ಶಿಯೋಲ್' ಎಂಬುದು ಅರವತ್ತೈದು ಸಲ ಕಾಣಿಸುತ್ತದೆ. ಮೂರು ಬಾರಿ ಇದನ್ನು 'ಪಿಟ್' (ಗುಂಡಿ) ಎಂಬುದಾಗಿಯೂ 31 ಸಾರಿ 'ಗ್ರೇವ್' (ಸಮಾಧಿ) ಎಂಬುದಾಗಿಯೂ, ಮತ್ತೆ ಮೂವತ್ತೊಂದು ಬಾರಿ 'ಹೆಲ್' (ನರಕ) ಎಂಬುದಾಗಿಯೂ ಭಾಷಾಂತರಿಸಲಾಗಿದೆ. ಆದರೆ ಹೆಲ್, ಗ್ರೇವ್ ಮತ್ತು ಪಿಟ್ ಇವುಗಳ ಪ್ರಸ್ತುತ ಉಪಯೋಗದ ಅಳತೆಯ ಮೇರೆ ಇದನ್ನು ಹೋಲಿಸಿದರೆ ಇವುಗಳೆಲ್ಲವೂ ತಪ್ಪಾದ ಭಾಷಾಂತರವಾಗಿದೆ.

ಇಬ್ರಿಯ ಪದವಾದ ಶಿಯೋಲ್ (ಗ್ರೀಕಿನಲ್ಲಿ 'ಹೇಡ್ಸ್') ಎಂಬುದರ ಅರ್ಥವನ್ನು ಅಪರೂಪವಾಗಿ ಯಾವುದಾದರೂ ಒಂದು ಆಂಗ್ಲ ಪದದಿಂದ ವ್ಯಕ್ತಪಡಿಸಬಹುದು; ಅದು ಮರೆಯಾದುದು ಅಥವಾ ಅದೃಶ್ಯವಾದುದು ಇಲ್ಲವೇ ಅಗೋಚರವಾದುದು ಎಂಬುದನ್ನು ಸೂಚಿಸುತ್ತದೆ – ಅಂದರೆ ಅದು ಸತ್ತವರ ಸ್ಥಿತಿಯಾಗಿದೆ; ಅದೊಂದು ಸ್ಥಳವಲ್ಲ ಆದರೆ ಸ್ಥಿತಿಯಾಗಿದೆ. ಬಹುಶಃ ಇಬ್ರಿಯ ಪದ ಶಿಯೋಲ್ ಗ್ರೀಕ್ ಪದ ಹೇಡ್ಸ್ ಎಂಬುದಕ್ಕೆ ಅನುರೂಪವಾದ ಅಥವಾ ಹತ್ತಿರವಾದ ಆಂಗ್ಲ ಪದವೆಂದರೆ oblivion ಎಂಬುದು (ಮರೆವೆಯ ಸ್ಥಿತಿ). ಶಿಯೋಲ್ ಎಂಬ ಪದದವು ಯಾವುದೇ ಸಂತೋಷ ಅಥವಾ ದುಃಖಾವಸ್ಥೆಯನ್ನು ಇಲ್ಲವೇ ಇನ್ನಿತರ ಭಾವನೆಯನ್ನು ಸೂಚಿಸುವುದಿಲ್ಲ; ಇದು ನಮ್ಮನ್ನು ಇದರ ಸಂಬಂಧಕ್ಕೆ ನಡೆಸುತ್ತದೆ. ಆದುದರಿಂದ ನಾವು ಶಿಯೋಲ್ ಅಥವಾ ಹೇಡ್ಸ್ ಪದಗಳನ್ನು ನರಕ (ಹೆಲ್)ದ ಬಗ್ಗೆ ನಮಗಿರುವ ಸಂಬಂಧಗಳನ್ನು ನಿಶ್ಚಯಪಡಿಸಿ ಕೊಂಡವರಾಗಿ ಉಪಯೋಗಿಸುವಂತೆ ಪರೀಕ್ಷಿಸೋಣ. ಶಿಯೋಲ್, ಹೇಡ್ಸ್, ಆಬ್ಲಿವಿಯೋನ್ ಎಲ್ಲಾ ಮಾನವ ಕುಲವನ್ನು ಒಳ್ಳೆಯವರಿರಲಿ, ಕೆಟ್ಟವರಿರಲಿ ಎಲ್ಲರನ್ನು ಸಮಾನವಾಗಿ ಅಂಗೀಕರಿಸುತ್ತದೆ ಎಂದು ನಾವು ಸತ್ಯವೇದದಲ್ಲಿ ಸ್ಪಷ್ಟವಾಗಿ ನೋಡುತ್ತೇವೆ; ಅದರಲ್ಲಿ ಬೆಳಕಿಲ್ಲ, ಯಾವುದೇ ಜ್ಞಾನವಿಲ್ಲ, ಬುದ್ಧಿವಂತಿಕೆ ಇಲ್ಲ, ಯಾವುದೇ ತಂತ್ರೋಪಾಯಗಳಿಲ್ಲ, ಅಲ್ಲಿ ಯಾವುದೇ ನಾಲಿಗೆಯು ಕರ್ತನಿಗೆ ಸ್ತುತಿಸುವುದಿಲ್ಲ ಅಥವಾ ಆತನ ನಾಮವನ್ನು ದೂಷಿಸುವುದಿಲ್ಲ; ಅದೊಂದು ನಿರಪೇಕ್ಷವಾದ ಮೌನ ಸ್ಥಿತಿಯಾಗಿದೆಯಾದರೂ ಇದಕ್ಕೆ ಪುನರುತ್ಥಾನದ ನಿರೀಕ್ಷೆಯನ್ನು ಸಂಯೋಜಿಸಲಾಗಿದೆ.

ಒಳ್ಳೆಯ ಮತ್ತು ಕೆಟ್ಟ ಆತ್ಮಗಳೆರಡೂ ಈ ಸ್ಥಿತಿಯನ್ನು ಅಂದರೆ ಶಿಯೋಲ್, ಹೇಡ್ಸ್ ಅಥವಾ ಆಬ್ಲಿವಿಯನ್ ಹಂತವನ್ನು ತಲಪುತ್ತವೆ ಮತ್ತು ಮಿಲಿಯಾಂತರ ಯುಗದ ಮುಂಜಾವಿನಲ್ಲಿ ಉಂಟಾಗುವ ಜೀವದಾಯಕನ ಕರೆಗಾಗಿ ಕಾಯುತ್ತಿರುತ್ತವೆ ಎಂಬುದನ್ನು ಗಮನಿಸಬೇಕು. ನಮ್ಮ ಆಂಗ್ಲ ಭಾಷೆಯ ಸಾಧಾರಣ ಅನುವಾದದ ಭಾಷಾಂತರಕಾರರುಗಳು ಕೆಲವೊಮ್ಮೆ ಅಸಂಬದ್ಧ ವಾಗಿದ್ದಾರೆಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಕೆಲವು ಸಂಧರ್ಭಗಳಲ್ಲಿ ಇದು ನಿಷ್ಠೆಗೆ ಸ್ವಲ್ಪ ಕಡಿಮೆಯಾಗಿ ಕಂಡುಬಂದರೂ ಇದನ್ನು ಪೂರ್ತಿಯಾಗಿ ಅಪ್ರಮಾಣಿಕತೆ ಎಂದು ದೂಷಿಸುವಂತಿಲ್ಲ ಎಂದು ನಾವು

ಒತ್ತಾಯಿಸುತ್ತೇವೆ. ಬದಲಾಗಿ ಇದು ಈ ಪ್ರಸ್ತಾಪದ ಬಗ್ಗೆ ಶತಮಾನಗಳಿಂದ ಅಂದರೆ ಕತ್ತಲಿನ ಯುಗದಿಂದ ಹರಿದುಬಂದಿರುವ ತಪ್ಪು ಬೋಧನೆಗಳಿಂದ ಅಧಿಕ ಮಟ್ಟದಲ್ಲಿ ಪ್ರೇರೇಪಿಸಲ್ಪಟ್ಟ ಗೊಂದಲ ಮನಸ್ಸಿನ ಫಲ ಎಂಬುದಾಗಿ ನಾವು ನಂಬ ಬೇಕಾಗುತ್ತದೆ. ಅನುವಾದಕರು ದುರ್ಬಲಗೊಳಿಸುವ ಕಾರ್ಯಗಳು ಇದಾಗಿವೆ ಎಂದು ಸಹಾ ಹೇಳಬಹುದು. ಹಳೆಯ ಆಂಗ್ಲ ಭಾಷೆಯಲ್ಲಿ 'ಹೆಲ್' ಎಂಬುವ ಪದಕ್ಕೆ ಆಧುನಿಕ ಆಂಗ್ಲ ಭಾಷೆಯಲ್ಲಿರುವ ಅರ್ಥವಿದ್ದಿಲ್ಲ. ಇದು ಯಾವುದೇ ಅರ್ಥದಲ್ಲಿ ಬೆಂಕಿ ಅಥವಾ ಯಾತನೆಗಳಿರುವ, ನೋವು ಸಂಕಟಗಳಿರುವ ಸ್ಥಳವಾಗಿರುವುದಿಲ್ಲ. ಇದಕ್ಕೆ ಹೆಚ್ಚಾಗಿ ಸಮಾಧಿ ಅಥವಾ ಮರೆಯಾದ ವಿಸ್ಮೃತಿ (ಆಬ್ಲಿವಿಯನ್) ಪರಿಸ್ಥಿತಿಯೆಂಬ ಆಲೋಚನೆ ಹೆಚ್ಚಾಗಿದೆ. ಅನುವಾದಕರು 'ಹೆಲ್' ಎಂಬ ಪದವನ್ನು ಬಳಕೆ ಮಾಡುವಾಗ ಸಂಕ್ಷೇಪವಿಲ್ಲದ ಆಂಗ್ಲ ನಿಘಂಟುಗಳಲ್ಲಿನ ಪುರಾತನ ಮಹತ್ವಗಳಿಗೆ ಹೆಚ್ಚು ಒತ್ತುಕೊಟ್ಟು ತಮ್ಮನ್ನು ಸಮರ್ಥಿಸಿಕೊಂಡಿದ್ದಾರೆ.

'ಶಿಯೋಲ್' ಎಂಬ ಪದವು ಕೆಳಗಣ ಸಂದರ್ಭಗಳಲ್ಲಿ ಕಂಡುಬರುವುದನ್ನು ಪರೀಕ್ಷಿಸುವಾಗ, ಓದುಗರು ಈ ಪದವನ್ನು ಪ್ರತಿಯೊಂದು ಪ್ರಕರಣದಲ್ಲಿಯೂ "ನರಕ, ಬೆಂಕಿ" ಅಥವಾ ಯಾತನೆಪಡುವ ಸ್ಥಳ ಎಂಬುದಾಗಿ ತರ್ಜುಮೆಗೊಳಿಸುತ್ತಿದ್ದರೆ ಪರಿಚ್ಛೇದದ ಅರ್ಥವೇನಾಗುತ್ತೆಂದು ತಿಳಿದುಕೊಳ್ಳಲು ಒತ್ತಾಯಿಸಲ್ಪಡುತ್ತಾರೆ. ಪ್ರತಿಯೊಂದು ಸಂಧರ್ಭಗಳಲ್ಲಿಯೂ ಈ ಪದವನ್ನು ಸನ್ನಿವೇಶಕ್ಕೆ ತಕ್ಕಂತೆ ವಿಸ್ಮೃತಿ (ಆಬ್ಲಿವಿಯಾನ್) ಎಂಬುದಾಗಿ ತರ್ಜುಮೆ ಗೊಳಿಸಿದರೆ ಆ ವಾಕ್ಯವು ಎಷ್ಟರ ಮಟ್ಟಿಗೆ ನಯವಾಗಿಯೂ, ಸಮಂಜಸವಾಗಿಯೂ ಇರುತ್ತದೆಂಬುದನ್ನೂ ಗಮನಿಸಬೇಕಾಗುತ್ತದೆ. ನಿರ್ಣಾಯಕವಾಗಿ ಇದು ಆತ್ಮಗಳು 'ಶಿಯೋಲ್'ಗೆ, 'ಆಬ್ಲಿವಿಯಾನ್'ಗೆ ಹೋಗುತ್ತವೆಂಬುದನ್ನು ಸಾಬೀತು ಪಡಿಸುತ್ತದೆ. ಅವುಗಳು ಅಲ್ಲಿ ಯಾತನೆಪಡುವುದಿಲ್ಲ ಅಥವಾ ಅವುಗಳಿಗೆ ಕೆಲಸಮಾಡಲು, ಸಂತೋಷಿಸಲು ಅಥವಾ ಯಾವುದೇ ರೀತಿಯ ನೋವಿನ ಅಥವಾ ಇತರ ಅನುಭವ ಪಡಕೊಳ್ಳುವ ಯಾವುದೇ ಜ್ಞಾನವಾಗಲೀ, ವಿವೇಕವಾಗಲೀ ಇರುವುದಿಲ್ಲ. ಅವುಗಳು ವಿಸ್ಮೃತಿಯ ಸ್ಥಿತಿಯಲ್ಲಿ ಪ್ರಧಾನ ದೇವದೂತರ ತುತೂರಿಯ ಶಬ್ಧ ಮತ್ತು ದೇವರ ಧ್ವನಿಯನ್ನು ಆಲಿಸುವುದಕ್ಕಾಗಿ ಎದುರುನೋಡುತ್ತಿರುತ್ತವೆ.

**"ನಾನು ಹೀಗೆಯೇ ನನ್ನ ಮಗನಿರುವ ಪಾತಾಳವನ್ನು** (Sheol, Oblivion) **ಸೇರುವೆನು ಅಂದನು. ಹೀಗೆ ತಂದೆಯು ಮಗನಿಗೋಸ್ಕರ ಅಳುತ್ತಿದ್ದನು"** (ಆದಿ. 37:35). ತನ್ನ ಮಗನಾದ ಯೋಸೇಫನು ಭಯಂಕರವಾದ ಮರಣಕ್ಕೆ ತುತ್ತಾಗಿರುವನೆಂದು ಭಾವಿಸಿ ಯಾಕೋಬನು ಈ ರೀತಿಯಾಗಿ ಪ್ರಲಾಪಿಸಿದನು.

**"ಇವನೊಬ್ಬನೇ** (ಬೆನ್ಯಾಮಿನ್) **ಉಳಿದಿದ್ದಾನೆ: ಮಾರ್ಗದಲ್ಲಿ ಇವನಿಗೇನಾದರೂ ಕೇಡಾದರೆ ಈ ಮುದಿತಲೆ ದುಃಖದಿಂದಲೇ ಪಾತಾಳಕ್ಕೆ** (ಶಿಯೋಲ್, ಆಬ್ಲಿವಿಯಾನ್) **ಸೇರಲು ನೀವು ಕಾರಣರಾಗುವಿರಿ"** (ಆದಿಕಾಂಡ 42:38).

ಇದೇ 44ನೇ 29ನೇ ವಚನ ಅಧ್ಯಾಯದಲ್ಲಿ ಯೋಸೇಫನ ಸಹೋದರರು ಬೆನ್ಯಾಮಿನ್‌ನನ್ನು ಕರಕೊಂಡು ಬರಲೇ ಬೇಕೆಂಬ ಸರ್ವಾಧಿಕಾರಿಯ (ಯೋಸೇಫನ) ಆಜ್ಞೆಯನ್ನು ತಮ್ಮ ತಂದೆಗೆ ತಿಳಿಸಿದ ಸಂಧರ್ಭದಲ್ಲಿ ಅದೇ ರೀತಿಯ ಮಾತುಗಳು ಪುನರುಚ್ಚಿಸಲ್ಪಟ್ಟವು. 31ನೇ ವಚನದಲ್ಲಿ ಆ ಸಹೋದರರು ಸಹಾ ಯೋಸೇಫನಿಗೆ ಅದೇ ರೀತಿಯಲ್ಲಿ ಹೇಳುವಂತೆ – **"ಹೀಗೆ ಸ್ವಾಮಿಯ ಸೇವಕರಾದ ನಾವು ನಿನ್ನ ಸೇವಕನಾದ ನಮ್ಮ ತಂದೆಯ ಮುದಿತಲೆ ದುಃಖದಿಂದಲೇ ಪಾತಾಳಕ್ಕೆ** (ಶಿಯೋಲ್‌ಗೆ, ಅಬ್ಲಿವಿಯಾನ್‌ಗೆ) **ಸೇರಲು ಕಾರಣರಾಗುವೆವು "** ಎಂದೆನ್ನುತ್ತಾರೆ.

'ಶಿಯೋಲ್' ಎಂಬ ಪದವನ್ನು 'ಗ್ರೇವ್' (ಪಾತಾಳ) ಎಂಬುದಾಗಿ ತರ್ಜುಮೆಗೊಳಿಸಿರುವ ಈ ನಾಲ್ಕು ಸಂಧರ್ಭಗಳು ಇಲ್ಲಿವೆ. ಇಲ್ಲಿ 'ನರಕ' ಎಂಬ ಪದವನ್ನು ಉಪಯೋಗಿಸುತ್ತಿದ್ದರೆ, ಸಾಮಾನ್ಯ ಭಾವನೆಯಾದ ಬೆಂಕಿ, ಯಾತನೆ ಮತ್ತು ಕ್ರೋಧ ಇವುಗಳಿಗೆ ಸೇರಿಸುತ್ತಿದ್ದರೆ ಎಷ್ಟು ಅಸಮಂಜಸವಾಗಿರುತ್ತದೆಂದು ಪರಿಗಣಿಸಲು ನಾವು ಎಲ್ಲರನ್ನೂ ಆಹ್ವಾನಿಸುತ್ತೇವೆ. ಭಾಷಾಂತರಕಾರರು 'ನರಕ' ಎಂಬ ಪದವು ಸಾಮಾನ್ಯವಾಗಿ ಅರ್ಥ ಮಾಡಿಕೊಂಡಿರುವಂತೆ ಯಾಕೋಬನಿಗೆ ಮತ್ತು ಆತನ ಮಕ್ಕಳಿಗೆ ತಪ್ಪು ಕಲ್ಪನೆಯನ್ನುಂಟುಮಾಡುತ್ತದೆ. ಆದ್ದರಿಂದ ಅವರು ಈ ಪದವನ್ನು 'ಗ್ರೇವ್' (ಪಾತಾಳ) ಎಂದೇ ತರ್ಜುಮೆಗೊಳಿಸಿದ್ದಾರೆ. ಪರಂತು, ಅವರಾಗಲೀ ಅಥವಾ ಹೆಚ್ಚಿನ ಮಂದಿಯಾಗಲೀ ಯಾಕೋಬನು ಪಾತಾಳವನ್ನು ಸೇರುವನೆಂಬ ಅಥವಾ ಪಾತಾಳಕ್ಕೆ ಸೇರುತ್ತಾನೆಂಬ ಯಾವುದೇ ಆಲೋಚನೆಯನ್ನಾಗಲೀ ಹೊಂದಿದ್ದರು ಎಂದು ನೆನೆಸಿರಲಿಕ್ಕಿಲ್ಲ. ಆ ವಯೋವೃದ್ಧನು ತನ್ನ ದೇಹವನ್ನು ಸಮಾಧಿಯಲ್ಲಿ ಹೂಳಿಡುವ ಬಗ್ಗೆ ಆಲೋಚಿಸಿರಲಿಕ್ಕಿಲ್ಲ. ಹಾಗಿದ್ದಲ್ಲಿ ನಿಸ್ಸಂಧೇಹವಾಗಿ ಆತನು ಅದೇ ಇಬ್ರೀಯ ಪದವನ್ನು ಅಂದರೆ ರಾಹೇಲಳ ಸಮಾಧಿಗೆ ಉಪಯೋಗಿಸಿದ Qeburah – (ಆದಿ. 35:20) ಎಂಬ ಪದವನ್ನೋ ಇಲ್ಲವೇ ಯೋಸೇಫನು ಉಪಯೋಗಿಸಿದ Qeber ಎಂಬುದನ್ನೋ ಯಾಕೋಬನು ತಾನು ಸಾಯುವ ಮೊದಲೇ ಸಿದ್ಧಪಡಿಸಿಕೊಂಡಿದ್ದ (ಆದಿ. 50:5) ತನ್ನ ಸಮಾಧಿಗೆ ಉಪಯೋಗಿಸುತ್ತಿದ್ದನು. ಇದಕ್ಕೆ ವ್ಯತಿರಿಕ್ತವಾಗಿ ಯಾಕೋಬನು ತನ್ನ ಬಗ್ಗೆ, ತನ್ನ ಪ್ರಾಣವು ಪಾತಾಳ ಸೇರುವ ಬಗ್ಗೆ ಮಾತನಾಡುತ್ತಾನೆ. ಬೆನ್ಯಾಮೀನನ

ನಷ್ಟದಿಂದ ಉಂಟಾಗುವ ನಿರಾಶೆಯು ಆತನನ್ನು ಈ ಮುದಿಪ್ರಾಯದಲ್ಲಿ ಮತ್ತು ಬಲಹೀನ ಆರೋಗ್ಯ ಸ್ಥಿತಿಯಲ್ಲಿ ಆಬ್ಲಿವಿಯಾನ್‌ಗೆ ಅಂದರೆ ಮರಣದ ಸ್ಥಿತಿಗೆ ಸೇರುವಂತೆ ಮಾಡುತ್ತದೆ ಎಂದು ಹೇಳುತ್ತಾನೆ.

**"ಕರ್ತನು ಇವರಿಗೋಸ್ಕರ ಅಪೂರ್ವವಾದ ಶಿಕ್ಷೆಯನ್ನು ಕಲ್ಪಿಸಿದರೆ, ಅಂದರೆ ಭೂಮಿಯು ಬಾಯ್ದೆರೆದು ಇವರನ್ನೂ ಇವರ ಸರ್ವಸ್ವನ್ನೂ ನುಂಗುವುದರಿಂದ ಇವರೆಲ್ಲರೂ ಸಜೀವಿಗಳಾಗಿ ಪಾತಾಳಕ್ಕೆ** (Sheol, Oblivion) **ಹೋಗಿಬಿಟ್ಟರೆ ಇವರು ಕರ್ತನನ್ನು ಉಲ್ಲಂಘಿಸಿದವರೆಂದು ನೀವು ತಿಳುಕೊಳ್ಳಬೇಕು"** – ಅರಣ್ಯ 16:30.

**"ಅವರು ಸಜೀವಿಗಳಾಗಿ ತಮ್ಮ ಸರ್ವಸ್ವವು ಸಹಿತ ಪಾತಾಳಕ್ಕೆ** (ಗುಂಡಿಗೆ, ಶಿಯೋಲ್‌ಗೆ, ಅಬ್ಲಿವಿಯನ್‌ಗೆ) **ಹೋಗಿಬಿಟ್ಟರು. ; ಭೂಮಿಯು ಅವರನ್ನು ಮುಚ್ಚಿಕೊಂಡಿತು"** – ಅರಣ್ಯ 16:33.

ಮೇಲಿನ ಎರಡು ವಚನಗಳು ಕೋರಹ, ದಾತಾನ್ ಮತ್ತು ಅಬೀರಾಮರಿಗೆ ಸಂಬಂಧಿಸಿದವುಗಳಾಗಿದ್ದು ಅವರುಗಳು ಯಾವರೀತಿಯಲ್ಲಿ ನಾಶಗೊಂಡರು ಎಂದು ತೋರಿಸುತ್ತವೆ. "ನರಕ" ಎಂಬ ಪದವನ್ನು ಈ ಸ್ಥಳದಲ್ಲಿ ಉಪಯೋಗಿಸಿದರೆ ಭೂಮಿಯ ಮೇಲೆ ಇಂತಹ ಯಾತನೆಯ ಸ್ಥಳವಿದೆ ಎಂಬುದಾಗಿ ರುಜುವಾತು ಪಡಿಸದಂತಾಗುತ್ತದೆ. ಆದ್ದರಿಂದ ಭಾಷಾಂತರಕಾರರಿಗೆ ಈ ಪದವನ್ನು ಉಪಯೋಗಿಸಲಾಗದು. ಆದರೆ ಇವುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಾಗ ಈ ಹೇಳಿಕೆಗಳು ಎಷ್ಟೊಂದು ಸರಳವಾಗಿವೆ: ಭೂಮಿಯು ತನ್ನ ಬಾಯಿ ಬಿಟ್ಟು ಅವರನ್ನು ನುಂಗಿಹಾಕಿದೆ. ಅವರುಗಳು ಈ ಲೋಕದ ಚಟುವಟಿಕೆಗಳಿಂದ ಆಬ್ಲಿವಿಯಾನ್‌ಗೆ, ಪ್ರಜ್ಞಾಹೀನ ಅಥವಾ ಮರೆವೆಯ ಸ್ಥಿತಿಗೆ ಇಳಿದು ಹೋಗಿದ್ದಾರೆ.

**"ನನ್ನ ಕೋಪಾಗ್ನಿ ಪ್ರಜ್ವಲಿಸುತ್ತದೆ; ಅದು ಪಾತಾಳದವರೆಗೂ** (Sheol, Oblivion) **ವ್ಯಾಪಿಸಿ ಬೆಳೆ ಸಹಿತವಾಗಿ ಭೂಮಿಯನ್ನೂ ಬುಡಸಹಿತವಾಗಿ ಬೆಟ್ಟಗಳನ್ನೂ ದಹಿಸಿಬಿಡುವುದು"** (ಧರ್ಮೋ. 32:22).

ಇಲ್ಲಿ ನಿಜವಾಗಿಯೂ ಬೆಂಕಿಯ ಬಗ್ಗೆ ಹೇಳಿಕೆ ಇದೆ. ಆದರೆ ಇದು ಅಕ್ಷರಶಃವಾದ ಆಗ್ನಿಯಲ್ಲ, ಸಮಗ್ರ ಸನ್ನಿವೇಶವು ಇದು ದೇವರ ಕ್ರೋಧಾಗ್ನಿ ಎಂಬುದನ್ನು ತೋರಿಸಿಕೊಡುತ್ತದೆ. ಈ ಹೇಳಿಕೆಯು ಮುಂದುವರೆದು **"ಅವರು ಬರದಿಂದ ಕ್ಷೀಣವಾಗುವರು. ತಾಪದಿಂದಲೂ ಅಂಟುರೋಗದಿಂದಲೂ ಸಾಯುವರು ... ಮನೆಯ ಹೊರಗೆ ಕತ್ತಿಯೂ ಒಳಗೆ ಭಯವೂ"** (ವಚನ 23) ಅವರನ್ನು ನಾಶಪಡಿಸುವುವು ಎಂದು ಓದುತ್ತೇವೆ. ಈ ಪ್ರವಾದನೆಯು ಯಾವರೀತಿಯಲ್ಲಿ ನೆರವೇರಿತು ಎಂಬ ಊಹನೆಯಲ್ಲಿ ನಾವು ಬಿಡಲ್ಪಡಲಿಲ್ಲ; ಪೌಲನು ಪವಿತ್ರಾತ್ಮಭರಿತನಾಗಿ ಈ ವಾಕ್ಯಭಾಗವನ್ನು ಉಲ್ಲೇಖಿಸುತ್ತಾ ಅದನ್ನು ಮಾಂಸಧಾರಿ ಇಸ್ರಾಯೇಲ್ಯರಿಗೆ, ಮತ್ತು ಅವರು ಒಂದು ಜನಾಂಗವಾಗಿ ಕರ್ತನಾದ ಯೇಸುವನ್ನು ತಿರಸ್ಕರಿಸಿದರ ಫಲವಾಗಿ ಅವರನ್ನು ಕರ್ತನು ತಿರಸ್ಕರಿಸಿದ್ದಾನೆ. ಅವರ ಮೇಲೆ ಬಂದೊದಗಿದ ಕಷ್ಟ ಸಂಕಟಗಳಿಗೆ ಅನ್ವಯಿಸುತ್ತಾ **"ದೇವರ ಕೋಪವು ಅವರ ಮೇಲೆ ಸಂಪೂರ್ಣವಾಗುತ್ತಾ ಬಂತು"** (1 ಥೆಸ. 2:16) ಎಂದು ಬರೆಯುತ್ತಾನೆ. ದೇವರ ಕೋಪವು ಅವರ ಮೇಲೆ ಉರಿಯುತ್ತಾ ಹೋಯಿತು. ಅವರು ತಮ್ಮ ಜನಾಂಗದ ಪಾಪಗಳಿಗಾಗಿ ಅನೇಕ ತೊಂದರೆಗಳನ್ನು ಅನುಭವಿಸಬೇಕಾಯಿತು. ದೇವರ ರೌದ್ರವು ಅವರ ಜನಾಂಗದ ಉಲ್ಲಂಘನೆಯನ್ನು ಆಳವಾದ ಆಬ್ಲಿವಿಯಾನ್‌ವರೆಗೂ (ಮರೆವೆಯ ದೇಶ) ಹೋಗಿ ಅದನ್ನು ಉರಿದಿದೆ. ಆಮೇಲೆ ಆತನು ಅವರೊಂದಿಗೆ ಶಾಂತರೀತಿಯ ಮಾತುಗಳನ್ನಾಡುತ್ತಾನೆ ಮತ್ತು ಆ ಸಭೆಗೆ **"ನನ್ನ ಜನರನ್ನು ಸಂತೈಸಿರಿ, ಸಂತೈಸಿರಿ; ಯೆರೂಸಲೇಮಿನ ಸಂಗಡ ಹೃದಯಂಗಮವಾಗಿ ಮಾತಾಡಿರಿ; ಅದಕ್ಕೆ ಗಡು ತೀರಿತು, ವಿಧಿಸಿದ ದೋಷಫಲವೆಲ್ಲಾ ನೆರವೇರಿತು. ಅದರ ಎಲ್ಲಾ ಪಾಪಗಳಿಗೂ ಕರ್ತನ ಕೈಯಿಂದ ಎರಡರಷ್ಟು ಶಿಕ್ಷೆಯಾಯಿತು ಎಂದು ಆ ನಗರಿಗೆ ಕೂಗಿ ಹೇಳಿರಿ. ಇದೇ ನಿಮ್ಮ ದೇವರ ಆಜ್ಞೆ"** (ಯೆಶಾಯ 40:1–2) ಎಂದೆನ್ನುತ್ತಾನೆ. ಅಪೋಸ್ತಲನಾದ ಪೌಲನು ಈ ಬಗ್ಗೆ **"ಆಮೇಲೆ ಇಸ್ರಾಯೇಲ್ ಜನವೆಲ್ಲಾ ರಕ್ಷಣೆಹೊಂದುವುದು. ಯೆಹೂದಕ್ಕೆ ಆಧಾರವಾಗಿ ಶಾಸ್ತ್ರದಲ್ಲಿ – ಬಿಡಿಸುವವನು ಚಿಯೋನಿನೊಳಗಿಂದ ಹೊರಟುಬಂದು ಯಾಕೋಬಿನಲ್ಲಿರುವ ಭಕ್ತಿಹೀನತೆಯನ್ನು ನಿವಾರಣೆ ಮಾಡುವನು. ನಾನು ಅವರ ಸಂಗಡ ಮಾಡಿಕೊಂಡ ಈ ಒಡಂಬಡಿಕೆಯು ನಾನು ಅವರ ಪಾಪಗಳನ್ನು ಪರಿಹರಿಸುವಾಗ ನೆರವೇರುವುದು ಎಂದು ಬರೆದದೆ"** (ರೋಮಾ. 11:26–27) ಎಂದು ಬರೆಯುತ್ತಾನೆ. ಇಸ್ರಾಯೇಲ್ಯರ ವಿರುದ್ಧವಾಗಿ ಆಬ್ಲಿವಿಯಾನಿನ ಆಳದವರೆಗೂ ದೇವರ ಕೋಪಾಗ್ನಿಯ ಈ ಉರಿಯುವಿಕೆಯ ಬಗೆಗಿನ ಇದೇ ಆಲೋಚನೆಯನ್ನು ದೇವರ ಆಶೀರ್ವಾದವು ಹಿಂಬಾಲಿಸುತ್ತದೆ ಎಂಬುದು ಈ ಸನ್ನಿವೇಶದಲ್ಲಿ ತೋರಿಬರುತ್ತದೆ – ಧರ್ಮೋ. 32:26–43.

**"ಯೆಹೋವನೇ ಸಾಯಿಸುವವನೂ ಬದುಕಿಸುವವನೂ; ಪಾತಾಳದಲ್ಲಿ** (Sheol, Oblivion) **ದೊಬ್ಬುವವನೂ ಮೇಲಕ್ಕೆ ಬರಮಾಡುವವನೂ ಆತನೇ"** (1 ಸಮು. 2:6).

**"ಪಾತಾಳಪಾಶಗಳು** (Sheol, Oblivion) **ನಮ್ಮನ್ನು ಆವರಿಸಿಕೊಂಡವು"** (2 ಸಮು. 22:6).

ಪ್ರವಾದಿಯಾದ ದಾವೀದನು ಇಲ್ಲಿ ತನ್ನ ಜೀವನವು ಗಂಡಾರತದಲ್ಲಿತ್ತು ಆದರೆ ದೇವರು ಆತನನ್ನು ಸೌಲನ ಕೈಯಿಂದ ಬಿಡುಗಡೆಮಾಡಿದನು ಎಂಬುವ ಸತ್ಯವನ್ನು ವ್ಯಕ್ತಪಡಿಸುತ್ತಾನೆ. ಈ ಸನ್ನಿವೇಶವು, ಹೇಗೂ, ಈ

ಕೀರ್ತನೆಗಾರನು ಕ್ರಿಸ್ತನ ಬಗ್ಗೆ ಮತ್ತು ಕ್ರಿಸ್ತನ ದೇಹವಾದ ಸಭೆಯು ಪ್ರಸ್ತುತ ದುಷ್ಟ ಪ್ರಪಂಚದಿಂದ ಬಿಡುಗಡೆ ಹೊಂದಿ ಬರಲಿರುವ ಮಹಿಮಾ ಲೋಕದೊಳಗೆ ಸೇರಲಿರುವ ಆ ಕಾಲದ ಬಗ್ಗೆ ಪ್ರವಾದನೀಯವಾಗಿ ಹೇಳುತ್ತಿದ್ದಾನೆಂದು ತೋರಿಸಿಕೊಡುತ್ತದೆ. 8 ರಿಂದ 18ನೇ ವಚನಗಳು ಕ್ರಿಸ್ತನ ದೇಹದ ಬಿಡುಗಡೆಯು, ದೈವಿಕ ಶಕ್ತಿಯ ಪ್ರಕಟನೆ ಮತ್ತು ಕೆಟ್ಟತನದ ವಿರುದ್ಧವಾದ ತಿರಸ್ಕಾರ ಇವುಗಳು ಮಹಾ ಸಂಕಟಕಾಲದ ಸ್ವಲ್ಪ ಮುಂಚೆ ನೆರವೇರಲಿವೆ ಎಂಬುದನ್ನು ತೋರಿಸಿಕೊಡುತ್ತದೆ.

**"ಅವನ ಮುದಿತಲೆಯು ಸಮಾಧಿ** (Sheol, oblivion) **ಯನ್ನು ಸಮಾಧಾನದಿಂದ ಸೇರದಂತೆ ಮಾಡು.. ಅವನ ಮುದಿ ತಲೆಯು ರಕ್ತಮಯವಾಗಿ ಸಮಾಧಿ** (Sheol, oblivion) **ಸೇರುವಂತೆ ಏನು ಮಾಡಬೇಕೆಂದು ನಿನಗೆ ಗೊತ್ತಿರುವುದು"** (1 ಅರಸು 2:6,9).

ದಾವೀದನು ಒಬ್ಬ ಮಾತನಾಡುವವನಾಗಿ, ತನ್ನ ಮಗನಾದ ಸೋಲೊಮೋನನಿಗೆ ಯೋವಾಬನು ಒಬ್ಬ ಅಪಾಯಕಾರಿ ಮನುಷ್ಯನು ಮತ್ತು ಸಾಯುವ ಮುನ್ನ ಅವನ ರಕ್ತವು ಪ್ರತಿಕಾರಕ್ಕೆ ಯೋಗ್ಯವಾದುದು ಎಂಬುದನ್ನು ಸೂಚಿಸುತ್ತಾನೆ. ಭಾಷಾಂತರಕಾರರು ಸ್ಪಷ್ಟವಾಗಿ ಯೋವಾಬನು ಒಬ್ಬ ಕೆಟ್ಟಮನುಷ್ಯನಾಗಿದ್ದರೂ ಇಲ್ಲಿ ಶಿಯೋಲ್ ಎಂಬ ಪದವನ್ನು ಪಾತಾಳ ಎಂಬುದಾಗಿ ತರ್ಜುಮೆಗೊಳಿಸುವುದು ಸರಿಯಲ್ಲ, ಯಾಕೆಂದರೆ ಇದರಲ್ಲಡಗಿರುಗುವ ಮಾತುಗಳು ನೆರೆಕೂದಲುಗಳ ಬಗ್ಗೆ ಹೇಳುತ್ತವೆ ಎಂದು ಭಾವಿಸಿದರು. ಯಾಕೆಂದರೆ ಕೂದಲು ಮತ್ತು ದೇಹದ ಭಾಗಗಳೆಲ್ಲವೂ ಹೂಣಲ್ಪಡುತ್ತವೆ ಆದರೆ ಬೆತ್ತಲೆಯಾದ ಪ್ರಾಣ ಅಥವಾ ಆತ್ಮವು ಮಾತ್ರವೇ ಶಿಯೋಲ್ ಸೇರುತ್ತದೆ ಎಂಬುದು ಅವರ ವಿಚಾರಸರಣಿಯಾಗಿತ್ತು. ಆದುದರಿಂದ ಅವರು ಶಿಯೋಲ್ ಎಂಬ ಪದವನ್ನು ಆಂಗ್ಲ ಭಾಷೆಯ ಗ್ರೇವ್ (ಸಮಾಧಿ) ಎಂಬುದಾಗಿ ತರ್ಜುಮೆಗೊಳಿಸುವುದು ಸರಿಯೆಂದು ಭಾವಿಸಿದರು. ಆದರೆ, ಮನಸ್ಸಿನಲ್ಲಿ ಯುಕ್ತವಾದ ಆಲೋಚನೆಯುಳ್ಳವರಾಗಿದ್ದರೆ ಯೋವಾಬನ ನೆರೆಗೂದಲಾಗಲೀ, ಯಾಕೋಬನ ನೆರೆಗೂದಲಾಗಲೀ ಶಿಯೋಲಿನ. ಅಬ್ಲಿವಿಯಾನಿನ ಪಾತಾಳ ಅಂದರೆ ಮರಣ ಸ್ಥಿತಿಯನ್ನು ಒಟ್ಟಾಗಿ ಸೇರುತ್ತವೆ ಎಂಬುದರಲ್ಲಿ ಯಾವುದೇ ತೊಂದರೆ ಇಲ್ಲ. 'ನೆರೆಗೂದಲು' ಮತ್ತು 'ಮುದಿತಲೆ' ಎಂಬ ಪದಗಳು ಕೇವಲ ವೃದ್ಧಾಪ್ಯವನ್ನು ಸೂಚಿಸುವ ಅಲಂಕಾರಿಕ ಪದಗಳಾಗಿವೆ.

**"ಮೋಡ ಹರಿದು ಮಾಯವಾಗುವಂತೆ ಪಾತಾಳಕ್ಕೆ** (Sheol, Oblivion) **ಇಳಿದು ಹೋದವನು ತಿರುಗಿ ಬರುವುದಿಲ್ಲ"** – ಯೋಬ : 7:9.

ಯೋಬನು ಇಲ್ಲಿ ಮಾನವನ ಅಸ್ತಿತ್ವವು, ಪ್ರಾಣವು ಮರಣದಲ್ಲಿ ಸಂಪೂರ್ಣವಾಗಿ ನಾಶವಾಗುವ ವಿಷಯದ ಬಗ್ಗೆ ಮಾತನಾಡುತ್ತಾನೆ. ಪರಂತು 21ನೇ ವಚನದಲ್ಲಿ **"ನೀನು ನನ್ನ ಅಪರಾಧಗಳನ್ನು ಕ್ಷಮಿಸಿ ನನ್ನ ದೋಷವನ್ನು ಯಾಕೆ ಪರಿಹರಿಸುವುದಿಲ್ಲ? ನಾನು ಈಗ ಮಣ್ಣಿನಲ್ಲಿ ಮಲಗಿಕೊಳ್ಳುವೆನು. ನೀನು ನನ್ನನ್ನು ಹುಡುಕುವಾಗ ನಾನು ಇಲ್ಲದೇ ಹೋಗಿರುವೆನು"** ಎಂಬ ಮಾತುಗಳಿಂದ ಮುಗಿಸುತ್ತಾನೆ. ಇಲ್ಲಿ ಮರಣದ ಮಧ್ಯಂತರ ಕಾಲವನ್ನು ನಿದ್ರೆ ಎಂಬುದಾಗಿ, ಮಿಲಿಯಾಂತರ ಯುಗವನ್ನು ಮುಂಜಾವು ಎಂಬುದಾಗಿ ಮತ್ತು ಪ್ರಸ್ತುತ ಕಾಲವನ್ನು ಗೋಳಾಡುವ, ಕಣ್ಣೀರಿಡುವ ಕಾಲವೆಂದು ಸೂಚಿಸಲಾಗಿದೆ. ದೇವರು ಯೋಬನನ್ನು ಪುನರುತ್ಥಾನದ ಶಕ್ತಿಯಲ್ಲಿ ಮುಂಜಾವಿನಲ್ಲಿ ಹುಡುಕುವನು. ಆತನು ಇಲ್ಲದಿದ್ದರೂ, ಮರಣವು ತನ್ನ ತೀವ್ರತರವಾದ ನಾಶನ ಕಾರ್ಯವನ್ನು ನಡೆಸಿದಾಗ್ಯೂ, ಪರಂತು ಈ ಪ್ರಕರಣವು ದೇವರ ಶಕ್ತಿಗೆ ಮೀರಿದ್ದಲ್ಲ. ಆದುದರಿಂದ ಕರ್ತನ ಸಮಯವು ಬರುವಾಗ, ಆತನ ಹಗೆಯ ಕಾಲವು ತೀರಿಹೋದ ಮೇಲೆ ಮತ್ತು ಹರ್ಷದಾಯಕ ಕಾಲ ಬರುವಾಗ "ಆತನು ತನ್ನ ಕೈಕೆಲಸದ ಬಗ್ಗೆ ಬಯಕೆಯುಳ್ಳವನಾಗಿರುತ್ತಾನೆ. ಆಗ ಆತನು ಕರೆಯುವಾಗ ಯೋಬ ಮತ್ತಿತರರು ಆ ಕರೆಗೆ ಉತ್ತರಿಸುತ್ತಾರೆ" – ಯೋಬ. 14:14,15.

**"ಆಹಾ (ಆತನ ಜ್ಞಾನವು) ಆಕಾಶದ ಹಾಗೆ ಉನ್ನತವಾಗಿದೆ; ನೀನು ಮಾಡುವುದೇನು? ಪಾತಾಳಕ್ಕಿಂತ** (Sheol, Oblivion) **ಆಳವಾಗಿದೆ; ನೀನು ತಿಳುಕೊಳ್ಳುವದೇನು?"** – ಯೋಬ 11:8.

ಈ ಮಾತುಗಳು ಯೋಬನ ಹಿತೈಷಿ ಎಂದು ತಪ್ಪಾಗಿ ಭಾವಿಸಿದ್ದ ಚೋಫರನದು. ಕರ್ತನು ಈತನನ್ನು ದೂರುತ್ತಾನೆ. ಈ ಹೇಳಿಕೆಯಿಂದ ಆತನು ಯೋಬನಿಗೆ ದೈವಿಕ ಆಡಳಿತದ ತತ್ವಗಳು ಬೇಧಿಸಲಾಗದವುಗಳು ಎಂದು ಹೇಳಬಯಸುತ್ತಾನೆ. ದೇವರ ಬಗ್ಗೆ ಮಾನವನ ಜ್ಞಾನದ ಕೊರತೆಯ ಬಗ್ಗೆ ತಿಳಿಸುವ ಉದಾಹರಣೆಯಾಗಿ ಆತನು ಶಿಯೋಲನ್ನು ಸೂಚಿಸುತ್ತಾನೆ ಮತ್ತು ಎರಡನ್ನೂ ಸಮವಾಗಿ ಹೋಲಿಸಿ ಶಿಯೋಲ್‌ನಲ್ಲಿ ದೇವರ ಜ್ಞಾನ ಮತ್ತು ಯೋಜನೆಗಳ ತಿಳುವಳಿಕೆ ಇರದು ಎಂದು ಹೇಳುವವನಾಗಿದ್ದಾನೆ.

**"ನೀನು ನನ್ನನ್ನು ಪಾತಾಳದಲ್ಲಿ** (Sheol, Oblivion) **ಬಚ್ಚಿಟ್ಟು ನಿನ್ನ ಕೋಪವು ಇಳಿಯುವ ಪರ್ಯಂತ ನನ್ನನ್ನು ಮರೆಮಾಡಿ ನನಗೆ ಅವಧಿಯನ್ನು ಗೊತ್ತುಮಾಡಿ (ಕಡೆಯಲ್ಲಿ) ನನ್ನನ್ನು ಜ್ಞಾಪಿಸಿಕೊಂಡರೆ ಎಷ್ಟೋ ಒಳ್ಳೇದು"** – ಯೋಬ 14:13.

ಇಲ್ಲಿ ಯೋಬನ ನಿರೀಕ್ಷೆಯ ಬಗ್ಗೆ ಬಹಳ ಸರಳವಾದ ಅಷ್ಟೇ ವಿಶದವಾದ ಹೇಳಿಕೆಯಿದೆ. ಆತನು ಪಾಪದ, ದುಃಖದ ಮತ್ತು ತೊಂದರೆ ಹಾಗೂ ನೋವಿನ ಪ್ರಸ್ತುತವಾದ ದೀರ್ಘಕಾಲೀನ ಪರಿಸ್ಥಿತಿಯ ಬಗ್ಗೆ ಕಾತುರನಾಗಿರುವುದಿಲ್ಲ; ದೇವರ ರೌದ್ರವು ಲೋಕದಿಂದ ಎತ್ತಲ್ಪಡುವವರೆಗೂ ಮತ್ತು ಹರ್ಷದಾಯಕ ಕಾಲವು ಬರುವವರೆಗೂ ಆಬ್ಲಿವಿಯಾನ್‌ನಲ್ಲಿ ಮರೆವೆಯ ಸ್ಥಿತಿಯಲ್ಲಿ ಹುದಿಗಿರಲು ಪೂರ್ಣ ಮನಸ್ಸುಳ್ಳವನಾಗಿದ್ದಾನೆ. ಆದರೆ ಆತನು ಸದಾಕಾಲಕ್ಕೆ ನಾಶವಾಗಲು ಇಷ್ಟಪಡುವುದಿಲ್ಲ. ಆಹಾ! ಇಲ್ಲ. ಪುನರುತ್ಥಾನದ ಮೂಲಕ ಭವಿಷ್ಯತ್ ಜೀವನವನ್ನು ದೇವರು ಒದಗಿಸುವುದರ ಮೇಲೆ ಪೂರ್ಣ ಭರವಸವುಳ್ಳವನಾಗಿ, ದೇವರು ಸೂಕ್ತಸಮಯದಲ್ಲಿ, ಪಾಪದ ಶಾಪವು ಉರುಳಿಹೋದ ಮೇಲೆ ಆತನನ್ನು ನೆನಪು ಮಾಡಿಕೊಳ್ಳುವಂತೆ ಪ್ರಾರ್ಥಿಸುತ್ತಾನೆ, ಕ್ರಿಸ್ತನ ಮೂಲಕ ಕಾರ್ಯಸಾಧಿಸಲಿರುವ ತನ್ನ ಪುನರ್ವಶದ ಶಕ್ತಿಯ ಮೂಲಕ ಅಬ್ಲಿವಿಯಾನ್‌ನಿಂದ ಹೊರಗೆ ಬಂದು ಜೀವಿಸುವಂತೆ ಮಾಡುತ್ತಾನೆ – ಅ.ಕೃ. 3:19–21.

**"ನಾನು ಪಾತಾಳವನ್ನು** (Sheol, Oblivion) **ನನ್ನ ಮನೆಯೆಂದು ನಿರೀಕ್ಷಿಸಿ ನನ್ನ ಹಾಸಿಗೆಯನ್ನು ಕತ್ತಲೆಯಲ್ಲಿ ಹಾಸಿ ಶ್ಮಶಾನವನ್ನು, ನೀನು ನನ್ನ ತಂದೆ ಎಂದೂ ಹುಳವನ್ನು, ನನ್ನ ತಾಯಿ, ನನ್ನ ತಂಗಿ ಎಂದೂ ಕರೆಯುವುದಾದರೆ ...."** – ಯೋಬ 17: 13–14.

ಈ ಮಾತುಗಳು ಎಷ್ಟು ಸುವ್ಯಕ್ತವಾಗಿವೆ! ಆಬ್ಲಿವಿಯಾನ್ ಆತನ ಮನೆ ಅಥವಾ ಹಾಸಿಗೆ ಮತ್ತು ಅದು ಸಂಪೂರ್ಣವಾಗಿ ಅಂಧಕಾರಮಯವಾಗಿದೆ – ಯೋಬನ ಆತ್ಮ, ಆತನ ಪ್ರಾಣ ಅಲ್ಲಿ ನಿಶ್ಚೇತನವಾಗಿ ಮಲಗಿಕೊಂಡು ಪುನರುತ್ಥಾನದ ಮುಂಜಾವಿಗಾಗಿ ಎದಿರು ನೋಡುತ್ತಿರುತ್ತದೆ. ಅದೇ ಸಮಯದಲ್ಲಿ ಆತನ ದೇಹವು ಕೊಳೆಯುತ್ತಿರುತ್ತದೆ.

**"ನನ್ನ ನಿರೀಕ್ಷೆ ಎಂಥದು? ನನ್ನ ನಿರೀಕ್ಷೆಯನ್ನು ಯಾರು ನೋಡಾರು? ಅದು ನನ್ನ ಸಂಗಡ ಪಾತಾಳಕ್ಕೆ** (Sheol, Oblivion) **ಇಳಿದು ಬಂದೀತೇ? ನಾವು ಜೊತೆಯಾಗಿ ಧೂಳಿಗೆ ಸೇರೇವೋ?"** – ಯೋಬ 17: 15–16.

ದೇವರ ಸೇವಕನು ತನ್ನ ಸ್ವಂತ ನಿರೀಕ್ಷೆ ಅಥವಾ ಭರವಸೆಯನ್ನು ಇಲ್ಲಿ ವ್ಯಕ್ತಪಡಿಸುತ್ತಾನೆ, ಆದರೆ ಎಷ್ಟು ಜನರಿಗೆ ಅಂಥಾಃ ಭರವಸೆ ಉಂಟೆಂದು ಪ್ರಶ್ನಿಸುತ್ತಾನೆ. ಆತನ ಮರಣವು ಕೇವಲ ನಿದ್ರೆಯಾಗಿದೆ, ಮತ್ತು ಪುನರುತ್ಥಾನದ ಮುಂಜಾವಿನಲ್ಲಿ ಅದರಿಂದ ಏಳುತ್ತೇನೆ ಎಂಬ ನಿರೀಕ್ಷೆಯನ್ನು ಆತನು ಈಗಾಗಲೇ ವ್ಯಕ್ತಪಡಿಸಿರುತ್ತಾನೆ. ಆದರೆ ಪ್ರತಿಯೊಬ್ಬನೂ ಪ್ರತ್ಯೇಕವಾಗಿ ಶಿಯೋಲಿಗೆ ಹೋಗುವುದರಿಂದ ಅವರುಗಳಿಗೂ ಈ ನಿರೀಕ್ಷೆ ಇದೆಯೋ, ಇಲ್ಲವೋ, ಎಲ್ಲರೂ ಮಣ್ಣಿನಲ್ಲಿ ವಿಶ್ರಾಂತಿಪಡೆಯುತ್ತಾರೆ.

**"ಹೀಗೆ ತಮ್ಮ ದಿನಗಳನ್ನು ಸುಖವಾಗಿ ಕಳೆದು** (ಅನಾಯಾಸವಾಗಿ) **ಸಮಾಧಿಗೆ** (Sheol, Oblivion) **ಇಳಿಯುವರು"** – ಯೋಬ 21:13.

ಯೋಬನು ಇಲ್ಲಿ ದೇವಜನರಲ್ಲದ ಕೆಲವರಿಗೆ ಯಶಸ್ವಿ ನಡವಳಿಕೆಯ ಬಗ್ಗೆ ವಿವರಿಸುವವನಾಗಿದ್ದಾನೆ. ಇದಕ್ಕೆ ವ್ಯತಿರಿಕ್ತವಾಗಿ ಕೆಲವು ದೇವಜನರು ಅನುಭವಿಸುವ ಯಾತನೆ ಮತ್ತು ಮುಂದಿನ ದಿನಗಳಲ್ಲಿ ಸುಧಾರಿಸಿಕೊಳ್ಳುವಂತೆ ದೇವರ ಶಿಕ್ಷೆಗೆ ಒಳಗಾಗುವರೆಂದು ವಿವರಿಸುತ್ತಾನೆ.

**"ಬರಗಾಲವೂ ಬಿಸಿಲೂ ಹಿಮದ ನೀರನ್ನು ಹೀರುವ ಹಾಗೆ ಪಾತಾಳವು** (Sheol, Oblivion) **ಪಾಪಿಗಳನ್ನು ಎಳಕೊಳ್ಳುವುದು"** – ಯೋಬ 24:19.

ಮಾನವ ಕುಲದವರೆಲ್ಲರೂ ಪಾಪಮಾಡಿದವರಾಗಿದ್ದಾರೆ, ಆದುದರಿಂದ ಇಡೀ ಮಾನವಕುಲವು ಮರಣ ಶಿಕ್ಷೆಗೆ ಒಳಗಾಗಿ ಪಾತಾಳಕ್ಕೆ (ಆಬ್ಲಿವಿಯಾನ್‌ಗೆ) ಇಳಿದುಹೋಗುವುದು. ಇರುವ ಏಕೈಕ ನಿರೀಕ್ಷೆಯು ನಮ್ಮನ್ನು ಮರಣದಿಂದ ವಿಮೋಚಿಸಿದಾತನಲ್ಲಿ, ಪುನರುತ್ಥಾನದ ಮುಂಜಾವಿನಲ್ಲಿ ತನ್ನ ಕೃಪಾವಾಗ್ದಾನಕ್ಕೆ ಅನುಸಾರವಾಗಿ ನಮ್ಮನ್ನು ಆ ಪಾತಾಳದಿಂದ ಹೊರಬರುವಂತೆ ಮಾಡುವಾತನಲ್ಲಿ ಅದೆ. ಪರಂತು, ಯೋಬನು ಈ ಪ್ರಕರಣದಲ್ಲಿ ಹೆಚ್ಚಾಗಿ ಕೇಡುಮಾಡುವವರ ಬಗ್ಗೆ ಸೂಚಿಸುತ್ತಾ ಅವರು ತಮ್ಮ ಮರಣವನ್ನು ಕೇಡಿನ ದಾರಿಯಲ್ಲಿ ನಡೆಯುವುದರ ಮೂಲಕ ಬೇಗನೇ ಬರಮಾಡಿಕೊಳ್ಳುತ್ತಾರೆ ಎನ್ನುತ್ತಾನೆ.

**"ಪಾತಾಳವು** (Sheol, Oblivion) **ಆತನ ದೃಷ್ಟಿಗೆ ತೆರೆದಿದೆ. ನಾಶಲೋಕವು ಮರೆಯಾಗಿಲ್ಲ"** – ಯೋಬ 26:6.

ಇಲ್ಲಿ ಯೋಬನು ಸೃಷ್ಟಿಕರ್ತನ ಸಮಗ್ರ ಜ್ಞಾನವನ್ನು ಸೂಚಿಸುತ್ತಾನೆ. ಆತನು ಪ್ರಾರಂಭದಿಂದಲೇ ಅಂತ್ಯವನ್ನು ಬಲ್ಲಾತನಾಗಿರುವುದು ಮಾತ್ರವಲ್ಲ ಪಾತಾಳದ ಎಲ್ಲಾ ರಹಸ್ಯ ಸಂಗತಿಗಳೂ ಆತನ ಆಗಾಧವಾದ ದೃಷ್ಟಿಗೆ ತೆರೆದವುಗಳಾಗಿವೆ.

**"ಮೃತರಿಗೆ ನಿನ್ನ ಜ್ಞಾಪಕವಿರುವುದಿಲ್ಲವಲ್ಲಾ: ಪಾತಾಳದಲ್ಲಿ ನಿನ್ನನ್ನು ಸ್ತುತಿಸುವವರು ಯಾರು?"** – ಕೀರ್ತನೆ 6:5.

ಇಲ್ಲಿ ನಮಗೆ ಎಂಥಾಃ, ಸ್ಪಷ್ಟವೂ ಸಕರಾತ್ಮಕವೂ ಆದ ಹೇಳಿಕೆಯೊಂದು ದೊರೆತು ಮಾನವನು ಮರಣದಲ್ಲಿ ಜ್ಞಾನಹೀನಸ್ಥಿತಿಯಲ್ಲಿರುತ್ತದೆ ಎಂದು ಸಾಬೀತುಪಡಿಸುತ್ತದೆ! ಈ ಹೇಳಿಕೆಯು ದುಷ್ಟರನ್ನು ಕುರಿತು ಅಲ್ಲ, ಬದಲಾಗಿ ಆತನ

ಕೃಪೆಯನ್ನು ಸ್ಮರಿಸಿ ಆತನ ನಾಮವನ್ನು ಕೊಂಡಾಡುವ ದೇವರ ಸೇವಕರಿಗೆ ಅನ್ವಯಿಸುತ್ತದೆ ಎಂಬುದನ್ನೂ ಇಲ್ಲಿ ಗಮನಿಸಬೇಕು. ಈ ಉಲ್ಲೇಖವು ಸಮಾಧಿಯಲ್ಲಿ ಹೂಣಲ್ಪಡುವ (qeber) ಸತ್ತ ದೇಹಕ್ಕಲ್ಲ, ಆದರೆ ಶಿಯೋಲ್ ಅಥವಾ ಅಬ್ಲಿವಿಯಾನ್ ಹೋಗಲಿರುವ ಆತ್ಮಕ್ಕೆ ಎಂಬುದನ್ನೂ ಗಮನಿಸಬೇಕು.

**"ದುಷ್ಟರು ಅಂದರೆ ದೇವರನ್ನು ಅಲಕ್ಷ್ಯಮಾಡುವ ಜನಾಂಗಗಳವರೆಲ್ಲಾ ಹಿಂತಿರುಗಿ ಪಾತಾಳಕ್ಕೆ (ಶಿಯೋಲ್ ಅಥವಾ ಆಬ್ಲಿವಿಯಾನ್‌ಗೆ) ಇಳಿದು ಹೋಗುವರು"** – ಕೀರ್ತನೆ 9:17.

ಈ ವಾಕ್ಯದಲ್ಲಿನ 'ಶಬ್'ಎಂಬುವ ಇಬ್ರಿಯ ಪದವು 'ರಿಟರ್ನ್ಡ್' ಎಂದು ಸರಿಯಾದ ರೀತಿಯಲ್ಲಿ ಭಾಷಾಂತರಿಸಲಾಗಿದೆ. ಇದು ಶಿಯೋಲಿನಿಂದ, ಆಬ್ಲಿವಿಯಾನ್‌ನಿಂದ "ಹಿಂತಿರುಗಿಸಲ್ಪಟ್ಟು" (Returned) ಎಂಬ ಆಲೋಚನೆಯನ್ನು ಉಂಟುಮಾಡುತ್ತದೆ. ಆ ರೀತಿಯಲ್ಲಿ ಮರಳಿ ಬಂದವರಲ್ಲಿ ಕೆಲವರು ತಮ್ಮ ಕೆಟ್ಟತನದಿಂದಾಗಿ ಮತ್ತು ದೇವರನ್ನು ಮರೆತುಬಿಡುವುದರಿಂದ ಆಬ್ಲಿವಿಯಾನ್‌ಗೆ ಪುನಃ ಹಿಂತಿರುಗುತ್ತಾರೆ. ಮಾನವ ಕುಲವನ್ನು ಸರ್ವಸಾಮಾನ್ಯವಾಗಿ ಶಿಯೋಲಿನಿಂದ ಬಿಡುಗಡೆ ಗೊಳಿಸುವುದು ಈಡುಬಲಿಯ ಬೆಲೆಯ ಫಲವಾಗಿ ಇದು ಮಿಲಿಯಾಂತರಯುಗದಲ್ಲಿ ಉಂಟಾಗುವುದು. ಆದಾಗ್ಯೂ, ಮರಣದಿಂದ ಎಚ್ಚರಿಸಲ್ಪಟ್ಟು ಸತ್ಯದ ತಿಳುವಳಿಕೆಗೆ ಬಂದವರು, ಆಗ ಇನ್ನೂ ವ್ಯತಿರಿಕ್ತವಾಗಿಯೇ ಇದ್ದು ಸ್ವಇಚ್ಛೆಯಿಂದ ದುಷ್ಟರಾದರೆ ಅಂಥವರನ್ನು 'ಎರಡನೆಯ ಮರಣ'ವಾದ ಆಬ್ಲಿವಿಯಾನ್‌ಗೆ ಹಿಂತಿರುಗಿಸಲಾಗುವುದು. ಅಲ್ಲಿಂದ ಅವರಿಗೆ ಯಾವುದೇ ಈಡುಬಲಿಯಾಗಲೀ, ಪುನಃಸಂಧಾನವಾಗಲೀ ಇರುವುದಿಲ್ಲ. ಈ ವಿಧಿವಚನವು ದೇವರನ್ನು ಎಂದೂ ಅರಿಯದ ಮಾನವ ಗುಂಪುಗಳಿಗೆ ಅಂದರೆ ಅನ್ಯಜನರಿಗೆ ಅನ್ವಯವಾಗುವುದಿಲ್ಲ ಎಂಬುದು ಅದರ ಸ್ವಂತ ಹೇಳಿಕೆಯಿಂದ ಸ್ಪಷ್ಟವಾಗಿದೆ, ಏನೆಂದರೆ ಅದು ದೇವರ ಸ್ಪಷ್ಟವಾದ ಜ್ಞಾನಕ್ಕೆ ಮತ್ತು ಅದಕ್ಕೆ ಅನುಗುಣವಾದ ಜವಾಬ್ದಾರಿಗಳಿಗೆ ಬಂದವರು ನಂತರದಲ್ಲಿ ದೇವರನ್ನು ಮರೆತಿರುವವರ ಬಗ್ಗೆ ಹೇಳುತ್ತದೆ.

**"ಯಾಕೆಂದರೆ ನೀನು ನನ್ನ ಜೀವಾತ್ಮವನ್ನು ಪಾತಾಳದಲ್ಲಿ** (Sheol, Oblivion) **ಬಿಡುವುದಿಲ್ಲ; ನಿನ್ನ ಪ್ರಿಯನಿಗೆ ಅಧೋಲೋಕವನ್ನು ನೋಡಗೊಡಿಸುವುದಿಲ್ಲ"** – ಕೀರ್ತನೆ 16:10.

ಅಪೋಸ್ತಲನಾದ ಪೇತ್ರನು, ಪಂಚಾಶತ್ತಮ ದಿನದಂದು ಪವಿತ್ರಾತ್ಮ ಪ್ರೇರಣೆಯಿಂದ ಮಾತನಾಡುತ್ತಾ ಈ ಹೇಳಿಕೆಯ ಬಗ್ಗೆ ನಮಗೆ ಸತ್ಯವಾದ ಸೂಚನೆಯನ್ನು ಬೋಧಿಸುತ್ತಾ ಇದು ದಾವೀದನ ವಿಷಯದಲ್ಲಿ ನೆರವೇರಲು ಸಾಧ್ಯವಿಲ್ಲ; ಯಾಕೆಂದರೆ ದಾವೀದನ ಆತ್ಮವು ಶಿಯೋಲಿನಲ್ಲಿ ಬಿಡಲ್ಪಟ್ಟಿದೆ ಮತ್ತು ಆತನ ದೇಹವು ನಾಶವಾಗಿದೆ ಎಂದು ತಿಳಿಸುತ್ತಾನೆ. ಆತನು ದಾವೀದನ ಬಗ್ಗೆ – **"ಅವನು ತೀರಿಹೋಗಿ ಹೂಣಲ್ಪಟ್ಟನು. ಅವನ ಸಮಾಧಿ ಈ ದಿನದವರೆಗೂ ನಮ್ಮಲ್ಲಿ ಅದೆ . . . ದಾವೀದನು ಆಕಾಶಕ್ಕೆ ಏರಿ ಹೋಗಲಿಲ್ಲವಲ್ಲಾ"** (ಅ.ಕೃ. 2: 29,35) ಎಂದು ಹೇಳುತ್ತಾನೆ.

ಅಪೋಸ್ತಲನ ಈ ಮಾತುಗಳು ಖಡಾಖಂಡಿತ ವಾದವುಗಳೂ ಮತ್ತು ಎರಡು ವಿಷಯಗಳಲ್ಲಿ ನಮ್ಮನ್ನು ಮನದಟ್ಟುಮಾಡುವವುಗಳೂ ಆಗಿವೆ : (1) ದಾವೀದನ ಆತ್ಮವು ಸಮಾಧಿಯನ್ನು (ಶಿಯೋಲ್) ಸೇರಿದೆ ಮತ್ತು ಇನ್ನೂ ಅಲ್ಲೇ ಇದ್ದು ಹಾಗೂ ಪೇತ್ರನ ಪ್ರಭೋಧನೆಯ ಕಾಲದಲ್ಲಿ ದಾವೀದನು ಪರಲೋಕಕ್ಕೆ ಏರಿ ಹೋಗಲಿಲ್ಲ ಎಂದು ಹೇಳುವಾಗ ಅದು ಅಲ್ಲಿಯೇ ಇತ್ತು (2) ಕ್ರಿಸ್ತ ಯೇಸುವಿನ ಆತ್ಮವೂ ಸಮಾಧಿ (ಶಿಯೋಲ್) ಸೇರಿತ್ತು. ಆದರೆ ಅದು ಅಲ್ಲಿಯೇ ಉಳಿಯಲಿಲ್ಲ, ಮೂರನೆಯ ದಿನದಲ್ಲಿ ಪುನರುತ್ಥಾನಗೊಂಡು ನಂತರ ದಿನದಲ್ಲಿ ಪರಲೋಕಕ್ಕೆ ಏರಿಹೋದನು.

ಸ್ಫೂರ್ತಿದಾಯಕವಾದ ಮೂಲದಿಂದ ಈ ಸರಳ ಹೇಳಿಕೆಗಳು ಎಲ್ಲಾ ಯಥಾರ್ಥರಾದ ಸತ್ಯ ಶೋಧಕರಿಗೆ ಈ ಪ್ರಸ್ತಾಪದ ಬಗ್ಗೆ ಸ್ಪಷ್ಟತೆ ನೀಡುತ್ತದೆ. ಅವುಗಳು ನಮ್ಮ ಮುಂದೆ ಮುಂದಣ ಸತ್ಯಸಂಗತಿಗಳನ್ನು ಇಡುತ್ತವೆ : (1) ಮರಣದ ನಂತರದಲ್ಲಿ ನಮ್ಮ ಕರ್ತನ ಆತ್ಮವು ಸಮಾಧಿಗೆ (ಅಬ್ಲಿವಿಯಾನ್‌ಗೆ, ಶಿಯೋಲಿಗೆ) ತೆರಳಿತು (2) ಆತನು ಮೂರು ದಿನಗಳವರೆಗೆ ಸಾವಿಗೆ ಭಾಗವಾಗಿದ್ದನು. (3) ಆತನು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದನು, ಸಮಾಧಿ(ಆಬ್ಲಿವಿಯಾನ್)ಯಿಂದ ದೇವರ ಪವಿತ್ರಾತ್ಮನ ಶಕ್ತಿಯಿಂದ ದೈವಿಕ ಸ್ವಭಾವ ಹೊಂದಿದವನಾಗಿ ಹೊರಬಂದು **"ನಿದ್ರೆಹೋದವರಲ್ಲಿ ಪ್ರಥಮಫಲವಾದನು"** (1 ಕೊರಿಂಥ 15:20). ನಮ್ಮ ಕರ್ತನ ಆತ್ಮ ಅಥವಾ ಪ್ರಾಣವು ಆತನು ಮರಣಹೊಂದಿದ ಅವಧಿಯಲ್ಲಿ ಇಲ್ಲವಾಗಿತ್ತು; **"ಆತನು ತನ್ನ ಪ್ರಾಣವನ್ನು ಧಾರೆಯೆರೆದು ಮರಣ ಹೊಂದಿದನು; ಆತನು ತನ್ನ ಆತ್ಮವನ್ನು ಪ್ರಾಯಶ್ಚಿತ್ತ ಯಜ್ಞಕ್ಕಾಗಿ ಸಮರ್ಪಿಸಿದನು"** (ಯೆಶಾಯ 53:12,10). ಆದರೆ, ಆತನ ಆತ್ಮವು ಪುನರುತ್ಥಾನದಲ್ಲಿ ಪುನರುಜ್ಜೀವ ಹೊಂದಿತು ಮತ್ತು ಆತನು ಹೊಸ ಆತ್ಮೀಕ ಶರೀರವನ್ನು ಹೊಂದಿಕೊಂಡನು (ಗ್ರಂಥಶ್ರೇಣಿ – 2, 109ನೇ ಪುಟ) (Vol. II, p. 109).

**"ಪಾತಾಳ ಪಾಶಗಳು ನನ್ನನ್ನು ಆವರಿಸಿಕೊಂಡವು; ಮರಣಕರವಾದ ಉರುಲುಗಳು ನನ್ನೆದುರಿನಲ್ಲಿದ್ದವು"** – ಕೀರ್ತನೆ 18:5.

ಇದು ಮರಣದ ಬಗ್ಗೆ ಆಳವಾದ ಮನಃಕ್ಲೇಷ ಮತ್ತು ಅಂಜಿಕೆಯನ್ನು ವ್ಯಕ್ತಪಡಿಸುವ ರೂಪಕವಾಗಿದೆ.

**"ಕರ್ತನೇ, ನನ್ನ ಪ್ರಾಣವನ್ನು ಪಾತಾಳದಿಂದಲೂ ಎತ್ತಿದಿಯಲ್ಲಾ; ನನ್ನನ್ನು ಸಮಾಧಿಯಲ್ಲಿ ಸೇರಗೊಡದೆ ಬದುಕಿಸಿದಿಯಲ್ಲಾ"** – ಕೀರ್ತನೆ 30:3 (Sheol, Oblivion).

ಇವು ಮರಣಭೀತಿಯನ್ನುಂಟು ಮಾಡಿದ್ದ ತೀವ್ರತರವಾದ ಅಸ್ವಸ್ಥತೆಯಿಂದ ಗುಣಪಡಿಸಿದ್ದಕ್ಕೆ ಸಲ್ಲಿಸುವ ಕೃತಜ್ಞತಾ ಮಾತುಗಳಾಗಿವೆ.

**"ಕರ್ತನೇ ಮೊರೆ ಇಟ್ಟಿದ್ದೇನೆ; ನನಗೆ ಆಶಾಭಂಗ ಪಡಿಸಬೇಡ. ದುಷ್ಟರಿಗೇ ಆಶಾಭಂಗವಾಗಲಿ. ಅವರು ಸ್ಥಬ್ಧರಾಗಿ ಪಾತಾಳಕ್ಕೆ** (Sheol, Oblivion) **ಬೀಳಲಿ. ಯಾರು ನೀತಿವಂತರನ್ನು ತಾತ್ಸಾರಮಾಡಿ ಗರ್ವದಿಂದಲೂ ಕೊಬ್ಬಿನಿಂದಲೂ ಅವರ ವಿರೋಧವಾಗಿ ಸುಳ್ಳು ಹೇಳುತ್ತಾರೋ ಅವರ ತುಟಿಗಳು ಮುಚ್ಚಿಹೋಗಲಿ"** – ಕೀರ್ತನೆ 31:17–18.

ಬೇರೆಡೆಯಲ್ಲಿರುವಂತೆ, ಇಲ್ಲಿಯೂ ಕೀರ್ತನೆಗಾರನು ಕೆಟ್ಟತನವನ್ನು ಪ್ರೀತಿಸಿ, ಅದನ್ನು ಅಭ್ಯಾಸ ಮಾಡುವವರಿಂದ ಈ ಲೋಕವನ್ನು ಶುದ್ಧೀಕರಿಸಬೇಕೆಂದು ಹಂಬಲಿಸುತ್ತಾನೆ. ಇದರಲ್ಲಿ ಭವಿಷ್ಯದ್ ಜೀವನದ ಯಾವುದೇ ಸೂಚನೆ ಇರುವುದಿಲ್ಲ, ಅಲ್ಲವೇ ಇದು ಪುನರುತ್ಥಾನದ ನಿರೀಕ್ಷೆಯ ಅರ್ಥವನ್ನು ಸಹಾ ನೀಡುವುದಿಲ್ಲ. ರಾಜ್ಯವು ದೇವರದಾಗಿದ್ದು ಆತನೇ ಎಲ್ಲಾ ಜನಾಂಗಗಳ ಅಧಿಪತಿಯಾಗಿ ರಾಜ್ಯಭಾರ ನಿರ್ವಹಿಸುವಾಗ ಮತ್ತು ನೀತಿಯ ಮತ್ತು ಸತ್ಯದ ನಿಯಮಗಳು ಸ್ಥಾಪಿತವಾಗುವಾಗ, ಕರುಣೆ ಮತ್ತು ಪ್ರೀತಿಯು ಎಲ್ಲಾ ಸೃಷ್ಟಿಗಳಿಗೆ ಪಾಪದಿಂದ ಮುಕ್ತಗೊಳ್ಳುವ ಸಂಪೂರ್ಣವಾದ ಜ್ಞಾನವನ್ನು ಒದಗಿಸಿ ಕೊಡುವಾಗ, ಕೆಟ್ಟವರಾಗಿರುವವರಲ್ಲಿ ಕೆಲವರು ನೀತಿ, ನ್ಯಾಯಗಳನ್ನು ಬಯಸುವವರಾಗಿ ಕಡೆಗೆ ಆತನ ಮೂಲಕ ನಿತ್ಯಜೀವವನ್ನು ಪಡಕೊಳ್ಳಬಹುದು. ಪ್ರವಾದಿಯಾದ ದಾವೀದನಾಗಲೀ, ಬೇರೆ ಯಾರೊಬ್ಬರಾಗಲೀ ಅಂಥಾಃ ಸುಧಾರಣೆಯನ್ನು ವಿರೋಧಿಸುವುದಿಲ್ಲ ಮತ್ತು ಸಂಪೂರ್ಣವಾಗಿ ಸುಧಾರಣೆ ಹೊಂದಿ ದೇವರ ಸಾಮರಸ್ಯಕ್ಕೆ ಹಿಂತಿರುಗಿ ಬಂದವರಿಗೆ ಆತನು ನಿತ್ಯಜೀವ ದಯಪಾಲಿಸುವುದಕ್ಕೆ ಅಡ್ಡಿಪಡಿಸುವುದಿಲ್ಲ.

**"ಅವರು ಕುರಿಗಳಂತೆ ಪಾತಾಳದಲ್ಲಿ** (Sheol, Oblivion) **ದಟ್ಟವಾಗಿ ಸೇರಿಸಲ್ಪಡುವರು. ಮೃತ್ಯುವೇ ಅವರ ಪಾಲಕನು. ಅವರಿಗೆ ನಿವಾಸವಿಲ್ಲದ ಹಾಗೆ ಪಾತಾಳವು ಅವರ ರೂಪವನ್ನು ಹಾಳುಮಾಡುವುದು; ಉದಯಕಾಲದಲ್ಲಿ ಯಥಾರ್ಥರು ಅವರ ಮೇಲೆ ದೊರೆತನ ನಡೆಸುವರು. ಆದರೆ ದೇವರು ನನ್ನ ಪ್ರಾಣವನ್ನು ಮೃತ್ಯು ಹಸ್ತದಿಂದ ತಪ್ಪಿಸಿ ಸ್ವೀಕಾರಮಾಡುವನು"** – ಕೀರ್ತನೆ 49:14,15.

ಆ ಶಿಯೋಲ್ ಎಂಬುದು ಸಾಧಾರಣ ಅರ್ಥದಲ್ಲಿ ಸಮಾಧಿಯನ್ನು ಸೂಚಿಸುವುದಿಲ್ಲ, ಆದರೆ ನಾವು ಅದನ್ನು ಭಾಷಾಂತರಿಸುವಾಗ ಈ ವಾಕ್ಯಭಾಗದಲ್ಲಿ ಇದು ಅಬ್ಲಿವಿಯಾನ್ ಎಂಬುದು ಸ್ಪಷ್ಟವಾಗಿ ಪ್ರಕಟವಾಗುತ್ತದೆ; ಯಾಕೆಂದರೆ, ಮರಣಾನಂತರ ಎಲ್ಲಾ ಕುರಿಗಳೂ ಆಬ್ಲಿವಿಯಾನ್‌ಗೆ ಹೋಗುವವಾದರೂ ಕುರಿಗಳನ್ನು ಯಾರೂ ಸಮಾಧಿಯಲ್ಲಿ ಹೂಳಿಡುವುದಿಲ್ಲ. ಅವು ಸತ್ತನಂತರ ಅವುಗಳು ಇರಲಿಲ್ಲವೋ ಎಂಬಂತೆ ಅವುಗಳನ್ನು ಮರೆತುಬಿಡುತ್ತಾರೆ. ಪ್ರವಾದಿಯು ಇಲ್ಲಿ ದೇವರು ತನ್ನನ್ನು ಆಬ್ಲಿವಿಯಾನ್‌ನಿಂದ ವಿಮುಕ್ತಿ ಗೊಳಿಸುವನು ಎಂದು ಹೇಳುವುದರ ಮೂಲಕ ಪುನರುತ್ಥಾನದ ಬಗ್ಗೆ ತನ್ನ ಸ್ವಂತ ಭರವಸೆಯನ್ನು ಸೂಚಿಸುತ್ತಾನೆ. "ದಾವೀದನು ಪರಲೋಕಕ್ಕೆ ಏರಿಹೋದವನಲ್ಲ" ಎಂಬ ಅಪೋಸ್ತಲನನಾದ ಪೇತ್ರನ ಹೇಳಿಕೆಗೆ ಇದು ಪೂರ್ಣ ಸಾಮರಸ್ಯದಲ್ಲಿದೆ. ದಾವೀದನ ಆತ್ಮವು ಶಿಯೋಲಿಗೆ, ಆಬ್ಲಿವಿಯಾನ್‌ಗೆ ಹೋಯಿತು ಮತ್ತು ದಾವೀದನ ಏಕೈಕ ಭರವಸೆಯೆಂದರೆ ಪುನರುತ್ಥಾನದಲ್ಲಿ ವಿಮೋಚಕನ ಮೂಲಕ ಶಿಯೋಲಿನಿಂದ ಪುನಃಜೀವನಕ್ಕೆ ಆತನ ಆತ್ಮದ ಬಿಡುಗಡೆ. ಇದಕ್ಕೂ ಹೆಚ್ಚಾಗಿ, ಆಬ್ಲಿವಿಯಾನಿಗೆ ಕುರಿಗಳಂತೆ ಹೋಗಿರುವವರು ಸಹಾ ಅಲ್ಲಿಂದ ಹಿಂತಿರುಗಿ ಬರುವರು. ಯಾಕೆಂದರೆ ಈ ವಾಕ್ಯಭಾಗವು ಪುನರುತ್ಥಾನದ ಮುಂಜಾವಿನಲ್ಲಿ "ನೀತಿವಂತರು" ಇವುಗಳ ಮೇಲೆ ಪ್ರಭುತ್ವ ಹೊಂದಿರುವರು, ಅವುಗಳನ್ನು ಆಳುವರು, ಅವುಗಳನ್ನು ನಿಯಂತ್ರಿಸುವರು ಮತ್ತು ಅವರನ್ನು ನೀತಿವಂತಿಕೆಯಲ್ಲಿ ನಿರ್ಣಯಿಸುವರು. ಅಪೋಸ್ತಲನು **"ದೇವಜನರು ಲೋಕಕ್ಕೆ ತೀರ್ಪುಮಾಡುವರೆಂದು ನಿಮಗೆ ತಿಳಿಯದೋ?"** (1 ಕೊರಿಂಥ 6:2) ಎಂದು ಸಹಾ ಕೇಳುತ್ತಾನೆ.

**"ಆ ದುಷ್ಟರಿಗೆ ಮರಣವು ತಟ್ಟನೇ ಬರಲಿ; ಸಜೀವರಾಗಿಯೇ ಪಾತಾಳಕ್ಕೆ** (Sheol, Oblivion) **ಇಳಿದುಹೋಗಲಿ. ಅವರ ಮನೆಯಲ್ಲಿಯೂ ಮನಸ್ಸಿನಲ್ಲಿಯೂ ಕೆಟ್ಟತನವೇ"** – ಕೀರ್ತನೆ 55:15.

ಸಾಮಾನ್ಯವಾಗಿ ತಪ್ಪಾಗಿ ಅರ್ಥೈಸುವ ಈ ವಾಕ್ಯವು ಅನೇಕ ದೇವಜನರಿಗೆ ಅಡಚಣೆಯನ್ನುಂಟು ಮಾಡುವುದಾಗಿದೆ. ಒಳ್ಳೆಯ ಮನುಷ್ಯನಾದ ದಾವೀದನು ತನ್ನ ಶತ್ರುಗಳು ನರಕಕ್ಕೆ ಹೋಗಲಿ, ನಿತ್ಯ ಯಾತನೆಯ ಸ್ಥಳಕ್ಕೆ ಹೋಗಲಿ ಎಂದು ಪ್ರಾರ್ಥಿಸುವುದಾದರೂ ಹೇಗೆ? ಎಂದು ಕೇಳುತ್ತಾರೆ. ಒಳ್ಳೆಯ ಮನುಷ್ಯನು ಆ ರೀತಿಯಾಗಿ ಪ್ರಾರ್ಥಿಸಲಿಕ್ಕಿಲ್ಲ ಅಥವಾ ಇದು ದಾವೀದನ ಪ್ರಾರ್ಥನೆಯ ಆಶಯವಲ್ಲ. ನಾವು ಕಂಡುಕೊಂಡಂತೆ ಮತ್ತು

ಕಾಣುತ್ತಿರುವಂತೆ ಶಿಯೋಲ್ ಎಂಬ ಪದದಲ್ಲಿ ಅಗ್ನಿ ಅಥವಾ ಉರಿ, ಯಾತನೆ ಅಥವಾ ಆದೇ ರೀತಿಯ ಬೇರೆ ಯಾವುದಾದರೂ ಸಂಗತಿಗಳ ಆಲೋಚನೆ ಇಲ್ಲ. ಅದು ಕೇವಲ ಆಬ್ಲಿವಿಯಾನನ್ನು ಅಂದರೆ ಪ್ರಾಣವು ಆರಿಹೋಗುವುದನ್ನು ಸೂಚಿಸುತ್ತದೆ. ನಂತರದಲ್ಲಿ ಶತ್ರುಗಳ ಬಗ್ಗೆ ದಾವೀದನ ಪ್ರಾರ್ಥನೆ ಮತ್ತು ಆತನಿಗೆ ಇರುವ ಅಪೇಕ್ಷೆಯು ಮುಂದುವರೆಯುತ್ತದೆ. ಇದು ನೀತಿಯ ವಿರುದ್ಧವಾದವರ ಬಗ್ಗೆ ಸ್ವಾಭಾವಿಕವಾಗಿ ಇರಬೇಕಾದ ಅಪೇಕ್ಷೆಯಾಗಿದೆ. ಇದು ಇಂದಿನ ಅತ್ಯಂತ ಜ್ಞಾನೋದಯವುಳ್ಳ ನಾಗರೀಕರ ನಿಯಮಗಳಿಗೆ ಪೂರ್ಣವಾಗಿ ಸಾಮರಸ್ಯವುಳ್ಳದ್ದಾಗಿದೆ. ಇಂದು ನಾಗರೀಕ ದೇಶಗಳ ಕಾನೂನುಗಳು 'ಎಲ್ಲಾ ಕೊಲೆಗಡುಕರೂ ಮರಣ ಶಿಕ್ಷೆಗೆ ಒಳಪಡಬೇಕು' ಎಂದು ಹೇಳುತ್ತವೆ. ಅವರು ಬಹುಶಃ ಇದಕ್ಕಾಗಿ ಸುಲಭಕರವಾದ, ಹೆಚ್ಚಿನ ತೊಂದರೆ ನೀಡದ ವಿಧಾನಗಳನ್ನು ಅನುಸರಿಸುತ್ತಾರೆ. ಈ ಎಲ್ಲಾ ಕಾನೂನಗಳು ಸಹಾ ದಾವೀದನಂತೆ **"ಪಾತಕಿಗಳು ಶಿಯೋಲಿಗೆ, ಆಬ್ಲಿವಿಯಾನಿಗೆ ಹೋಗಲಿ – ಅವರುಗಳು ಸಾಯಲಿ"** ಎಂದೇ ಹೇಳುತ್ತವೆ. ಪರಂತು, ದೇವರು ತನ್ನ ಕರುಣೆಯಲ್ಲಿ ಕ್ರಿಸ್ತನ ಅಮೂಲ್ಯ ರಕ್ತದ ಮೂಲಕ ಕಡು ಪಾಪಿಯಿಂದ ಸಾಧಾರಣ ಪಾಪಿಯವರೆಗೆ ಎಲ್ಲರನ್ನೂ ಈ ಶಿಕ್ಷೆಯಿಂದ ಬಿಡುಗಡೆಗೊಳಿಸಿದ್ದಾನೆ. – ಯೇಸು ಕ್ರಿಸ್ತನು ದೇವರ ಕೃಪೆಯಿಂದ ಪ್ರತಿಯೊಬ್ಬನಿಗೋಸ್ಕರ ಮರಣವನ್ನು ರುಚಿಕಂಡಿದ್ದಾನೆ. ತನ್ನನ್ನು ಈಡುಬಲಿಯಾಗಿ ಅರ್ಪಿಸಿದ್ದಾನೆ. **"ಆತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು"** (ಇಬ್ರಿಯ 2:9); **"ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಇದೇ ತಕ್ಕ ಸಮಯದಲ್ಲಿ ಹೇಳಬೇಕಾದ ಸಾಕ್ಷಿಯು"** (1 ತಿಮೋ. 2:6). ನಮ್ಮ ಜೊತೆ ಸೃಷ್ಟಿಗಳಲ್ಲಿ ಕೆಲವರು ನಮಗಿಂತ ಹೆಚ್ಚು ದುಷ್ಟರೆಂದು ಕಂಡು ಬಂದಲ್ಲಿ, ನಮಗೆ ಗೊತ್ತಿರುವಂತೆ ವಿರುದ್ಧವಾಗಿ ಇದು ಅವರ ಮೇಲೆ ವಿರೋಧಿಯ ಕುರುಡಾಗಿಸುವ ಪ್ರಭಾವವಾಗಿದೆ – **"ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು"** (2 ಕೊರಿಂಥ 4:4) ಅಥವಾ ಇನ್ನೂ ಹೆಚ್ಚು ಕೆಟ್ಟದಾದ ವಂಶಪರಂಪರತೆಯಿಂದಾಗಿದೆ. ಹೇಗಾದರೂ ದೇವರ ಪೂರ್ವಸಿದ್ಧತೆ ಏನೆಂದರೆ, ಜನಾಂಗದ ಪ್ರತಿಯೊಬ್ಬ ವ್ಯಕ್ತಿಯೂ ನೀತಿವಂತಿಕೆ ಮತ್ತು ಜೀವವನ್ನು ಆರಿಸಿಕೊಳ್ಳುವ ಬಗ್ಗೆ ಪೂರ್ಣವಾದ, ಸೊಗಸಾದ ಮತ್ತು ನಿಷ್ಪಕ್ಷಪಾತವಾದ ಅವಕಾಶಗಳನ್ನು ಹೊಂದಿರಬೇಕು ಅಥವಾ ಅನೀತಿವಂತರು ಮತ್ತು ಎರಡನೆಯ ಮರಣವನ್ನು ಹೊಂದುವವರು ಶಿಯೋಲಿಗೆ ಹಿಂತಿರುಗಬೇಕು ಎಂಬುದೇ. ಇವುಗಳೆಲ್ಲವೂ ನಮಗೆ ಕ್ರಿಸ್ತನ ಅಮೂಲ್ಯ ರಕ್ತದ ಮೂಲಕ ಭದ್ರಪಡಿಸಲ್ಪಟ್ಟು ಮುದ್ರೆಹಾಕಲ್ಪಟ್ಟ ನೂತನ ಒಡಂಬಡಿಕೆಯಲ್ಲಿ ಪೂರ್ಣ ಖಾತರಿಯಾಗುತ್ತದೆ.

**"ನೀನು ಬಹಳವಾಗಿ ಕನಿಕರಿಸಿ ನನ್ನ ಪ್ರಾಣವನ್ನು ಪಾತಾಳ** (Sheol, Oblivion) **ತಲದಿಂದ ತಪ್ಪಿಸಿದೆಯಲ್ಲಾ"** – ಕೀರ್ತನೆ 86:13.

'ಪಾತಾಳತಲ'ವೆಂಬ ಪದವು ಆಬ್ಲಿವಿಯಾನಿನ ಆಳವನ್ನು ಸೂಚಿಸುತ್ತದೆ. ಪ್ರವಾದಿಯು ತನ್ನ ಅನೇಕ ಕೀರ್ತನೆಗಳನ್ನು ಮಾಡುವಂತೆ ಇಲ್ಲಿಯೂ ಕರ್ತನಾದ ಯೇಸುಕ್ರಿಸ್ತನನ್ನು ಅನುಕರಿಸುತ್ತಿದ್ದಾನೆಂದು ಅನುಚಿತವಾಗಿ ಪರಿಗಣಿಸಬಾರದು. ಹಾಗಾದಲ್ಲಿ, 'ಪಾತಾಳತಲ' ಎಂಬ ಪದಕ್ಕೆ ವಿಲಕ್ಷಣವಾದ ಅನ್ವಯವುಂಟಾಗುತ್ತದೆ. ಮಾನವ ಕುಲದ ಪ್ರಪಂಚದಲ್ಲಿ ಮರಣವು ನಿದ್ರೆಯಾಗಿದೆ ಅದರ ವಿಸ್ಮೃತಿಯು ತಾತ್ಕಾಲಿಕವಾಗಿದೆ. ವಿಮೋಚನೆಯ ಫಲವಾಗಿ ಪುನರುತ್ಥಾನದಲ್ಲಿ ಇದರಿಂದ ಎಚ್ಚರವುಂಟಾಗುತ್ತದೆ. ಆದರೆ ನಮ್ಮ ಕರ್ತನಾದ ಯೇಸುವಿನ ವಿಷಯದಲ್ಲಿ ಇದು ಭಿನ್ನವಾಗಿತ್ತು. ಆತನು ಎಷ್ಟರ ಮಟ್ಟಿಗೆ ಪಾಪಿಯ (ಆದಾಮನ) ಸ್ಥಾನವನ್ನು ತೆಗೆದುಕೊಂಡನೋ, ಮರಣವು ಆತನಿಗೆ ಪಾಪದ ಕಾರಣವಾದ ಉಗ್ರತರ ಶಿಕ್ಷೆಯಾಗಿತ್ತು ಅಂದರೆ ಚಿರಸ್ಥಾಯಿಯಾದ ಆಬ್ಲಿವಿಯಾನ್. ಆದರೆ ಇದನ್ನು ಹೊರತುಪಡಿಸಿ ಆತನು ತಂದೆ ದೇವರ ಕೃಪೆಯ ಮತ್ತು ಶಕ್ತಿಯ ನಿಮಿತ್ತವಾಗಿ ಸತ್ತವರೊಳಗಿಂದ ಎಬ್ಬಿಸಲ್ಪಡಲೇ ಬೇಕಾಯಿತು. ಮತ್ತು ಆತನು ತಾನು ಬಿಡುಗಡೆ ಗೊಳಿಸಿದವರ ವಿಮೋಚಕನಾದನು.

**"ನನ್ನ ಜೀವವು ಕಷ್ಟಗಳಿಂದ ತುಂಬಿಹೋಯಿತು; ನನ್ನ ಪ್ರಾಣವು ಪಾತಾಳಕ್ಕೆ** (Sheol, Oblivion) **ಹತ್ತಿರವಾಯಿತು"** – ಕೀರ್ತನೆ 88:3.

ಇಲ್ಲಿ ಪುನಃ ಮರಣಕ್ಕೆ ಹತ್ತಿರವಾದ ದುಃಖವನ್ನು ಸಂಕ್ಷಿಪ್ತವಾಗಿ ಮತ್ತು ಕಾವ್ಯಮಯವಾಗಿ ವರ್ಣಿಸಲಾಗಿದೆ

**"ತನ್ನನ್ನು ಪಾತಾಳಕ್ಕೆ (ಶಿಯೋಲಿಗೆ, ಅಬ್ಲಿವಿಯಾನಿಗೆ) ತಪ್ಪಿಸಿಕೊಂಡು ಮರಣಹೊಂದದೆ ಚಿರಂಜೀವಿಯಾಗಿರುವ ಮನುಷ್ಯನು ಯಾವನಿದ್ದಾನೆ?"** – ಕೀರ್ತನೆ 89:48.

ಈ ವಿಚಾರಣೆಯು ಮತ್ತು ಅದಕ್ಕೆ ಅನ್ವಯಿಸುವ ಉತ್ತರವು ಎಷ್ಟೊಂದು ಸಮಂಜಸವಾಗಿದೆ. ನಾವು ಈವರೆಗೆ ಕಂಡುಕೊಂಡ ಈ ಪ್ರಕರಣದಲ್ಲಿನ ಎಲ್ಲಾ ಸತ್ಯಾಂಶಗಳನ್ನು ನೋಡುವಾಗ, ಈ ಮಾತುಗಳು ನಾವು ಇದುವರೆಗೆ ಚರ್ಚಿಸಿದ ವಿಷಯದ ಬಗ್ಗೆ ಇರುವ ಸಾಮಾನ್ಯ ಆಲೋಚನೆಗಳು ಎಷ್ಟೊಂದು ಅಸಮಂಜಸವಾಗಿದೆ. ಸಾಮಾನ್ಯವಾದ ಆಲೋಚನೆಯೆಂದರೆ, ಯಾವ ಮನುಷ್ಯನೂ, ಯಾವ ಆತ್ಮವೂ ಸಾವನ್ನು ಅನುಭವಿಸುವುದಿಲ್ಲ; ಸಾವಿನ ಕ್ಷಣವು, ಜೀವದ ಹೆಚ್ಚಳದ

ಸಮಯವಾಗಿದೆ; ಆದುದರಿಂದ ಆತ್ಮವು ಶಿಯೋಲಿನ, ಆಬ್ಲಿವಿಯಾನಿನ ಶಕ್ತಿಗಿಂತ ಶ್ರೇಷ್ಟವಾಗಿದೆ – ಆತ್ಮಕ್ಕೆ ಸಾವಿಲ್ಲ: ಅದು ತನ್ನನ್ನು ಶಿಯೋಲಿನ ಶಕ್ತಿಯಿಂದ ತನ್ನಷ್ಟಕ್ಕೇ ಬಿಡಿಸಿಕೊಳ್ಳಬಹುದೋ?, ಪ್ರಶ್ನಾತೀತವಾಗಿ ಶಿಯೋಲಿಗೆ ಆತ್ಮನನ್ನು ಮುಟ್ಟುವ ಶಕ್ತಿಯಿಲ್ಲ ಎಂಬ ಉತ್ತರ ಚಲಾವಣೆಯಲ್ಲಿದೆ. ದೇವರವಾಕ್ಯಗಳು ಮತ್ತು ಸತ್ಯವು ಎಷ್ಟೊಂದು ಸ್ಥಿರತೆಯಿಂದೊಡಗೂಡಿದೆ! ಆದರೆ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಪ್ಲಾಟೋನಿಕ್ ತತ್ವಜ್ಞಾನವು ಎಷ್ಟೋ ಅಸ್ಥಿರತೆಯಿಂದೊಡಗೂಡಿದೆ!

**"ಮರಣಪಾಶಗಳು ನನ್ನನ್ನು ಸುತ್ತಿಕೊಂಡಿದ್ದವು; ಪಾತಾಳವೇದನೆಗಳು** (Sheol, Oblivion) **ನನ್ನನ್ನು ಹಿಡಿದಿದ್ದವು. ಚಿಂತೆಯಲ್ಲಿಯೂ ಇಕ್ಕಟ್ಟಿನಲ್ಲಿಯೂ ಬಿದ್ದುಹೋಗಿದ್ದೆನು"** – ಕೀರ್ತನೆ 116:3.

ಇಲ್ಲಿಯೂ ಸಹಾ ಮರಣದ ಅಂಜಿಕೆಯನ್ನು ಸಚಿತ್ರವಾಗಿ ವರ್ಣಿಸಲಾಗಿವೆ.

**"ನಾನು ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ? ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ? ಮೇಲಣ ಲೋಕಕ್ಕೆ ಏರಿಹೋದರೆ ಅಲ್ಲಿಯೂ ನೀನಿರುತ್ತೀ. ಪಾತಾಳಕ್ಕೆ** (Sheol, Oblivion) **ಹೋಗಿ ಮಲಗಿಕೊಂಡೇನೆಂದರೆ ಅಲ್ಲಿಯೂ ನೀನಿರುವಿ"** – ಕೀರ್ತನೆ 139: 7,8.

ಪ್ರಚಲಿತದಲ್ಲಿರುವ ಕಲ್ಪನೆಯಂತೆ, ಇದು ದೇವರು ಘೋರವಾದ ಹಿಂಸೆಯ ಶಾಶ್ವತ ಕೋಣೆಯ ನಿವಾಸಿಯಾಗಿದ್ದಾನೆ ಎಂಬ ಅರ್ಥನೀಡುತ್ತದೆ. ಶಿಯೋಲ್ ಇದನ್ನು ಪ್ರತಿನಿಧಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಪ್ರವಾದಿಯು ದೈವಿಕ ಶಕ್ತಿಯ ದೀರ್ಘವಾದ ನೋಟವನ್ನು ನೋಡುವವನಾಗಿದ್ದು ನಮಗೆ ತನ್ನ ಅನ್ವೇಷಣೆಯ ಫಲಿತಾಂಶವನ್ನು ತಿಳಿಸುವಂತೆ ಇಡೀ ಲೋಕದಲ್ಲಿ ದೇವರ ಅಧಿಕಾರಕ್ಕೆ ಒಳಗಾಗದ ಸ್ಥಳವು ಯಾವುದೂ ಇಲ್ಲ ಎಂದು ಹೇಳುತ್ತಾನೆ. ಮರಣದ ಅಬ್ಲಿವಿಯಾನ್ ಸಹಾ ದೇವರ ವ್ಯಾಪ್ತಿಗೆ ಒಳಗಾಗಿದೆ ಎಂಬುದನ್ನು **"ಮರಣದ ಮತ್ತು ಪಾತಾಳದ** (Sheol, Oblivion) **ಬೀಗದ ಕೈಗಳು ನನ್ನಲ್ಲಿವೆ"** (ಪ್ರಕಟನೆ 1:18) ಎಂಬ ಮಾತುಗಳಿಂದ ಪ್ರಕಟಗೊಳಿಸಿದ್ದಾನೆ. ದೇವರ ಮೇಲಣ ಭರವಸದಿಂದ ಆತನ ಸರ್ವವ್ಯಾಪ್ತಿತ್ವದಲ್ಲಿನ ನಮ್ಮ ಭರವಸೆಯು ಸತ್ತವರ ಪುನರುತ್ಥಾನದಲ್ಲಿನ ನಮ್ಮ ನಂಬಿಕೆಗೆ ತಳಹದಿಯಾಗಿದೆ.

**"ಒಬ್ಬನು ಹೊಲವನ್ನು ಉತ್ತು ಹೆಂಟೆಗಳನ್ನು ಒಡೆದು ಚದರಿಸುವ ಪ್ರಕಾರವೇ ನಮ್ಮ ಎಲುಬುಗಳು ಪಾತಾಳದ್ವಾರದಲ್ಲಿ** (Sheol, Oblivion) **ಚದುರಿಸಲ್ಪಟ್ಟಿರುತ್ತವೆ"** – ಕೀರ್ತನೆ 141:7.

ಈ ವಾಕ್ಯಭಾಗದ ಮಹತ್ವವು ಬಹಳವಾಗಿ ಅಗೋಚರವಾಗಿದೆ. ಆದರೆ ಯಾವುದೇ ಘಟನೆಯೂ ಯಾತನೆಯುಳ್ಳ ನರಕದ ಬಗ್ಗೆ ಇರುವ ಸಾಮಾನ್ಯವಾದ ಕಲ್ಪನೆಗೆ ಯಾವುದೂ ಅನುಕೂಲಕರವಾಗಿಲ್ಲ. ಯಂಗ್‌ರವರ ಭಾಷಾಂತರದಲ್ಲಿ ಈ ಮಾತುಗಳನ್ನು ಈ ರೀತಿಯಾಗಿ ತರ್ಜುಮೆಗೊಳಿಸಲಾಗಿದೆ – " ಒಬ್ಬಾತನು ತನ್ನ ಭೂಮಿಯನ್ನು ಉತ್ತು, ನೇಗಿಲು ಹಾಯಿಸುವಂತೆ ಮೃತ್ಯುವಿನ ಆದೇಶಾನುಸಾರ ನಮ್ಮ ಎಲುಬುಗಳು ಚದುರಿಸಲ್ಪಡುತ್ತವೆ"– ["As one tilling and rippling up the land have our bones beem scattered at the command of Saul"].

**"ಪಾತಾಳವು** (Sheol, Oblivion) **ತನ್ನೊಳಗೆ ಇಳಿಯುವವರನ್ನು ಸಂಪೂರ್ಣವಾಗಿ ನುಂಗುವಂತೆ ನಾವೂ ಇವರನ್ನು ಜೀವದೊಡನೆ ನುಂಗಿಬಿಡುವ"** – ಜ್ಞಾನೋಕ್ತಿ 1:12.

ಇದು ತನ್ನ ಆಹುತಿಯನ್ನು ಕೂಡಲೇ ನಾಶಪಡಿಸುವ, ಅವರನ್ನು ಆಬ್ಲಿವಿಯಾನಿನಲ್ಲಿ ತಮ್ಮ ನೋಟ ಮತ್ತು ನೆನಪಿನಿಂದಲೇ ಸಂಪೂರ್ಣವಾಗಿ ಅಳಿಸಿಬಿಡುವ ಕೊಲೆಗಾರರ ಭಾಷೆಯ ಅಭಿಪ್ರಾಯವನ್ನುಂಟು ಮಾಡುತ್ತದೆ.

**"ಅವಳು ಮರಣದ ಕಡೆಗೆ ನಡೆಯುತ್ತಾ ಇಳಿದು ಹೋಗುವಳು. ಅವಳ ಹೆಜ್ಜೆಗಳು ಪಾತಾಳದ** (Sheol, Oblivion) **ದಾರಿಯನ್ನು ಹಿಡಿಯುವುವು"** – ಜ್ಞಾನೋಕ್ತಿ 5:5.

ಜಾರ ಸ್ತ್ರೀಯ ಪ್ರಲೋಭನೆಗಳು ಮತ್ತು ಅವುಗಳಿಂದುಂಟಾಗುವ ವಿನಾಶಕಾರಿ ಸಂಗತಿಗಳನ್ನು ಇಲ್ಲಿ ಕಾವ್ಯಮಯವಾಗಿ ಮಂಡಿಸಲಾಗಿದೆ; ಆಕೆಯ ಮಾರ್ಗಗಳು ನಾಶನಕ್ಕೆ, ಮರಣಕ್ಕೆ ಮತ್ತು ಪಾತಾಳಕ್ಕೆ (ಆಬ್ಲಿವಿಯಾನ್‌ಗೆ) ನಡೆಸುತ್ತವೆ.

**"ಅವಳ ಮನೆಯು ಪಾತಾಳದ ದಾರಿ** (Sheol, Oblivion), **ಅದು ಮೃತ್ಯುವಿನ ಅಂತಃಪುರಕ್ಕೆ ಇಳಿದುಹೋಗುತ್ತದೆ"** – ಜ್ಞಾನೋಕ್ತಿ 7:27.

ಇದು ಹಿಂದಿನ ಹೇಳಿಕೆಯಂತೆಯೇ ಇದೆ, ಆದರೆ ಇಲ್ಲಿ ಉಲ್ಲೇಖಿಸಿರುವ ನರಕವು ಉರಿಯುವ ಸ್ಥಳವಲ್ಲ, ಯಾತನೆಯ ಸ್ಥಳವೂ ಅಲ್ಲ ಆದರೆ ಮರಣದ ಅಂಧಕಾರದ ಕೋಣೆಯಾಗಿದೆ, ನಗಣ್ಯವಾದ ಪಾತಾಳ (ಆಬ್ಲಿವಿಯಾನ್) ಆಗಿದೆ.

**"ಅವಳ ಅತಿಥಿಗಳು ಅಗಾಧಪಾತಾಳದಲ್ಲಿ** (Sheol, Oblivion) **ಬಿದ್ದಿರುವರೆಂದೂ ಅವನಿಗೆ ತಿಳಿಯದು"** –

ಜ್ಞಾನೋಕ್ತಿ 9:18.

ಇಲ್ಲಿ ಅತಿಶಯೋಕ್ತಿಯಾದ ಭಾಷೆಯಲ್ಲಿ, ಜಾರಸ್ತ್ರೀಯ ಅತಿಥಿಗಳನ್ನು ಸತ್ತವರೆಂದು ಪ್ರತಿನಿಧಿಸಲಾಗಿದೆ. ಅವರು ತಮ್ಮ ಸ್ವಂತ ಮರ್ಯಾದೆಯನ್ನೂ, ಮಾನವಕುಲದ ಎಲ್ಲಾ ಘನತೆಯನ್ನೂ ಕಳಕೊಂಡವರಾಗಿದ್ದು ನಿಸ್ಸಂದೇಹವಾಗಿ ಮರಣದ ಮಾರ್ಗದಲ್ಲಿದ್ದಾರೆ. ಯಾಕೆಂದರೆ, ಲಂಪಟತನದ ಮಾರ್ಗವು ರೋಗಕ್ಕೂ, ಮರಣಕ್ಕೂ ತ್ವರೆಪಡಿಸುತ್ತದೆ. ಭೌತಿಕವಾದ ಅರ್ಥದಲ್ಲಿ ಮಾತ್ರವಲ್ಲ, ಸಹಮಾನವರೊಡನೆ ತಮ್ಮ ಮರ್ಯಾದೆಯನ್ನು, ಪ್ರಭಾವವನ್ನು ಕಳಕೊಂಡ ಅರ್ಥದಲ್ಲಿಯೂ ಸಹಾ ಅವರು ಪಾತಾಳದ (ಆಬ್ಲಿವಿಯಾನಿನ) ಮಾರ್ಗದಲ್ಲಿದ್ದಾರೆ.

**"ಪಾತಾಳವೂ ನಾಶಲೋಕವೂ** (Sheol, Oblivion) **ಕರ್ತನಿಗೆ ಗೋಚರವಾಗಿರುವಲ್ಲಿ, ನರವಂಶದವರ ಹೃದಯಗಳು ಮತ್ತೂ ಸ್ಪಷ್ಟ"** – ಜ್ಞಾನೋಕ್ತಿ 15:11.

ಇಲ್ಲಿ ಯಾವುದೇ ಯಾತನೆಯ ಸುದ್ದಿ ಇಲ್ಲದಿರುವುದನ್ನು ಗಮನಿಸಬೇಕು. ಆದರೆ ಇದಕ್ಕೆ ತೀರಾ ವ್ಯತಿರಿಕ್ತವಾಗಿ ಶಿಯೋಲ್ ಅಥವಾ ಆಬ್ಲಿವಿಯಾನ್ ಎಂಬುದು ನಾಶನದೊಂದಿಗೆ ಸಂಬಂಧಿಸಿದೆ.

**"ವಿವೇಕಿಗೆ ಜೀವದ ಮಾರ್ಗವು ಮೇಲು ಮೇಲಕ್ಕೆ ಹೋಗುತ್ತದೆ; ಅದನ್ನು ಹಿಡಿದವನು ಪಾತಾಳದಿಂದ** (Sheol, Oblivion) **ತಪ್ಪಿಸಿಕೊಳ್ಳುವನು"** – ಜ್ಞಾನೋಕ್ತಿ 15:24.

ನಮ್ಮ ಭಾಷಾಂತರಕಾರರು ಇದನ್ನು ತಮ್ಮ ವಿಚಾರಸರಣಿಯ ಸಮೀಪಕ್ಕೆ ತಕ್ಕಂತೆ ಅಂದರೆ ನೀತಿವಂತರು ಮೇಲಕ್ಕೆ ಅಂದರೆ ಪರಲೋಕಕ್ಕೆ ಏರಿಹೋಗುವರು ಮತ್ತು ಅನೀತಿವಂತರು ಕೆಳಕ್ಕೆ ಅಂದರೆ ಪಾತಾಳಲೋಕಕ್ಕೆ ಇಳಿದು ಹೋಗುವರು ಎಂಬರ್ಥ ಬರುವಂತೆ ಭಾಷಾಂತರಿಸಿದ್ದಾರೆ. ಪರಿಷ್ಕರಿಸಿದ ಭಾಷಾಂತರವನ್ನು ಗಮನಿಸುವುದಾದರೆ "To the wise the way of goeth upward that he may depart from Sheol (margin, the grave) beneath" ( = ವಿವೇಕಿಗೆ ಜೀವನ ಮಾರ್ಗವು ಮೇಲ್ಮುಖವಾಗಿದ್ದು ಅವನು ಕೆಳಗಣ ಪಾತಾಳದಿಂದ ಹೊರಡುತ್ತಾನೆ. ಸರಿಯಾದ ಭಾಷಾಂತರವು ಬಹುಶಃ ಹೀಗಿರಬೇಕು – The path of life for the wise is an upward one toward righteousness, that they may be delivered by resurrection power from oblivion (= ವಿವೇಕಿಗಳ ಜೀವನ ಮಾರ್ಗವು ಮೇಲ್ಮುಖವಾಗಿದ್ದು ನೀತಿವಂತಿಕೆಯ ಕಡೆಗಿದೆ. ಅವರು ಪುನರುತ್ಥಾನದ ಶಕ್ತಿಯಿಂದಾಗಿ ಬಿಡುಗಡೆ ಹೊಂದಲಿರುವರು).

**"ಬೆತ್ತದಿಂದ ಹೊಡೆ; ಅವನ ಆತ್ಮವನ್ನು ಪಾತಾಳಕ್ಕೆ** (Sheol, Oblivion) **ಬೀಳದಂತೆ ಕಾಪಾಡು"** – ಜ್ಞಾನೋಕ್ತಿ 23:14.

ಆತ್ಮಗಳು ಯಾತನೆಯುಳ್ಳ ಪಾತಾಳದಿಂದ ಹೊರಬರುವಂತೆ ಮರಣದ ನಂತರ ಹೆಣಗಳಿಗೆ ಹೊಡೆಯುವರು ಎಂಬಂತೆ ಇದನ್ನು ವಿವರಿಸುವುದು ಬಹುಶಃ ಅಗತ್ಯವಿಲ್ಲ. ಈ ಸನ್ನಿವೇಶದಲ್ಲಿಯೇ ಇದರ ಅರ್ಥವನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಆಜ್ಞೆ ಏನೆಂದರೆ, ಮಕ್ಕಳಿಗೆ ಅಗತ್ಯ ಬಿದ್ದಾಗ ಬೆತ್ತದಿಂದ ಹೊಡೆಯದೇ ಇರಬಾರದು. ಹಾಗೆ ಮಾಡಿದಲ್ಲಿ ಅದು ಅವುಗಳ ಆಯುಸ್ಸಿನಲ್ಲಿ ಬಹಳಷ್ಟು ಉಪಯುಕ್ತ ವರ್ಷಗಳನ್ನು ಕೂಡಿಕೊಳ್ಳುವುವು. ಅವುಗಳ ಆತ್ಮಗಳನ್ನು ಅಕಾಲಿಕ ಆಬ್ಲಿವಿಯಾನ್‌ನಿಂದ ತಪ್ಪಿಸಬಹುದು ಮತ್ತು ಬಹುಶಃ ಅಬ್ಲಿವಿಯಾನ್ ಹಿಂತಿರುಗಬೇಕಾಗುವ ಎರಡನೆಯ ಮರಣದಿಂದಲೂ ಅವುಗಳನ್ನು ಕಾಪಾಡಬಹುದು.

**"ಪಾತಾಳಕ್ಕೂ** (Sheol, Oblivion) **ನಾಶಲೋಕಕ್ಕೂ ಹೇಗೆ ತೃಪ್ತಿಯಿಲ್ಲವೋ ಹಾಗೆ ಮನುಷ್ಯನ ಕಣ್ಣುಗಳಿಗೆ ತೃಪ್ತಿ ಇಲ್ಲ"** – ಜ್ಞಾನೋಕ್ತಿ 27:20.

ಇದರಿಂದ ಉರಿಯುವ ನರಕವನ್ನು ಸೂಚಿಸುವದಿಲ್ಲ, ಅದು ಅಪಾರವಾದ ಪ್ರಮಾಣವನ್ನೊಳಗೊಂಡಿದೆ, ಅದನ್ನು ಎಂದಿಗೂ ತುಂಬಲು ಸಾಧ್ಯವಿಲ್ಲ ಎಂದು ಹೇಳುತ್ತಿಲ್ಲ, ಇದು ಕೇವಲ ಮರಣದ ವಿಸ್ತಾರಕ್ಕೆ ಮಿತಿಯೆಂಬುದಿಲ್ಲ ಎಂದು ಸೂಚಿಸುತ್ತದೆ ಅಷ್ಟೆ; ಆಬ್ಲಿವಿಯಾನ್ ಮತ್ತು ನಾಶನ ಇವುಗಳಲ್ಲಿ ಕಿಕ್ಕಿರಿದ ಜನಸಂದಣಿ ಇರುವುದಿಲ್ಲ.

**"ತೃಪ್ತಿಪಡದವುಗಳು ಮೂರು ಉಂಟು; ಹೌದು, ಸಾಕೆನ್ನದವುಗಳು ನಾಲ್ಕು ಉಂಟು. ಯಾವವೆಂದರೆ ಪಾತಾಳ** (Sheol, Oblivion)**, ಹೆರದ ಗರ್ಭ, ನೀರಿನಿಂದ ತೃಪ್ತಿಪಡದ ಭೂಮಿ, ಸಾಕಾಯಿತೆಂದು ಹೇಳದ ಬೆಂಕಿ, ಇವೇ"** – ಜ್ಞಾನೋಕ್ತಿ 30: 15,16).

ಈ ವಾಕ್ಯಭಾಗದಲ್ಲಿ, ಅದರ ಹಿಂದಿನ ವಚನದಲ್ಲಿರುವಂತೆ ಮರಣ ಮತ್ತು ಆಬ್ಲಿವಿಯಾನಿನ ವಿಸ್ತಾರಕ್ಕೆ ಕೊನೆ ಎಂಬುದೇ ಇಲ್ಲ, ಅವುಗಳು ಎಂದಿಗೂ ತುಂಬಿಹೋಗುವುದಿಲ್ಲ.

**"ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣ ಶಕ್ತಿಯಿಂದ ಮಾಡು; ನೀನು ಸೇರಬೇಕಾದ ಪಾತಾಳದಲ್ಲಿ** (Sheol, Oblivion) **ಯಾವ ಕೆಲಸವೂ ಯುಕ್ತಿಯೂ ತಿಳುವಳಿಕೆಯೂ ಜ್ಞಾನವೂ ಇರುವುದಿಲ್ಲ"** – ಪ್ರಸಂಗಿ 9:10.

ಇಲ್ಲಿ ಪಾತಾಳಲೋಕದ (ಶಿಯೋಲ್, ಆಬ್ಲಿವಿಯಾನ್) ಬಗ್ಗೆ ಬಹಳ ಸಕಾರಾತ್ಮಕ ಹೇಳಿಕೆ ಇದೆ. ಇದು ಕೆಟ್ಟವರಿಗೆ ಮಾತ್ರವೇ ಅನ್ವಯವಾಗುವುದಲ್ಲ, ನೀತಿವಂತರಿಗೆ ಸಹಾ,

ಮರಣವನ್ನು ಪ್ರವೇಶಿಸುವವರೆಲ್ಲರಿಗೂ ಅನ್ವಯವಾಗುತ್ತದೆ. ಮರಣದ ಶಿಯೋಲಿನಲ್ಲಿ, ಆಬ್ಲಿವಿಯಾನಿನಲ್ಲಿ ಒಳ್ಳೆಯ ಕೆಲಸವೆಂದಾಗಲೀ, ಕೆಟ್ಟ ಕೆಲಸವೆಂದಾಗಲೀ ಇಲ್ಲ, ದೇವರನ್ನು ಸ್ತುತಿಸುವುದಾಗಲೀ, ಶಪಿಸುವುದಾಗಲೀ ಇಲ್ಲ, ಒಳ್ಳೆಯದನ್ನಾಗಲೀ, ಕೆಟ್ಟದ್ದನ್ನಾಗಲೀ ಆಲೋಚಿಸುವುದು ಎಂಬುದಾಗಲೀ ಇಲ್ಲ, ಪವಿತ್ರವಾದ ಜ್ಞಾನ, ಅಪವಿತ್ರವಾದ ಜ್ಞಾನ ಎಂಬುದೂ ಇಲ್ಲ, ದೇವಲೋಕದ ವಿವೇಕ ಅಥವಾ ಇತರ ವಿವೇಕವೆಂಬುದೂ ಇಲ್ಲ. ಈ ಸಂಗತಿಯನ್ನು ಇದಕ್ಕಿಂತ ಹೆಚ್ಚಾಗಿ, ಇನ್ನೂ ಸ್ಪಷ್ಟವಾಗಿ, ನಿಶ್ಚಯಪೂರ್ವಕವಾಗಿ ಹೇಗೆ ಹೇಳಲು ಸಾಧ್ಯ?

**"ಪ್ರೀತಿಯು ಮರಣದಷ್ಟು ಬಲವಾಗಿದೆ [ಪ್ರೀತಿ ದ್ರೋಹದಿಂದ ಹುಟ್ಟುವ] ಮತ್ಸರವು ಪಾತಾಳದಷ್ಟು** (Sheol, Oblivion) **ಕ್ರೂರ"** – ಪರಮಗೀತ 8:6.

ಮರಣಸ್ಥಿತಿಯು ಅಂದರೆ ಆಬ್ಲಿವಿಯಾನ್ ಇಲ್ಲಿ ನಿಷ್ಕರುಣೆಯ ಮೂರ್ತಿಕೃತವಾಗಿ ಪ್ರತಿನಿಧಿಸಲ್ಪಟ್ಟಿದೆ. ಯಾವುದೇ ಗುಣಲಕ್ಷಣ ಅಥವಾ ಸ್ಥಿತಿಯನ್ನು ಹೊರತುಪಡಿಸದೆ ಇದು ಇಡೀ ಮಾನವ ಕುಟುಂಬವನ್ನು ನುಂಗಿಬಿಡುತ್ತದೆ.

**"ಪಾತಾಳವು** (Sheol, Oblivion) **ಹೆಚ್ಚು ಆತುರದಿಂದ ಅವಸರವಾಗಿ ಬಾಯಿ ತೆರೆಯಲು ಅವರ ಮಹಿಮೆ, ಕೋಲಾಹಲ, ಗದ್ದಲ, ಉಲ್ಲಾಸ ಇವೆಲ್ಲಾ (ಅದರೊಳಗೆ) ಬಿದ್ದು ಹೋಗುವುವು"** – ಯೆಶಾಯ 5:14.

ಪ್ರವಾದಿಯು ಇಲ್ಲಿ ಶಿಯೋಲನ್ನು ಅಥವಾ ಅಬ್ಲಿವಿಯಾನನ್ನು ವರ್ಚಸ್ಸಿನ ನಷ್ಟವನ್ನು, ಅಗೌರವವನ್ನು, ಇಸ್ರಾಯೇಲ್ಯರ ಮೇಲೆ ಬಂದ ಅಪಮಾನವನ್ನು ವಿವರಿಸುವುದಕ್ಕಾಗಿ ಉಪಯೋಗಿಸುತ್ತಾನೆ. ಅವರು ಬಹುಮಟ್ಟಿಗೆ ಸತ್ತವರಂತೆ ಆಗಿದ್ದಾರೆ, ಅವರು ಹೆಚ್ಚು ಸಂಖ್ಯೆಯಲ್ಲಿ ಆಬ್ಲಿವಿಯಾನಿಗೆ ದಾಟಿಹೋಗಿದ್ದಾರೆ. ಈ ಪರಿಚ್ಛೇದಕ್ಕೆ ಅಕ್ಷರಶಃವಾದ ಪಾತಾಳಕ್ಕೂ, ಉರಿಯ ಅಗ್ನಿ ಸರೋವರಕ್ಕೂ ಯಾವುದೇ ಸಂಬಂಧವಿಲ್ಲ.

**"ಬರುತ್ತಿರುವ ನಿನ್ನನ್ನು ಎದುರುಗೊಳ್ಳುವುದಕ್ಕೆ ಕೆಳಗಡೆ ಪಾತಾಳವು** (Sheol, Oblivion) **ತಳಮಳಪಡುತ್ತದೆ"** – ಯೆಶಾಯ 14:09.

ಇದು ಒಂದು ಉನ್ನತವಾದ ಸಾಂಕೇತಿಕ ಭಾಷೆಯಾಗಿದೆ. ಇದು ಬಾಬೇಲಿಗೆ ಅನ್ವಯವಾಗುತ್ತದೆ. ಇದರ ನೆರವೇರಿಕೆಯು ಇನ್ನು ಮುಂದೆ ಆಗಬೇಕಾಗಿದೆ ಮತ್ತು ಅದು ಹತ್ತಿರವಾಗಿಯೇ ಇದೆ ಎಂದು ನಾವು ನಂಬುತ್ತೇವೆ. ಮಹಾ ಬಾಬೇಲು ನುಂಗಲ್ಪಡಬೇಕು, ಕಲ್ಲುಬಂಡೆಯು ಸಮುದ್ರಕ್ಕೆ ಬಿಸಾಡಲ್ಪಡುವಂತೆ ಅದು ಸಂಪೂರ್ಣವಾಗಿ ಇನ್ನಿಲ್ಲದಂತಾಗುವುದು ಮತ್ತು ಮರೆತುಹೋಗುವುದು. ಅದು ಆಬ್ಲಿವಿಯಾನಿಗೆ (Sheol) ಹೋಗುವುದು – **"ಆಗ ಬಲಿಷ್ಟನಾದ ಒಬ್ಬ ದೇವದೂತನು ದೊಡ್ಡ ಬೀಸುವ ಕಲ್ಲಿನಂತಿರುವ ಒಂದು ಕಲ್ಲನ್ನು ಎತ್ತಿ ಸಮುದ್ರದೊಳಕ್ಕೆ ಹಾಕಿ – ಮಹಾ ಪಟ್ಟಣವಾದ ಬಾಬೇಲು ಹೀಗೆಯೇ ದಡದಡನೇ ಕೆಡವಲ್ಪಟ್ಟು ಇನ್ನೆಂದಿಗೂ ಕಾಣಿಸುವುದಿಲ್ಲ"** (ಪ್ರಕಟನೆ 18:21). ಇದು ಈ ಸನ್ನಿವೇಶದಲ್ಲಿ ತೋರಿಸಲಾಗಿದೆ "ಪೀಡಿಸುವವರು ನಿಲ್ಲಿಸಿದ್ದು ಹೇಗೆ? ಬಂಗಾರದ ಪಟ್ಟಣವು ಸ್ಥಗಿತಗೊಂಡದ್ದು ಹೇಗೆ? (4ರಿಂದ 8ನೇ ವಚನಗಳನ್ನು ನೋಡಿ).

**"ನಿನ್ನ ವೈಭವವೂ ವೀಣಾನಾದವು ಪಾತಾಳಕ್ಕೆ** (Sheol, Oblivion) **ತಳ್ಳಲ್ಪಟ್ಟಿವೆ"** – ಯೆಶಾಯ 14:11.

ಇದು ಅದೇ ರೂಪಾರ್ಥವುಳ್ಳ ಬಾಬೇಲಿನ ನಾಶನವನ್ನು ತೋರಿಸುವ ಸಾಂಕೇತಿಕ ಚಿತ್ರಣದ ಮುಂದುವರಿಕೆ ಯಾಗಿದೆ. ಆಕೆಯ ಮಹತ್ವವು ಸಧ್ಯದಲ್ಲಿಯೇ ಭೂತಕಾಲದ್ದಾಗುವುದು – ಉರಿಯುವ ಬೆಂಕಿಯಲ್ಲಲ್ಲ, ಅಬ್ಲಿವಿಯಾನಿನಲ್ಲಿ ಹೂತುಹೋಗುವುದು.

**"ನೀವು ನಿಮ್ಮೊಳಗೆ – ಮೃತ್ಯುವಿನಿಂದ ಒಡಂಬಡಿಕೆಯನ್ನು ಪಡಕೊಂಡು ಪಾತಾಳದೊಡನೆ** (Shoel, Oblivion) **ಒಪ್ಪಂದವನ್ನು ಮಾಡಿಕೊಂಡಿದ್ದೇವೆ** ...." – ಯೆಶಾಯ 28:15.

ತಮ್ಮ ತಪ್ಪಾದ ಸಿದ್ಧಾಂತಗಳಿಂದ ದೇವರ ವಾಕ್ಯದ ನಿಜವಾದ ಬೋಧನೆಯಾದ "ಪಾಪದ ಸಂಬಳ ಮರಣ" ಎಂಬುದಕ್ಕೆ ಅಗೌರವ ತೋರಿಸಿದ ಕೆಲವರು ಅನುಭವಿಸಲಿರುವ ಉಗ್ರವಾದ ತೊಂದರೆಗಳ, ಮುಗ್ಗರಿಸುವಿಕೆಯ ಮತ್ತು ಪತನದ ಬಗ್ಗೆ ಇಲ್ಲಿ ಕರ್ತನು ಮುಂತಿಳಿಸುವವನಾಗಿದ್ದಾನೆ. ಈಗ ದೇವರ ವಾಕ್ಯವನ್ನು ಯಾರು ಕಪಟವಾದ ರೀತಿಯಲ್ಲಿ ಉಪಯೋಗಿಸಿಕೊಂಡು, ಅವುಗಳಲ್ಲಿನ ಸತ್ಯದಿಂದ ತಮ್ಮನ್ನು ಪವಿತ್ರಗೊಳಿಸಿಕೊಳ್ಳುವ ಬದಲು ತಪ್ಪನ್ನು ಮಾಡುವ ಆಯ್ಕೆಮಾಡಿಕೊಂಡಿದ್ದಾರೋ ಅಂಥವರಿಗೆ ಪ್ರತಿಕಾರದ ಕಾಲವು ಹತ್ತಿರವಾಗಿಯೇ ಇದೆ. ನಮ್ಮ ಮಹಾ ವಿರೋಧಿಯಾದ ಸೈತಾನನು ಈ ಪ್ರಸ್ತಾಪದ ಬಗ್ಗೆ ಪ್ರಚಲಿತದಲ್ಲಿರುವ ಅಪನಂಬಿಕೆಯನ್ನು ದುರುಪಯೋಗಪಡಿಸಿಕೊಂಡು ಈ ಲೋಕದಲ್ಲಿ ಸುಳ್ಳು ವಾಗ್ದಾನಗಳುಳ್ಳ ಬೋಧನೆಗಳು ಹರಡುವಂತೆ ಮಾಡುತ್ತಾನೆ. ಈಗಾಗಲೇ ಆತನು ಪೋಪರ ಅನುಯಾಯಿಗಳನ್ನು ಮತ್ತು ಅನ್ಯಜನರನ್ನು ಸತ್ತವರ ಹೆಸರಿನಲ್ಲಿ (masses) ಅವರು ಸತ್ತಿಲ್ಲ, ಆದರೆ ಅವರುಗಳು ಶುದ್ಧಿಲೋಕದಲ್ಲಿ (ಪರ್‌ಗೇಟರಿಯಲ್ಲಿ) ಜೀವಂತವಾಗಿ ಅನೇಕ ಸಂಕಟಗಳನ್ನು ಅನುಭವಿಸುತ್ತಿದ್ದಾರೆ ಎಂಬ ಮೂಢನಂಬಿಕೆಯಿಂದ ಪೂಜೆ ಪುನಸ್ಕಾರಗಳನ್ನು ಮಾಡುವ ತಪ್ಪು ದಾರಿಗೆ ಎಳೆದಿದ್ದಾನೆ. ಈಗ ತತ್ವಜ್ಞಾನ

ಮತ್ತು ಕ್ರೈಸ್ತ ವಿಜ್ಞಾನದ ಆಧ್ಯಾತ್ಮಿಕತೆಯ ಮೂಲಕ ಅದೇ ವಿರೋಧಿಯು ಸತ್ತವರು ಸತ್ತಿರುವುದಿಲ್ಲ ಎಂಬ ನಂಬಿಕೆಯ ಕಾರಣದಿಂದ ಪ್ರೊಟೆಸ್ಟಾಂಟ್ ಕ್ರೈಸ್ತರ ಮೇಲೆ ವಿಶೇಷ ಆಕ್ರಮಣ ನಡೆಸಿ ಪರಿಣಾಮಕಾರಿಯಾದ ಪ್ರಭಾವದಿಂದ ಅವರನ್ನೂ ಮೋಸಗೊಳಿಸುವವನಾಗಿದ್ದಾನೆ.

ವಿವಿಧ ಪಂಗಡಗಳಿಗೆ ಸೇರಿದ ಕ್ರೈಸ್ತರು "ಮರಣದೊಂದಿಗೆ ಒಕ್ಕೂಟ"ವೊಂದನ್ನು ಮಾಡಿಕೊಂಡು ಅದು ತಮ್ಮ 'ಸ್ನೇಹಿತ'ನೆಂದು ಹೇಳುತ್ತಾರೆ, ಆದರೆ ಸತ್ಯವೇದವು ಮರಣವು ಮನುಷ್ಯನ ಅತ್ಯಂತ ದೊಡ್ಡ ಶತ್ರು, ಆತನ ಪಾಪದ ಸಂಬಳ ಎಂಬುದಾಗಿ ಪ್ರಕಟಿಸುತ್ತದೆ. ಸಮಾಧಿಯ ವಿಚಾರದಲ್ಲಿ ಹೆಸರಿನ ಕ್ರೈಸ್ತರು ಗಂಭೀರವಾಗಿ ಒಂದು ಒಪ್ಪಂದಕ್ಕೆ ಬರುತ್ತಾರೆ; ಅವರು ಅದನ್ನು ತಮ್ಮ ಭೌತಿಕ ದೇಹದ ಉಗ್ರಾಣವಲ್ಲದೆ ಮತ್ತೊಂದಲ್ಲ ಎಂದು ನೆನಸುತ್ತಾರೆ ಮತ್ತು ಅದು ಕಳಚಿಬೀಳುತ್ತದೆ ಎಂಬುದಾಗಿಯೂ ತಾವಾಗಿಯೇ ಹೇಳುತ್ತಾರೆ. ಮರಣವು ಪಾಪದ ಸಂಬಳ ಎಂಬುದನ್ನು ಕಂಡುಕೊಳ್ಳಲು ವಿಫಲರಾಗಿ, ಅವರು ಸೈತಾನನ ಅಸತ್ಯವನ್ನು ಅಂದರೆ ನಿತ್ಯ ಯಾತನೆಯು ಪಾಪದ ಸಂಬಳವೆಂದು ನಂಬುತ್ತಾರೆ. ಪಾಪದ ಸಂಬಳ ಮರಣ ಎಂಬುದನ್ನು ನಂಬುವಲ್ಲಿ ವಿಫಲರಾಗಿ ಅವರು ಕ್ರಿಸ್ತನ ಮರಣವು ಇದಕ್ಕೆ ಪರಿಹಾರವಾಗಿದೆ, ಮಾನವನ ಬಿಡುಗಡೆಗೆ ಅನುಗುಣವಾದ ಕ್ರಯವಾಗಿದೆ ಎಂಬುದನ್ನೂ ನಿರಾಕರಿಸುತ್ತಾರೆ. ಈ ರೀತಿಯಾಗಿ ಕ್ರಿಸ್ತನ ಈಡುಬಲಿಯ ಬಗ್ಗೆ ಇರುವ ದೈವಿಕ ಯೋಜನೆಯ ಎಲ್ಲಾ ಕೃಪಾ ಲಕ್ಷಣಗಳೂ ಹೆಚ್ಚು ಕಡಿಮೆ ಅವರ ದೃಷ್ಟಿಗೆ ಅಗೋಚರವಾಗಿಬಿಡುತ್ತವೆ ಮತ್ತು ಅವುಗಳ ಗ್ರಹಿಕೆಯೂ ಕಷ್ಟವಾಗಿ ಬಿಡುತ್ತದೆ.

**"ಮೃತ್ಯುವಿನಿಂದ ನೀವು ಪಡಕೊಂಡ ಒಡಂಬಡಿಕೆಯು ಸಾಗದು, ಪಾತಾಳದೊಡನೆ** (Sheol, Oblivion) **ನೀವು ಮಾಡಿಕೊಂಡಿರುವ ಒಪ್ಪಂದವು ನಿಲ್ಲದು''** – ಯೆಶಾಯ 28:18.

ಹೀಗಾಗಿ ನಮ್ಮ ಕರ್ತನು ಸತ್ಯವೇದದಲ್ಲಿ ಮೃತ್ಯು ಮತ್ತು ಪಾತಾಳಗಳ ಸ್ಥಿತಿಗತಿಗಳ ಬಗ್ಗೆ ಹೇಳಿರುವ ಸತ್ಯ ಹೇಳಿಕೆಗಳನ್ನು ತಾನು ಈ ಲೋಕಕ್ಕೆ ಮನದಟ್ಟು ಮಾಡಿಕೊಡುವುದಾಗಿ ಹೇಳುತ್ತಾನೆ; ಆದರೆ ಈ ಕಪಟ ತಂತ್ರಗಳಿಗೆ ಒಳಗಾಗಿರುವವರು. ಈ ವಿಷಯವಾದ ಬಗ್ಗೆ ದೇವರ ವಾಕ್ಯದ ಸ್ವರಕ್ಕೆ ಕಿವಿಗೊಡಲು ನಿರಾಕರಿಸಿ, ಮಹಾ ಸಂಕಷ್ಟಕ್ಕೆ ಮತ್ತು ಗೊಂದಲಕ್ಕೆ ಒಳಗಾಗಿ ಕಲಿಯುತ್ತಾರೆ.

**"[ನನ್ನ ರೋಗದಲ್ಲಿ] ಹೀಗೆಲ್ಲಾ ಅಂದುಕೊಂಡೆನು – ನನ್ನ ಮಧ್ಯ ಪ್ರಾಯದಲ್ಲಿ ಪಾತಾಳ** (Sheol, Oblivion) **ದ್ವಾರದೊಳಗೆ ಸೇರಿದ್ದೇನೆ, ನನ್ನ ಆಯುಷ್ಯದಲ್ಲಿ ಕಳೆದು ಮಿಕ್ಕ ವರ್ಷಗಳು ನನಗೆ ನಷ್ಟವಾದವು"** – ಯೆಶಾಯ 38:10.

ಇವು ಯೂದಾಯದ ಒಳ್ಳೆಯ ಅರಸನಾಗಿದ್ದ ಹಿಜ್ಕೀಯನ ಮಾತುಗಳು. ಆತನ ಸಲುವಾಗಿ ಅದ್ಭುತ ಕೃತ್ಯವೊಂದು ರೂಪಿಸಲ್ಪಟ್ಟು ಆತನ ಆಯುಷ್ಯವನ್ನು ಮುಂದುವರಿಸಿತು. ಮೇಲಿನ ಮಾತುಗಳಲ್ಲಿ ಆತನು ಆತನ ಕಾಯಿಲೆಯ ಸಮಯದಲ್ಲಿ ಆತನ ಮಾತುಗಳು ಏನಾಗಿದ್ದವೆಂಬುದನ್ನು ಹೇಳುವವನಾಗಿದ್ದಾನೆ. ಆತನು ತಾನು ನಿತ್ಯವಾದ ಯಾತನೆಯುಳ್ಳ ಪಾತಾಳಲೋಕಕ್ಕೆ ಹೋಗಿದ್ದನೆಂದು ನಿಶ್ಚಯವಾಗಿಯೂ ನಿರೀಕ್ಷಿಸಿರಲಿಕ್ಕಿಲ್ಲ. ಈ ಸಂಧರ್ಭದಲ್ಲಿ 'ಶಿಯೋಲ್' ಎಂಬ ಪದವನ್ನು 'ನರಕ' (hell) ಎಂಬುದಾಗಿ ತರ್ಜುಮೆಗೊಳಿಸಿದ್ದರೆ ಅದು ಓದುಗರ ಪಾಲಿಗೆ ಅನೇಕ ಪ್ರಶ್ನೆಗಳಿಗೂ ಎಡೆಮಾಡಿಕೊಡುತ್ತಿತ್ತು ಮತ್ತು ಈ ಪ್ರಸ್ತಾಪದ ಬಗ್ಗೆ ಸತ್ಯವು ಸರ್ವರ ಗಮನ ಸೆಳೆಯುತ್ತಿತ್ತು ಎಂಬ ಬುದ್ಧಿವಂತಿಕೆಯನ್ನು ಭಾಷಾಂತರಕಾರರು ಇಲ್ಲಿ ತಕ್ಕಷ್ಟುಮಟ್ಟಿಗೆ ಕಂಡುಕೊಂಡಿದ್ದಾರೆ. ಇಲ್ಲಿ ಹಿಜ್ಕೀಯ ರಾಜನು ತಾನು ಮರಣದ ಸಮೀಪಕ್ಕೆ ಹೋದನೆಂದು, Oblivion ಆತನು ಸಂತೋಷ ಪಡಬೇಕೆಂದು ನ್ಯಾಯಸಮ್ಮತವಾಗಿ ನಿರೀಕ್ಷಿಸಿದ್ದ ತನ್ನ ದಿನಗಳು ನಷ್ಟವಾಗುತ್ತಿದ್ದವು ಎಂದು ಸರಳವಾದ ರೀತಿಯಲ್ಲಿ ಹೇಳಿದ್ದಾನೆ.

**"ಪಾತಾಳದವರು ನಿನ್ನನ್ನು ಸ್ತುತಿಸರು, ಸತ್ತವರು ನಿನ್ನನ್ನು ಕೀರ್ತಿಸರು, ಅಧೋಲೋಕಕ್ಕೆ ಇಳಿದು ಹೋದವರು ನಿನ್ನ ಸತ್ಯಸಂಧತೆಯನ್ನು ಆಶ್ರಯಿಸಲಾರರು"** – ಯೆಶಾಯ 38:18.

ಇವು ಕೂಡ ಹಿಜ್ಕೀಯನ ಮಾತುಗಳಾಗಿದ್ದು ಆತನ ರೋಗ ಮತ್ತು ಮರಣ ಭಯವನ್ನು ಹಾಗೂ ತನ್ನ ದಿನಗಳನ್ನು ಹೆಚ್ಚಿಸಿರುವ ದೇವರು ಒಳ್ಳೆಯತನ ಮತ್ತು ಇದಕ್ಕಾಗಿ ದೇವರಿಗೆ ಆತನು ಮಾಡುವ ಸ್ತುತಿ ಇವುಗಳನ್ನು ವಿವರಿಸುವ ಮಾತುಗಳ ಭಾಗವಾಗಿವೆ. ಆತನು **"ನನ್ನ ಆತ್ಮವನ್ನು ನಾಶಕೂಪದಿಂದ ರಕ್ಷಿಸಿದ್ದು ನಿನ್ನ ಪ್ರೀತಿಯೇ"** ಎಂದು ಪ್ರಕಟಿಸುತ್ತಾನೆ. 'ಪಾತಾಳದವರು (Hell, ನರಕ) ನಿನ್ನನ್ನು ಸ್ತುತಿಸರು' ಎಂಬುದನ್ನು ಭಾಷಾಂತರಕಾರರು ತರ್ಜುಮೆಗೊಳಿಸಿಲ್ಲ. ಇಲ್ಲವಾದಲ್ಲಿ ವಿಚಾರಿಸುವ ಮನಸ್ಸುಳ್ಳವರು ಇವರು ಉಲ್ಲೇಖಿಸುವ ಈ ನರಕವು ಯಾವ ರೀತಿಯದು ಎಂದು ಕೇಳುತ್ತಿದ್ದರು. ಹಿಜ್ಕೀಯನು ಮರಣದ ಸಂಬಂಧದ ಆಲೋಚನೆಯನ್ನು ಶಿಯೋಲ್, ಆಬ್ಲಿವಿಯಾನ್ ಇವುಗಳೊಂದಿಗೆ ಇಟ್ಟುಕೊಂಡಿದ್ದಾನೆ ಮತ್ತು ಅವುಗಳನ್ನು ಸಮಾನಾರ್ಥಕವಾಗಿ ಉಪಯೋಗಿಸುತ್ತಾನೆ. ನಂತರದಲ್ಲಿ ಆತನು **"ಜೀವಂತನು, ಜೀವಂತನೇ ನಿನ್ನನ್ನು ಸ್ತುತಿಸುವನು, ಹೌದು, ಜೀವಂತನಾದ ನಾನೇ ಈ ಹೊತ್ತು ನಿನ್ನನ್ನು ಹೊಗಳುವೆನು"** (ಯೆಶಾಯ 38:19) ಎಂದು ಹೇಳುತ್ತಾನೆ. ಮತ್ತೊಂದು ಮಾತುಗಳಲ್ಲಿ ಹೇಳುವುದಾದರೆ, ಜೀವಂತ ಮನುಷ್ಯನು ಮಾತ್ರವೇ ದೇವರನ್ನು ಸ್ತುತಿಸಲು

ಸಾಧ್ಯ. ಆದರೆ ಒಬ್ಬ ಮನುಷ್ಯನು ಸತ್ತರೆ ಮತ್ತು ಆತನ ಆತ್ಮವು ಶಿಯೋಲಿಗೆ ಹೋದಲ್ಲಿ, ಅಬ್ಲಿವಿಯಾನಿಗೆ ಹೋದಲ್ಲಿ ಆತನು ದೇವರನ್ನು ಸ್ತುತಿಸಲು ಸಾಧ್ಯವಿಲ್ಲ ಅಥವಾ ಯಾವುದೇ ಅರ್ಥದಲ್ಲಿ ಆತನು ತನ್ನ ಮೇಲಿನ ಕರುಣೆಯನ್ನು ಪುನರುತ್ಥಾನದ ಮುಂಜಾವಿನವರೆಗೂ ವರ್ಣಿಸಲಾರನು. ಯೋಬನು ಹೇಳುವಂತೆ 'ದೇವರು ಕರೆಯುವನು, ಆಗ ಎಲ್ಲರೂ ಆತನಿಗೆ ಉತ್ತರಿಸುವರು'

**"ಬಹು ಸುಗಂಧದ್ರವ್ಯಗಳನ್ನು ಕೂಡಿಸಿ ತೈಲವನ್ನೂ ತೆಗೆದುಕೊಂಡು ಪರರಾಜನ ಬಳಿಗೆ ಪ್ರಯಾಣ ಮಾಡಿದ್ದೀ....; ನಿನ್ನನ್ನು ಪಾತಾಳದವರೆಗೂ** (Sheol, Oblivion) **ತಗ್ಗಿಸಿಕೊಂಡಿದ್ದೀ"** – ಯೆಶಾಯ 57:9.

ಇದೊಂದು ರೂಪಕಾತ್ಮಕವಾದ ಹೇಳಿಕೆ. ಇದು ನರಕದ ಯಾತನೆಯನ್ನು ಅಥವಾ ಅಕ್ಷರಶಃವಾಗಿ ಪಾತಾಳವನ್ನು (ಸಮಾಧಿ) ಸೂಚಿಸುವುದಿಲ್ಲ. ಇದು ಇಸ್ರೇಲನ್ನು ಒಂದು ಸ್ತ್ರೀಯಾಗಿ ತನ್ನ ಗಂಡನನ್ನು, ಕರ್ತನನ್ನು ನಿರ್ಲಕ್ಷಿಸಿ ಮತ್ತು ದೇವರಿಗೆ ಮತ್ತು ಆತನ ನಂಬಿಕೆಗೆ ಕಾರಣವಾದ ಸತ್ಯ ಮತ್ತು ನೀತಿವಂತಿಕೆಯನ್ನು ಮರೆತು ಮರಣಹೊಂದುವ ಮಟ್ಟಿಗೆ, ದೇವರನ್ನು ಮತ್ತು ನಂಬಿಕೆಯಿಂದುಂಟಾಗುವ ಆತನ ಸತ್ಯ ಮತ್ತು ನೀತಿವಂತಿಕೆ ಇವುಗಳನ್ನು ಮರೆತು ಭೂಲೋಕದ ರಾಜರುಗಳೊಂದಿಗೆ, ಪಾತಾಳದೊಂದಿಗೆ Oblivion ರೂಪಕಾತ್ಮಕವಾಗಿ ಸಂಬಂಧವನ್ನು ಬಯಸುವ ಒಬ್ಬ ಸ್ತ್ರೀಯನ್ನಾಗಿ ಪ್ರತಿನಿಧಿಸುತ್ತದೆ.

**"ಆ ವೃಕ್ಷವು ಪಾತಾಳಕ್ಕೆ** (Sheol, Oblivion) **ಇಳಿದು ಹೋದ ದಿನದಲ್ಲಿ ನಾನು ದುಃಖದ ಚಿಹ್ನೆಗಳನ್ನು ಏರ್ಪಡಿಸಿದೆನು; . . ನಾನು ಅದನ್ನು ಪಾತಾಳಕ್ಕೆ ತಳ್ಳಿಬಿಟ್ಟಾಗ ಅದು ಬಿದ್ದ ಶಬ್ಧಕ್ಕೆ ಸಕಲ ಜನಾಂಗಗಳು ನಡುಗಿದವು . . . ತೋಳಬಲವಾಗಿ ಅದರ ನೆರಳನ್ನು ಆಶ್ರಯಿಸಿದವರು ಅದರೊಂದಿಗೆ ಪಾತಾಳಕ್ಕೆ** (Sheol, Oblivion) **ಇಳಿದು ಖಡ್ಗಹತರ ಜೊತೆಗೆ ಸೇರಿದರು"** – ಯೆಹೆಜ್ಕೇಲ 31: 15–17.

ಇಲ್ಲಿ ಕರ್ತನು ಪ್ರವಾದಿಯ ಮೂಲಕವಾಗಿ ಸಾಂಕೇತಿಕವಾದ ಭಾಷೆಯಲ್ಲಿ ಬಾಬೇಲಿನ ಪತನವನ್ನು ವಿವರಿಸಿದ್ದಾನೆ. ಆ ನಂತರ ಬಾಬೇಲಿನ ಪತನವನ್ನು ಮತ್ತು ಅದರ ಹದ್ದುಮೀರುವಿಕೆಯ ವಿವರಣೆಯನ್ನು ನೀಡುತ್ತಾನೆ. ಇದರಲ್ಲಿ ಒಂದು ಭಾಗವು ವಾಸ್ತವವಾದ ಬಾಬೇಲಿಗೆ ಅನ್ವಯವಾಗುತ್ತದೆ, ಆದರೆ ಹೆಚ್ಚಿನ ಭಾಗವು ಸಾಂಕೇತಿಕ ಬಾಬೇಲಿನ ಸಂಪೂರ್ಣವಾದ ನಾಶನದಲ್ಲಿ ಅನ್ವಯ ವಾಗುತ್ತದೆ. ಹಳೆಯ ಕಾಲದ ಬಾಬೇಲ್ ದೇಶವು ಮೇಧ್ಯರಿಂದಲೂ ಮತ್ತು ಪಾರ್ಸಿಗಳಿಂದಲೂ ಉರುಳಿಸಲ್ಪಟ್ಟು ಅದು ಒಂದು ಜನಾಂಗವಾಗಿ ಮರಣದ ಸ್ಥಿತಿ ತಲುಪಿ ಪಾತಾಳಕ್ಕೆ (ಅಬ್ಲಿವಿಯಾನಿಗೆ) ಇಳಿದು ಹೋಯಿತು; ಆಧುನಿಕವೂ ಸಾಂಕೇತವುಳ್ಳದ್ದೂ ಆದ ಬಾಬೇಲು ಸಹಾ ಅದೇ ರೀತಿಯಲ್ಲಿ ಎಂದೆಂದೆಗೂ ಎದ್ದು ಬರದ ಹಾಗೆ ಪಾತಾಳವನ್ನು Oblivion ಸೇರುವುದು.

**"ಪಾತಾಳದೊಳಗಿನ** (Sheol, Oblivion) **ಬಲಿಷ್ಟ ಶೂರರು ಅದನ್ನೂ ಅದರ ಸಹಾಯಕರನ್ನೂ ನೋಡಿ ಓಹೋ, ಇವರು ಸುನ್ನತಿಹೀನರು, ಖಡ್ಗರಹಿತರು . . . . ಅಂದುಕೊಳ್ಳುವರು"** – ಯೆಹೆಜ್ಕೇಲ 32:21.

ಇಲ್ಲಿ ಐಗುಪ್ತದೇಶವು ಪಾತಾಳಕ್ಕೆ Oblivion ದಾಟಿಹೋಗುವುದು, ಮತ್ತೆ ಕೆಲವೊಂದು ಬಲಿಷ್ಟ ದೇಶಗಳು ಐಗುಪ್ತಕ್ಕೆ ಮೊದಲೇ ಪಾತಾಳ Oblivion ಸೇರಿರುವುದು ಐಗುಪ್ತಕ್ಕೆ ಅದರ ಪತನದ ಬಗ್ಗೆ ಹೇಳುವಾಗ ಪ್ರತಿನಿಧಿಸುತ್ತವೆ. ಈ ರೀತಿಯಾಗಿ ಇತಿಹಾಸವು ಹೇಳುವ ಕೆಲವೊಂದು ಸಂಗತಿಗಳ ಪಾಠವು ಪುನರಾವರ್ತಿಸುತ್ತಲೇ ಇರುತ್ತವೆ.

**"[ಪೂರ್ವದಲ್ಲಿ] ಯಾವ ಸುನ್ನತಿಹೀನ ಶೂರರು ಜೀವಲೋಕದೊಳಗೆ ಬಲಿಷ್ಟರಿಗೂ ಭೀಕರರಾಗಿದ್ದು ಹತರಾಗಿ ಆಯುಧ ಸಹಿತ ಪಾತಾಳಕ್ಕೆ** (Sheol, Oblivion) **ಇಳಿದು ಕತ್ತಿಗಳನ್ನು ತಲೆದಿಂಬು ಮಾಡಿಕೊಂಡು..."** – ಯೆಹಜ್ಕೇಲ 32:27.

ಇಲ್ಲಿ ಪ್ರವಾದಿಯು ಮೆಷೆಕ್, ತೂಬಲ್ ಇವುಗಳ ನಾಶನದ ಬಗ್ಗೆ, ಅವುಗಳು ಯಾವ ರೀತಿಯಲ್ಲಿ ತಮ್ಮ ಯುದ್ಧಾಯುಧಗಳೊಡನೆ ಪಾತಾಳ ಸೇರುತ್ತವೆ ಎಂಬುದನ್ನು ಮುಂತಿಳಿಸುವವನಾಗಿದ್ದಾನೆ. ಯುದ್ಧ ಆಯುಧಗಳು ಸಹಾ ನಿಜವಾಗಿ ಪಾತಾಳ ಸೇರುವುವು ಮತ್ತು ಬರಲಿರುವ ಭವ್ಯವಾದ ಇಮ್ಮಾನುವೇಲನು ತನ್ನ ರಾಜ್ಯವನ್ನು ಸ್ಥಾಪಿಸುವ ಕಾಲದಲ್ಲಿ ಅವುಗಳ ಪುನಃವಶಕ್ಕೆ ಯಾವುದೇ ಅವಕಾಶ ಇಲ್ಲದಿರುವುದಕ್ಕಾಗಿ ನಾವು ದೇವರನ್ನು ಸ್ತುತಿಸುತ್ತೇವೆ. ಈ ಬಗ್ಗೆ ಇರುವ ಸಕಾರಾತ್ಮಕವಾದ ವಾಗ್ದಾನವೆಂದರೆ – **"ಲೋಕದ ಎಲ್ಲಾ ಭಾಗದಲ್ಲೂ ಯುದ್ಧವನ್ನು ನಿಲ್ಲಿಸಿಬಿಟ್ಟಿದ್ದಾನೆ; ಬಿಲ್ಲುಗಳನ್ನೂ ಭಲ್ಲೆಯಗಳನ್ನೂ ಮುರಿದುಹಾಕಿದ್ದಾನೆ"** – ಕೀರ್ತನೆ 46:9.

**"ನಾನು ಅದನ್ನು ಪಾತಾಳದ** (Sheol, Oblivion) **ಅಧಿಕಾರದಿಂದ ಬಿಡಿಸಲೋ? ಮರಣದಿಂದ ಉದ್ಧರಿಸಲೋ? ಮರಣವೇ ನಿನ್ನ ಉಪದ್ರವಗಳೆಲ್ಲಿ? ಪಾತಾಳವೇ** (Sheol, Oblivion) **ನೀನು ಮಾಡುವ ನಾಶನವೆಲ್ಲಿ? ಕನಿಕರವು ನನಗೆ ಕಾಣಿಸದು"** – ಹೋಶೇಯ 13:14.

ಶಿಯೋಲ್ ಎಂಬುದು ಯಾತನೆಯ ಸ್ಥಳವನ್ನು ಸೂಚಿಸುವುದಿಲ್ಲ ಎಂಬುದನ್ನು ಈಗಾಗಲೇ ಮನದಟ್ಟು ಮಾಡಿಕೊಂಡಿರದವರು ಈ ವಾಕ್ಯಭಾಗದಿಂದ

ಸ್ವಲ್ಪವಾದರೂ ಸಮಾಧಾನ ಹೊಂದಿಕೊಳ್ಳಬಹುದು. ಇದರಲ್ಲಿ ಕರ್ತನು ಶಿಯೋಲ್ ನಾಶವಾಗುತ್ತದೆ ಎಂಬುದನ್ನು ಮಿತಿಯಿಲ್ಲದೆ ಪ್ರಕಟಿಸುತ್ತಾನೆ. ಆದುದರಿಂದ, ಯಾರಾದರೂ ಇನ್ನೂ ಸಹಾ ಅದೊಂದು ಯಾತನೆಯ ಸ್ಥಳ ಎಂಬುದಾಗಿ ನಂಬಿ ಹೋರಾಟ ಮಾಡುತ್ತಾರೋ ಅಂಥವರೂ ಸಹಾ ಇದು ಕಡೇವರೆಗೂ ನಿಲ್ಲುವುದಿಲ್ಲ, ಕರ್ತನು ತಾನೇ ಇದರ ನಾಶನವನ್ನು ವಿಧಿಸಿದ್ದಾನೆ ಎಂಬುದನ್ನು ಕನಿಷ್ಟ ಮಟ್ಟಿಗಾದರೂ ಒಪ್ಪಿಕೊಳ್ಳಲಿ.

ಆದರೆ ಸತ್ಯದ ದೃಷ್ಟಿಕೋನದಲ್ಲಿ ಈ ಸಮಗ್ರ ಹೇಳಿಕೆಯು ಎಷ್ಟೊಂದು ಸುಂದರವಾಗಿ ಸ್ಪಷ್ಟವೂ, ಸಾಮರಸ್ಯವುಳ್ಳದ್ದೂ ಆಗಿದೆ! ಇದರ ಬಿಡುಗಡೆಯ ಬೆಲೆಯನ್ನು ನಮ್ಮ ಪ್ರೀತಿಯ ವಿಮೋಚಕನು ಈಗಾಗಲೇ ಪಾವತಿಸಿದ್ದಾನೆ. ಮತ್ತು ಮರಣದ ಶಿಯೋಲಿನಿಂದ ಮಾನವ ಜಾತಿಯನ್ನು ಬಿಡುಗಡೆ ಮಾಡುವ ಕಾರ್ಯವು, ಕ್ರಿಸ್ತನ ದೇಹವಾದ ಸಭೆಯು ಮನುಕುಲದಿಂದ ಆಯ್ಕೆಮಾಡಲ್ಪಟ್ಟು ಅದರ ಕರ್ತನೂ ಶಿರಸ್ಸೂ ಆಗಿರುವ ಯೇಸುಕ್ರಿಸ್ತನೊಂದಿಗೆ ಮಹಿಮೆ ಪಡುವವರೆಗೆ ಮಾತ್ರ ಕಾಯುತ್ತಿರುತ್ತದೆ. ಸಭೆಯ ಪುನರುತ್ಥಾನವು (ಮುಖ್ಯ ಅಥವಾ ಪ್ರಥಮ ಪುನರುತ್ಥಾನವು) ಪೂರ್ಣಗೊಂಡ ಕೂಡಲೇ, ಅಪೋಸ್ತಲನು ಪ್ರಕಟಿಸುವುದೇನೆಂದರೆ **"ಬರೆದಿರುವ ಮಾತು ನೆರವೇರುವುದು. ಆ ಮಾತು ಏನೆಂದರೆ – ಮರಣವು ನುಂಗಿಯೇ ಹೋಯಿತು, ಜಯವಾಯಿತು ಎಂಬುದೇ. ಮರಣವೇ ನಿನ್ನ ಜಯವೆಲ್ಲಿ? ಮರಣವೇ ನಿನ್ನ ವಿಷದ ಕೊಂಡಿ ಎಲ್ಲಿ? "** – 1 ಕೊರಿಂಥ 15:54,55.

ಮರಣವು ನುಂಗಿಹೋಗುವುದು ಮಿಲಿಯಾಂತರ ಯುಗದ ಜಯದ ಕಾರ್ಯವಾಗಿದೆ ಮತ್ತು ಮರಣವು ಮಾನವ ಜಾತಿಯನ್ನು ನುಂಗುವುದು ಕ್ರಮೇಣ ವಾಗಿರುವಂತೆ ಇದು ಸಹಾ ಕ್ರಮೇಣವಾಗಿ ನೆರವೇರುವಂಥಾದ್ದು. ಅಂತ್ಯದಲ್ಲಿ ಈ ಮಾನವನ ಮೇಲೆ ಎರಗಿರುವ ಮರಣ ದಂಡನೆಯು, ಮತ್ತು ಈ ಮೂಲಕ ಹೇರಲ್ಪಡುವ ಶಿಯೋಲ್, ಆಬ್ಲಿವಿಯಾನ್ ಇವುಗಳು ಸಂಪೂರ್ಣವಾಗಿ ಗತಿಸಿಹೋಗುವುವು. ಯಾಕೆಂದರೆ ಎಲ್ಲರೂ ಇದರ ಶಕ್ತಿಯಿಂದ ವಿಮೋಚಿಸಲ್ಪಟ್ಟಿದ್ದಾರೆ. ನೂತನ ಷರತ್ತಿನ ಮೇರೆಗೆ, ನೂತನ ಒಡಂಬಡಿಕೆಯ ಅಡಿಯಲ್ಲಿ ಅದರ ವಿಫುಲವಾದ ಪೂರ್ವ ಸಿದ್ಧತೆಗಳೊಡನೆ ಉದ್ಧೇಶ ಪೂರ್ವಕವಾದ ಪಾಪಿಗಳ ಹೊರತಾಗಿ ಬೇರೆ ಯಾರೂ ಕೂಡಾ ಮರಣವನ್ನು (ಆಬ್ಲಿವಿಯಾನನ್ನು) ಪ್ರವೇಶಿಸುವುದಿಲ್ಲ. ಇದು ಅವರ ಎರಡನೆಯ ಮರಣವಾಗಿದೆ. ಇದರಿಂದ ಪುನರುತ್ಥಾನ ಹೊಂದಿಕೊಳ್ಳುವ ನಿರೀಕ್ಷೆಯೇ ಇಲ್ಲ.

**"ಪಾತಾಳದವರೆಗೆ** (Sheol, Oblivion) **ತೋಡಿಕೊಂಡು ಹೋದರೂ ನನ್ನ ಕೈ ಅವರನ್ನು ಅಲ್ಲಿಂದ ಹಿಡಿದೆಳೆಯುವುದು"**– ಆಮೋಸ 9:2.

ಈ ಪ್ರಭಲವಾದ ಸಾಂಕೇತಿಕ ಹೇಳಿಕೆಯಲ್ಲಿ ಕರ್ತನು ತನ್ನ ಶಕ್ತಿಯ ಸಂಪೂರ್ಣತೆಯನ್ನು, ಹಾಗೂ ಮಾನವ ಜಾತಿಯ ಮೇಲೆ ತನ್ನ ನಿಯಂತ್ರಣವನ್ನು ವಿಶಿಷ್ಟವಾಗಿ ಇಸ್ರಾಯೇಲ್ಯರಿಗೆ ಸೂಚಿಸುತ್ತಾ ತಿಳಿಸುವವನಾಗಿದ್ದಾನೆ. ಒಬ್ಬ ವ್ಯಕ್ತಿಯಾಗಿ ಅಲ್ಲ, ಒಂದು ಜನಾಂಗವಾಗಿ ಅವರು ದೇವರ ನೀತಿ ನಿರ್ಣಯದಿಂದ ತಪ್ಪಿಸಿಕೊಂಡಾರೇ? ಮತ್ತು ಅವರು ಮರಣದಲ್ಲಿ ವ್ಯಕ್ತಿಗತವಾಗಿಯಾಗಲೀ, ಜನಾಂಗದವರಾಗಿ ಆಗಲೀ ಇಳಿದುಹೋದರೂ, ಇನ್ನೂ ಸಹಾ ದೇವರ ಎಲ್ಲಾ ವಾಗ್ದಾನಗಳೂ, ಹಾಗೂ ಬೆದರಿಕೆಗಳು ಸಹಾ ನೆರವೇರುವುವು. ಪರಂತು ಅವರು ಘೋರವಾಗಿ ಕೆಡವಲ್ಪಟ್ಟು ಮತ್ತು ಪ್ರಪಂಚದ ದೇಶ ದೇಶಗಳಲ್ಲಿ ಅವರ ಚದುರುವಿಕೆಯು ನೆರವೇರಿದ್ದನ್ನು ನಾವೀಗ ಕಾಣುವಂತೆ ಪ್ರಕಟಿಸಿದ ನಂತರವೂ ದೇವರ ವಾಗ್ದಾನವೇನೆಂದರೆ – **"ಆ ದಿನದಲ್ಲಿ** (ಮಿಲಿಯಾಂತರ ಯುಗದ ಮುಂಜಾವಿನಲ್ಲಿ) **ದಾವೀದನ ಬಿದ್ದುಹೋಗಿರುವ ಗುಡಿಸಲನ್ನು ಎತ್ತಿ ಅದರ ಕಂಡಿಗಳನ್ನು ಮುಚ್ಚುವೆನು . . . ನಾನು** (ಇಸ್ರಾಯೇಲ್ಯರನ್ನು) **ಸ್ವದೇಶದಲ್ಲಿ ನೆಲೆ ನೆಲೆಗೊಳಿಸುವೆನು, ಇನ್ನು ಮುಂದೆ ಅವರನ್ನು ಯಾರೂ ಕಿತ್ತುಹಾಕರು; ಇದು ನಿನ್ನ ದೇವರಾದ ಕರ್ತನ ನುಡಿ"** (ಆಮೋಸ 9:11,15). ಆತನ ಮಾರ್ಗವನ್ನು ನಿತ್ಯಯಾತನೆಯ ಸ್ಥಳಕ್ಕೆ ಅಗಿಯುವರೆಂದು ಯಾರೂ ಸಹಾ ಆಲೋಚಿಸಲಾರರು. ಆದರೆ ಇಸ್ರೇಲ್ ಒಂದು ರಾಷ್ಟ್ರವಾಗಿ ರಾಷ್ಟ್ರೀಯ ಆಬ್ಲಿವಿಯಾನಿಗೆ (ಪಾತಾಳಕ್ಕೆ) ತನ್ನ ಮಾರ್ಗವನ್ನು ಅಗಿದುಕೊಂಡಿದೆ. ಹೀಗಿದ್ದರೂ ದೇವರು ಇದನ್ನು ತಡೆಹಿಡಿಯುವನು.

**"ಇಕ್ಕಟ್ಟಿನಲ್ಲಿ ನಾನು ಕರ್ತನಿಗೆ ಮೊರೆ ಇಟ್ಟೆನು; ಆತನು ನನಗೆ ಸದುತ್ತರವನ್ನು ದಯಪಾಲಿಸಿದನು; ಪಾತಾಳದ** (Sheol, Oblivion) **ಗರ್ಭದೊಳಗೆ ಕೂಗಿಕೊಂಡೆನು, ಆಹಾ, ನನ್ನ ಧ್ವನಿಯನ್ನು ಲಾಲಿಸಿದಿ"** – ಯೋನ 2:2.

ಯೋನನು ಪಾತಾಳದ ಉದರದಲ್ಲಿದ್ದು ಅಲ್ಲಿಂದಲೇ ಕರ್ತನಿಗೆ ಕೂಗಿಕೊಂಡದ್ದು ಮತ್ತು ಕರ್ತನು ಆತನನ್ನು ಅಲ್ಲಿಂದ ಬಿಡುಗಡೆ ಮಾಡಿದ ಆ ಉದರವು ಆತನನ್ನು ನುಂಗಿದ್ದ ಒಂದು ದೊಡ್ಡ ಮೀನಿನ ಹೊಟ್ಟೆಯಾಗಿತ್ತು. ಆತನನ್ನು ಅಲ್ಲಿಂದ ಬಿಡುಗಡೆಗೊಳಿಸದೇ ಹೋಗಿದ್ದರೆ ಅದು ಆತನಿಗೆ ಆಬ್ಲಿವಿಯಾನಿನ, ನಾಶನದ, ಮರಣದ ಉದರವೇ ಆಗಿರುತ್ತಿತ್ತು.

**"ಅಲ್ಲದೆ ದ್ರಾಕ್ಷಾರಸವು ಮೋಸಕರವಾದ ಕಾರಣ ದುಷ್ಟನು ಮದವೇರಿದ್ದಾನೆ, ಸ್ವಸ್ಥಳದಲ್ಲಿ ನಿಲ್ಲನು; ಪಾತಾಳದ** (Sheol, Oblivion) **ಹಾಗೆ ಅತ್ಯಾಶೆ ಪಡುತ್ತಾನೆ, ಮೃತ್ಯುವಿನಂತಿದ್ದಾನೆ, ತೃಪ್ತಿಯೇ ಇಲ್ಲ"** – ಹಬಕ್ಕೂಕ 2:5.

ಇಲ್ಲಿ ಸುವ್ಯಕ್ತವಾಗಿ ಒಂದು ಹಂಬಲಿತ ಜನಾಂಗವು ಸೂಚಿತವಾಗುತ್ತದೆ. ಇದೊಂದು ಆಕ್ರಮಣಶೀಲ ಜನಾಂಗ. ಇದು ಪ್ರಸ್ತುತ ಕಾಲದ ಜನಾಂಗಗಳಿಗೆ ಬಹಳ ಸೂಕ್ತವಾಗಿ

ಅನ್ವಯವಾಗುತ್ತದೆ. ಈ ಜನಾಂಗವು ಸಣ್ಣಪುಟ್ಟ ಹಾಗೂ ಅನಾಗರೀಕ ದೇಶಗಳನ್ನು ತನ್ನ ಆಶ್ರಯದಲ್ಲಿರಿಸಿಕೊಂಡು ಅವುಗಳನ್ನು ನಿಯಂತ್ರಿಸಲು ಹವಣಿಸುತ್ತಿವೆ. ಅಥವಾ ಇದು ಪಾಪಿಯಾದ ಮನುಷ್ಯನನ್ನು ಮತ್ತು ಆತನ ಪ್ರಪಂಚದಾದ್ಯಂತವಾದ ಪ್ರಭಾವವನ್ನು ಸೂಚಿಸಬಹುದು. ಇದರ ಮೂಲಕವಾಗಿ ಆತನು ಸೂರ್ಯನ ಕೆಳಗಿರುವ ಪ್ರಪಂಚದ ಎಲ್ಲಾ ದೇಶಗಳಿಂದ ಹಣವಸೂಲಿ ಮಾಡುವವನಾಗಿದ್ದಾನೆ. ಯಾವುದೇ ರೀತಿಯಲ್ಲಿಯಾಗಲೀ, ಇರುವ ಆಲೋಚನೆ ಎಂದರೆ ಲೋಲುಪ್ತತನವು ಮರಣ (ಆಬ್ಲಿವಿಯಾನ್) ಇದ್ದಂತೆ, ಅದಕ್ಕೆ ತೃಪ್ತಿ ಎಂಬುದೇ ಇಲ್ಲ ; ಅದರ ಸಾಮರ್ಥ್ಯವನ್ನು ಈಡೇರಿಸಲಾಗದು.

## ಹೊಸಒಡಂಬಡಿಕೆಯಲ್ಲಿ 'ಹೇಡ್ಸ್'
## "Hades" in the New Testament

ಹೊಸಒಡಂಬಡಿಕೆಯಲ್ಲಿನ 'ಹೇಡ್ಸ್' ಎಂಬ ಗ್ರೀಕ್ ಪದವು ಇಬ್ರಿಯ ಪದವಾದ 'ಶಿಯೋಲ್'ಗೆ ಸರಿಸಮವಾಗಿದೆ. ಅಪೋಸ್ತಲರು ಹಳೆ ಒಡಂಬಡಿಕೆ ವಚನಗಳನ್ನು ಉಲ್ಲೇಖಿಸುವಾಗ **'ಶಿಯೋಲ್'** ಎಂಬ ಪದವನ್ನು **'ಹೇಡ್ಸ್'** ಎಂಬುದಾಗಿ ತರ್ಜುಮೆಗೊಳಿಸಿದ್ದಾರೆ ಎಂಬುದಕ್ಕೆ ನಮ್ಮಲ್ಲಿ ಬಹಳಷ್ಟು ಪುರಾವೆಗಳಿವೆ. ನೂತನ ಒಡಂಬಡಿಕೆಯ ಈ ಕೆಳಗಣ ಎಲ್ಲಾ ವಚನಗಳಲ್ಲಿ ನಾವು 'ಹೇಡ್ಸ್' ಎಂಬ ಪದದ ಉಪಯೋಗವನ್ನು ಕಾಣಬಹುದಾಗಿದೆ :–

**"ಎಲಾ ಕಪೆರ್ನೌಮೇ, ನೀನು ಪರಲೋಕಕ್ಕೆ ಏರಿಸಲ್ಪಡುವೆಯಾ? ಪಾತಾಳಕ್ಕೆ** (Oblivion) **(ಹೇಡ್ಸ್‌ಗೆ) ಇಳಿಯುವಿ"** – ಮತ್ತಾಯ 11:23.

ಕಪೆರ್ನೌಮ್ ಪಟ್ಟಣವು ನಿತ್ಯ ಯಾತನೆಯ ಸ್ಥಳಕ್ಕೆ ಹೋಯಿತೆಂಬುದು ಖಂಡಿತವಾಗಿಯೂ ನಿಜವಲ್ಲ ಅಥವಾ ಅದು ಪಾತಾಳಕ್ಕೆ ಇಳಿದುಹೋಯಿತೆಂಬುದೂ ಈ ಮಾತಿನ ಸಾಧಾರಣ ಅರ್ಥದಲ್ಲಿ ಸತ್ಯವಲ್ಲ. ಆದರೆ ಕಪೆರ್ನೌಮ್ ಆಬ್ಲಿವಿಯಾನಿಗೆ ಅಂದರೆ ನಾಶನಕ್ಕೆ ಹೋಯಿತೆಂಬುದಂತೂ ಪೂರ್ಣವಾದ ಸತ್ಯ ಸಂಗತಿ.

**"ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ** (Oblivion) **(ಹೇಡ್ಸ್‌ನ) ಬಲವು ಅದನ್ನು ಸೋಲಿಸದು"** – ಮತ್ತಾಯ 16:18.

ಪೇತ್ರನು ಅದೇ ತಾನೇ ಕರ್ತನಾದ ಯೇಸುವನ್ನು ಅಭಿಷಕ್ತನು, ಜೀವ ಸ್ವರೂಪನಾದ ದೇವರ ಕುಮಾರನು, ಬರಬೇಕಾಗಿದ್ದ ಮೆಸ್ಸೀಯನು ಎಂಬುದನ್ನು ಅರಿಕೆಮಾಡಿದ್ದನು. ಈ ಸತ್ಯವೇ ಘಟ್ಟಿಯಾದ ಬಂಡೆಯಾಗಿದ್ದು ಅದರ ಮೇಲೆ ಜೀವಂತ ಕಲ್ಲುಗಳ ಕ್ರಿಸ್ತನ ಸಮಗ್ರ ಸಭೆಯು ಕಟ್ಟಬೇಕಾಗಿದೆ. ಯಾಕೆಂದರೆ ನಮಗೆ ರಕ್ಷಣೆ ದೊರೆಯಬಹುದಾದ ಬೇರೆ ಯಾವುದೇ ಹೆಸರನ್ನೂ ನೀಡಲಾಗಿಲ್ಲ. ನಮ್ಮ ಕರ್ತನು, ಪೇತ್ರನನ್ನು ಇಂಥಾಃ ಒಂದು ಜೀವಂತ ಕಲ್ಲಾಗಿದ್ದಾನೆಂದು ಹೇಳುತ್ತಾನೆ. ಅದೇ ರೀತಿಯಲ್ಲಿ ಪೇತ್ರನು **"ನೀವು ಸಹಾ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ"** (1 ಪೇತ್ರ 2:5) ಎಂದು ನಮಗೆ ಹೇಳುವವನಾಗಿದ್ದಾನೆ. ಎಲ್ಲಾ ಪ್ರತಿಷ್ಠಿತ ಭಕ್ತ ಜನರು ಅದೇ ರೀತಿಯಲ್ಲಿ ಕ್ರಿಸ್ತನೆಂಬ ಜೀವಂತ ಬಂಡೆಯ ಮಹಾ ಬುನಾದಿಯ ಮೇಲೆ ದೇವಮಂದಿರವಾಗಿ ಕಟ್ಟಲ್ಪಡುವ ಜೀವಂತ ಕಲ್ಲುಗಳಾಗಿದ್ದಾರೆ. ಈ ಜೀವಂತಕಲ್ಲುಗಳು ಆತ್ಮನ ಮೂಲಕವಾಗಿ ದೇವರ ನಿವಾಸಕ್ಕಾಗಿ ಪವಿತ್ರ ಮಂದಿರವಾಗಿ ಕಟ್ಟಲ್ಪಡುತ್ತಾ ಇದೆ. ಇದರ ಮೂಲಕವಾಗಿ ಆತನು ಈ ಲೋಕದ ಎಲ್ಲಾ ಕುಟುಂಬಗಳನ್ನೂ ಆಶೀರ್ವದಿಸುತ್ತಾನೆ. ದೇವರು ಕ್ರಿಸ್ತನಲ್ಲಿರುವ ಭಕ್ತರನ್ನು ಅಂಗೀಕರಿಸಿದ್ದಾನೆ ಮತ್ತು ಮುಂದಿನ ದಿನಗಳಲ್ಲಿ ಈ ಮಂದಿರದ ಸದಸ್ಯರನ್ನಾಗಿ ಎಣಿಸುತ್ತಾನೆ. ಆದಾಗ್ಯೂ ಆತನು ಈಗ ತನ್ನ ಜನರನ್ನು ಮರಣಕ್ಕೆ ಅನುಮತಿಸಿದ್ದಾನೆ; ಅವರು ಮರಣಕ್ಕೆ ಅಂದರೆ ಸಹಜವಾಗಿ ಆಬ್ಲಿವಿಯಾನಿಗೆ ಇತರರಂತೆ ಇಳಿದುಹೋಗುವರು; ಆದುದರಿಂದ ಅವರಿಗೆ ಮರಣವು ಅವರ ಮುಂದೆ ಜಯಿಸಲಾರರು, ಪಾತಾಳದ ಬಾಗಿಲುಗಳು ಅವರಿಗೆ ಸದಾ ಕಾಲಕ್ಕೆ ಮುಚ್ಚಿಹೋಗದು ಎಂಬ ಪ್ರೋತ್ಸಾಹದಾಯಕವಾದ ಭರವಸೆ ದೇವರಿಂದ ಬೇಕಾಗಿದೆ. ಆತನು ಸಂಕೇತಿಕವಾಗಿ ಮರಣದ ಕಟೆಕಟೆಯನ್ನು ಸಿಡಿಸಿ ತಂದೆ ದೇವರ ಬಲದಿಂದ ಪುನರುತ್ಥಾನದಲ್ಲಿ ಹೊರಬಂದಂತೆ ಆತನ ಸಭೆಯು ಸಹಾ ಮರಣದ ಶಕ್ತಿಯಿಂದ – ಪಾತಾಳದಿಂದ ಬಿಡುಗಡೆ ಹೊಂದುತ್ತದೆ ಮತ್ತು ಆತನ 'ಪ್ರಥಮ ಪುನರುತ್ಥಾನ'ದಲ್ಲಿ ಭಾಗವಹಿಸುತ್ತದೆ. ನಿಶ್ಚಯವಾಗಿಯೂ ಇದು ಸತ್ಯವೇದದ ಎಲ್ಲಾ ಸಾಕ್ಷ್ಯಗಳೊಂದಿಗೆ ಸಾಮರಸ್ಯದಿಂದೊಡಗೂಡಿದೆ ಮತ್ತು ಖಂಡಿತವಾಗಿಯೂ ಕರ್ತನ ಮಾತುಗಳನ್ನು ಬೇರೆ ಯಾವುದೇ ಅರ್ಥ ವಿವರಣೆಯಿಂದ ಕಡಿಮೆಗೊಳಿಸಲಾರದು.

**"ಎಲಾ ಕಪೆರ್ನೌಮೇ, ನೀನು ಪರಲೋಕಕ್ಕೆ ಏರಿಸಲ್ಪಡುವೆಯಾ? ಪಾತಾಳಕ್ಕೆ (ಹೇಡ್ಸ್‌ಗೆ)** (Oblivion) **ಇಳಿಯುವಿ"** – ಲೂಕ 10:15.

ಕಪೆರ್ನೌಮ್ ಪಟ್ಟಣವು ಉನ್ನತವಾದುದೂ, ಅನೇಕ ಸೌಕರ್ಯಗಳನ್ನು ಹೊಂದಿರುವುದೂ ಆಗಿತ್ತು. ಅಲ್ಲಿ ಕೆಲವು ಕಾಲ ನಮ್ಮ ಕರ್ತನೂ ವಾಸಿಸುತ್ತಿದ್ದನು. ಈ ಸ್ಥಳವು ಆತನ ಬೋಧನೆಗಳ ಅವಕಾಶಗಳನ್ನು ಹೊಂದಿತ್ತು ಮತ್ತು ಆತನ ಅನೇಕ ಪ್ರಭಲವಾದ ಕಾರ್ಯಗಳಿಗೆ ಇದು ಸಾಕ್ಷಿಯಾಗಿತ್ತು; ಇದನ್ನು ಅತಿಶಯೋಕ್ತಿಯಾಗಿ ಪರಲೋಕಕ್ಕೆ ಮೇಲೇರಿಸುವಂಥಾದ್ದು ಎಂದು ಕರೆಯಲಾಗುತ್ತಿತ್ತು. ಆದರೆ ಈ ಎಲ್ಲಾ ಸೌಕರ್ಯಗಳನ್ನೂ, ಅವಕಾಶಗಳನ್ನೂ

ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ವಿಫಲವಾದುದರ ಪರಿಣಾಮವಾಗಿ ಈ ನಗರವು ಅನುರೂಪವಾದ ಖಿನ್ನತೆಯಿಂದ ಬಳಲುವುದೆಂದೂ, ಉರುಳಿಸಲ್ಪಡು ವುದೆಂದೂ ಮರಣಸ್ಥಿತಿಗೆ ಅಂದರೆ ಆಬ್ಲಿವಿಯಾನಿಗೆ ತಲುಪುವುದೆಂದೂ ನಮ್ಮ ಕರ್ತನು ಪ್ರಕಟಿಸುತ್ತಾನೆ ಮತ್ತು ಇದು ನೆರವೇರುತ್ತದೆ.

**"ಆತನು ಪಾತಾಳದೊಳಗೆ** (Hades, Oblivion) **ಯಾತನೆ ಪಡುತ್ತಾ ಇರಲಾಗಿ ಕಣ್ಣೆತ್ತಿ ದೂರದಿಂದ ಅಬ್ರಹಾಮನನ್ನೂ ಇವನ ಎದೆಗೆ ಒರಗಿಕೊಂಡಿದ್ದ ಲಾಜ಼ರನನ್ನೂ ನೋಡಿದನು"** – ಲೂಕ 16:23.

ಸತ್ಯವೇದದ ಇದೊಂದೇ ವಾಕ್ಯಭಾಗದಲ್ಲಿ ಹೇಡ್ಸ್ ಅಥವಾ ಶಿಯೋಲ್‌ನಲ್ಲಿ ಭಾವನೆಗಳು, ಆಲೋಚನೆಗಳು, ಯಾತನೆ ಇವುಗಳು ಇರಬಹುದಾದ ಸಾಧ್ಯತೆಯ ಬಗ್ಗೆ ಅಲ್ಪಸ್ವಲ್ಪವಾದ ಸೂಚನೆ ದೊರೆಯುತ್ತದೆ. ಮೊದಲಿಗೆ ಇದು ಶಿಯೋಲಿನಲ್ಲಿ ಯಾವುದೇ ವಿಧವಾದ ಕೆಲಸವಾಗಲೀ, ಜ್ಞಾನವಾಗಲೀ ಅಥವಾ ತಂತ್ರವಾಗಲೀ ಇಲ್ಲ ಎಂಬ ಹೇಳಿಕೆಗೆ ಇದು ವಿರೋಧವಾಗಿರುವಂತೆ ತೋರಿಬರುತ್ತದೆ. ಇದನ್ನು ಒಂದು ದೃಷ್ಟಿಕೋನದಿಂದ ಮಾತ್ರವೇ ಅರ್ಥಮಾಡಿಕೊಳ್ಳಲು ಸಾಧ್ಯ. ಅದೇನೆಂದರೆ, ಇದೊಂದು ಕೇವಲ ಸಾಮ್ಯ. ಬೇರೆಡೆಯಲ್ಲಿ ನಾವಿದನ್ನು ವಿವರವಾಗಿ ಚರ್ಚಿಸಲಿದ್ದೇವೆ (The Truth about Hell ಎಂಬ ಲೇಖನವನ್ನು ನೋಡಿ) ಮತ್ತು ಪಾತಾಳಕ್ಕೆ ಹೋದ ಮತ್ತು ಅಲ್ಲಿ ಯಾತನೆಗೊಳಗಾದ ಆ ಶ್ರೀಮಂತ ವ್ಯಕ್ತಿಯು ಯೆಹೂದಿ ರಾಜ್ಯವಾಗಿದೆ ಎಂಬುದನ್ನು ಅದರಲ್ಲಿ ತೋರಿಸಲಿದ್ದೇವೆ. ಇಸ್ರೇಲ್ ಖಂಡಿತವಾಗಿಯೂ ಪಾತಾಳಕ್ಕೆ ಇಳಿದು ಹೋಗಿದೆ ಅಂದರೆ ಸತ್ತು ಹೋಗಿದೆ. ಹೀಗಿದ್ದರೂ ಅದರ ಜನರು ಎಲ್ಲಾ ದೇಶಗಳಲ್ಲಿ ಹರಡಿಕೊಂಡಿರುವುದರಿಂದ ಇಸ್ರಾಯೇಲ್ಯರು ಇನ್ನೂ ಜೀವಿಸುತ್ತಿದ್ದಾರೆ ಮತ್ತು ಅವರು ಮೆಸ್ಸೀಯನನ್ನು ಅಲ್ಲಗಳೆದಾಗಿಲಿಂದಲೂ ತೊಂದರೆಗಳನ್ನು ಅನುಭವಿ ಸುತ್ತಲೇ ಇದ್ದಾರೆ ಮತ್ತು ದೈವಿಕ ಒಡಂಬಡಿಕೆಯ ಪ್ರಕಾರ ಅವರ ಯಾತನೆಯ ಅಳತೆಯು ತುಂಬಿ ಬರುವವರೆಗೂ, ಆಕೆಯು ದೇವರ ಕೃಪೆಗೆ ಪುನಃ ಪಾತ್ರಳಾಗುವವರೆಗೂ ಅದು ಮುಂದುವರೆಯುತ್ತದೆ. – ರೋಮಾ. 11:26–29.

"ನೀನು ನನ್ನ ಜೀವಾತ್ಮವನ್ನು ಪಾತಾಳದಲ್ಲಿ (Hades, Oblivion) ಬಿಡುವುದಿಲ್ಲ, ನಿನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ನೋಡಗೊಡಿಸುವುದಿಲ್ಲ" – ಅ.ಕೃ 2:27.

ಹೇಡ್ಸ್ ಅಥವಾ ಶಿಯೋಲ್ ಅಥವಾ ಆಬ್ಲಿವಿಯಾನಿಗೆ ಹೋಗುವುದು ಆತ್ಮವೋ ಅಥವಾ ಕೇವಲ ದೇಹವೋ ಎಂಬ ನಮ್ಮ ಪ್ರಸ್ತುತ ಪರೀಕ್ಷೆಯನ್ನು ಪ್ರಾರಂಭಿಸಿದ ಕೀರ್ತನೆಯ ಉಕ್ತಿ ಇದಾಗಿದೆ. ಈ ವಾಕ್ಯಭಾಗವು ನಮ್ಮ ಕರ್ತನ ಆತ್ಮವು ಹೇಡ್ಸ್‌ಗೆ ಹೋಯಿತೆಂದೂ ಮತ್ತು ಅಲ್ಲಿಂದ ಅದು ಪುನರುತ್ಥಾನದ ಮೂಲಕ ಬಿಡುಗಡೆ ಹೊಂದಿತೆಂದೂ ನಮಗೆ ನಿಶ್ಚಯಪೂರ್ವಕವಾಗಿ ಬೋಧಿಸುತ್ತದೆ. ಈ ಸನ್ನಿವೇಶವು ದಾವೀದನ ಆತ್ಮವು ಸಹಾ ಶಿಯೋಲಿಗೆ ಹೋಯಿತೆಂದು ಸಾಬೀತುಪಡಿಸುತ್ತದೆ ಯಾದರೂ ಅದು ಇನ್ನೂ ಅಲ್ಲಿಂದ ಬಿಡುಗಡೆ ಹೊಂದಿಲ್ಲ – ಅಥವಾ ದೈವಿಕ ವ್ಯವಸ್ಥೆಯ ಮೇರೆಗೆ ಕ್ರಿಸ್ತನ ದೇಹವಾದ ಸಮಗ್ರ ಸಭೆಯು ಮೊದಲು ಬಿಡುಗಡೆ ಹೊಂದಿಕೊಳ್ಳುವವರೆಗೆ, ಪ್ರಥಮ ಪುನರುತ್ಥಾನವು ಪೂರ್ಣಗೊಳ್ಳುವವರೆಗೆ ಅದು ಅಲ್ಲಿಂದ ಬಿಡುಗಡೆ ಹೊಂದಿಕೊಳ್ಳುವುದೇ ಇಲ್ಲ – ಅ.ಕೃ. 2: 29,34 ; ಇಬ್ರಿಯ 11:32, 39,40.

**"ದಾವೀದನು ಮುಂದಾಗುವುದನ್ನು ಕಂಡು ಕ್ರಿಸ್ತನ ಪುನರುತ್ಥಾನವನ್ನೇ ಕುರಿತು – ಆತನು ಪಾತಾಳದಲ್ಲಿ** (Hades, Oblivion) **ಬಿಡಲ್ಪಡಲ್ಲಿಲ್ಲವೆಂತಲೂ ಆತನ ಶರೀರವು ಕೊಳೆಯುವ ಅವಸ್ಥೆಯನ್ನನುಭವಿಸು ವುದಿಲ್ಲವೆಂತಲೂ ಹೇಳಿದನು"** – ಅ.ಕೃ. 2:31.

ಈ ಸಕಾರಾತ್ಮಕ ಹೇಳಿಕೆಯು ನಾವೀಗ ನೋಡಿದುದರ ಮುಂದಿನ ದೃಢಪಡಿಸುವಿಕೆಯಾಗಿದೆ.

**"ಮರಣವೇ, ನಿನ್ನ ಜಯವೆಲ್ಲಿ? ಮರಣವೇ, ನಿನ್ನ ವಿಷದಕೊಂಡಿ ಎಲ್ಲಿ?"** – 1 ಕೊರಿಂಥ 15:55.

ಅಪೋಸ್ತಲನು ಸತ್ತವರಿಗಿರುವ ಏಕೈಕ ನಿರೀಕ್ಷೆಯೆಂದರೆ ಪುನರುತ್ಥಾನ ಎಂಬ ತನ್ನ ವಾದದ ಸಮರ್ಥನೆಯಲ್ಲಿ ಇದನ್ನು ಹಳೆಒಡಂಬಡಿಕೆಯ ಒಂದು ಉಲ್ಲೇಖನವನ್ನು ಕೊಡುತ್ತಾನೆ. ಈ ಪುನರುತ್ಥಾನವು ದೇಹದ ಪುನರುತ್ಥಾನವಾಗಿರುವುದಿಲ್ಲ. ಯಾಕೆಂದರೆ ಹೂಣಲ್ಪಟ್ಟ ದೇಹವು ಪುನರುತ್ಥಾನ ಹೊಂದುವುದಿಲ್ಲವೆಂಬುದನ್ನು ಆತನು ನಿರ್ದಿಷ್ಟವಾಗಿ ಹೇಳಿದ್ದಾನೆ (37,38ನೇ ವಚನಗಳನ್ನು ನೋಡಿರಿ); ಪುನರುತ್ಥಾನದ ನಿರೀಕ್ಷೆಯು ಆತ್ಮಕ್ಕೆ ಮಾತ್ರ. ದೇವರು ಅದಕ್ಕೆ ಯಾವ ರೀತಿಯ ದೇಹವನ್ನಾದರೂ ಕೊಡಬಹುದು. ಇದಲ್ಲದೆ **"ಸತ್ತವರು ಎದ್ದುಬರಲಿಲ್ಲವಾದರೆ ಕ್ರಿಸ್ತನೂ ಎದ್ದು ಬಂದಿಲ್ಲ. ಕ್ರಿಸ್ತನು ಎದ್ದು ಬಂದಿಲ್ಲವಾದರೆ ನಿಮ್ಮ ನಂಬಿಕೆಯು ನಿಷ್ಪ್ರಯೋಜನವಾಗಿದೆ. ನೀವು ಇನ್ನೂ ನಿಮ್ಮ ಪಾಪಗಳಲ್ಲಿಯೇ ಇದ್ದೀರಿ. ಇದು ಮಾತ್ರವಲ್ಲದೆ ಕ್ರಿಸ್ತನವರಾಗಿ ನಿದ್ರೆಹೋದವರು ನಾಶವಾದರು"** (ವಚನ 16–18). ನಿದ್ರೆಹೋದದ್ದು ಮಾತ್ರವೇ ಎಚ್ಚರಗೊಳ್ಳಬೇಕು, ಪುನರುತ್ಥಾನ ಹೊಂದಬೇಕು ಭ್ರಷ್ಟವಾದುದು ಅಲ್ಲ.

**"ಹೆದರ ಬೇಡ, ನಾನು . . . . ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕು ವನಾಗಿದ್ದೇನೆ. ಮರಣದ ಮತ್ತು ಪಾತಾಳದ** (Hades,

Oblivion) **ಬೀಗದ ಕೈಗಳು ನನ್ನಲ್ಲಿ ಅವೆ "** – ಪ್ರಕಟನೆ 1:18.

ಈ ವಾಕ್ಯಭಾಗವನ್ನು ದೇವಜನರಿಗೆ ಪ್ರೋತ್ಸಾಹವುಂಟುಮಾಡುವುದಕ್ಕಾಗಿ ಕೊಡಲಾಗಿದೆ. ಆದುದರಿಂದ ಇಲ್ಲಿರುವ ಹೇಡ್ಸ್, ಶಿಯೋಲ್ ಮುಂತಾದವು ಖಂಡಿತವಾಗಿಯೂ ಯಾತನೆಯ ಸ್ಥಳಗಳಲ್ಲ. ಇಲ್ಲವಾದಲ್ಲಿ ಈ ಹೇಳಿಕೆಯ ಒತ್ತಾಯ ಏತಕ್ಕೆ? ಕರ್ತನ ಜನರು ಹೇಡ್ಸ್‌ಗೆ (ಆಬ್ಲಿವಿಯಾನಿಗೆ) ಹೋಗುತ್ತಾರೆಂಬ ಅಭಿಪ್ರಾಯವನ್ನು ಈ ಮಾತುಗಳು ನೀಡುತ್ತವೆ. ಬೇರೆ ಯಾರೇ ಅಲ್ಲಿಗೆ ಹೋಗಲಿ, ಹೇಡ್ಸ್‌ಗೆ, ಆಬ್ಲಿವಿಯಾನಿಗೆ ಇಳಿದು ಹೋಗುವಾಗ ದೇವಜನರ ನಿರೀಕ್ಷೆ ಏನೆಂದರೆ ಸೂಕ್ತ ಸಮಯದಲ್ಲಿ ನಮ್ಮ ಮಹಾ ವಿಮೋಚಕನು ಈ ಸಾಂಕೇತಿಕವಾದ ಮರಣವೆಂಬ ಸೆರೆಮನೆಯಿಂದ ಅವರನ್ನು ಬಂಧಮುಕ್ತರನ್ನಾಗಿ ಮಾಡುತ್ತಾನೆ ಎಂಬುದೇ. ಆತನ ಕೈಯಲ್ಲಿ ಇದರ ಬೀಗದ ಕೈಗಳು ಅಂದರೆ ಅಧಿಕಾರ, ಶಕ್ತಿ ಇದೆ ಎಂಬ ಹೇಳಿಕೆಯ ಮಹತ್ವವು ಇದೇ ಆಗಿದೆ. ಆತನು ಅದನ್ನು ತೆರೆಯಲೂ ಬಹುದು, ಮುಚ್ಚಲೂ ಬಹುದು; ಎಲ್ಲಾ ಅಧಿಕಾರಗಳೂ ಆತನ ಕೈಗೆ ಕೊಡಲ್ಪಟ್ಟಿವೆ.

ತನ್ನ ಮೊದಲನೆಯ ಬರೋಣದಲ್ಲಿ ಮಾತನಾಡುತ್ತಾ, ಯೆಶಾಯನು ತನ್ನ ಬಗ್ಗೆ ನುಡಿದ ಪ್ರವಾದನೆಯನ್ನು ಉಲ್ಲೇಖಿಸುತ್ತಾ ನಮ್ಮ ಕರ್ತನು **"ಸೆರೆಯವರಿಗೆ ಬಿಡುಗಡೆಯಾಗುವುದಕ್ಕೂ, ಬಂಧಿಗಳಿಗೆ ಕದ ತೆರೆಯುವುದಕ್ಕೂ, ಮನಮುರಿದವರನ್ನು ಬಿಡಿಸುವುದಕ್ಕೂ, ಕರ್ತನು ನೇಮಿಸಿದ ಶುಭವರ್ಷವನ್ನು ಪ್ರಚುರಪಡಿಸು ವುದಕ್ಕೂ ದೇವರು ತನ್ನನ್ನು ನೇಮಿಸಿದ್ದಾನೆ"** (ಯೆಶಾಯ 61:1 ಮತ್ತು ಲೂಕ 4:18) ಎಂದಿದ್ದಾನೆ. ಇದು ಪುನರುತ್ಥಾನದ ಶುಭವರ್ತಮಾನ, ಮರಣದ ಪಾತಾಳದಲ್ಲಿ, ಮತ್ತು ಮರಣದ ಮೇಲೆ ಅಧಿಕಾರಹೊಂದಿರುವ ವಿರೋಧಿಯ ಅಂದರೆ ಪಿಶಾಚನ ಶಕ್ತಿಯಿಂದ ಬಂಧಿಯಾಗಿರುವವರೆಲ್ಲರ ಬಿಡುಗಡೆಯನ್ನು ಸಾರುವ ಶುಭ ಸಮಾಚಾರವಾಗಿದೆ. ಸರಿಯಾದ ದೃಷ್ಟಿಕೋನದಿಂದ ನೋಡುವುದಾದಲ್ಲಿ ಈ ವಾಕ್ಯಗಳು ಎಷ್ಟೊಂದು ಅರ್ಥ ಭರಿತವಾಗಿವೆ! ಮೌಢ್ಯವು ದಟ್ಟವಾಗಿ ಕವಿದು ಅಸಂಗತವಾದದನ್ನು ಮರೆಮಾಡಿರುವುದನ್ನು ಬಿಟ್ಟರೆ ಬೇರೆ ಯಾವ ದೃಷ್ಟಿಕೋನದಲ್ಲಿ ನೋಡುವುದಾದರೆ ಗೊಂದಲಮಯವಾಗಿಯೂ ಅಸಂಬದ್ಧವಾಗಿಯೂ ಕಾಣುತ್ತದೆ.

**"ಇಗೋ, ಬೂದಿ ಬಣ್ಣದ ಕುದುರೆಯು ಕಾಣಿಸಿತು. ಅದರ ಮೇಲೆ ಕೂತಿದ್ದವನ ಹೆಸರು ಮೃತ್ಯುವು. ಅವನ ಹಿಂದೆ ಪಾತಾಳವೆಂಬುವನು ಬಂದನು; ಅವರಿಗೆ ಭೂಮಿಯ ಕಾಲುಭಾಗದಲ್ಲಿ ಕತ್ತಿಯಿಂದಲೂ ಬರದಿಂದಲೂ ಅಂಟುರೋಗದಿಂದಲೂ ಕಾಡುಮೃಗಗಳಿಂದಲೂ ಕೊಲ್ಲುವುದಕ್ಕೆ ಅಧಿಕಾರವು ಕೊಡಲ್ಪಟ್ಟಿತು"** – ಪ್ರಕಟನೆ 6:8.

ಹೇಡ್ಸ್ ಎಂಬುದು ಪ್ರಪಂಚದ ಸುಮಾರು ಐವತ್ತು ಮಿಲಿಯನ್ ಜನರನ್ನು ಅಂಗೀಕರಿಸಿ ಅವರನ್ನು ಯಾತನೆಗೊಳ ಪಡಿಸಬಹುದಾದ ಯಾತನೆಯ ಸ್ಥಳವಾಗಿದೆ ಎಂಬ ಸರ್ವಸಾಮನ್ಯ ಅಂಗೀಕೃತ ದೃಷ್ಟಿಕೋನದೊಂದಿಗೆ ಈ ಹೇಳಿಕೆಯನ್ನು ಸಾಮರಸ್ಯಗೊಳಿಸಲು ಬಹಳ ಬಲವಾದ ಊಹನೆ ಬೇಕಾಗುತ್ತದೆ. ಅಂಥಾಃ ಯಾತನೆಯ ಸ್ಥಳವು ಕುದುರೆಯ ಮೇಲೆ ಸವಾರಿ ಮಾಡುತ್ತದೆ ಎಂಬುದರಲ್ಲಿ ಸ್ವಲ್ಪವಾದಾರೂ ಸುಸಂಗತೆಯನ್ನು ಕಂಡುಕೊಳ್ಳಲು ಯಾರೊಬ್ಬರಿಗೂ ಸಾಧ್ಯವಾಗದು. ಆದರೆ ಸಂಕೇತದ ಸಮಂಜಸತೆಯು ಮರಣ ಮತ್ತು ಮರಣದ ಪರಿಸ್ಥಿತಿ, ನಾಶನ, ಅಬ್ಲಿವಿಯಾನ್, ಪ್ರಜ್ಞಾಹೀನತೆ, ಭೂಮಿಯ ಮೇಲೆ ಮಂದಗತಿಯಿಂದ ಸಾಗುವುದು, ಮಾನವ ಕುಟುಂಬದ ಹೆಚ್ಚು ಭಾಗವನ್ನು ಗುಡಿಸಿ ಹಾಕುವುದು ಇವುಗಳೆಲ್ಲವುಗಳಿಗೆ ಅನುಗುಣವಾಗಿವೆ. ಸಂಕೇತಗಳಲ್ಲಿ ಯಾವುದೇ ವಿವರಣೆ ನೀಡದೆ ಕೇವಲ ಸಮಂಜಸತೆಯನ್ನು ತೋರುವಲ್ಲಿ ನಾವು ನಮ್ಮಷ್ಟಕ್ಕೇ ತೃಪ್ತಿಪಡುತ್ತೇವೆ.

**"ಸಮುದ್ರವು ತನ್ನೊಳಗಿದ್ದ ಸತ್ತವರನ್ನು ಒಪ್ಪಿಸಿತು; ಮೃತ್ಯುವೂ ಪಾತಾಳವೂ ತಮ್ಮ ವಶದಲ್ಲಿದ್ದ ಸತ್ತವರನ್ನು ಒಪ್ಪಿಸಿದವು. ಅವರಲ್ಲಿ ಪ್ರತಿಯೊಬ್ಬನಿಗೂ ಅವನವನ ಕೃತ್ಯಗಳ ಪ್ರಕಾರ ನ್ಯಾಯ ತೀರ್ಪಾಯಿತು"** – ಪ್ರಕಟನೆ 20:13.

ಏದೇನಿನಲ್ಲಿನ ಪ್ರಥಮ ಪ್ರಲೋಭನೆಯ ಫಲವಾಗಿ ಮರಣ ದಂಡನೆಯು ಎಲ್ಲಾ ಮಾನವರ ಮೇಲೆ ಎರಗಿ ಬಂತು. ಬಹುಶಃ ಈವರೆಗೆ ಐವತ್ತು ಮಿಲಿಯನ್‌ಗೂ ಹೆಚ್ಚು ಮಂದಿ ಶಿಯೋಲಿಗೆ, ಹೇಡ್ಸ್‌ಗೆ, ಆಬ್ಲಿವಿಯಾನಿಗೆ (ಮರವೆಯ ದೇಶಕ್ಕೆ) ಹೋಗಿದ್ದಿರಬಹುದು. ನಾವು ಜೀವಿತರೆಂದು ಕರೆಯುವ ಉಳಿದ ನೂರಾರು ಮಿಲಿಯನ್ ಜನರು ನಿಜವಾದ ಅರ್ಥದಲ್ಲಿ ಜೀವಿತರಾಗಿಲ್ಲ, ಆದರೆ ಅವರುಗಳು ಹತ್ತರಲ್ಲಿ ಒಂಬತ್ತು ಪಾಲು ಮರಣದಂಡನೆಯ ಕಾರ್ಯಾಚರಣೆಯಲ್ಲಿ ಈಗಾಗಲೇ ಸತ್ತಂತಿದ್ದಾರೆ. ಕಲ್ವಾರಿಯಲ್ಲಿ ನೀಡಲ್ಪಟ್ಟ ಬಿಡುಗಡೆಯ ಬೆಲೆಯ ಫಲವಾಗಿ ನೂತನ ಪರೀಕ್ಷೆಗೆ ಒಂದು ಅವಕಾಶವನ್ನು ಮಾನವ ಕುಟುಂಬದ ಪ್ರತಿಯೊಬ್ಬ ಸದಸ್ಯನಿಗೂ ನೀಡಬೇಕಾಗುತ್ತದೆ; ಮತ್ತು ಕೇವಲ ಕೃಪಾಪಾತ್ರರಾದ ಅಲ್ಪರು ಮಾತ್ರವೇ ಸಭೆಯ ಆಯ್ಕೆಗಾಗಿ ನಿಗಧಿಯಾದ ಸಮಯದಲ್ಲಿ ಅಂಥಾಃ ಅವಕಾಶ ಮತ್ತು ಪರೀಕ್ಷೆಯನ್ನು ಹೊಂದುತ್ತಾರೆ. ಇದರ ಅರ್ಥ ಮೂಲ ಮರಣ ದಂಡನೆಯು ಹಿಂದಕ್ಕೆ ಉರುಳಿಹೋಗುವುದು ಮತ್ತು ಎಲ್ಲಾ ಮಾನವ ಜಾತಿಯವರನ್ನು ನ್ಯಾಯತೀರ್ಪಿಗೆ ಅಥವಾ ನಿತ್ಯಜೀವದ ಪರೀಕ್ಷೆಗೆ ಆತನ ವಿಧೇಯತೆ ಅಥವಾ ಅವಿಧೇಯತೆ ಕಾರ್ಯಗಳ ಆಧಾರದಲ್ಲಿ ಒಳಪಡಿಸುವುದು. ಈ ದೇವರ

ವಾಕ್ಯವು ನಮಗೆ ಸೂಕ್ತಸಮಯದಲ್ಲಿ ಮರಣ ಹೊಂದಿದವರು (ಮರಣದಂಡನೆಗೆ ಒಳಗಾದವರು, ಇನ್ನೂ ಸಮಾಧಿಯನ್ನು ಸೇರದವರು) ಇವರಿಗೆ ನಿತ್ಯಜೀವದ ಅರ್ಹತೆ ಅಥವಾ ಅನರ್ಹತೆಯನ್ನು ನಿರ್ಧರಿಸುವ ಸಲುವಾಗಿ ಪೂರ್ಣವಾದ ವಿಚಾರಣೆ ಅಥವಾ ನ್ಯಾಯತೀರ್ಪಿನ ಅವಕಾಶ ನೀಡಲಾಗುವುದು ಮಾತ್ರವಲ್ಲ, ಆಗಲೇ ಶಿಯೋಲ್, ಹೇಡ್ಸ್ ಅಥವಾ ಆಬ್ಲಿವಿಯಾನ್‌ಗೆ (ಮರವೆಯ ಸ್ಥಿತಿ) ಸೇರಿದವರು ಸಹಾ ತಮ್ಮ ಪ್ರಜ್ಞಾಹೀನ ಸ್ಥಿತಿಯಿಂದ ಎಚ್ಚರಗೊಂಡೂ ನ್ಯಾಯತೀರ್ಪಿಗಾಗಿ ಹೊರಬರುವರು. ಸಭೆಗೆ ಸುವಾರ್ತಾಯುಗದ ದಿನವು ನ್ಯಾಯತೀರ್ಪಿನ ದಿನವಾಗಿರುವಂತೆ ಈ ನ್ಯಾಯವಿಚಾರಣೆಯ ದೃಶ್ಯವು ಮಿಲಿಯಾಂತರ ಯುಗದಲ್ಲಿ 'ಲೋಕದ ನ್ಯಾಯತೀರ್ಪಿನ ದಿನ'ವಾಗಿರುವುದು.

**"ಆ ಮೇಲೆ ಮೃತ್ಯುವೂ ಪಾತಾಳವೂ** (Hades, Oblivion) **ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು; ಆ ಬೆಂಕಿಯ ಕೆರೆಯೇ ಎರಡನೆಯ ಮರಣವು"** – ಪ್ರಕಟನೆ 20:14.

ಸತ್ಯವೇದದ ಈ ವಾಕ್ಯಭಾಗವನ್ನು ಪರಿಗಣಿಸುವಾಗ ಹೇಡ್ಸ್ ಎಂಬುದು ಯಾತನೆಯ ಸ್ಥಳವಾಗಿದೆ ಎಂದು ಅರ್ಥೈಸುವವರು ಅಗತ್ಯವಾಗಿ ಒಂದು ದೊಡ್ಡ ಗೊಂದಲಕ್ಕೆ ಒಳಗಾಗಲಿರುವರು. ಆದರೆ ಇದು ಸರಿಯಾದ ದೃಷ್ಟಿಕೋನದಿಂದ ಎಷ್ಟೊಂದು ಸಮಂಜಸವೂ, ಸಾಮರಸ್ಯವುಳ್ಳದ್ದೂ ಆಗಿದೆಯಲ್ಲವೇ! ಬೆಂಕಿಯ ಸರೋವರವು (ಗೆಹೆನ್ನಾ) ಉಗ್ರವಾದ ನಾಶನವನ್ನು ಪ್ರತಿನಿಧಿಸುತ್ತದೆ. ಇದು ಎರಡನೆಯ ಮರಣವಾಗಿದ್ದು ಎಲ್ಲ ದುಷ್ಟಶಕ್ತಿಗಳನ್ನೂ ಸಂಪೂರ್ಣವಾಗಿ ನಾಶಗೊಳಿಸುವುದು. "ಮರಣ ಮತ್ತು ಹೇಡ್ಸ್" ಇವುಗಳು ಎರಡನೆಯ ಮರಣದಲ್ಲಿ ನಾಶವಾಗುವುವು ಎಂಬುದೇ ನಾವು ಈಗ ತಾನೇ 13ನೇ ವಚನದ ಮುಂದಿನ ವಚನಗಳಲ್ಲಿ ವಿವರಿಸುವ ನಾಶನಗಳಾಗಿವೆ. ಆದಾಮನ ಅಪರಾಧದ ಫಲವಾದ ದಂಡನೆಯ ಪ್ರಸ್ತುತ ಪರಿಸ್ಥಿತಿಯನ್ನು 'ಮರಣ ಮತ್ತು ಹೇಡ್ಸ್' ಎಂಬುದಾಗಿ ವಾಗ್ಧೋರಣೆ ಮಾಡಲಾಗಿದೆ – ಈಗ ಜೀವಿಸುವವರೆಂದು ಹೇಳಲ್ಪಡುವವರೂ ಮತ್ತು ಸ್ಮೃತಿವಿಹೀನರಾಗಿ ನಿದ್ರಿಸುವವರೂ ಹಾಗೂ ಸಂಪೂರ್ಣವಾಗಿ ಮರಣಹೊಂದಿದವರೂ ಇವರುಗಳ ಮರಣದ ಸ್ಥಿತಿ ಇದಾಗಿದೆ.

ಹದಿಮೂರನೆಯ ವಚನವು ಹೇಳುವಂತೆ **"ಸಮುದ್ರವು ತನ್ನೊಳಗಿದ್ದ ಸತ್ತವರನ್ನು ಒಪ್ಪಿಸಿದವು. ಅವರಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳ ಪ್ರಕಾರ ನ್ಯಾಯತೀರ್ಪಾಯಿತು"**. ನ್ಯಾಯವಿಚಾರಣೆಯ ಸೂಕ್ತ ಸಮಯದಲ್ಲಿ ಎಲ್ಲಾ ಮನುಷ್ಯರು ಈ ಪರಿಸ್ಥಿತಿಯಿಂದ ಹೊರಬರಲಿರುವರು. ಹೀಗಾಗಿ ಈ ವಚನವು ಆದಾಮನ ಮರಣ, ಅದರ ಪರಿಣಾಮವಾಗಿ ಆಬ್ಲಿವಿಯಾನಿನಲ್ಲಿ ನಿದ್ರಿಸುವುದು ಇವುಗಳು ಮಿಲಿಯಾಂತರ ಯುಗದ ನಂತರ ಇರುವುದಿಲ್ಲ; ಅದು ಯಾಕೆ, ಮುಂತಾದವುಗಳನ್ನು ವಿವರಿಸುತ್ತದೆ – ಯಾಕೆಂದರೆ ಅವರುಗಳು ಎರಡನೆಯ ಮರಣ ಸ್ಥಿತಿಯೊಳಗೆ ವಿಲೀನಗೊಳ್ಳುವರು ಅಥವಾ ಅದರಿಂದ ನುಂಗಲ್ಪಡುವರು. ಇನ್ನು ಮುಂದೆ ಯಾರೊಬ್ಬರೂ ಆದಾಮನ ಪಾಪಕ್ಕಾಗಿ ಸಾಯುವುದಿಲ್ಲ ; ಇನ್ನು ಮುಂದಿನ ವಿಚಾರಣೆಗಳಲ್ಲಿ ಇದು ಪರಿಗಣನೆಗೆ ಹೊರತಾಗಿದೆ. ನಂತರದಲ್ಲಿನ ಒಂದೇ ಮರಣವೆಂದರೆ 'ಎರಡನೆಯ ಮರಣ'. ಇದು ಪಾಪವನ್ನು ಮಾಡುವ ಪಾಪಿಗಳಿಗಷ್ಟೇ ಪರಿಣಾಮ ಬೀರುವುದಾಗಿದೆ. ಅವರ ತಂದೆತಾಯಿಗಳಿಗಾಗಲೀ, ಮಕ್ಕಳಿಗಾಗಲೀ ಅಲ್ಲ. ಆ ದಿನದಲ್ಲಿ ಮರಣ ಹೊಂದುವವನು ತನ್ನ ಸ್ವಂತ ಪಾಪಗಳಿಗಾಗಿ ಮರಣ ಹೊಂದುವನು. 'ಪಾಪಮಾಡುವ ಆತ್ಮವೇ ಸಾಯುವುದು' ಅಂಥವರಿಗೆ ಆದಾಮನ ಸ್ವಭಾವದ ಬಲಹೀನತೆ ಇರಬಹುದಾದರೂ, ಅವರು ಅದರಿಂದ ಎಂದೂ ಚೇತರಿಸಿಕೊಳ್ಳಲಾಗದವರೂ ಮಿಲಿಯಾಂತರ ಯುಗದಲ್ಲಿ ನೂತನ ಒಡಂಬಡಿಕೆಯ ವಿಮೋಚಕನು ಅವರ ಕೈಗೆಟಕುವಂತೆ ಒದಗಿಸಿಕೊಟ್ಟ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಅವರು ವಿಫಲರಾದುದರಿಂದ, ಇನ್ನೂ ಸಹಾ ಆ ನೂತನ ಒಡಂಬಡಿಕೆಯಲ್ಲಿ ತಮ್ಮಲ್ಲಿ ಬಲಹೀನತೆಗಳನ್ನು ಅನುವಂಶಿಕವಾಗಿ ಹೊಂದಿ ಕೊಂಡಿರುವವರು ವಿಮೋಚಕನ ತ್ಯಾಗದಿಂದ ಪೂರ್ಣವಾಗಿ ಚಿಗುರಿಕೊಂಡು ಅವುಗಳನ್ನು ತಮ್ಮ ಪ್ರತಿಕೂಲವಾಗಿ ಎಣಿಕೆಮಾಡಿಕೊಳ್ಳಲಾರರು. ಮಿಲಿಯಾಂತರ ಯುಗದ ಈ ಪೂರ್ಣ ಅವಕಾಶವು ಪ್ರತಿಯೊಬ್ಬರಿಗೆ ದಯಪಾಲಿಸಲ್ಪಟ್ಟಂದಿನಿಂದ ಮತ್ತು ಅದರ ನಂತರವೂ, ಆದಾಮನ ಬಲಹೀನತೆ ಮತ್ತು ಅಸಮರ್ಪಕತೆಗಳು ಇನ್ನೂ ಅವರಲ್ಲಿ ಉಳಿದಿರ ಬಹುದಾದರೂ ಅವರ ಮರಣವನ್ನು ಆದಾಮನ ಮರಣದ ಭಾಗವೆಂದು ಲೆಕ್ಕಕ್ಕೆ ಹಿಡಿಯಲಾಗದು. ಅದು ಎರಡನೆಯ ಮರಣದ ಭಾಗವಾಗಿದೆ – ಯಾಕೆಂದರೆ ಪ್ರಗತಿ ಸಾಧಿಸುವುದರಲ್ಲಿನ ಅವರ ವಿಫಲತೆಯು ಅವರ ಸ್ವಂತ ಇಚ್ಛೆಯ ಫಲವಾಗಿದೆಯೇ ಹೊರತು ಆದಾಮನ ಅಪರಾಧದ ಫಲವಲ್ಲ ಅಥವಾ ಅನುವಂಶಿಕವಾಗಿ ಬಂದ ಬಲಹೀನತೆಯೂ ಅಲ್ಲ.

ನಾವು ಇದುವರೆಗೆ ಸತ್ಯವೇದದಲ್ಲಿ ಶಿಯೋಲ್ ಮತ್ತು ಹೇಡ್ಸ್ ಪದಗಳಿರುವ ವಚನಗಳನ್ನೆಲ್ಲಾ ಪರೀಕ್ಷಿಸಿದ್ದೇವೆ ಮತ್ತು ಮಾನವರ ಆತ್ಮ ಮಾತ್ರವೇ ಮರಣದಲ್ಲಿ ಅಂಥಾಃ ಪರಿಸ್ಥಿತಿಯನ್ನು ತಲಪುತ್ತದೆ ಎಂಬುದನ್ನು ನಿಶ್ಚಯಪಡಿಸಿಕೊಂಡಿದ್ದೇವೆ. ಇದೊಂದು ಪರಿಸ್ಥಿತಿ ಅಥವಾ ಅವಸ್ಥೆಯಾಗಿದೆಯೇ ಹೊರತು ಕೆಲವೊಮ್ಮೆ ಸಾಂಕೇತಿಕವಾಗಿ ಹೇಳುವಂತೆ ಅದೊಂದು ಸ್ಥಳ, ಅಥವಾ

ಪುನರುತ್ಥಾನದ ಮುಂಜಾವಿನಲ್ಲಿ ಎಲ್ಲಾ ಕೈದಿಗಳು ಹೊರಬರುವ ಒಂದು ಸೆರೆಮನೆ ಆಗಿರುವುದಿಲ್ಲ. ಸಾಂಕೇತಿಕವಾಗಿ ಇದನ್ನು ಅಂಧಕಾರವುಳ್ಳ, ಮೌನವಾದ ಸ್ಥಳವಾಗಿದ್ದು ಅಲ್ಲಿ ಯಾವುದೇ ಹೇಳಿಕೆಗಳನ್ನು ಮುಕ್ತವಾಗಿ ಮಾಡಲಾಗದು. ಯಾಕೆಂದರೆ ಅಲ್ಲಿ ಜ್ಞಾನವಾಗಲೀ, ಯುಕ್ತಿಸಾಧನವಾಗಲೀ, ವಿವೇಕವಾಗಲೀ, ಕೆಲಸ ಕಾರ್ಯಗಳಾಗಲೀ ಅಥವಾ ದೇವರ ಸ್ತುತಿ ಅಥವಾ ಶಪಿಸುವಿಕೆಯಾಗಲೀ ಅದರಲ್ಲಿ ಅಂದರೆ ಅಬ್ಲಿವಿಯಾನ್ ಸ್ಥಿತಿಯನ್ನು ಸೇರುವವರ ಪಾಲಿಗೆ ಇರುವುದಿಲ್ಲ ಎಂದು ವರ್ಣಿಸಲಾಗಿದೆ. ಅವರ ಒಂದೇ ನಿರೀಕ್ಷೆಯೆಂದರೆ ತನ್ನ ಪ್ರಾಣತ್ಯಾಗದಿಂದ ಅವರ ಆತ್ಮಗಳನ್ನು ವಿಮೋಚಿಸಿದ ಕರ್ತನು ಸೂಕ್ತ ಸಮಯದಲ್ಲಿ ಅಂದರೆ ಆತನ ಕ್ರೋಧ, ಶಾಪ ಇವುಗಳು ಮುಗಿದು ಹೋದಮೇಲೆ, ಆಶೀರ್ವಾದದಾಯಕವಾದ ಮಿಲಿಯಾಂತರ ಯುಗವು ಪ್ರಾರಂಭವಾದಾಗ ಅವರನ್ನು ಅಲ್ಲಿಂದ ಬಿಡುಗಡೆ ಗೊಳಿಸುತ್ತಾನೆ, ಅಬ್ಲಿವಿಯಾನ್‌ನಿಂದ ಅವರನ್ನು ಆತನು ಇಷ್ಟಪಡುವ ದೇಹದೊಂದಿಗೆ, ಪ್ರಸ್ತುತ ಪರಿಸ್ಥಿತಿಯಿಂದ ಇನ್ನೂ ಹೆಚ್ಚು ಅನುಕೂಲಕರ ಪರಿಸ್ಥಿತಿಗೆ ಸೇರಲು ಹೊರಬರುವಂತೆ ಕರೆಯುತ್ತಾನೆ ಎಂಬುದೇ.

ನಮ್ಮ ಆಂಗ್ಲ ಭಾಷೆಯ ಸಾಮಾನ್ಯ ಸತ್ಯವೇದದ ಭಾಷಾಂತರಕಾರರು ಮತ್ತು ಹೆಚ್ಚಿನ ವಿಮರ್ಶಕರು ಮಾನವ ಸ್ವಭಾವದ ಬಗ್ಗೆ ಮತ್ತು ಆತನಿಗೆ ಒದಗುವ ಪ್ರತಿಫಲ ಮತ್ತು ಶಿಕ್ಷೆಯ ಸಮಯ ಮತ್ತು ಸ್ಥಳದ ಬಗ್ಗೆ ತಪ್ಪಾದ ಅಭಿಪ್ರಾಯಗಳಿಂದ ಪ್ರಭಾವಿತರಾಗಿದ್ದು, ಮರಣದ ಮಧ್ಯಂತರ ಕಾಲದಲ್ಲಿ ಆತನ ಪರಿಸ್ಥಿತಿಯ ಬಗ್ಗೆ ತಪ್ಪಾದ ಗ್ರಹಿಕೆಯುಳ್ಳವರಾಗಿದ್ದು ಸತ್ಯವೇದದ ಕೆಲವು ವಚನಗಳನ್ನು ಭಾಷಾಂತರಿದ್ದಾರೆ ಮತ್ತು ಅವುಗಳಿಗೆ ತಮ್ಮದೇ ಆದ ತಪ್ಪುಗ್ರಹಿಕೆಗೆ ಸಾಮರಸ್ಯವಾಗಿ ಟಿಪ್ಪಣಿಗಳನ್ನು ಬರೆದಿದ್ದು ಇವುಗಳು ಸತ್ಯ ಅನ್ವೇಷಕರಿಗೆ ತೊಡಕನ್ನುಂಟು ಮಾಡುವವುಗಳಾಗಿರಬಹುದಾದಲ್ಲಿ ನಾವು ಆಶ್ಚರ್ಯ ಪಡಬೇಕಾದ್ದಿಲ್ಲ. ಹೀಗಾಗಿ ನಾವು ಈ ಕೆಲವು ಅಡೆತಡೆಗಳನ್ನು ನಿವಾರಿಸಿಕೊಂಡು ಅದನ್ನು ನಮ್ಮ ಹಾದಿಯಿಂದ ತೆಗೆದುಹಾಕುವುದು ಉಚಿತವಾಗಿದೆ ; ಆದರೆ ನಾವು ನಮ್ಮ ವಸ್ತುವಿಷಯದ ಮಧ್ಯೆ ಪ್ರವೇಶಮಾಡಬಾರದಾದುದರಿಂದ, ಇವುಗಳನ್ನು ಇತರ ಜನಪ್ರಿಯ ತಪ್ಪು ಗ್ರಹಿಕೆಗಳೊಂದಿಗೆ ಪರೀಕ್ಷಿಸುವಂತೆ ಸತ್ಯವೇದ ಅಧ್ಯಯನದ ನಮ್ಮ ಮುಂದಿನ ಗ್ರಂಥಶ್ರೇಣಿಯ ಸರಣಿಗೆ ಬಿಡುತ್ತೇವೆ.

* * * * * *

## ಸ್ವಲ್ಪ ಬೆಳಕು
## *A Little Light*

1. ಆಕೆಯು ಸ್ವಲ್ಪ ಬೆಳಕನ್ನು ಬೀರುತ್ತಾ
ತೆರೆದ ಬಾಗಿಲಿನ ಬಳಿ ನಿಂತಿದ್ದಳು
ಸಣ್ಣ ಬೆಳಕು, ಕ್ಷೀಣ ಕಿಡಿ
ಆದರೂ ಅದು ಅಂಧಕಾರದಲ್ಲಿ ಹೊಳೆಯುತ್ತಾ
ಪ್ರಸನ್ನ ಕಿರಣದೊಂದಿಗೆ ಪ್ರಕಾಶಿಸಿತು
ಬಹುದೂರದಿಂದ ಉಜ್ವಲವಾದ ಧ್ರುವತಾರೆಯಂತೆ.

2. ಕೊಂಚ ಬೆಳಕು ಸೌಮ್ಯವಾದ ಸೂಚನೆ
ಮುದ್ರಿಸುವ ಪುಟಗಳ ಮೇಲೆ ಬೀಳುತ್ತಾ
ದೃಷ್ಟಿಯನ್ನು ಸ್ವಚ್ಛಗೊಳಿಸಿ, ಅನುಮಾನಗಳಿಂದ
ಮುಚ್ಚಿರುವ ಅಮೂಲ್ಯ ನಿಧಿಯನ್ನು ಹೊರಗೆಡಹುವುದು.
ಮನುಷ್ಯರಿಗೆ ತೆರೆದ ಬಾಗಿಲಿಗೆ ದಾರಿ ತೋರುವುದು. ಅಲ್ಲಿ
ಅವರು ಹೊಸ ಪ್ರದೇಶಗಳನ್ನು ಅನ್ವೇಷಣೆ ಮಾಡುವರು.

3. ಆ ಸ್ವಲ್ಪ ಬೆಳಕು ಅಂಧಕಾರವನ್ನು ಹೋಗಲಾಡಿಸುತ್ತದೆ.
ನೆರಳಿನ ಗೋಡೆಯಲ್ಲಿ ಸಂಗ್ರಹಗೊಂಡಿರುವ
ಕೊರತೆಯು ಅನಾರೋಗ್ಯವೂ ಇರುವುದನ್ನು ತಿಳಿದು ಅದರ
ಬೇಟೆಯಾಡುತ್ತೆ. ಹಗಲಿಗಿಂತ ಇರುಳೇ ದೀರ್ಘಕರವೆನಿಸಿ
ಬಹುಕಷ್ಟಗಳನ್ನು ನಿಭಾಯಿಸುವ ಹೃದಯಗಳೊಂದಿಗೆ
ಕ್ಷೀಣವಾಗಿ ಬೆಳಗುತ್ತದೆ ನಿರೀಕ್ಷೆಯ ಕಿಡಿ.

4. ಓ, ವೇದನೆಯು ಅಗತ್ಯ ಎಂದು ಕೆಲವರು
ತಿಳಿಯಲೇ ಬೇಕು.
ದುಗುಡ ದುಮ್ಮಾನಗಳನ್ನು ಕಣಿವೆಯಲ್ಲಿ ಪಯಣಿಸುವಾಗ
ದಿಗಿಲುಗೊಂಡು ಎದೆಗುಂದಿ ದಾರಿತಪ್ಪಿ
ಪೊದೆಗಳೊಳಗೆ ಸಿಕ್ಕಿಕೊಂಡಿರುವಾಗ
ಕೇವಲ ಆ ಸ್ವಲ್ಪ ಬೆಳಕು ಕೊರತೆಯುಳ್ಳ
ಅವರ ಅಲೆಯುವ ಹೆಜ್ಜೆಗಳನ್ನು ಸರಿಯಾಗಿ
ಮಾರ್ಗದರ್ಶಿಸುವುದು.

5. ನಾವು ಸ್ವಲ್ಪ ಮಾತ್ರವೇ ಇತರರಿಗೆ
ಸಹಾಯ ಮಾಡಲು ಸಾಧ್ಯ. ನಿಜವೇ;
ಆದರೆ ಕರುಣೆಯ ಕಿಡಿ ಸ್ವಲ್ಪವಿದ್ದರೂ ,
ಎಷ್ಟೋ ವಾಸಿ ದಾರಿ ಕತ್ತಲಿರುವಾಗ,
ನಿಷೇಧಿಸಿದ ಮಾರ್ಗದಲ್ಲಿ ಒಬ್ಬ ನಡೆವಾಗ.
ಬೆಳಕಿನ ಕೊರತೆಯನ್ನು ನಾವು ನೀಗಬಹುದಾಗಿದೆ.